prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ


ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ



ಯಾನ್ಸೆನ್ ಮಿಂಚು

ವೇಗಿ ಮಾರ್ಕೊ ಯಾನ್ಸೆನ್ ಅವರು ಟಿ20 ವಿಶ್ವಕಪ್‌ನ 'ಸೂಪರ್ 8' ಹಂತದ ಪಂದ್ಯದಲ್ಲಿ ಭಾರತ ವಿರುದ್ಧ 4 ವಿಕೆಟ್ ಗಳಿಸಿದರು. ದಕ್ಷಿಣ ಆಫ್ರಿಕಾ 71 ರನ್‌ಗಳಿಂದ ಜಯಿಸಿತು

ಸಿ.ಎಂ– ಮಾಜಿ ಸಿ.ಎಂ 'ಜಾತಿ ರಾಜಕೀಯ'ದ ಜಿದ್ದು 5



ಶಾಸಕ, ಇಬ್ಬರು ಆಪ್ತರು ಜೈಲಿಗೆ

ಲಂಚ ಪ್ರಕರಣ: 'ಲೋಕಾ' ಅಧಿಕಾರಿಗಳಿಂದ 11 ತಾಸು ಶಾಸಕರ ವಿಚಾರಣೆ

ಪ್ರಜಾವಾಣಿ ವಾರ್ತೆ

ಗದಗ/ಬೆಂಗಳೂರು: ಗುತ್ತಿಗೆದಾರನಿಂದ ₹5 ಲಕ್ಷ ಲಂಚ ಪಡೆಯುವಾಗ ಸಿಕ್ಕಿಬಿದ್ದಿದ್ದ ಶಿರಹಟ್ಟಿ ಕ್ಷೇತ್ರದ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಮತ್ತು ಅವರ ಇಬ್ಬರು ಆಪ್ತ ಸಹಾಯಕರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಮಾರ್ಚ್ 2ರವರೆಗೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಶಾಸಕ ಮತ್ತು ಆಪ್ತ ಸಹಾಯಕರಾದ ಮಂಜುನಾಥ ವಾಲ್ಮೀಕಿ, ಗುರು ನಾಯ್ಕ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಶನಿವಾರ ತಡರಾತ್ರಿ 1.30ರವರೆಗೂ, ಗದಗ ಜಿಲ್ಲೆ ಲಕ್ಷ್ಮೇಶ್ವರದಲ್ಲಿರುವ ಶಾಸಕರ ಒಡೆತನದ ಬಾಲಾಜಿ ಆಸ್ಪತ್ರೆಯಲ್ಲಿರುವ ಅವರ ಕಚೇರಿಯಲ್ಲಿಯೇ ತೀವ್ರ ವಿಚಾರಣೆಗೆ ಒಳಪಡಿಸಿದರು.

ಬಳಿಕ ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದು, ಶನಿವಾರ ರಾತ್ರಿ 2ಕ್ಕೆ ಅಧಿಕಾರಿಗಳು ಬೆಂಗಳೂರಿಗೆ ಕರೆದೊಯ್ದರು. ಭಾನುವಾರ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ಹಾಜರುಪಡಿಸಿದರು.

ಬೆಂಗಳೂರಿನ ನ್ಯಾಯಾಂಗ ಬಡಾವಣೆಯಲ್ಲಿ ಇರುವ ನ್ಯಾಯಾಧೀಶರ ನಿವಾಸದಲ್ಲಿ ಚಂದ್ರು ಲಮಾಣಿ ಹಾಗೂ ಇಬ್ಬರು ಆಪ್ತರನ್ನು ಹಾಜರುಪಡಿಸಲಾಯಿತು. ನ್ಯಾಯಾಧೀಶರ ಆದೇಶದಂತೆ ಮೂವರನ್ನು ಬಳಿಕ ಪೊಲೀಸರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ದರು.

ಆಸ್ಪತ್ರೆ ಆವರಣದಲ್ಲಿ ಗದ್ದಲ: ಶನಿವಾರ ರಾತ್ರಿ ಶಾಸಕರನ್ನು ಬೆಂಗಳೂರಿನ ಕೋರ್ಟ್‌ಗೆ ಹಾಜರುಪಡಿಸಲು ಕರೆದೊಯ್ಯುವ ವೇಳೆ ಗದಗ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಜಮಾಯಿಸಿದ್ದ ಬಿಜೆಪಿ ಕಾರ್ಯಕರ್ತರು ಗದ್ದಲ ಎಬ್ಬಿಸಿದರು. ಆಗ ಪೊಲೀಸರು ಮತ್ತು ಕಾರ್ಯಕರ್ತರ ನಡುವೆ ಮಾತಿನ ಚಕಮಕಿಯೂ ನಡೆಯಿತು. 11

ಬಂಧನಕ್ಕೆ ಒಳಗಾದ ಶಾಸಕರು

- **ಬಿ. ನಾಗೇಂದ್ರ**, ಕಾಂಗ್ರೆಸ್ (ವಾಲ್ಮೀಕಿ ಹಗರಣ), ಜಾಮೀನು
- **ಸತೀಶ್ ಸೈಲ್**, ಕಾಂಗ್ರೆಸ್ (ಅಕ್ರಮ ಅದಿರು ಸಾಗಣೆ), ಜಾಮೀನು
- **ವಿನಯ್ ಕುಲಕರ್ಣಿ**, ಕಾಂಗ್ರೆಸ್ (ಜಿ.ಪಂ ಸದಸ್ಯನ ಕೊಲೆ ಆರೋಪ), ಜೈಲಿನಲ್ಲಿ
- **ಬೈರತಿ ಬಸವರಾಜು**, ಬಿಜೆಪಿ (ಬಿಕ್ಲುಶಿವು ಕೊಲೆ ಪ್ರಕರಣದ ಆರೋಪ), ಜೈಲಿನಲ್ಲಿ

> ಶಾಸಕ ಚಂದ್ರು ಲಮಾಣಿ ಅವರ ಪ್ರಕರಣದಲ್ಲಿ ಲೋಕಾಯುಕ್ತ ಸಂಸ್ಥೆ ಸರಿಯಾದ ತನಿಖೆ ನಡೆಸಲಿದೆ. ನಾವು ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ
>
> **ಡಿ.ಕೆ.ಶಿವಕುಮಾರ್**
> ಉಪಮುಖ್ಯಮಂತ್ರಿ

> ಚಂದ್ರು ಅವರನ್ನು ಲೋಕಾಯುಕ್ತ ದಾಳಿಯಲ್ಲಿ ಸಿಲುಕಿಸಿರುವುದು ಸಂಚು. ನಮ್ಮ ಪಕ್ಷ ಇಂತಹ ವಿಚಾರಗಳನ್ನು ಸಹಿಸಲ್ಲ. ಕಾಂಗ್ರೆಸ್ ನವರು ಎಲ್ಲರನ್ನು ಟಾರ್ಗೆಟ್ ಮಾಡಿದ್ದಾರೆ
>
> **ಛಲವಾದಿ ನಾರಾಯಣಸ್ವಾಮಿ**
> ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

ಜಾಲತಾಣದಲ್ಲಿ ಆಡಿಯೊಗಳ ಸದ್ದು...


ಚಂದ್ರು ಲಮಾಣಿ

ಲಂಚ ಪ್ರಕರಣದ ಹಿಂದೆಯೇ, ಲಂಬಾಣಿ ಸಮಾಜದ ಸ್ವಾಮೀಜಿಯೊಬ್ಬರದು ಎನ್ನಲಾದ ಆಡಿಯೊ ಮತ್ತು ಶಾಸಕ ಡಾ.ಚಂದ್ರು ಲಮಾಣಿ ಅವರು ಗುತ್ತಿಗೆದಾರ ವಿಜಯ್ ಪೂಜಾರಗೆ ಬೆದರಿಕೆ ಒಡ್ಡಿದ್ದಾರೆ ಎನ್ನಲಾದ ಮತ್ತೊಂದು ಆಡಿಯೊ ಜಾಲತಾಣದಲ್ಲಿ ಸದ್ದುಮಾಡಿದೆ.

ಶಾಸಕ ಹಾಗೂ ಗುತ್ತಿಗೆದಾರನ ನಡುವಿನ ಮಾತುಕತೆಯ ಆಡಿಯೊವನ್ನು ಪೊಲೀಸರು, ಎರಡು ದಿನದಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಿದ್ದಾರೆ. ಶಾಸಕರು ಗುತ್ತಿಗೆದಾರನ ಜೊತೆ ಕಮಿಷನ್ ಬಗ್ಗೆ ಮಾತನಾಡಿದ ಆಡಿಯೊ ಸೇರಿ ಮಹತ್ವದ ದಾಖಲೆಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶೇ 40ರಷ್ಟು ಶಾಸಕರು ಕಮಿಷನ್ ದಂಧೆಕೋರರು: ಆರೋಪ

ಹೊಸಪೇಟೆ (ವಿಜಯನಗರ): 'ರಾಜ್ಯದಲ್ಲಿ ಪಕ್ಷಾತೀತವಾಗಿ ಶೇ 30ರಿಂದ 40ರಷ್ಟು ಶಾಸಕರು ಕಮಿಷನ್ ದಂಧೆಕೋರರಾಗಿದ್ದಾರೆ. ಕೆಲವರು ನೇರವಾಗಿ ಶಾಮೀಲಾಗಿದ್ದಾರೆ. ಅದರ ಭಾಗವಾಗಿಯೇ ಶಿರಹಟ್ಟಿ ಶಾಸಕರು ಸಿಕ್ಕಿಬಿದ್ದಿದ್ದಾರೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಆರೋಪಿಸಿದರು.

ವಿವರ 11

ಜೂನ್ ಒಳಗೆ ಜಿ.ಪಂ, ತಾ.ಪಂ ಚುನಾವಣೆ

ಪ್ರಜಾವಾಣಿ ವಾರ್ತೆ

ಕಾರವಾರ: 'ಜೂನ್ ತಿಂಗಳ ಒಳಗಾಗಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಹೇಳಿದರು.

ಕಾರವಾರದಲ್ಲಿ ಕ್ರಿಮ್ಸ್ ಆಸ್ಪತ್ರೆಯ 450 ಹಾಸಿಗೆಗಳ ಸಾಮರ್ಥ್ಯದ ಕಟ್ಟಡ, ಅಂಕೋಲಾದಲ್ಲಿ ಗಂಗಾವಳಿ–ಮಂಜಗುಣಿ ಸೇತುವೆಯನ್ನು ಭಾನುವಾರ ಉದ್ಘಾಟಿಸಿ, ಮಾತನಾಡಿದರು.

'ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗೂ ಶೀಘ್ರದಲ್ಲೇ ಜನಗಣತಿಯೂ ನಡೆಯುವ ಕಾರಣ ರಾಜ್ಯದಲ್ಲಿ ಹೊಸದಾಗಿ ಪಟ್ಟಣ ಪಂಚಾಯಿತಿಗಳ ರಚನೆ ಸಾಧ್ಯವಾಗದು' ಎಂದು ಹೇಳಿದರು. 5

ಜಿಲ್ಲಾಧಿಕಾರಿ ಕೌಶಲ

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಕಲಬುರಗಿಯಲ್ಲಿ ಭಾನುವಾರ 13ನೇ ವರ್ಷದ ಚಿತ್ರಸಂತೆ ಅಂಗವಾಗಿ ಆಯೋಜಿಸಿದ್ದ ಟೆರ್ರಾಕೋಟಾ ಪ್ರಾತ್ಯಕ್ಷಿಕೆಯಲ್ಲಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ತಿರುಗುಣಿಯಲ್ಲಿ ಮಣ್ಣಿನ ಮಡಕೆ ತಯಾರಿಸಿದರು

ಭಾರತ–ಅಮೆರಿಕ ಒಪ್ಪಂದ ಮಾತುಕತೆ ಮರುನಿಗದಿ



ನವದೆಹಲಿ (ಪಿಟಿಐ): ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಪಠ್ಯವನ್ನು ಅಂತಿಮಗೊಳಿಸಲು ಸೋಮವಾರದಿಂದ ಆರಂಭವಾಗಬೇಕಿದ್ದ ಮಾತುಕತೆಯನ್ನು ಭಾರತ ಮತ್ತು ಅಮೆರಿಕದ ಅಧಿಕಾರಿಗಳು ಮರುನಿಗದಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮಾತುಕತೆಯು ವಾಷಿಂಗ್ಟನ್‌ನಲ್ಲಿ ಸೋಮವಾರದಿಂದ ಮೂರು ದಿನ ನಡೆಯಬೇಕಿತ್ತು.

ಕೇಂದ್ರ ಸರ್ಕಾರದ ವಾಣಿಜ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ದರ್ಪಣ್ ಜೈನ್ ಅವರು ಭಾರತದ ತಂಡದ ನೇತೃತ್ವ ವಹಿಸಿದ್ದಾರೆ.

'ಈಚಿನ ಬೆಳವಣಿಗೆಗಳನ್ನು ಮತ್ತು ಅವುಗಳ ಪರಿಣಾಮವನ್ನು ಪರಿಶೀಲಿಸಲು ಎರಡೂ ಕಡೆಯವರಿಗೆ ಸಮಯ ಸಿಕ್ಕ ನಂತರದಲ್ಲಿ ಭಾರತದ ಅಧಿಕಾರಿಗಳ ತಂಡದ ಭೇಟಿಯನ್ನು ನಿಗದಿ ಮಾಡಬಹುದು ಎಂಬ ಅನಿಸಿಕೆಯನ್ನು ಎರಡೂ ದೇಶಗಳು ಅಧಿಕಾರಿಗಳು ಹೊಂದಿದ್ದಾರೆ. ಎರಡೂ ಕಡೆಯವರಿಗೆ ಹೊಂದಿಕೆ ಆಗುವ ಸಮಯದಲ್ಲಿ ಮಾತುಕತೆ ನಡೆಸಲಾಗುತ್ತದೆ' ಎಂದು ವಾಣಿಜ್ಯ ಸಚಿವಾಲಯದ ಮೂಲಗಳು ಹೇಳಿವೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿದೇಶಗಳಿಂದ ಆಮದು ಆಗುವ ಸರಕುಗಳ ಮೇಲೆ ವಿಧಿಸಿದ್ದ ಸುಂಕವನ್ನು ಅಲ್ಲಿನ ಸುಪ್ರೀಂ ಕೋರ್ಟ್ ಅನೂರ್ಜಿತಗೊಳಿಸಿದೆ. ಇದಾದ ನಂತರ ಟ್ರಂಪ್ ಅವರು ಎಲ್ಲ ದೇಶಗಳ ಸರಕುಗಳ ಮೇಲೆ ಶೇ 10ರಷ್ಟು ಸುಂಕ ವಿಧಿಸಿದರು. ನಂತರ ಸುಂಕವನ್ನು ಶೇ 15ಕ್ಕೆ ಹೆಚ್ಚಳ ಮಾಡುವುದಾಗಿಯೂ ಅವರು ಪ್ರಕಟಿಸಿದ್ದಾರೆ.

ಅಂತರರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರಗಳ ಕಾಯ್ದೆಯ ಅಡಿಯಲ್ಲಿ ಸುಂಕವನ್ನು ವಿಧಿಸಿದ ಟ್ರಂಪ್ ಅವರ ಕ್ರಮವು ಅಧಿಕಾರ ವ್ಯಾಪ್ತಿಯ ಉಲ್ಲಂಘನೆ ಎಂದು ಅಮೆರಿಕದ ಸುಪ್ರೀಂ ಕೋರ್ಟ್ ಬಹುಮತದ ತೀರ್ಪಿನಲ್ಲಿ ಹೇಳಿದೆ.

ಅಮೆರಿಕವು ಭಾರತದ ಮೇಲೆ 2025ರ ಆಗಸ್ಟ್‌ನಲ್ಲಿ ಶೇ 25ರಷ್ಟು ಪ್ರತಿಸುಂಕ ಹೇರಿತು. ನಂತರ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ಕಾರಣಕ್ಕೆ ಶೇ 25ರಷ್ಟು ಹೆಚ್ಚುವರಿ ಸುಂಕವನ್ನು ದಂಡದ ರೂಪದಲ್ಲಿ ವಿಧಿಸಿತ್ತು. ಇದರಿಂದಾಗಿ ಭಾರತದ ಸರಕುಗಳ ಮೇಲಿನ ಒಟ್ಟು ಸುಂಕವು ಶೇ 50ರಷ್ಟು ಆಗಿತ್ತು.

ಆದರೆ, ಮಧ್ಯಂತರ ವ್ಯಾಪಾರ ಒಪ್ಪಂದವೊಂದಕ್ಕೆ ಅಂತಿಮ ರೂಪ ನೀಡಲು ಭಾರತ ಮತ್ತು ಅಮೆರಿಕ ಈ ತಿಂಗಳ ಆರಂಭದಲ್ಲಿ ಒಪ್ಪಿವೆ. ಇದರ ಅನ್ವಯ ಭಾರತದ ಸರಕುಗಳ ಮೇಲಿನ ಸುಂಕವು ಶೇ 18ಕ್ಕೆ ಇಳಿಕೆ ಆಗಲಿದೆ. ಈವರೆಗೆ ಅಮೆರಿಕವು ಭಾರತದ ಸರಕುಗಳ ಮೇಲಿನ ಶೇ 25ರಷ್ಟು ದಂಡ ಸುಂಕವನ್ನು ತೆಗೆದಿದೆ. ಶೇ 25ರಷ್ಟು ಪ್ರತಿಸುಂಕವು ಜಾರಿಯಲ್ಲಿ ಇದೆ.

7 ಮಂದಿ ಬಾಂಗ್ಲಾದವರು • ಭಾರತ ವಿರೋಧಿ ಪೋಸ್ಟರ್ ಅಂಟಿಸಿದ್ದ ಆರೋಪಿಗಳು

ಸ್ಫೋಟಕ್ಕೆ ಸಂಚು: ಎಂಟು ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಬಂಗಾಳ, ತಮಿಳುನಾಡು ಹಾಗೂ ದೆಹಲಿ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಭಯೋತ್ಪಾದಕ ಸಂಘಟನೆಗಳ ಜೊತೆ ಸಂಪರ್ಕ ಹೊಂದಿದ ಬಾಂಗ್ಲಾದೇಶದ ಏಳು ಮಂದಿ ಸೇರಿದಂತೆ 8 ಮಂದಿಯನ್ನು ಬಂಧಿಸಲಾಗಿದೆ.

ಈ ಆರೋಪಿಗಳು ನವದೆಹಲಿಯ ಮೆಟ್ರೊ ನಿಲ್ದಾಣದ ಸಮೀಪ ಭಯೋತ್ಪಾದಕರ ಪರ ಪೋಸ್ಟರ್‌ಗಳನ್ನು ಅಂಟಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ರಾಜಕಾರಣಿಯೊಬ್ಬರ ಹತ್ಯೆ ಸಂಬಂಧ ಆತ್ಮಾಹುತಿ ದಾಳಿ ನಡೆಸಲು 2007ರಲ್ಲಿ ದೆಹಲಿಗೆ ಬಂದಿದ್ದ ವೇಳೆ ಶಬ್ಬೀರ್ ಅಹಮ್ಮದ್ ಲೋನ್ ಬಂಧಿತನಾಗಿದ್ದ. 2018–19ರಲ್ಲಿ ಬಿಡುಗಡೆಯಾಗಿದ್ದ, ನಂತರ, ಪಾಕಿಸ್ತಾನದ ಉಗ್ರ ಸಂಘಟನೆಗಳೊಂದಿಗೆ ನಂಟು ಸಾಧಿಸಿದ್ದ' ಎಂದು ದೆಹಲಿ ವಿಶೇಷ ಹೆಚ್ಚುವರಿ ಪೊಲೀಸ್ ಕಮೀಷನರ್ ಪ್ರಮೋದ್ ಕುಮಾರ್ ಕುಶ್ವಾಹಾ ತಿಳಿಸಿದ್ದಾರೆ.



ಭಯೋತ್ಪಾದಕ ಕೃತ್ಯಕ್ಕೆ ಸಂಚು ರೂಪಿಸಿದ ಶಂಕಿತ ಭಯೋತ್ಪಾದಕರನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ —ಪಿಟಿಐ ಚಿತ್ರ

'2016ರ ಜುಲೈನಲ್ಲಿ ಹತ್ಯೆಯಾದ ಉಗ್ರ ಬುರ್ಹಾನ್ ವಾನಿ, ಪಾಕಿಸ್ತಾನ ನಡೆಸಿದ ಭಯೋತ್ಪಾದಕ ಕೃತ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಪೋಸ್ಟರ್‌ಗಳನ್ನು ಅಂಟಿಸಿದ್ದ. ಬಂಧಿತರು, ದೇಶದ ಇತರೆಡೆಗಳಲ್ಲಿ ಯಾವುದಾದರೂ ಭಯೋತ್ಪಾದಕ ಕೃತ್ಯ ನಡೆಸಲು ಸಂಚು ರೂಪಿಸಿದ್ದರೆ ಎಂಬುದರ ಕುರಿತು ತನಿಖೆ ನಡೆಸಲಾಗುವುದು' ಎಂದು ಹೇಳಿದ್ದಾರೆ.

ಉಳಿದಂತೆ ಬಾಂಗ್ಲಾದ ಮಿಜನುರ್ ರೆಹಮಾನ್, ಮೊಹಮ್ಮದ್ ಶಬತ್ ಉಮರ್, ಮೊಹಮ್ಮದ್ ಲಿಟನ್, ಮೊಹಮ್ಮದ್ ಶಹೀದ್, ಮೊಹಮ್ಮದ್ ಉಜ್ವಲ್ ಎಂಬವರನ್ನು ಬಂಧಿಸಲಾಗಿದೆ. 7

3 ಉಗ್ರರು ಹತ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಕಿಶ್ತವಾಡ ಜಿಲ್ಲೆಯ ಛಾಟ್ರೂ ಪ್ರದೇಶದಲ್ಲಿ ಭದ್ರತಾ ಪಡೆಗಳು ಮತ್ತು ಭಯೋತ್ಪಾದಕರ ನಡುವೆ ಭಾನುವಾರ ನಡೆದ ಗುಂಡಿನ ಚಕಮಕಿಯಲ್ಲಿ ಪಾಕಿಸ್ತಾನ ಮೂಲದ 'ಜೈಶ್–ಎ–ಮೊಹಮ್ಮದ್' ಸಂಘಟನೆಯ ಮೂವರು ಭಯೋತ್ಪಾದಕರು ಹತರಾಗಿದ್ದಾರೆ. ಇವರಲ್ಲಿ ಒಬ್ಬ ಜೆಇಎಂನ ಕಮಾಂಡರ್ ಸೈಫುಲ್ಲಾ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕೊಳಕು ರಾಜಕೀಯಕ್ಕೆ ಬಳಕೆ'

ಮೀರತ್ (ಪಿಟಿಐ): ಕಾಂಗ್ರೆಸ್ ಪಕ್ಷವು ಅಂತರರಾಷ್ಟ್ರೀಯ ಕಾರ್ಯಕ್ರಮವನ್ನು 'ಕೊಳಕು ಮತ್ತು ನಾಚಿಕೆಗೇಡಿನ' ರಾಜಕೀಯ ಅಖಾಡವಾಗಿ ಬಳಸಿಕೊಂಡಿತು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ವಾಗ್ದಾಳಿ ನಡೆಸಿದರು. ಜಾಗತಿಕ ಕೃತಕ ಬುದ್ಧಿಮತ್ತೆ ಸಮಾವೇಶದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರು ಶರ್ಟ್ ತೆಗೆದಿಟ್ಟು ಪ್ರತಿಭಟನೆ ನಡೆಸಿದ್ದನ್ನು ಅವರು ಖಂಡಿಸಿದರು. 7

₹7 ಕೋಟಿ ಹಣ ಅಕ್ರಮವಾಗಿ ವರ್ಗಾವಣೆ

• ಪ್ರಜ್ವಲ್ ಡಿಸೋಜಾ

ಬೆಂಗಳೂರು: ನಗರದ 19 ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬನ ಬ್ಯಾಂಕ್ ಖಾತೆಯನ್ನು ₹7 ಕೋಟಿ ಹಣ ಅಕ್ರಮ ವರ್ಗಾವಣೆಗೆ ಸೈಬರ್ ವಂಚಕರು ಬಳಸಿಕೊಂಡಿರುವುದು ಪತ್ತೆಯಾಗಿದೆ.

ನಗರದ ಪ್ರತಿಷ್ಠಿತ ಕಾಲೇಜಿನಲ್ಲಿ ಓದುತ್ತಿರುವ ಬಾಗಲಗುಂಟೆ ನಿವಾಸಿಯಾಗಿರುವ ವಿದ್ಯಾರ್ಥಿ ವಂಚನೆಗೆ ಒಳಗಾಗಿದ್ದಾರೆ. ಈ ಸಂಬಂಧ ಉತ್ತರ ವಿಭಾಗದ ಸೈಬರ್ ಕ್ರೈಂ ಪೊಲೀಸರು ಫೆಬ್ರುವರಿ 20ರಂದು ಎಫ್‌ಐಆರ್ ದಾಖಲಿಸಿಕೊಂಡು, 23 ವರ್ಷದ ವ್ಯಕ್ತಿಯನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

'ನನ್ನ ಖಾತೆಯಲ್ಲಿ ಅಧಿಕ ಹಣದ ವಹಿವಾಟು ನಡೆದಿರುವ ಬಗ್ಗೆ ಬ್ಯಾಂಕ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಒಂದು ವರ್ಷದಿಂದ ಇ.ಆಯುಷ್ ಎಂಬಾತನ ಪರಿಚಯವಾಗಿದ್ದು, ಕಳೆದ ನವೆಂಬರ್‌ನಲ್ಲಿ ಆತನಿಗೆ ನನ್ನ ಬ್ಯಾಂಕ್ ಖಾತೆಗಳ ವಿವರ ನೀಡಿದ್ದೆ' ಎಂದು ವಿದ್ಯಾರ್ಥಿ ಪೊಲೀಸರಿಗೆ ತಿಳಿಸಿದ್ದಾನೆ. 5

ಈ ವರ್ಷ ವಾಡಿಕೆಗಿಂತ ಅಧಿಕ ಬಿಸಿಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಈ ವರ್ಷ ಬೇಸಿಗೆ ಅವಧಿಯಲ್ಲಿ ವಾಡಿಕೆಗಿಂತ ಅಧಿಕ ತಾಪಮಾನ ವರದಿಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಲಬುರಗಿ, ಹಾವೇರಿ, ಬಾಗಲಕೋಟೆ, ಶಿವಮೊಗ್ಗ, ಉತ್ತರ ಕನ್ನಡ ಸೇರಿ ಹಲವು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ ಈಗಾಗಲೇ ವಾಡಿಕೆಗಿಂತ ಅಧಿಕವಾಗಿದೆ ಎಂದು ವರದಿಯಾಗುತ್ತಿದೆ. ಬಹುತೇಕ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದ್ದರೆ, ಕಲಬುರಗಿಯಲ್ಲಿ 36 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಕೆಲವೆಡೆ ವಾಡಿಕೆಗಿಂತ 3 ಡಿಗ್ರಿ ಸೆಲ್ಸಿಯಸ್‌ವರೆಗೂ ಹೆಚ್ಚು ವರದಿಯಾಗುತ್ತಿದೆ.

ಜಾಗತಿಕ ತಾಪಮಾನ ಏರಿಕೆ, ತೇವಾಂಶ ಕೊರತೆ, ಶುಭ್ರ ಆಕಾಶ, 'ಲಾ ನಿನಾ' ಪರಿಣಾಮ (ಉಷ್ಣವಲಯದ ಫೆಸಿಫಿಕ್ ಸಾಗರದಲ್ಲಿ ಮೇಲ್ಮೈ ತಾಪಮಾನ ತಂಪಾಗಿರುವುದು) ಸೇರಿ ವಿವಿಧ ಕಾರಣಗಳಿಂದ ಏಪ್ರಿಲ್ ಮತ್ತು ಮೇಯಲ್ಲಿ ಗರಿಷ್ಠ ತಾಪಮಾನವು ವಾಡಿಕೆಗಿಂತ 4-5 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗಬಹುದು ಎಂದು ಹವಾಮಾನ ಇಲಾಖೆ ವಿಶ್ಲೇಷಿಸಿದೆ.

'ಉತ್ತರ ಒಳನಾಡಿನ ಕಲಬುರಗಿ, ಯಾದಗಿರಿ, ಕೊಪ್ಪಳ, ರಾಯಚೂರು, ಬಾಗಲಕೋಟೆ, ಬಳ್ಳಾರಿ ಸೇರಿ ವಿವಿಧ ಜಿಲ್ಲೆಗಳಲ್ಲಿ ಏಪ್ರಿಲ್–ಮೇ ತಿಂಗಳು ಗರಿಷ್ಠ ಉಷ್ಣಾಂಶ 42 ಡಿಗ್ರಿ ಸೆಲ್ಸಿಯಸ್‌ನಿಂದ 45 ಡಿಗ್ರಿ ಸೆಲ್ಸಿಯಸ್ ತಲುಪುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿಯೂ ಉಷ್ಣಾಂಶ ಹೆಚ್ಚಳವಾಗುವ ಸಂಭವವಿದ್ದು, 39 ಡಿಗ್ರಿ ಸೆಲ್ಸಿಯಸ್ ತಲುಪಬಹುದು' ಎಂದು ಇಲಾಖೆಯ ಹವಾಮಾನ ತಜ್ಞ ಸಿ.ಎಸ್. ಪಾಟೀಲ ತಿಳಿಸಿದರು.

'ಬೇಸಿಗೆಯಲ್ಲಿ ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ಬಿಸಿಲಿನ ತೀವ್ರತೆ ಹೆಚ್ಚಿರುವ ಕಾರಣ, ನೀರನ್ನು ಆಗಾಗ ಕುಡಿಯಬೇಕು. ಸಡಿಲವಾದ ತೆಳ್ಳನೆ ಬಟ್ಟೆಯನ್ನು ಧರಿಸಬೇಕು. ಚಹಾ–ಕಾಫಿ ಬದಲು, ತಂಪು ಪಾನೀಯ ಸೇವಿಸಬೇಕು' ಎಂದು ಸಲಹೆ ನೀಡಿದರು.

ಜೇನು ಪರೀಕ್ಷೆಗೆ ಪ್ರಯೋಗಾಲಯ

ಬೆಂಗಳೂರು ಕೃಷಿ ವಿ.ವಿ ಜೇನು ಕೃಷಿ ವಿಭಾಗದಲ್ಲಿ ಸ್ಥಾಪನೆ

• ಖಲೀಲಅಹ್ಮದ ಶೇಖ

ಬೆಂಗಳೂರು: ದೇಶೀಯ ಜೇನುತುಪ್ಪವನ್ನು ಜಾಗತಿಕವಾಗಿ ರಫ್ತು ಮಾಡಲು ಸಹಾಯಕವಾಗುವಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಜಿಕೆವಿಕೆ ಆವರಣದಲ್ಲಿ ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರೆಸೋನೆನ್ಸ್ (ಎನ್‌ಎಂಆರ್) ತಂತ್ರಜ್ಞಾನ ಸೌಲಭ್ಯ ಹೊಂದಿರುವ ಜೇನುತುಪ್ಪ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯ ಶೀಘ್ರದಲ್ಲೇ ಪ್ರಾರಂಭವಾಗಲಿದೆ.

ಮುಕ್ತ ಮಾರುಕಟ್ಟೆಯಲ್ಲಿ ನಕಲಿ ಲೇಬಲ್ ಹೊಂದಿದ, ಕಲಬೆರಕೆ ಜೇನುತುಪ್ಪವನ್ನು ಮಾರಾಟ ಮಾಡಲಾಗುತ್ತಿದೆ. ಇದನ್ನು ಪತ್ತೆ ಹಚ್ಚುವುದು ಬಹಳ ಕಷ್ಟ. ಆದರೆ ಎನ್‌ಎಂಆರ್ ತಂತ್ರಜ್ಞಾನವು ದತ್ತಾಂಶಗಳನ್ನು ಆಧರಿಸಿ ನಿಖರ ವರದಿ ನೀಡಲಿದ್ದು, ಕಲಬೆರಕೆ ಜೇನುತುಪ್ಪವನ್ನು ಪತ್ತೆ ಹಚ್ಚುತ್ತದೆ. ಈ ತಂತ್ರಜ್ಞಾನದ ಮೂಲಕ ಪಡೆದ ಪ್ರಮಾಣ ಪತ್ರಕ್ಕೆ ಜಾಗತಿಕ ಮಾನ್ಯತೆ ಇದೆ.

'ಅಂತರರಾಷ್ಟ್ರೀಯ ಮಾರುಕಟ್ಟೆಗೆ ಜೇನುತುಪ್ಪವನ್ನು ರಫ್ತು ಮಾಡುವ ಜೇನು ಕೃಷಿಕರಿಗೆ ಈ ತಂತ್ರಜ್ಞಾನ ಸಹಾಯಕವಾಗಲಿದೆ. ಜಾಗತಿಕವಾಗಿ ಜೇನುತುಪ್ಪ ರಫ್ತು ಮಾಡುವ ಸಂಸ್ಕರಣೆದಾರರು ಹಾಗೂ ಉತ್ಪಾದಕರು ಎನ್‌ಎಂಆರ್ ಆಧಾರಿತ ಜೇನು ಪರೀಕ್ಷಾ ಪ್ರಮಾಣ ಪತ್ರವನ್ನು ಪಡೆಯಬೇಕಾಗುತ್ತದೆ. ಇದು ಐರೋಪ್ಯ ಒಕ್ಕೂಟ, ಅಮೆರಿಕ, ಮಧ್ಯಪೂರ್ವ, ಜಪಾನ್ ಮತ್ತು ಆಸ್ಟ್ರೇಲಿಯಾ ಮೊದಲಾದ ಕಡೆಗೆ ಗುಣಮಟ್ಟದ ಜೇನುತುಪ್ಪವನ್ನು ರಫ್ತು ಮಾಡಲು ಎನ್‌ಎಂಆರ್ ತಂತ್ರಜ್ಞಾನದ ಮಾನ್ಯತೆ ಬೇಕಾಗುತ್ತದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ 'ಪ್ರಜಾವಾಣಿ'ಗೆ ತಿಳಿಸಿದರು.

'ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (ವಿಟಿಪಿಸಿ) ಸಹಯೋಗದಲ್ಲಿ ₹10.3 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಪ್ರಯೋಗಾಲಯ ಪ್ರಾರಂಭಿಸಲಾಗುತ್ತದೆ. ಇದರ ಜೊತೆಗೆ ಕೌಶಲ ಅಭಿವೃದ್ಧಿ ತರಬೇತಿಗೆ ಎಚ್‌ಎಎಲ್ ₹4.8 ಕೋಟಿ ಅನುದಾನ ನೀಡಿದೆ' ಎಂದು ಮಾಹಿತಿ ನೀಡಿದರು.

'ನಮ್ಮ ದೇಶದಲ್ಲಿ ಜೇನುತುಪ್ಪದ ಗುಣಮಟ್ಟ ಪರೀಕ್ಷೆ ಮಾಡುವ ಪ್ರಯೋಗಾಲಯಗಳ ಸಂಖ್ಯೆ ಕಡಿಮೆ ಇದೆ. ಪ್ರಸ್ತುತ ಜಿಕೆವಿಕೆಯಲ್ಲಿ ಆರಂಭವಾಗಲಿರುವ ಎನ್‌ಎಂಆರ್ ಪ್ರಯೋಗಾಲಯ ಸ್ಥಳೀಯವಾಗಿ ಲಭ್ಯವಿದ್ದು, ಜಾಗತಿಕ ಮಾನದಂಡಗಳನ್ನು ಆಧರಿಸಿ ಜೇನುತುಪ್ಪ ಗುಣಮಟ್ಟದ ಪ್ರಮಾಣ ಪತ್ರ ನೀಡಲಿದೆ. ಜೇನುತುಪ್ಪ ರಫ್ತು ಮಾಡುವವರು ನಿಗದಿತ ದರ ಪಾವತಿಸಿ ಇದರ ಪ್ರಮಾಣ ಪತ್ರವನ್ನು ಪಡೆದುಕೊಳ್ಳಬಹುದು' ಎಂದು ವಿವರಿಸಿದರು.

'ಯಂತ್ರದ ಬೆಲೆ ₹7 ಕೋಟಿ'

'ಎನ್‌ಎಂಆರ್ ಯಂತ್ರದ ಬೆಲೆ ಅಂದಾಜು ₹6 ಕೋಟಿಯಿಂದ ₹7 ಕೋಟಿ ಇದೆ. ಇದರ ಖರೀದಿಗೆ ರಾಜ್ಯ ಸರ್ಕಾರ ಅನುದಾನ ನೀಡಿದೆ. ಜೇನುತುಪ್ಪದ ಗುಣಮಟ್ಟ ಪರೀಕ್ಷಿಸಲು ಎನ್‌ಎಂಆರ್ ತಂತ್ರಜ್ಞಾನವುಳ್ಳ ಪ್ರಯೋಗಾಲಯವನ್ನು ಜಿಕೆವಿಕೆ ಜೇನು ಕೃಷಿ ವಿಭಾಗದಲ್ಲಿ ಸ್ಥಾಪಿಸಲಾಗುತ್ತದೆ ಎಂದು ಎಸ್.ವಿ. ಸುರೇಶ ತಿಳಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ





ಹವಾಮಾನ ಮುನ್ಸೂಚನೆ: ನಗರದಲ್ಲಿ ಇಂದು ಮೋಡ ಕವಿದ ವಾತಾವರಣ ಇರಲಿದೆ.

‘ಗಾಂಧಿ ವಿಚಾರಧಾರೆ ಮೇಲೆ ದಾಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾತ್ಮ ಗಾಂಧಿ ಹಾಗೂ ಜವಾಹರಲಾಲ್ ನೆಹರೂ ಅವರ ವಿಚಾರಗಳ ಮೇಲೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ಮುಖಂಡರು ವ್ಯವಸ್ಥಿತವಾಗಿ ದಾಳಿ ಮಾಡುತ್ತಿದ್ದಾರೆ’ ಎಂದು ಕಾಂಗ್ರೆಸ್ ಮುಖಂಡ ವಿ.ಎಸ್.ಉಗ್ರಪ್ಪ ಹೇಳಿದರು.

ಕ್ರಿಯಾ ಮಾಧ್ಯಮ ಹಾಗೂ ಎಂ.ಜಿ. ಹೆಗಡೆ ಅಭಿಮಾನಿ ಬಳಗ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಂ.ಜಿ. ಹೆಗಡೆ ಅವರ ‘ಭಾರತ ಮುಸ್ಲಿಂ ರಾಷ್ಟ್ರವಾಗುವುದೇ?’ ಪುಸ್ತಕ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

‘ನಮ್ಮ ದೇಶದಲ್ಲಿ ಗಾಂಧೀಜಿ ಹಾಗೂ ನೆಹರೂ ಅವರ ವಿಚಾರಗಳು ಇರುವವರೆಗೂ ಗೋಡ್ಸೆ ವಿಚಾರಧಾರೆಗಳಿಗೆ ಗೌರವ ಸಿಗುವುದಿಲ್ಲ ಎನ್ನುವುದನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ಅರ್ಥ ಮಾಡಿಕೊಂಡಿವೆ. ಗಾಂಧೀಜಿ ಅವರ ಹೆಸರು ಶಾಶ್ವತವಾಗಿ ಉಳಿಯಬಾರದು ಎಂಬ ಉದ್ದೇಶದಿಂದ ಮನುವಾದಿ ಹಾಗೂ ಗೋಡ್ಸೆವಾದಿಗಳು ನರೇಗಾ ಕಾಯ್ದೆಯನ್ನು ವಿಕಸಿತ ಭಾರತ ಜಿ ರಾಮ್ ಜಿ ಎಂಬುದಾಗಿ ತಿದ್ದುಪಡಿ ಮಾಡಿದ್ದಾರೆ’ ಎಂದು ಆರೋಪಿಸಿದರು.

‘ದೇಶದಲ್ಲಿರುವ ಯುವ ಸಮುದಾಯ ಹಾಗೂ ವಿಚಾರವಂತರು ಎಂ.ಜಿ. ಹೆಗಡೆ ಅವರ ಪುಸ್ತಕದಲ್ಲಿರುವ ಮಾಹಿತಿ ಬಳಸಿಕೊಂಡು ಜನಜಾಗೃತಿ ಮೂಡಿಸಬೇಕು. ಸಾಮಾಜಿಕ ನ್ಯಾಯ, ಹಿಂದುತ್ವದ ವಿಚಾರದಲ್ಲಿ ಆಷಾಢಭೂತತನ ತೋರಿಸುತ್ತಿದ್ದಾರೆ. ಸತ್ಯ ಸಂಗತಿಗಳನ್ನು ಜನರ ಮುಂದೆ ತರುವ ಚಳವಳಿಯನ್ನು ರೂಪಿಸುವ ಅಗತ್ಯ ಇದೆ. ರಾಮನ ಬಗ್ಗೆ ಜಪ ಮಾಡುವವರು, ರಾಮನ ಸಿದ್ಧಾಂತಗಳನ್ನು ಅನುಸರಿಸದೇ, ಸಮಾಜವನ್ನು ಒಡೆದು ಆಳುವ ಕೆಲಸ ಮಾಡುತ್ತಿದ್ದಾರೆ’ ಎಂದರು.

ಲೇಖಕ ಎಂ.ಜಿ. ಹೆಗಡೆ ಮಾತನಾಡಿ, ‘ಇಡೀ ದೇಶದ ಮುಖ್ಯಾಣಿ ಹಿಂದೂಗಳ ಕೈಯಲ್ಲಿದೆ. ಆದರೆ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮುಖಂಡರು ಭಾರತ ಮುಸ್ಲಿಂ ರಾಷ್ಟ್ರವಾಗುತ್ತದೆ ಎಂದು ಸುಳ್ಳನ್ನು ಸತ್ಯದಂತೆ ಬಿಂಬಿಸುವ ಕೆಲಸ ಮಾಡುತ್ತಿದ್ದಾರೆ’ ಎಂದು ಹೇಳಿದರು.



ನಗರದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಪತ್ರಕರ್ತ ಬಿ.ಎಂ. ಹನೀಫ್ ಹಾಗೂ ಲೇಖಕ ಎಂ.ಜಿ. ಹೆಗಡೆ ಅವರು ಕುಶಲೋಪರಿಯಲ್ಲಿ ತೊಡಗಿದ್ದರು. ಶಿವಸುಂದರ್, ಕೆ.ಎಸ್. ವಿಮಲಾ, ಸುಧಾಕರ್ ಬನ್ನಂಜೆ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಫೆ.28ಕ್ಕೆ ಬ್ರಹ್ಮರಥೋತ್ಸವ

ಬೊಮ್ಮನಹಳ್ಳಿ: ಹುಳಿಮಾವು ಸ್ಫೂರ್ತಿ ವಿನಾಯಕ ಸಹಿತ ಶ್ರೀ ಸತ್ಯನಾರಾಯಣ ಸ್ವಾಮಿ ದೇವಾಲಯದ 21ನೇ ವಾರ್ಷಿಕೋತ್ಸವ ಹಾಗೂ ಬ್ರಹ್ಮರಥೋತ್ಸವ ಕಾರ್ಯಕ್ರಮಗಳು ಫೆ. 22ರಿಂದ ಮಾರ್ಚ್ 2ರವರೆಗೆ ನಡೆಯಲಿವೆ. ಫೆಬ್ರುವರಿ 28ರಂದು ಬ್ರಹ್ಮರಥೋತ್ಸವ ಇದೆ.

ಅರ್ಚಕ ಹರ್ಷವರ್ಧನ್, ಪ್ರಧಾನ ಅರ್ಚಕ ವೈ.ಲಕ್ಷ್ಮೀಕಾಂತ ಭಟ್ಟಾಚಾರ್ಯ ಅವರ ಮುಂದಾಳತ್ವದಲ್ಲಿ ದೇವಾಲಯದಲ್ಲಿ ಪಾಂಚರಾತ್ರ ಆಗಮೋಕ್ತ ವಿಧಾನದಲ್ಲಿ ನವದಿನಗಳ ಕಾಲ ವಿವಿಧ ಪೂಜಾ ಕಾರ್ಯಕ್ರಮಗಳು, ಬ್ರಹ್ಮರಥೋತ್ಸವ, ವಾಹನೋತ್ಸವಗಳು ಹಾಗೂ ದಿವ್ಯ ಕಲ್ಯಾಣೋತ್ಸವ ಆಚರಣೆಗಳು ನಡೆಯಲಿವೆ. ಜತೆಗೆ ಪಲ್ಲಕ್ಕಿ ಉತ್ಸವ, ವಾದ್ಯಮೇಳ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

‘ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ನಿಶ್ಚಲಾನಂದ ಸ್ವಾಮೀಜಿ, ಸಂಸದ ತೇಜಸ್ವಿ ಸೂರ್ಯ, ಶಾಸಕ ಸತೀಶ್ ರೆಡ್ಡಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ’ ಎಂದು ಟ್ರಸ್ಟಿ ವೇಣುಗೋಪಾಲ ತಿಳಿಸಿದರು.

‘ನಮ್ಮನ್ನು ಕತ್ತಲೆಯಲ್ಲಿ ಇಡಲಾಗಿದೆ’

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ ಪ್ರಯಾಣ ದರ ಹೆಚ್ಚಳ, ಅಮೆರಿಕದಿಂದ ಆಮದು ಸುಂಕ ಏರಿಕೆ ಸೇರಿ ಹಲವು ವಿಚಾರಗಳಲ್ಲಿ ನಾವು ಕತ್ತಲಲ್ಲಿದ್ದೇವೆ. ಈ ಸಂದರ್ಭದಲ್ಲಿ ಸಮಾಜಕ್ಕೆ ಬೆಳಕು ನೀಡುವ ಕೆಲಸವನ್ನು ಸಾಹಿತ್ಯ ಮಾಡಬೇಕು’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅಭಿಪ್ರಾಯಪಟ್ಟರು.

ಅಂಕುರ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಅನಿಕೇತನ್ ಸುವ್ವಿ ಅವರ ‘ಲೀಗಲ್ ಪರ್ಸನಾಲಿಟೀಸ್ ಲೈಟ್ ಅಂಡ್ ಲೆನ್ಸ್’ ಪುಸ್ತಕ ಜನಾರ್ಪಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಮೆಟ್ರೊ ಪ್ರಯಾಣ ದರ ಹೆಚ್ಚಳದ ವಿಚಾರ ಮಾಧ್ಯಮಗಳಲ್ಲಿ ಪ್ರಕಟವಾದ ಬಳಿಕ, ರಾಜ್ಯ ಸರ್ಕಾರದವರು ಕೇಂದ್ರ ಹೆಚ್ಚಳ ಮಾಡುತ್ತಿದೆ ಎಂದು ಹೇಳಿದರು. ಎರಡು ದಿನಗಳ ಬಳಿಕ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರ ಹೆಚ್ಚಿಸುತ್ತಿದೆ ಎಂದರು. ಮತ್ತೆರಡು ದಿನಗಳ ಬಳಿಕ ಪರಸ್ಪರ ನಾವು ತಡೆ ಹಿಡಿದಿದ್ದೇವೆ ಎಂದು ಹೇಳಿಕೊಂಡರು. ಈ ವಿಚಾರದಲ್ಲಿ ನಾವು ಕತ್ತಲಲ್ಲಿದ್ದೇವೆ. ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು ಶೇಕಡ 25ರಷ್ಟು ಆಮದು ಸುಂಕ ವಿಧಿಸಿದ್ದ ವಿಚಾರಕ್ಕೆ ಸಂಬಂಧಿಸಿದಂತೆ, ದೇಶದ ಪ್ರಧಾನಿ ಮೋದಿ ಅವರು ಟ್ರಂಪ್ ಅವರ ಜತೆಗೆ ಮಾತನಾಡಿದ ಬಳಿಕ ಈ ಸುಂಕವನ್ನು ಶೇ 18ಕ್ಕೆ ಇಳಿಸಿದರೆಂದು ಸಂಭ್ರಮಿಸಲಾಯಿತು. ಶೇ 2ರಷ್ಟು ಇದ್ದ ಸುಂಕವನ್ನು ಶೇ 18ಕ್ಕೆ ಹೆಚ್ಚಿಸಿರುವುದು ಚಿತ್ತ ಏರಿಕೆಯೇ? ಈ ರೀತಿ ನಮ್ಮನ್ನು ಕತ್ತಲೆಯಲ್ಲಿ ಇಟ್ಟಿದ್ದಾರೆ’ ಎಂದು ಹೇಳಿದರು.

‘ಪಾರದರ್ಶಕ ಜಗತ್ತು, ಮುಂದುವರಿದ ತಂತ್ರಜ್ಞಾನ, ಶಿಕ್ಷಣ, ಕಾನೂನು ಇದ್ದರೂ ಜಗತ್ತಿನ ಜನರನ್ನು ಇವತ್ತಿಗೂ ಕತ್ತಲಲ್ಲಿ ಇಟ್ಟಿದ್ದಾರೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಯಾವ ಸಮುದಾಯಕ್ಕೆ ಎಷ್ಟು ಪ್ರಾತಿನಿಧ್ಯ ಸಿಕ್ಕಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲವಾಗಿದೆ. ಬೆಂಗಳೂರು ತಂತ್ರಜ್ಞಾನ ರಾಜಧಾನಿಯಾಗಿದೆ. ಆದರೆ, ಇಲ್ಲಿ ಅಜೀಂ ಪ್ರೇಮ್‌ಜಿ, ಇನ್ಫೊಸಿಸ್‌ನಲ್ಲಿ ಯಾವ ಜಾತಿಗಳಿಗೆ ಎಷ್ಟು ಪ್ರಾತಿನಿಧ್ಯ ಸಿಕ್ಕಿದೆ ಎಂಬ ಬಗ್ಗೆ ವಿವರ ಲಭ್ಯವಾಗುವುದಿಲ್ಲ. ಆದ್ದರಿಂದ ಜಗತ್ತಿಗೆ ಬೆಳಕು ನೀಡುವ ಪುಸ್ತಕಗಳು ಅಗತ್ಯ’ ಎಂದರು.

ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ, ‘ಕಾನೂನು ಹಾಗೂ ಅದರ ನಾನಾ ಪ್ರಕಾರದ ಬಗ್ಗೆ ಅನೇಕರು ಪುಸ್ತಕ ಬರೆದಿದ್ದಾರೆ. ಆದರೆ, ನ್ಯಾಯಾಂಗ ಕ್ಷೇತ್ರದ ಮಾದರಿ ವ್ಯಕ್ತಿತ್ವಗಳನ್ನು ಕಟ್ಟಿಕೊಟ್ಟ ಈ ಪುಸ್ತಕ ವಿಶೇಷ ಮಹತ್ವ ಪಡೆದುಕೊಳ್ಳಲಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೃತಿಯ ಬಗ್ಗೆ ಮಾತನಾಡಿದ ವಕೀಲೆ ಸಂಜನಾ ಎಸ್. ಜೈನ್, ‘ನ್ಯಾಯಾಂಗ ಕ್ಷೇತ್ರಕ್ಕೆ ಬರುವವರಿಗೆ ಈ ಪುಸ್ತಕ ಮಾರ್ಗದರ್ಶಿಯಾಗಲಿದೆ. ಸ್ಫೂರ್ತಿದಾಯಕ ವ್ಯಕ್ತಿತ್ವಗಳನ್ನು ಕಟ್ಟಿಕೊಡಲಾಗಿದೆ’ ಎಂದು ಶ್ಲಾಘಿಸಿದರು.

ಕ್ರೈಸ್ಟ್ ವಿಶ್ವವಿದ್ಯಾಲಯದ ಕುಲಸಚಿವ ಅನಿಲ್ ಜೋಸೆಫ್ ಪಿಂಟೊ, ಕೃತಿಯ ಲೇಖಕ ಅನಿಕೇತನ್ ಸುವ್ವಿ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ವೀರಪ್ಪ ಮೊಯಿಲಿ ಹಾಗೂ ನಾಗಮೋಹನದಾಸ್ ಅವರು ಸಮಾಲೋಚನೆ ನಡೆಸಿದರು. ಸಂಜನಾ ಎಸ್ ಜೈನ್, ಅನಿಲ್ ಜೋಸೆಫ್ ಪಿಂಟೊ ಹಾಗೂ ಅನಿಕೇತನ್ ಸುವ್ವಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಗೆದ್ದ ತಂಡಗಳಿಗೆ ಟ್ರೋಫಿ



ಲಿಂಬಾವಳಿ ಕಪ್ ಕ್ರಿಕೆಟ್ ಪಂದ್ಯಾವಳಿಯ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು

ಕೆ.ಆರ್.ಪುರ: ಮಹದೇವಪುರ ಬಿಜೆಪಿ ಘಟಕದ ಸಹಯೋಗದಲ್ಲಿ ರೆಸಿಡೆಂಟ್ ವೆಲ್ಫೇರ್ ಅಸೋಸಿಯೇಷನ್ ದೊಡ್ಡಬನಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ಅರವಿಂದ ಲಿಂಬಾವಳಿ ಟಿ10 ಆರ್.ಡಬ್ಲ್ಯು.ಎ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ಟ್ರೋಫಿ ವಿತರಿಸಲಾಯಿತು.

ಪುರುಷರ ವಿಭಾಗದಲ್ಲಿ ಆಲ್ಫಾ ಗಾರ್ಡನ್ ಸ್ಟ್ರೀಟ್ ಸ್ಪಾರ್ಟನ್ಸ್ ಅಪಾರ್ಟ್‌ಮೆಂಟ್ ವಿಜೇತ ತಂಡ ಮೊದಲ ಬಹುಮಾನವಾಗಿ ಟ್ರೋಫಿ ಪಡೆದರೆ, ಸಿ.ಪಿ ಶ್ಮಷರ್ಸ್ ತಂಡ ರನ್ನರ್ ಅಪ್ ಟ್ರೋಫಿ ಸ್ವೀಕರಿಸಿತು.

ಮಹಿಳೆಯರ ವಿಭಾಗದಲ್ಲಿ ಪ್ರೆಸ್ಟೀಜ್ ಟೈಟಾನ್ಸ್ ವಿಜೇತ ತಂಡವಾಗಿ ಹೊರಹೊಮ್ಮಿ ಟ್ರೋಫಿ ಪಡೆದರೆ, ರನ್ನರ್ ಅಪ್ ಆಗಿ ಟ್ರಾನ್ಕ್ವಿಲಿಟಿ ಟೈಟನ್ಸ್ ತಂಡ ಟ್ರೋಫಿ ತನ್ನದಾಗಿಸಿಕೊಂಡಿತು.

ಆರ್.ಡಬ್ಲ್ಯು.ಎ ಪ್ರಧಾನ ಕಾರ್ಯದರ್ಶಿ ರಾಜೇಶ್ ರೆಡ್ಡಿ, ರೆಸಿಡೆಂಟ್ ಅಸೋಸಿಯೇಷನ್ ಉಸ್ತುವಾರಿ ಪಾಪಣ್ಣ, ಅಧ್ಯಕ್ಷ ಮಂಜುನಾಥ್, ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹೆಚ್.ಎಸ್.ಪಿಳ್ಳಪ್ಪ, ಮುಖಂಡರಾದ ಜ್ಯೋತಿಪುರವೇಣು, ಲೋಕೇಶ್, ಅನಿಲ್ ಗೌಡ, ಕೆ.ವಿ.ನಾಗರಾಜ್, ಸೋಮಶೇಖರ್, ಮಂಜುನಾಥ್ ದುಗಾ ಇದ್ದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

‘ಕಸ ತುಂಬಿಕೊಂಡು ನಿಂತ ಆಟೊಗಳು’



ಕಳೆದ ಮೂರು ದಿನಗಳಿಂದ ಗಾಂಧಿ ನಗರದ ಆಸ್ಪತ್ರೆ ರಸ್ತೆಯಲ್ಲಿ ತ್ಯಾಜ್ಯ ತುಂಬಿರುವ ಮೂರು ಆಟೊಗಳು ನಿಂತಿವೆ. ಆಟೊಗಳಲ್ಲಿ ತುಂಬಿರುವ ಕಸ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಕೂಡಲೇ ಆಟೊಗಳಲ್ಲಿನ ತ್ಯಾಜ್ಯ ವಿಲೇವಾರಿಗೆ ಕ್ರಮಕೈಗೊಳ್ಳಬೇಕು. ನಗರದ ಸೌಂದರ್ಯವನ್ನು ಕಾಪಾಡಬೇಕು.

ಶಿವಪ್ರಸಾದ್, ಗಾಂಧಿನಗರ


‘ಅಗೆದಿರುವ ರಸ್ತೆ ಸರಿಪಡಿಸಿ’



ಚೆನ್ನಮ್ಮನ ಕೆರೆ ಅಚ್ಚುಕಟ್ಟುಗೆ ಸಂಪರ್ಕ ಕಲ್ಪಿಸುವ ಕಾಂಕ್ರೀಟ್ ರಸ್ತೆಯನ್ನು ಅಗೆದು ಹಾಕಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ರಸ್ತೆಯ ಒಂದು ಬದಿಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ನಿತ್ಯ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯನ್ನು ಅಗೆದಿರುವ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ಇದರ ಜೊತೆಗೆ ಅಪಘಾತಗಳಾಗುವ ಸಂಭವ ಇದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆಯನ್ನು ಕೂಡಲೇ ದುರಸ್ತಿಗೊಳಿಸಬೇಕು.

ಸುಹಾಸ್, ವಾಹನ ಸವಾರ

‘ರಸ್ತೆ ಉಬ್ಬು ಹಾಕಿ’



ಎನ್.ಆರ್. ಕಾಲೊನಿಯ ಮುಖ್ಯರಸ್ತೆಯ ಡಾ.ಸಿ.ಅಶ್ವತ್ಥ್ ಕಲಾ ಭವನದ ಮುಂಭಾಗದ ರಸ್ತೆಯಲ್ಲಿ ಉಬ್ಬುಗಳನ್ನು ಅಳವಡಿಸಬೇಕು. ಈ ರಸ್ತೆಗೆ ವೈಟ್ ಟಾಪಿಂಗ್ ಮಾಡಲಾಗಿದ್ದು, ಅಶ್ವತ್ಥ್ ಕಲಾಭವನದ ಮುಂಭಾಗದಲ್ಲಿ ವೇಗವಾಗಿ ನೆಟ್ಟಕಲ್ಲಪ್ಪ ವೃತ್ತದಿಂದ ವಾಹನಗಳು ಬರುತ್ತಿವೆ. ಇಲ್ಲಿ ಅಂಬಾ ಭವಾನಿ ದೇವಸ್ಥಾನ ಮತ್ತು ಬಸ್ ತಂಗುದಾಣ ಇದೆ. ನಿತ್ಯ ಈ ರಸ್ತೆಯಲ್ಲಿ ನೂರಾರು ಜನ ಓಡಾಡುತ್ತಾರೆ. ವಾಹನಗಳು ವೇಗವಾಗಿ ಬರುವುದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಆದ್ದರಿಂದ ಈ ರಸ್ತೆಯಲ್ಲಿ ಉಬ್ಬುಗಳನ್ನು ಹಾಕಬೇಕು.

ಕೆ.ಎಸ್. ನಾಗರಾಜ್, ಎನ್.ಆರ್.ಕಾಲೊನಿ

‘ಬೀದಿ ನಾಯಿ ಹಾವಳಿ ನಿಯಂತ್ರಿಸಿ’



ಜಿಬಿಎ ವ್ಯಾಪ್ತಿಯ ಹಂಪಿನಗರ ಈಜುಕೊಳ ರಸ್ತೆಯ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಮಕ್ಕಳು, ವೃದ್ಧರು ಬೀದಿಯಲ್ಲಿ ಓಡಾಡಲು ಹೆದರುತ್ತಿದ್ದಾರೆ. ವಾಯು ವಿಹಾರಕ್ಕೆ ತೆರಳುವ ವೃದ್ಧರನ್ನು ಬೀದಿ ನಾಯಿಗಳು ಅಟ್ಟಿಸಿಕೊಂಡು ಬಂದು ದಾಳಿ ಮಾಡುತ್ತಿವೆ. ಆದ್ದರಿಂದ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಇವುಗಳ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು.

ನಾಗರತ್ನ ರವಿಕುಮಾರ್, ಬಾಪೂಜಿನಗರ

‘ಆಸನಗಳನ್ನು ದುರಸ್ತಿಗೊಳಿಸಿ’



ಕಲಾ ಗ್ರಾಮದ ಮಲ್ಲತ್ತಹಳ್ಳಿ ಸಭಾಂಗಣದಲ್ಲಿ ಇರುವ ಆಸನಗಳು ಮುರಿದು ಬಿದ್ದಿವೆ. ಈ ಸಭಾಂಗಣದಲ್ಲಿ ಇತ್ತೀಚೆಗೆ ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ನಾಟಕಗಳು ಪ್ರದರ್ಶನವಾಗುತ್ತಿವೆ. ಆದರೆ, ಆಡಳಿತ ಮಂಡಳಿಯ ನಿರ್ಲಕ್ಷ್ಯದಿಂದ ಮುರಿದ ಆಸನಗಳನ್ನು ದುರಸ್ತಿಗೊಳಿಸುವ ಕೆಲಸ ಆಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿನ ಮುರಿದು ಬಿದ್ದಿರುವ ಆಸನಗಳನ್ನು ಸರಿಪಡಿಸಬೇಕು.

ಎಚ್. ತುಕಾರಾಂ, ಮಲ್ಲತ್ತಹಳ್ಳಿ

‘ಜ್ಞಾನದಾನದಿಂದ ಬದಲಾವಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದಲ್ಲಿ ಗೋದಾನ ಸಹಿತ ಹಲವು ದಾನಗಳಿದ್ದರೂ ಜ್ಞಾನದಾನವೇ ಶ್ರೇಷ್ಠವಾದುದು’ ಎಂದು ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್ ಹೇಳಿದರು.

ಕಲಾಮಂದಿರ ಕಲಾ ಶಾಲೆಯ ಹಳೆಯ ವಿದ್ಯಾರ್ಥಿಗಳು ಕನ್ನಡ ಭವನದ ವರ್ಣ ಕಲಾ ಗ್ಯಾಲರಿಯಲ್ಲಿ ಭಾನುವಾರ ಆಯೋಜಿಸಿದ್ದ ಅರಸು–60 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಅರಸು ಕಲಾವಿದರಾಗಿ, ಕಲಾ ಶಿಕ್ಷಕರಾಗಿ ದೊಡ್ಡ ಹೆಸರು ಮಾಡಿದ್ದಾರೆ. ತಮ್ಮಲ್ಲಿರುವ ಜ್ಞಾನವನ್ನು ನಿಸ್ಪೃಹವಾಗಿ ಹಂಚಿದ್ದಾರೆ. ಜ್ಞಾನವನ್ನು ಹಂಚಿದರೆ ಅದು ಪೀಳಿಗೆಗಳವರೆಗೂ ಬೆಳೆಯುತ್ತಾ ಹೋಗುತ್ತದೆ. ಹೀಗೆ ಜ್ಞಾನ ಹಂಚಿದವರು ದೊಡ್ಡ ಮಟ್ಟದಲ್ಲಿ ಜನ ಸಂಪಾದನೆ ಮಾಡಲಿದ್ದಾರೆ. ಸಮಾಜದಲ್ಲಿ ಇದಕ್ಕಿಂತ ದೊಡ್ಡ ಗೌರವ ಬೇಕಿಲ್ಲ’ ಎಂದು ಹೇಳಿದರು.

‘ಭಾರತದಲ್ಲಿನ ಕಲಾ ಪ್ರಕಾರಗಳು, ಕಲೆಗಳ ಪಲ್ಲಟ, ಕಲಾ ಶಾಲೆಗಳ ಪ್ರಭಾವಗಳ ಕುರಿತು ಅಕಾಡೆಮಿಯಿಂದ ಮುಂದಿನ ತಿಂಗಳು ಪುಸ್ತಕ ಹೊರ ತರಲಾಗುವುದು’ ಎಂದರು.

ಕಲಾವಿದ ಎಂ.ಎಸ್. ಮೂರ್ತಿ ಮಾತನಾಡಿ, ‘ಸಾಹಿತ್ಯಕ್ಕೆ ಸುದೀರ್ಘ ಇತಿಹಾಸವಿದೆ. ರನ್ನ, ಪಂಪನ ಕಾಲದ ಇತಿಹಾಸವನ್ನು ನೀಡಬಹುದು. ಕಲೆಗೆ ಇಂತಹ ದೀರ್ಘ ಇತಿಹಾಸವಿಲ್ಲದೇ ಇದ್ದರೂ ಮಹತ್ವವಿದೆ. ಇದನ್ನು ಉಳಿಸಿಕೊಂಡು ಹೋಗುವ ಕೆಲಸ ಆಗಬೇಕಿದೆ’ ಎಂದರು. ಕವಿ ಡಿ.ಬಿ.ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಕಲಾವಿದ ಬಿ.ಎಂ.ವೆಂಕಟೇಶ್, ಕಲಾಮಂದಿರ ಕಲಾ ಶಾಲೆಯ ನಿವೃತ್ತ ಪ್ರಾಂಶುಪಾಲ ತಿರುಣಾವುಕರಸು, ಕಾಂತರಾಜು ಉಪಸ್ಥಿತರಿದ್ದರು.



ಕನ್ನಡ ಭವನದ ವರ್ಣ ಆರ್ಟ್ ಗ್ಯಾಲರಿಯಲ್ಲಿ ಭಾನುವಾರ ಆಯೋಜಿಸಿದ್ದ ಅರಸು–60 ಕಾರ್ಯಕ್ರಮದಲ್ಲಿ ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಪ.ಸ. ಕುಮಾರ್, ಎಂ.ಎಸ್. ಮೂರ್ತಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ತೆರಿಗೆ ಪಾವತಿಸದ ಆಸ್ತಿ ಹರಾಜು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಆಸ್ತಿ ತೆರಿಗೆ ಪಾವತಿಸದೇ ಹಲವು ವರ್ಷಗಳಿಂದ ಬಾಕಿ ಉಳಿಸಿಕೊಂಡಿರುವ ಕಾರಣದಿಂದ ಪೂರ್ವ ನಗರಪಾಲಿಕೆ ವ್ಯಾಪ್ತಿಯಲ್ಲಿ ಜಂಟಿ ಆಯುಕ್ತೆ ಸುಧಾ ಹಾಗೂ ಕಂದಾಯ ಅಧಿಕಾರಿ ಬಸವರಾಜ ಮಗಿ ಸಮಕ್ಷಮದಲ್ಲಿ ಸ್ವತ್ತುಗಳ ಹರಾಜು ಪ್ರಕ್ರಿಯೆ ನಡೆಸಲಾಯಿತು.

ಹರಾಜಿನಲ್ಲಿ ಪೂರ್ವ ನಗರಪಾಲಿಕೆ ವ್ಯಾಪ್ತಿಯ ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿದ್ದ 25 ಆಸ್ತಿಗಳ ಪೈಕಿ ಐದು ಆಸ್ತಿಗಳು ಹರಾಜಿನಲ್ಲಿ ಮಾರಾಟವಾಗಿವೆ.

ಹೆಚ್ಚು ಬಾಕಿ ಉಳಿಸಿಕೊಂಡವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು, ಪತ್ರಿಕಾ ಪ್ರಕಟಣೆ ಮೂಲಕ ನೋಟಿಸ್ ಹಾಗೂ ಕರೆ ಮಾಡಿ ಸಂದೇಶ ಕಳಿಸಿ ಜಪ್ತಿ ಆದೇಶ ಹೊರಡಿಸಲಾಗಿತ್ತು. ಅದರೂ ತೆರಿಗೆ ಪಾವತಿ ಮಾಡಿಲ್ಲ, ಹಾಗಾಗಿ 25 ಆಸ್ತಿಗಳ ಹರಾಜು ಪ್ರಕ್ರಿಯೆ ನಡೆಸಲಾಯಿತು.

ಇದರಲ್ಲಿ ಹತ್ತು ಆಸ್ತಿ ಮಾಲೀಕರು ಸ್ಥಳದಲ್ಲಿಯೇ ತೆರಿಗೆ ಪಾವತಿ ಮಾಡಿದ್ದಾರೆ. ಉಳಿದ ಹತ್ತು ಆಸ್ತಿಯ ಮಾಲೀಕರು ತೆರಿಗೆ ಪಾವತಿ ಮಾಡಲು ಮುಂದೆ ಬಂದಿದ್ದಾರೆ.

‘ತೆರಿಗೆ ಬಾಕಿ ಉಳಿಸಿಕೊಂಡಿದ್ದ ಹೊಯ್ಸಳ ನಗರದ ಪಿ.ಮೋಹನ್‌ಗೆ ಸೇರಿದ ಆಸ್ತಿ ₹1.30 ಕೋಟಿ, ಗುರುಮೂರ್ತಿರೆಡ್ಡಿ ಬಡಾವಣೆಯ ಜಿ.ರಾಮಯ್ಯ ಎಂಬುವವರಿಗೆ ಸೇರಿದ ಆಸ್ತಿ ₹1.63 ಕೋಟಿ ಹಾಗೂ ವಿಜಿನಾಪುರದ ಅಯ್ಯಪ್ಪ ದೇವಸ್ಥಾನ ಬಳಿಯ ಅಮೀನ್ ಎಂಬುವವರಿಗೆ ಸೇರಿದ ಅಸ್ತಿ ₹93.17 ಲಕ್ಷ , ಅನ್ನ-ಸಂದ್ರಪಾಳ್ಯದಲ್ಲಿ ಶಶಿ ಎಂಬುವವರಿಗೆ ಸೇರಿದ ಆಸ್ತಿ ₹47.42 ಲಕ್ಷ ಹಾಗೂ ಬಸವನಪುರದಲ್ಲಿ ಝಾನ್ಸಿ ರಾಣಿ ಅವರಿಗೆ ಸೇರಿದ ಆಸ್ತಿ ₹1.28 ಕೋಟಿಗೆ ಮಾರಾಟವಾಗಿವೆ’ ಎಂದು ಜಂಟಿ ಆಯುಕ್ತೆ ಸುಧಾ ಮಾಹಿತಿ ನೀಡಿದರು.

ಕರ್ನಾಟಕ ಒನ್ ಕೇಂದ್ರಕ್ಕೆ ಅರ್ಜಿ

ಬೆಂಗಳೂರು: ನಗರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ಒನ್ ಕೇಂದ್ರಗಳನ್ನು ಸ್ಥಾಪಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆನೇಕಲ್ ತಾಲ್ಲೂಕಿನ ಆನೇಕಲ್, ಅತ್ತಿಬೆಲೆ, ಬೊಮ್ಮಸಂದ್ರ, ಚಂದಾಪುರ, ಜಿಗಣಿ, ಹೆಬ್ಬಗೋಡಿ, ಉತ್ತರ ತಾಲ್ಲೂಕಿನ ಚಿಕ್ಕಬಾಣಾವರ, ಮಾದನಾಯಕನಹಳ್ಳಿ, ದಕ್ಷಿಣ ತಾಲ್ಲೂಕಿನ ಕೋನಪ್ಪನ ಅಗ್ರಹಾರ, ದೊಡ್ಡತೋಗೂರು ಮತ್ತು ಯಲಹಂಕ ತಾಲ್ಲೂಕಿನ ಹುಣಸ-ಮಾರನಹಳ್ಳಿಯಲ್ಲಿ ಕರ್ನಾಟಕ ಒನ್ ಕೇಂದ್ರಗಳನ್ನು ಸ್ಥಾಪಿಸಬಹುದು.

ಆಸಕ್ತ ಅಭ್ಯರ್ಥಿಗಳು https://www.karnatakaone.gov.in/public/franchiseeTerms ನಲ್ಲಿ ಮಾರ್ಚ್ 2ರೊಳಗೆ ಅರ್ಜಿಯನ್ನು ಸಲ್ಲಿಸಬಹುದು. ಇನ್ನಾವುದೇ ರೀತಿಯಲ್ಲಿ ಸಲ್ಲಿಸುವ ಅರ್ಜಿ ಪರಿಗಣಿಸುವುದಿಲ್ಲ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಬಜೆಟ್: ರಾಜಧಾನಿಯ ‘5 ಗ್ರೇಟರ್’ ನಿರೀಕ್ಷೆ

ಐದು ನಗರ ಪಾಲಿಕೆಗಳ ಮೊದಲ ಬಜೆಟ್‌ಗೆ ರಾಜ್ಯ ಸರ್ಕಾರದ ಅನುದಾನವೇ ಬೆನ್ನೆಲುಬು

• ಆರ್. ಮಂಜುನಾಥ್

ಬೆಂಗಳೂರು: ರಾಜಧಾನಿ ಬೆಂಗಳೂರಿನ ಆಡಳಿತವನ್ನು ನಾಗರಿಕರ ಬಾಗಿಲಿಗೆ ಕೊಂಡೊಯ್ಯು, ಸ್ಥಳೀಯ ಅಭಿವೃದ್ಧಿಗೆ ಒತ್ತು ನೀಡಲೆಂದೇ ರಚನೆಯಾಗಿರುವ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ದ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಿಂದ ರಾಜ್ಯ ಬಜೆಟ್ ಮೇಲೆ ಭಾರೀ ನಿರೀಕ್ಷೆ ಇದೆ.

ಐದು ನಗರ ಪಾಲಿಕೆಗಳು ರಚನೆಯಾಗಿ ಐದು ತಿಂಗಳಾಗಿದ್ದು, ರಾಜ್ಯದ ಬಜೆಟ್ ಮಂಡನೆ ನಂತರ ಮಾರ್ಚ್ ಎರಡನೇ ವಾರದಲ್ಲಿ ಮೊದಲ ಆಯವ್ಯಯ ಮಂಡಿಸಲು ಈಗಾಗಲೇ ಸಿದ್ಧತೆ ನಡೆಸಿವೆ. ಬೃಹತ್ ಯೋಜನೆಗಳಿಗೆ ನಗರ ಪಾಲಿಕೆಯೊಳಗೆ ಹೆಚ್ಚಿನ ಅವಕಾಶವಿಲ್ಲ. ಹೀಗಾಗಿ, ರಸ್ತೆ, ಪಾದಚಾರಿ ಮಾರ್ಗ, ಉದ್ಯಾನ, ಶೌಚಾಲಯ, ಕೆರೆ, ತೋಟಗಾರಿಕೆ, ಸೌಂದರ್ಯೀಕರಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ.

ನಗರ ಪಾಲಿಕೆಗಳು ಸಂಪನ್ಮೂಲ ಕ್ರೋಡೀಕರಣದಲ್ಲಿ ಇನ್ನೂ ನಿರೀಕ್ಷಿತ ಮಟ್ಟವನ್ನು ತಲುಪಿಲ್ಲ. ಪ್ರತಿಯೊಂದು ವಿಭಾಗದ ಹಣವೂ ಜಿಬಿಎ ಖಾತೆಗೇ ಹೋಗುತ್ತಿದ್ದು, ಅಲ್ಲಿಂದ ಹಣ ವರ್ಗಾ-ವಣೆಯಾಗಬೇಕಿದೆ. ಹೀಗಾಗಿ, ಆರ್ಥಿಕ ಸ್ವಾವಲಂಬನೆ ದೂರದ ಮಾತಾಗಿದೆ.

ಅನುದಾನಕ್ಕೆ ಬೇಡಿಕೆ (₹ ಕೋಟಿಗಳಲ್ಲಿ)

ನಗರ ಪಾಲಿಕೆ	ಬೇಡಿಕೆ
ಪೂರ್ವ	₹1,685
ಪಶ್ಚಿಮ	₹1,725
ಉತ್ತರ	₹1,205
ದಕ್ಷಿಣ	₹1,675
ಕೇಂದ್ರ	₹2,047

ಇಷ್ಟಾದರೂ, ಜಾಹೀರಾತು ತೆರಿಗೆ, ವಾಹನ ನಿಲುಗಡೆ ಶುಲ್ಕ, ಉದ್ದಿಮೆ ಪರವಾನಗಿ ಸೇರಿದಂತೆ ಎಲ್ಲೆಲ್ಲಿ ಸಂಪನ್ಮೂಲವನ್ನು ಕ್ರೋಡೀಕರಿಸಲು ಸಾಧ್ಯವೋ ಅದನ್ನೆಲ್ಲ ನಗರ ಪಾಲಿಕೆ ಆಯುಕ್ತರು ಲೆಕ್ಕಾಚಾರ ಹಾಕಿದ್ದಾರೆ. ಆದರೆ, ಇದೆಲ್ಲದ್ದರಿಂದ ನಾಗರಿಕರ ನಿರೀಕ್ಷೆಯ ಗುಣಮಟ್ಟದ ಮೂಲ-ಸೌಕರ್ಯವನ್ನು ನೀಡಲು ಸಾಧ್ಯವಿಲ್ಲ ಎಂಬುದನ್ನೂ ನಗರ ಪಾಲಿಕೆ ಅಧಿಕಾರಿಗಳು ಮನಗಂಡಿದ್ದಾರೆ.

ಹೀಗಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6ರಂದು ಮಂಡಿಸಲಿರುವ ಬಜೆಟ್ ಮೇಲೆ ಭಾರೀ ನಿರೀಕ್ಷೆ ಹೊಂದಿರುವ ನಗರ ಪಾಲಿಕೆಗಳು, ರಾಜ್ಯದ ಐದನೇ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ ಅವರೊಂದಿಗೆ ನಡೆಸಿದ ಸಭೆಯಲ್ಲಿ ತಮ್ಮದೇ ಆದ ಬೇಡಿಕೆಗಳನ್ನು ಇರಿಸಿವೆ. ರಸ್ತೆ, ಚರಂಡಿ, ಪಾದಚಾರಿ ಮಾರ್ಗ, ಶೌಚಾಲಯ ಸೇರಿದಂತೆ ಮೂಲ-ಸೌಕರ್ಯಕ್ಕೆ ಸಾವಿರಾರು ಕೋಟಿ ರೂಪಾಯಿ ಅಗತ್ಯವಿದ್ದು, ಅನುದಾನ ಒದಗಿಸುವಂತೆ ಕೋರಲಾಗಿದೆ.

2007ರಲ್ಲಿ ಬಿಬಿಎಂಪಿ ರಚನೆ ಆದಾಗಿನಿಂದಲೂ ನಗರವು ಮೂಲಸೌಕರ್ಯದ ಕೊರತೆಯಲ್ಲೇ ನಲುಗುತ್ತಿದೆ. ಒಳಭಾಗದ ಪ್ರದೇಶ-ಗಳಲ್ಲದೆ ಹೊಸದಾಗಿ ಸೇರಿಕೊಂಡ 110 ಹಳ್ಳಿಗಳು ಸೇರಿದಂತೆ ಹಲವು ಪ್ರದೇಶಗಳಲ್ಲಿ ಇಂದಿಗೂ ಸರಿಯಾದ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಇಲ್ಲ. ಇವುಗಳನ್ನು ಕಲ್ಪಿಸಲು ಪಾಲಿಕೆಗಳಿಗೆ, ಸರ್ಕಾರದಿಂದ ಹೆಚ್ಚಿನ ಅನುದಾನದ ಅಗತ್ಯವಿದೆ.

ಮಳೆಗಾಲದಲ್ಲಿ ತಲೆದೋರುವ ಸಮಸ್ಯೆಗಳ ನಿವಾರಣೆಗೆ ನಗರ ಪಾಲಿಕೆಗಳು ಇನ್ನೂ ಸಿದ್ಧಗೊಂಡಿಲ್ಲ. ಬೇಸಿಗೆಯಲ್ಲಿ ಮಳೆಯಾದರೆ ನಗರದ ಹಲವು ರಸ್ತೆಗಳಲ್ಲಿ ಪ್ರವಾಹದ ಸ್ಥಿತಿ ಉಂಟಾಗುವುದರಲ್ಲಿ ಸಂದೇಹವಿಲ್ಲ. ಈ ಬಗ್ಗೆ ಎಲ್ಲ ಮಾಹಿತಿಯನ್ನೂ ಹೊಂದಿರುವ ನಗರ ಪಾಲಿಕೆಗಳು, ಪರಿಹಾರ ಕಾರ್ಯಾಚರಣೆಗೆ ಮುಂದಾಗಿಲ್ಲ. ಬಜೆಟ್‌ನಲ್ಲಿ ಹಣವಿರಿಸಿ, ರಾಜ್ಯ ಸರ್ಕಾರದಿಂದ ಬರುವ ಅನುದಾನದಲ್ಲಿ ಕಾಮಗಾರಿ ಆರಂಭಿಸಲು ಯೋಚಿಸುತ್ತಿವೆ.

ಯೋಜನೆಗಳಿಗೆ ಚಾಲನೆ ಸಿಕ್ಕಿಲ್ಲ

ನಗರದ ಉಸ್ತುವಾರಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮೊದಲು, ‘₹1 ಲಕ್ಷ ಕೋಟಿ ವೆಚ್ಚದ ಬೃಹತ್ ಯೋಜನೆಗಳು ನಗರದಲ್ಲಿ ಅನುಷ್ಠಾನವಾಗಲಿವೆ’ ಎನ್ನುತ್ತಿದ್ದರು. ಇದೀಗ ಆ ವೆಚ್ಚ ₹1.5 ಲಕ್ಷ ಕೋಟಿಯನ್ನು ಮೀರಿದೆ. ಸುರಂಗ ರಸ್ತೆ, ಮೇಲ್ಸೇತುವೆ, ಕಾರಿಡಾರ್‌ಗಳು, ಸ್ಕೈಡೆಕ್ ಇದರಲ್ಲಿ ಸೇರಿವೆ. ಆದರೆ, ಎರಡು ವರ್ಷವಾದರೂ ಒಂದು ಯೋಜನೆಯೂ ಆರಂಭವಾಗಿಲ್ಲ. ಟೆಂಡರ್, ಡಿಪಿಆರ್ ಹಂತದಲ್ಲೇ ಎಲ್ಲವೂ ನಲುಗುತ್ತಿವೆ. ಇವುಗಳಿಗೆ ಸರ್ಕಾರ ನೇರವಾಗಿ ಹಣ ನೀಡುತ್ತದೆಯೇ ಅಥವಾ ನಗರ ಪಾಲಿಕೆಗಳಿಂದ ಪಾಲು ಬರುತ್ತದೆಯೇ ಎಂಬ ಬಗ್ಗೆಯೂ ಸ್ಪಷ್ಟನೆ ಸಿಕ್ಕಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುಮಾರು ₹2,200 ಕೋಟಿಯನ್ನು ವಿಶೇಷ ಅನುದಾನವಾಗಿ ನೀಡಿದ್ದರಿಂದ ನಗರದ ಹಲವು ಭಾಗಗಳಲ್ಲಿ ರಸ್ತೆಗಳು ಡಾಂಬರು ಕಾಣುತ್ತಿವೆ. ಆದರೆ, ಇವು ಇನ್ನೂ ಆರಂಭದ ಹಂತದಲ್ಲೇ ಇವೆ. ಬ್ಲ್ಯಾಕ್–ವೈಟ್ ಟಾಪಿಂಗ್, ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳು ಮಾತ್ರ ಅಭಿವೃದ್ಧಿಯಾಗುತ್ತಿದ್ದು, ವಾರ್ಡ್ ರಸ್ತೆಗಳು ಗುಂಡಿಯಲ್ಲೇ ನಲುಗುತ್ತಿವೆ.

ನೇರವಾಗಿ ಹಣ ಬರುತ್ತದೆಯೇ?

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆ (ಜಿಬಿಜಿಎ) ರಚನೆಯಾಗಿರುವ ಜಿಬಿಎ ಹಾಗೂ ಐದು ನಗರ ಪಾಲಿಕೆಗಳ ನಡುವಿನ ಹಣಕಾಸು ವಿಭಜನೆಗೆ ಐದು ತಿಂಗಳಾದರೂ ಸ್ಪಷ್ಟ ಉತ್ತರ ಸಿಕ್ಕಿಲ್ಲ. ಆಸ್ತಿ ತೆರಿಗೆ ಸೇರಿದಂತೆ ಶುಲ್ಕ ಸಂಗ್ರಹ ಈಗಲೂ ಜಿಬಿಎ ಖಾತೆಗೆ ಹೋಗುತ್ತಿದೆ. ಅಲ್ಲಿಂದ ಆಯಾ ನಗರ ಪಾಲಿಕೆಗಳಿಗೆ ಹಣ ವರ್ಗಾವಣೆ ಆಗುತ್ತಿದೆ. ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸುವ ಅನುದಾನದಲ್ಲೂ ಅದೇ ರೀತಿ-ಯಾಗುತ್ತದೆಯೇ ಎಂಬ ಪ್ರಶ್ನೆಗೆ ಜಿಬಿಎ, ನಗರ ಪಾಲಿಕೆಯ ಹಿರಿಯ ಅಧಿಕಾರಿಗಳ ಬಳಿ ಉತ್ತರವಿಲ್ಲ.

ಬಿಬಿಎಂಪಿ ಇದ್ದಾಗ, ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆಯಡಿ ಪ್ರತಿ ವರ್ಷ ₹3,000 ಕೋಟಿಯನ್ನು ರಾಜ್ಯ ಸರ್ಕಾರ ಅನುದಾನವಾಗಿ ನೀಡುತ್ತಿತ್ತು. ಪ್ರತಿ ವರ್ಷ ನಾಲ್ಕು ಕಂತುಗಳಲ್ಲಿ ಈ ಅನುದಾನ ಪಾವತಿಯಾ-ಗುತ್ತಿತ್ತು. ನಗರ ಪಾಲಿಕೆಗಳು ರಚನೆಯಾದ ನಂತರವೂ ಪ್ರಸಕ್ತ ಆರ್ಥಿಕ ವರ್ಷದ ಬಾಬ್ತಿನಲ್ಲಿ ಈ ಅನುದಾನದ ಮೂರನೇ ಕಂತನ್ನು ಬಿಬಿಎಂಪಿ ಬದಲಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಖಾತೆಗೆ ವರ್ಗಾಯಿಸಲಾಗಿದೆ. ಇನ್ನು ಕಳೆದ ಬಜೆಟ್‌ನಲ್ಲಿ ಘೋಷಿಸಿರುವ ಹೆಚ್ಚುವರಿ ₹4,000 ಕೋಟಿ ಅನುದಾನ, ಬೃಹತ್ ಯೋಜನೆಗಳಿಗೆ ಎಂದೇ ಹೇಳಲಾಗಿದೆ. ಅದರಲ್ಲಿ ಒಂದಿಷ್ಟು ಹಣ ಈವರೆಗೆ ಬಿಡುಗಡೆ ಆಗಿಲ್ಲ.

ಬಜೆಟ್ ನಿರೀಕ್ಷೆ: ನೀವೂ ಬರೆಯಿರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6ರಂದು ಬಜೆಟ್ ಮಂಡಿಸಲಿದ್ದಾರೆ. ಮೆಟ್ರೊ, ಸುರಂಗ ರಸ್ತೆ, ಮೇಲ್ಸೇತುವೆಗಳ ನಿರ್ಮಾಣ, ರಸ್ತೆ, ಶೌಚಾಲಯ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಸೇರಿದಂತೆ ರಾಜಧಾನಿಯಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡಲು ಹೆಚ್ಚಿನ ಅನುದಾನದ ಅಗತ್ಯವಿದೆ. ಜೀವನಮಟ್ಟವನ್ನು ಸುಗಮಗೊಳಿಸಲು ಸರ್ಕಾರ ಬಜೆಟ್‌ನಲ್ಲಿ ಯಾವುದಕ್ಕೆ ಆದ್ಯತೆ ನೀಡಬೇಕು. ತಮ್ಮ ನಿರೀಕ್ಷೆಗಳು ಏನು ಎಂಬುದನ್ನು ಜನರು ಹಂಚಿಕೊಳ್ಳಬಹುದು. 50 ಪದಗಳಿಗೆ ಮೀರದಂತೆ ಬರೆದು, ಭಾವಚಿತ್ರ ಸಮೇತ ಕಳುಹಿಸಬೇಕು.

ವಾಟ್ಸ್‌ಆ್ಯಪ್ ಸಂಖ್ಯೆ: 9606038256

ನೈಜ ಸಂಘಗಳಿಂದ ಅರ್ಹರಿಗೆ ಪ್ರಶಸ್ತಿ: ಪದ್ಮನಾಭ



ಬೆಂಗಳೂರಿನಲ್ಲಿ ‘ಶ್ರೀ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ’ ಆಯೋಜಿಸಿದ್ದ 26ನೇ ವಾರ್ಷಿಕೋತ್ಸವ ಸಂಭ್ರಮದಲ್ಲಿ ತಿಮ್ಮಣ್ಣ ರಾಮಕೃಷ್ಣ ಭಟ್ಟ ಬಾಲೀಗದ್ದೆ ಅವರಿಗೆ ‘ಬೆಳಗೆರೆ ಮಹಾಲಕ್ಷ್ಮಮ್ಮ ಸ್ಮರಣಾರ್ಥ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. (ಎಡದಿಂದ) ಚಂದ್ರಿಕಾ ಮನೋಹರ್, ಪ್ರತಿಷ್ಠಾನದ ಅಧ್ಯಕ್ಷೆ ಗೌರಿ ನಾಗರಾಜ್, ಸುಂದರೇಶ್, ದೇವಗಿರಿ ವೆಂಕಟೇಶ್ವರ ಟ್ರಸ್ಟ್ ಅಧ್ಯಕ್ಷ ನರಸಿಂಹಮೂರ್ತಿ, ಪ್ರತಿಷ್ಠಾನದ ಉಪಾಧ್ಯಕ್ಷೆ ವೀಣಾ ಸುರೇಶ್, ಸಂಗೀತ ವಿದ್ವಾಂಸ ಆರ್.ಕೆ. ಪದ್ಮನಾಭ, ಎಸ್‌ಡಿ.ಎಂ ಕಾಲೇಜಿನ ಕುಲಸಚಿವ ಶ್ರೀಧರ ಎನ್. ಭಟ್ಟ ಮತ್ತು ನಾಗರಾಜ್ ಇದ್ದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯೋತ್ಸವ ಮಾತ್ರವಲ್ಲ, ಪದ್ಮಶ್ರೀ ಪ್ರಶಸ್ತಿಯೂ ದುಡ್ಡು ಕೊಟ್ಟರೆ ಸಿಗಲಿದೆ. ಆದರೆ, ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳು ಪ್ರಶಸ್ತಿಗಳನ್ನು ಅರ್ಹರಿಗೆ ನೀಡಿ ಮೌಲ್ಯ ಹೆಚ್ಚಿಸಿವೆ’ ಎಂದು ಸಂಗೀತ ವಿದ್ವಾಂಸ ಆರ್.ಕೆ.ಪದ್ಮನಾಭ ಹೇಳಿದರು.

ಶ್ರೀರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನವು ಬನಶಂಕರಿ ದೇವಗಿರಿ ವೆಂಕಟೇಶ್ವರ ದೇವಸ್ಥಾನದಲ್ಲಿ ಭಾನುವಾರ ಆಯೋಜಿಸಿದ್ದ 26ನೇ ವಾರ್ಷಿಕೋತ್ಸವ ಸಂಭ್ರಮದಲ್ಲಿ ಉತ್ತರ ಕನ್ನಡದ ವಿದ್ವಾಂಸ ತಿಮ್ಮಣ್ಣ ರಾಮಕೃಷ್ಣ ಭಟ್ಟ ಬಾಲೀಗದ್ದೆ ಅವರಿಗೆ ಬಿ.ಎಸ್. ಬೆಳಗೆರೆ ಮಹಾಲಕ್ಷ್ಮಮ್ಮ ಸ್ಮರಣಾರ್ಥ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

‘ಈಗಿನ ಕಾಲದಲ್ಲಿ ಪ್ರಶಸ್ತಿಗೆ ಅರ್ಹರು ಯಾರು ಎಂದು ಹುಡುಕುವ ಸ್ಥಿತಿಯಿದೆ. ರಾಷ್ಟ್ರಪತಿ ಅವರ ಕಚೇರಿಯಿಂದಲೂ ಸಾಧಕರನ್ನು ಆಹ್ವಾನಿಸಿ ಗೌರವಿಸ-ಲಾಗುತ್ತದೆ. ಅದು ಸರ್ಕಾರದ ಕಾರ್ಯಕ್ರಮವಾಗಿರು-ತ್ತದೆಯೇ ವಿನಃ ಪ್ರೀತಿ ಇರುವುದಿಲ್ಲ. ಆದರೆ ಇಂತಹ ಸಂಸ್ಥೆಗಳು ನಿಷ್ಕಾಮವಾಗಿ ಸೇವೆ ಸಲ್ಲಿಸಿದವರನ್ನು ಗುರುತಿಸಿ ಪ್ರಶಸ್ತಿ ನೀಡುತ್ತವೆ’ ಎಂದು ಹೇಳಿದರು.

‘ತಂದೆ, ತಾಯಿ ಜಮೀನು, ಮನೆ ಮಾರಾಟ ಮಾಡಿ ಮಕ್ಕಳಿಗೆ ಶಿಕ್ಷಣ ನೀಡುತ್ತಾರೆ. ಆದರೆ ಹಾಗೆ ಎಲ್ಲವನ್ನೂ ಧಾರೆ ಎರೆದು ಮಕ್ಕಳನ್ನು ಸಂಸ್ಕಾರ-ಯುತರನ್ನಾಗಿಸಿದರೆ ಕೆಲವರು ತಂದೆ ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸಿ ಬಿಡುತ್ತಾರೆ. ತಂದೆ ತಾಯಿಗೆ ಎಷ್ಟು ಸೇವೆ ಮಾಡಿದರೂ ಕಡಿಮೆಯೇ. ಗೌರಿ ನಾಗರಾಜ್ ಅವರು ತಮ್ಮ ತಾಯಿ, ಸಾಹಿತಿ ಮಹಾಲಕ್ಷ್ಮಮ್ಮ ಅವರ ಹೆಸರಿನಲ್ಲಿ ನಿರಂತರವಾಗಿ ಕಾರ್ಯಕ್ರಮ ನಡೆಸುತ್ತಾ ಪ್ರತಿಭಾವಂತರಿಗೆ ಪ್ರಶಸ್ತಿ ನೀಡುತ್ತಿರುವುದು ಸ್ತುತ್ಯರ್ಹ’ ಎಂದರು.

ತಾಯಿ ಋಣ ದೊಡ್ಡದು: ಪ್ರಶಸ್ತಿ ಸ್ವೀಕರಿಸಿದ ತಿಮ್ಮಣ್ಣ ರಾಮಕೃಷ್ಣ ಭಟ್ಟ ಮಾತನಾಡಿ, ‘ತಾಯಿ, ತಂದೆ ಅವರನ್ನು ಸ್ಮರಿಸಿ ಅವರಿಗೆ ಗೌರವ ಸಲ್ಲಿಸುವುದು ದೊಡ್ಡ ಕೆಲಸ. ತಂದೆಗಿಂತ ತಾಯಿಯ ಋಣ ಮೂರು ಪಟ್ಟು ದೊಡ್ಡದು. ಜನ್ಮ ನೀಡಿ, ನಂತರ ಗುರುವಾಗಿ ಬದುಕು ರೂಪಿಸಲು ತಾಯಿ ಪಾತ್ರವೇ ಹಿರಿದಾದದು. ನನ್ನನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿದ್ದು ಸಂತಸ ನೀಡಿದೆ’ ಎಂದರು.

ಅರ್ಹ ವಿದ್ವಾಂಸಗೆ ಗೌರವ: ಉಜಿರೆ ಎಸ್‌ಡಿಎಂನ ಕುಲಸಚಿವ ಶ್ರೀಧರ ಎನ್. ಭಟ್ಟ ಮಾತನಾಡಿ, ‘ತಿಮ್ಮಣ್ಣ ಭಟ್ಟ ಅವರು ಶಾಸ್ತ್ರ ಪಾರಂಗತರು. 91ನೇ ವಯಸ್ಸಿನಲ್ಲಿಯೂ ನಿರಂತರ ಅಧ್ಯಯನದ ಮೂಲಕ ಶಾಸ್ತ್ರಗಳ ಕುರಿತು ನಿಖರವಾಗಿ ಮಾಹಿತಿ ನೀಡಿ ಮಾರ್ಗದರ್ಶನ ನೀಡುತ್ತಿದ್ದಾರೆ. ಉತ್ತರ ಕನ್ನಡ ಜಿಲ್ಲೆಗೆ ಸೀಮಿತವಾಗಿದ್ದ ಇಂತಹ ಸಾಧಕರನ್ನು ಗುರುತಿಸಿದ್ದು ಶ್ಲಾಘನೀಯ’ ಎಂದು ಹೇಳಿದರು.


ದೇವಗಿರಿ ವೆಂಕಟೇಶ್ವರ ಟ್ರಸ್ಟ್ ಅಧ್ಯಕ್ಷ ನರಸಿಂಹಮೂರ್ತಿ, ಪ್ರತಿಷ್ಠಾನದ ಅಧ್ಯಕ್ಷೆ ಗೌರಿ ನಾಗರಾಜ್, ಉಪಾಧ್ಯಕ್ಷೆ ವೀಣಾ ಸುರೇಶ್, ನಿವೃತ್ತ ಶಿಕ್ಷಕ ಸುಂದರೇಶ್, ಚಂದ್ರಿಕಾ ಮನೋಹರ್ ಉಪಸ್ಥಿತರಿದ್ದರು.

ಸಾಂಸ್ಕೃತಿಕ ಸಂಭ್ರಮ: ಬಳಿಕ ಒಡಿಶಾದ ಕಟಕ್‌ನ ಮಯೂರಿ ಶಾಲೆಯ ಮಮತಾ ಓಜಾ, ಮಾನಸಿ ಪ್ರಿಯದರ್ಶಿನಿ, ಧರಾಶ್ರೀ ಮಹಾರಾಣಾ ತಂಡದವರು ಶ್ರೀರಾಮಚರಿತೆ ದಶಾವತಾರ ನೃತ್ಯ ರೂಪಕ ನಡೆಸಿಕೊಟ್ಟರು.

ಆತಿಥ್ಯ ಕ್ಷೇತ್ರ

ಸತ್ಕಾರಕ್ಕೆ ಸೈ ಅನ್ನಿ, ಅತಿಥಿಗೆ ಶರಣೆನ್ನಿ

ಪಿಯುಸಿ ಮುಂದೇನು? ಭಾಗ–3



ಇವೆಲ್ಲಾ ನಿಮ್ಮಲ್ಲಿರಲಿ

ಆತ್ಮವಿಶ್ವಾಸ, ಆತಿಥ್ಯ ಮನೋಭಾವ, ಉತ್ತಮ ಸಂವಹನ, ಸಮಯಪಾಲನೆ, ತಂಡದ ಮನೋಭಾವ, ಸಮಸ್ಯೆಗಳಿಗೆ ಪರಿಹಾರ, ಪ್ರಸ್ತುತೀಕರಣ ಕೌಶಲ, ತಾರ್ಕಿಕ ಚಿಂತನೆ, ಬಹುಭಾಷಾ ಪ್ರಾವೀಣ್ಯ ಅಗತ್ಯ. ವೃತ್ತಿಪರ ಕೌಶಲಗಳನ್ನು ಪದವಿ ಕೋರ್ಸ್‌ನಲ್ಲಿ ಪ್ರಾಯೋಗಿಕವಾಗಿ ಕಲಿಸಲಾಗುತ್ತದೆ.

• ಪ್ರದೀಪ್ ಎಸ್.ವೆಂಕಟರಾಮ್

ಪಿಯುಸಿ ನಂತರ 'ಎಂಜಿನಿಯರಿಂಗ್ ಅಥವಾ ಮೆಡಿಸಿನ್?' ಎಂಬ ಸೀಮಿತ ಪ್ರಶ್ನೆಯೇ ಬಹುತೇಕ ವಿದ್ಯಾರ್ಥಿಗಳನ್ನು ಕಾಡುತ್ತದೆ. ಪೋಷಕರ ನಿರೀಕ್ಷೆ ಹಾಗೂ ನೀಟ್, ಸಿಇಟಿ, ಜೆಇಇಯಂತಹ ಪ್ರವೇಶ ಪರೀಕ್ಷೆಗಳ ಒತ್ತಡದ ನಡುವೆ ಅನೇಕರು ತಮ್ಮ ನಿಜವಾದ ಆಸಕ್ತಿ, ಅಭಿರುಚಿಗಳನ್ನು ಗಮನಿಸುವುದಿಲ್ಲ. ಆದರೆ, ಸುಮಾರು 40 ವರ್ಷದ ವೃತ್ತಿಜೀವನವನ್ನು ಸಂತೋಷದಿಂದ ಸಾಗಿಸಲು, ಬದುಕಿನ ಗುರಿಗಳನ್ನು ಸಾಧಿಸಲು, ನಮಗೆ ಆಸಕ್ತಿಯಿರುವ ಕ್ಷೇತ್ರವನ್ನು ಆರಿಸಿಕೊಳ್ಳುವುದೇ ವೃತ್ತಿಯೋಜನೆಯ ಮೊದಲ ಹೆಜ್ಜೆ.

ನ್ಯಾಷನಲ್ ಕ್ಲ್ಯಾಸಿಫಿಕೇಷನ್ ಆಫ್ ಆಕ್ಯುಪೇಷನ್ಸ್–ಎನ್‌ಸಿಒ ಮಾಹಿತಿಯ ಪ್ರಕಾರ, ಪಿಯುಸಿ ನಂತರ ನೂರಾರು ಪದವಿ ಕೋರ್ಸ್‌ಗಳು ಮತ್ತು ಸಾವಿರಾರು ವೃತ್ತಿಗಳು ಲಭ್ಯವಿವೆ. ಅವುಗಳ ನಡುವೆ, ಅಸಾಂಪ್ರದಾಯಿಕ ಹಾಗೂ ಭವಿಷ್ಯಪೂರ್ಣ ಕ್ಷೇತ್ರಗಳನ್ನು ಪರಿಚಯಿಸುವುದೇ ಈ ಲೇಖನದ ಉದ್ದೇಶ.

ಜಗತ್ತಿನಾದ್ಯಂತ ವೇಗವಾಗಿ ಬೆಳೆಯುತ್ತಿರುವ ವೈವಿಧ್ಯಮಯ ಉದ್ಯಮವೇ ಆದರಾತಿಥ್ಯ (ಹಾಸ್ಪಿಟ್ಯಾಲಿಟಿ) ಕ್ಷೇತ್ರ. 'ಅತಿಥಿ ದೇವೋಭವ' ಅಂದರೆ ಅತಿಥಿಯೇ ದೇವರು ಎಂಬುದು ನಮ್ಮ ಸಂಸ್ಕೃತಿಯ ಮೂಲ ಮೌಲ್ಯ. ಅತಿಥಿಗಳಿಗೆ ಗೌರವ, ವೈಯಕ್ತಿಕ ಗಮನ, ಆತ್ಮೀಯ ಸೇವೆ ನೀಡುವುದರ ಪ್ರಾಮುಖ್ಯತೆಯನ್ನು ಇದು ಒತ್ತಿ ಹೇಳುತ್ತದೆ. ಶಿಸ್ತು ಮತ್ತು ಶಿಷ್ಟಾಚಾರ, ಸಕಾರಾತ್ಮಕ ಮನೋಭಾವ, ಜಾಗತಿಕ ದೃಷ್ಟಿಕೋನ ಹೊಂದಿರುವ ವಿದ್ಯಾರ್ಥಿಗಳಿಗೆ ಈ ಕ್ಷೇತ್ರದಲ್ಲಿ ಉದ್ಯೋಗ ಹಾಗೂ ಉದ್ಯಮಶೀಲತೆಯ ಅವಕಾಶಗಳು ಅಪಾರ.

ಉದ್ಯೋಗಾವಕಾಶ

ಭಾರತದ ಜಿಡಿಪಿಗೆ ಸುಮಾರು ಶೇ 6ರಷ್ಟು ಕೊಡುಗೆ ನೀಡುವ ಈ ಕ್ಷೇತ್ರದಲ್ಲಿ, ವಾರ್ಷಿಕಾಭಿವೃದ್ಧಿ ಶೇ 14ರಷ್ಟು ಎನ್ನಲಾಗಿದೆ. ಇದು ನೇರ ಮತ್ತು ಪರೋಕ್ಷವಾಗಿ ಸುಮಾರು 5 ಕೋಟಿ ಉದ್ಯೋಗಗಳನ್ನು ಸೃಷ್ಟಿಸಿದೆ. ಮಾರಾಟ– ಮಾರ್ಕೆಟಿಂಗ್, ಫ್ರಂಟ್ ಆಫೀಸ್, ಗ್ರಾಹಕ ಸೇವೆ, ಮಾನವ ಸಂಪನ್ಮೂಲ, ಹಣಕಾಸು, ಸರಬರಾಜು ಸರಪಳಿ, ಇವೆಂಟ್ ನಿರ್ವಹಣೆ ಪ್ರಮುಖ ವಿಭಾಗಗಳು. ಸ್ವಂತ ಅನುಭವದ ನಂತರ ರೆಸ್ಟೋರೆಂಟ್, ಬೊಟಿಕ್ ಹೋಟೆಲ್, ಟ್ರಾವೆಲ್ ಸ್ಟಾರ್ಟ್–ಅಪ್, ಇವೆಂಟ್ ಕಂಪನಿ ಇತ್ಯಾದಿಗಳನ್ನು ಆರಂಭಿಸುವ ಅವಕಾಶವಿದೆ.

ಕೋರ್ಸ್‌ಗಳು, ಸಂಸ್ಥೆಗಳು

ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕವಾಗಿ ಹಲವಾರು ಕೋರ್ಸ್‌ಗಳಿವೆ. ಬಿ.ಎಚ್‌ಎಂ (ಬ್ಯಾಚುಲರ್ ಆಫ್ ಹಾಸ್ಪಿಟ್ಯಾಲಿಟಿ ಮ್ಯಾನೇಜ್‌ಮೆಂಟ್, ಬಿ.ಎಸ್ಸಿ (ಹಾಸ್ಪಿಟ್ಯಾಲಿಟಿ, ಕೇಟರಿಂಗ್ ಮತ್ತು ಹೋಟೆಲ್ ಮ್ಯಾನೇಜ್‌ಮೆಂಟ್), ಬಿ.ಬಿ.ಎ (ಟೂರಿಸಂ ಆ್ಯಂಡ್ ಟ್ರಾವೆಲ್) ಮುಂತಾದ ಕೋರ್ಸ್‌ಗಳನ್ನು ಮಾಡಬಹುದು.

1982ರಲ್ಲಿ ಸ್ಥಾಪಿತವಾದ 'ರಾಷ್ಟ್ರೀಯ ಹೋಟೆಲ್ ನಿರ್ವಹಣೆ ಮತ್ತು ಕೇಟರಿಂಗ್ ತಂತ್ರಜ್ಞಾನ ಮಂಡಳಿ'ಯು (ಎನ್‌ಸಿಎಚ್‌ಎಂಸಿಟಿ) ಪ್ರವಾಸೋದ್ಯಮ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು, ದೇಶದಾದ್ಯಂತ 90ಕ್ಕೂ ಹೆಚ್ಚು ಐಎಚ್‌ಎಂ (ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್) ಹಾಗೂ ಫುಡ್‌ಕ್ರ್ಯಾಫ್ಟ್ ಸಂಸ್ಥೆಗಳ ಮೇಲ್ವಿಚಾರಣೆ ಮಾಡುತ್ತದೆ.

ದೆಹಲಿ, ಮುಂಬೈ, ಔರಂಗಾಬಾದ್‌ನಲ್ಲಿರುವ ಐಎಚ್‌ಎಂಗಳು, ಮಣಿಪಾಲದಲ್ಲಿರುವ ವೆಲ್‌ಕಂ ಗ್ರೂಪ್, ದೆಹಲಿಯ ಒಬೆರಾಯ್ ಸೆಂಟರ್, ಕ್ರೈಸ್ಟ್, ಪರುಲ್, ಅಮಿಟಿ, ಅಪೀಜೆಯಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕ್ಯಾಂಪಸ್ ನೇಮಕಾತಿ ವ್ಯವಸ್ಥೆ ಇದೆ. ಪ್ರಾರಂಭಿಕ ಸಂಬಳ ₹ 3.5 ಲಕ್ಷದಿಂದ ₹ 5 ಲಕ್ಷ ಇರಬಹುದು. ವಿದೇಶಗಳಲ್ಲಿ ಅಥವಾ ಕ್ರೂಸ್ ಉದ್ಯಮದಲ್ಲಿ ₹ 20 ಲಕ್ಷದಿಂದ ₹ 25 ಲಕ್ಷದವರೆಗೆ ಅವಕಾಶಗಳಿದ್ದು, ಯುಎಇ, ಸಿಂಗಪುರ, ಯುರೋಪ್, ಆಸ್ಟ್ರೇಲಿಯಾದಲ್ಲಿ ಹೆಚ್ಚಿನ ಬೇಡಿಕೆ ಇದೆ. ಕಾಲೇಜನ್ನು ಆಯ್ಕೆ ಮಾಡಿಕೊಳ್ಳುವಾಗ ಮೂಲಸೌಕರ್ಯ, ಅಧ್ಯಾಪಕ ವೃಂದ, ಉದ್ಯಮ ಸಂಪರ್ಕ, ಪ್ಲೇಸ್‌ಮೆಂಟ್ ದಾಖಲೆಯನ್ನು ತಪ್ಪದೇ ಪರಿಶೀಲಿಸಿ. ನಿಮ್ಮಲ್ಲಿ ಹೊಸ ಅನುಭವಗಳನ್ನು ಸೃಷ್ಟಿಸುವ ಉತ್ಸಾಹ ಮತ್ತು ಜಗತ್ತನ್ನು ಅನ್ವೇಷಿಸುವ ಕನಸುಗಳಿದ್ದರೆ, ಈ ಕ್ಷೇತ್ರ ನಿಮ್ಮದಾಗಬಹುದು.

ಲೇಖಕ: ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ

ಯಾವುದೆಲ್ಲಾ ಸೇರುತ್ತವೆ?

ಆದರಾತಿಥ್ಯ ಎಂದರೆ ಬರೀ ಹೋಟೆಲ್ ಅಥವಾ ರೆಸ್ಟೋರೆಂಟ್‌ಗಳಷ್ಟೇ ಅಲ್ಲ, ವಸತಿ ಸೇವೆಗಳು (ಹೋಟೆಲ್, ರೆಸಾರ್ಟ್, ಹೋಮ್‌ಸ್ಟೇ), ಆಹಾರ– ಪಾನೀಯ ಸೇವೆ (ರೆಸ್ಟೋರೆಂಟ್, ಕೆಫೆ, ಕ್ಯುಎಸ್‌ಆರ್- ಕ್ವಿಕ್ ಸರ್ವಿಸ್ ರೆಸ್ಟೋರೆಂಟ್), ಪ್ರಯಾಣ ಮತ್ತು ಸಾರಿಗೆ (ವಿಮಾನ, ರೈಲು, ಬಸ್, ಟ್ಯಾಕ್ಸಿ, ಕ್ರೂಸ್), ಪ್ರವಾಸೋದ್ಯಮ ಸೇವೆ (ಟೂರ್ ಆಪರೇಟರ್, ಗೈಡ್, ವೀಸಾ, ಕರೆನ್ಸಿ ಸೇವೆಗಳು), ಮೀಟಿಂಗ್ಸ್- ಇನ್ಸೆಂಟಿವ್ಸ್- ಕಾನ್ಫರೆನ್ಸ್- ಇವೆಂಟ್ (ಎಂಐಸಿಇ), ಕೇಟರಿಂಗ್, ಮನರಂಜನೆ, ಆರೋಗ್ಯ– ಸ್ವಾಸ್ಥ್ಯ, ಸೌಂದರ್ಯ ಮತ್ತು ಸ್ಪಾ, ಅಮ್ಯೂಸ್‌ಮೆಂಟ್ ಪಾರ್ಕ್, ಮೃಗಾಲಯ, ವಸ್ತುಸಂಗ್ರಹಾಲಯ, ವನ್ಯಜೀವಿ ಸಫಾರಿ ಹಾಗೂ ತಂತ್ರಜ್ಞಾನ ಸೇವೆಗಳೆಲ್ಲವೂ ಈ ಕ್ಷೇತ್ರಕ್ಕೆ ಸೇರಿವೆ. ಇತ್ತೀಚೆಗೆ ಜನಪ್ರಿಯವಾಗಿರುವ ಡೆಸ್ಟಿನೇಶನ್ ವೆಡಿಂಗ್ ಸಹ ಇದೇ ಕ್ಷೇತ್ರದ ಭಾಗ.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಶಿಪ್

ARLaang ಟೆಕ್ನಾಲಜೀಸ್ ಸಂಸ್ಥೆ ಮಲಯಾಳ ಭಾಷೆಯಲ್ಲಿ ಪರಿಣತಿ ಇರುವ ಇಂಟರ್ನಿಯನ್ನು ನೇಮಕ ಮಾಡಿಕೊಳ್ಳಲು ಮುಂದಾಗಿದೆ. ಮಲಯಾಳ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಮಾತನಾಡುವ ಮತ್ತು ಬರೆಯುವ ಸಾಮರ್ಥ್ಯ ಉಳ್ಳವರು, ಟ್ರಾನ್ಸ್‌ಕ್ರಿಪ್ಷನ್, ಟ್ರಾನ್ಸ್‌ಲೇಷನ್‌ನಲ್ಲಿ ಜ್ಞಾನ ಇರುವ ವಿದ್ಯಾರ್ಥಿಗಳು ಮಾರ್ಚ್ 20ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 9,000– ₹ 15,000. ಸಂಪರ್ಕ: https://shorturl.at/V0xgf.

ಕ್ಯಾನಿಬಾಲ್ಸ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಡಿಜಿಟಲ್ ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಡಿಜಿಟಲ್ ಮಾರ್ಕೆಟಿಂಗ್, ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಬಗ್ಗೆ ಜ್ಞಾನ ಇರುವ, ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಮತ್ತು ಮಾತನಾಡುವ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಮಾರ್ಚ್ 20ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 4,000. ಸಂಪರ್ಕ: https://shorturl.at/L3Qmr.

ಬೆಂಗಳೂರು ಕೇಂದ್ರಿತ ಇಂಟರ್ನ್‌ಶಿಪ್

ಆ್ಯಂಪಿಸ್ (Ampys) ಕನ್‌ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್ ಎಐ/ಫುಲ್–ಸ್ಟ್ಯಾಕ್ ಟೆಕ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. .NET, Angular, C#, Microsoft Azure, MS SQL Server, OpenAI API, Python, and REST API ಬಗ್ಗೆ ಜ್ಞಾನವುಳ್ಳ ವಿದ್ಯಾರ್ಥಿಗಳು ಮಾರ್ಚ್ 20ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 5,000– ₹ 10,000. ಸಂಪರ್ಕ: https://shorturl.at/nCeVz.

ದಿ ಸ್ಟಾರ್ಟ್‌ಅಪ್ ಝೋನ್ ಅಕೌಂಟಿಂಗ್ & ಟ್ಯಾಕ್ಸೇಷನ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಎಂಎಸ್ ಆಫೀಸ್ ಮತ್ತು ಎಂಎಸ್ ಎಕ್ಸೆಲ್ ಬಗ್ಗೆ ಅರಿತಿರುವ ವಿದ್ಯಾರ್ಥಿಗಳು ಮಾರ್ಚ್ 21ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 5,000– ₹ 7,000. ಸಂಪರ್ಕ: https://shorturl.at/EzqGp.

ಹುಡುಗಿಯರ ಪೋಸ್ಟ್‌ಗೆ ಹೆಚ್ಚು ಲೈಕ್ಸ್ ಯಾಕೆ?





ಸಮಾಧಾನ

ಡಾ. ಡಿ.ಎಂ. ಹೆಗಡೆ, ಆಪ್ತಸಮಾಲೋಚಕ

• **ನನಗೆ 19 ವರ್ಷ. ಸೋಷಿಯಲ್ ಮೀಡಿಯಾದಲ್ಲಿ ಬಹಳ ಕ್ರಿಯಾಶೀಲನಾಗಿದ್ದೇನೆ. ಆದರೆ ನಾನು ಎಷ್ಟೇ ಪ್ರಯತ್ನ ಮಾಡಿದರೂ ನನ್ನ ಸಬ್‌ಸ್ಕ್ರೈಬರ್‌ಗಳ ಸಂಖ್ಯೆ ಹೆಚ್ಚಾಗುತ್ತಿಲ್ಲ. ನನ್ನ ವಯಸ್ಸಿನ ಹುಡುಗಿಯರ ಫಾಲೋವರ್ಸ್ ಸಂಖ್ಯೆ ಬಹಳ ಇದೆ. ಅವರ ಪೋಸ್ಟ್‌ಗಳಿಗೆ ಬಹಳ ಲೈಕ್ಸ್ ಬರುತ್ತವೆ. ನಾನು ಎಷ್ಟೇ ಸಕಾರಾತ್ಮಕವಾದ, ಕ್ರಿಯಾಶೀಲವಾದ, ತಮಾಷೆಯ ಪೋಸ್ಟ್ ಹಾಕಿದರೂ ನನಗೆ ಲೈಕ್ಸ್ ಬರುತ್ತಿಲ್ಲ, ಫಾಲೋವರ್ಸ್ ಹೆಚ್ಚಾಗುತ್ತಿಲ್ಲ. ಬಹಳ ಬೇಸರವಾಗಿದೆ. ಕುಗ್ಗಿಹೋಗಿದ್ದೇನೆ. ಒಂಟಿತನ ಕಾಡುತ್ತಿದೆ. ಕಾಲೇಜಿನ ಪಠ್ಯದಲ್ಲೂ ನನಗೆ ಆಸಕ್ತಿ ಉಳಿದಿಲ್ಲ. ನಾನು ಯಾವುದರಲ್ಲೂ ಪ್ರಯೋಜನ ಇಲ್ಲದವನು, ನನ್ನಿಂದ ಏನನ್ನೂ ಸಾಧಿಸಲಿಕ್ಕೆ ಸಾಧ್ಯವಿಲ್ಲ ಎನ್ನಿಸುತ್ತಿದೆ. ಪಾಲಕರಿಗೂ ನನ್ನ ಮೇಲೆ ಕೋಪವಿದೆ. ಸೋಷಿಯಲ್ ಮೀಡಿಯಾಗಳಿಂದಲೂ ನನಗೆ ಆದಾಯ ಬರುತ್ತಿಲ್ಲ. ಬೇರೆ ಯಾವ ಕೆಲಸ ಮಾಡಬೇಕು? ಹೇಗೆ ಬದುಕಬೇಕು?**

ಶ್ರೀಕಾಂತ್ ಸಮರ್ಥ, ಚಿತ್ರದುರ್ಗ

ಇಂದಿನ ಬಹುತೇಕ ಯುವಕರು ಇದೇ ಮನಃಸ್ಥಿತಿಯಲ್ಲಿ ಇದ್ದಾರೆ. ಯಾರನ್ನೇ ನೋಡಿದರೂ ಮೊಬೈಲಿನೊಳಗೆ ತಲ್ಲೀನರಾಗಿರುತ್ತಾರೆ. ಒಂದರ್ಧ ನಿಮಿಷ ಸಮಯ ಸಿಕ್ಕರೂ ಸಾಕು, ತಕ್ಷಣ ಮೊಬೈಲನ್ನು ತೆಗೆದು ಗಮನಿಸುತ್ತಾರೆ. ಏನನ್ನೋ ಹುಡುಕುತ್ತಾರೆ, ಚಡಪಡಿಸುತ್ತಾರೆ. ಒಟ್ಟಿನಲ್ಲಿ ಅವ್ಯಕ್ತವಾದ ಆತಂಕದಲ್ಲಿ, ಅವಸರದಲ್ಲಿ ಇರುತ್ತಾರೆ.

ಅವರ ಮನಸ್ಸಿನಲ್ಲಿ ಏನೇನೋ ಆಲೋಚನೆಗಳು ಓಡುತ್ತಿರುತ್ತವೆ. ದೇಹ ಮತ್ತೆಲ್ಲೋ ಯಾವುದೋ ಕೆಲಸವನ್ನು ಮಾಡುತ್ತಿರುತ್ತದೆ. ಇದರಿಂದ ವ್ಯಕ್ತಿಯ ನರಮಂಡಲದ ಮೇಲೆ ವ್ಯತಿರಿಕ್ತ ಪರಿಣಾಮಗಳಾಗುತ್ತಿವೆ. ಮನುಷ್ಯ ತನ್ನ ಜೊತೆಗಿರುವವರಿಂದ ದೂರಾಗುತ್ತಿದ್ದಾನೆ. ಸಂತೆಯಲ್ಲಿ ಸಹ ಆತ ಒಂಟಿಯಾಗುತ್ತಿದ್ದಾನೆ. ಯಾರಿಗೂ, ಯಾವ ರೀತಿಯಿಂದಲೂ ಇದು ಒಳ್ಳೆಯದಲ್ಲ.

ಇನ್ನು, ನೀನು ಕೂಡ ಕಲ್ಪನೆಯ ಪ್ರಪಂಚದಲ್ಲಿ ಕುಸಿದು ಹೋಗುತ್ತಿರುವೆ. ಎಷ್ಟು ಬೇಗ ನೀನು ವಾಸ್ತವಕ್ಕೆ ಬರುತ್ತೀಯೊ ಅಷ್ಟೂ ಒಳ್ಳೆಯದು. ದೇಹವು ಮನಸ್ಸಿನ ದಾಸ. ಮನಸ್ಸು ಹತೋಟಿ ತಪ್ಪಿದರೆ ದೇಹವೂ ಯಾಮಾರಿಬಿಡುತ್ತದೆ. ಬದುಕು ಡೋಲಾಯಮಾನವಾಗುತ್ತದೆ. ಮನಸ್ಸನ್ನು ಸರಿಯಾದ ರೀತಿಯಲ್ಲಿ ದುಡಿಸಿಕೊಂಡರೆ ಮಾತ್ರ ಐಹಿಕ ಸುಖ, ಸಂತೋಷವನ್ನು ಅನುಭವಿಸಲು ಸಾಧ್ಯ.

ನಿನ್ನ ಕ್ರಿಯಾಶೀಲತೆಯ ಬಗ್ಗೆ ನಿನಗೆ ವಿಶ್ವಾಸ ಹಾಗೂ ಅಭಿಮಾನ ಇದ್ದರೆ ಅದು ಒಳ್ಳೆಯದು. ಹಾಗಂತ ಅದರಿಂದ ಈಗಲೇ ನಿನ್ನ ಜೀವನ ನಿರ್ವಹಣೆಗೆ ಸಾಕಾಗುವಷ್ಟು ಆದಾಯ ಹಾಗೂ ಜನಪ್ರೀತಿ ಸಿಗಬೇಕು ಎನ್ನುವುದು ಅವಸರವಾದೀತು. ಇನ್ನು ನಿನ್ನ ವಯಸ್ಸಿನ ಹುಡುಗಿಯರಿಗೆ ಹೆಚ್ಚು ಲೈಕ್ಸ್ ಬರುವ ಬಗ್ಗೆ ನೀನು ಹೋಲಿಸಿಕೊಳ್ಳಬಾರದು. ನಿನಗಿಂತಲೂ ಹೆಚ್ಚು ಕಷ್ಟಪಡುತ್ತಿರುವ ಹುಡುಗರ ಬಗ್ಗೆ ನೀನು ಆಲೋಚಿಸಬೇಕು. ಅವರಿಗಿಂತ ನೀನು ಹೆಚ್ಚಿನ ಸ್ಥಾನದಲ್ಲಿರುವ ಬಗ್ಗೆ ಖುಷಿ ಪಡಬೇಕು.

ಇನ್ನು ಆಯ್ದುಕೊಂಡ ಒಂದು ಕ್ಷೇತ್ರದಲ್ಲಿ ಸಹನೆಯಿಂದ ಸಾಧನೆ ಮಾಡಿದವರಿಗೆ ಮಾತ್ರ ಯಶಸ್ಸು ಸಿದ್ಧಿಸುತ್ತದೆ. ಅವರ ದಾರಿಯಲ್ಲಿ ನೀನು ಸಾಗುವಂತಾಗಬೇಕು.

ನಿನ್ನ ವಯಸ್ಸಿನಲ್ಲಿ ನೀನು ಮಾಡಲೇಬೇಕಾದ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು. ಕಾಲೇಜಿನ ಪಠ್ಯವನ್ನು ಓದಬೇಕು. ಪರೀಕ್ಷೆಯಲ್ಲಿ ಪಾಸಾಗಬೇಕು. ಸಮತೋಲಿತ ಆಹಾರ ಹಾಗೂ ನಿಯಮಿತ ವ್ಯಾಯಾಮಗಳಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಪಾಲಕರನ್ನು ಪ್ರೀತಿಸಬೇಕು, ಗೌರವಿಸಬೇಕು. ಆಗ ಅವರಿಗೆ ನಿನ್ನ ಮೇಲಿನ ಕೋಪ ಇಳಿಯುತ್ತದೆ. ನಿನ್ನ ಬಗ್ಗೆ ಖುಷಿ ಪಡುತ್ತಾರೆ.

ಸಂಸಾರ ನಿರ್ವಹಣೆಗೆ ನಿನ್ನ ಗಳಿಕೆ ಅನಿವಾರ್ಯ ಆಗಿರದಿದ್ದರೆ ಅದರ ಬಗ್ಗೆ ನೀನು ಈಗ ಚಿಂತಿಸಬೇಕಾಗಿಲ್ಲ. ಮೊದಲು ನೀನು ಚೆನ್ನಾಗಿ ಓದಿ, ನಿನ್ನಿಷ್ಟದ ಕೆಲಸಕ್ಕೆ ಸೇರಬೇಕು. ಅದಾದನಂತರ ಸೋಷಿಯಲ್ ಮೀಡಿಯಾಗಳ ಬಗ್ಗೆ ಆಲೋಚಿಸಿದರೆ ಸಾಕು. ನಿನಗೆ ಏನ್ನಾದರೂ ಸಾಧಿಸಲಿಕ್ಕೆ, ಪ್ರಸಿದ್ಧನಾಗಲಿಕ್ಕೆ ಬೇಕಾದಷ್ಟು ಸಮಯ ಇದೆ. ಈಗಲೇ ನೀನು ಯಾವುದಕ್ಕೂ ಅವಸರಿಸಬೇಕಾಗಿಲ್ಲ.

ಸೋಷಿಯಲ್ ಮೀಡಿಯಾಗಳಲ್ಲಿ ಸಾವಿರಾರು ಅಪರಿಚಿತರು ನಿನ್ನನ್ನು ಫಾಲೊ ಮಾಡಿದರೂ ಅವರಿಂದ ನಿಜಜೀವನದಲ್ಲಿ ನಿನಗೇನೂ ಉಪಯೋಗವಾಗುವುದಿಲ್ಲ. ನಿನ್ನ ವ್ಯಕ್ತಿತ್ವವನ್ನು ನೀನು ರೂಪಿಸಿಕೊಂಡಾಗ ಮಾತ್ರ ನಿನ್ನನ್ನು ಎಲ್ಲರೂ ಗೌರವಿಸುತ್ತಾರೆ. ❖

ಪಾಸೊ ಫೇಲೊ?

• ಡಾ. ಶಿಲ್ಪಾ ಎಚ್.ಡಿ.



ನಮ್ಮ ಜೀವನವು ಯಾವುದೇ ಲಿಖಿತ ಪರೀಕ್ಷೆಗಿಂತ ಹೆಚ್ಚು ಸಂಕೀರ್ಣವಾದ ಸವಾಲುಗಳನ್ನು ಒಳಗೊಂಡಿರುತ್ತದೆ. ಪ್ರತಿ ವ್ಯಕ್ತಿಯೂ ಆ ಸವಾಲುಗಳನ್ನು ವಿಭಿನ್ನ ರೀತಿಯಲ್ಲಿ ಎದುರಿಸುತ್ತಾನೆ. ಹೀಗಿರುವಾಗ, ವಿದ್ಯಾರ್ಥಿಗಳ ಯಶಸ್ಸನ್ನು ಅಳೆಯಲು 'ಪಾಸ್' ಅಥವಾ 'ಫೇಲ್' ಎಂಬ ಪದಗಳು ಬಳಕೆಯಾಗುತ್ತಿರುವುದು ಎಷ್ಟು ಸರಿ? ಫಲಿತಾಂಶದ ಬಗ್ಗೆ ಭಯ, ಆತಂಕ, ನ್ಯೂನತೆ, ವೈಫಲ್ಯ ಅಥವಾ ವೈಯಕ್ತಿಕ ಅಸ್ಥಿರತೆಯನ್ನು ಈ ಪದಗಳು ಬಿಂಬಿಸುತ್ತವೆ.

ಕಲಿಯುವವರು ನಿರ್ದಿಷ್ಟ ಸಮಯದಲ್ಲಿ ನಿರೀಕ್ಷಿತ ಮಟ್ಟವನ್ನು ತಲುಪದಿದ್ದಾಗ ಅವರು ಇನ್ನೂ ಅದಕ್ಕೆ ಸಿದ್ಧರಾಗಿಲ್ಲ ಅಥವಾ ಕಲಿಯಲು ಅವರಿಗೆ ಇನ್ನಷ್ಟು ಸಮಯ, ಬೆಂಬಲ, ಹೆಚ್ಚಿನ ಅಭ್ಯಾಸ ಬೇಕಾಗಿದೆ ಎಂದು ಅರ್ಥವೇ ವಿನಾ ಅವರು ಅಸಮರ್ಥರು ಎಂದಲ್ಲ. ಇದುವೇ ಪರಿಪೂರ್ಣವಾದ ಮಾನವೀಯ ಮೌಲ್ಯ ವಿಧಾನ. ಪ್ರಪಂಚದಾದ್ಯಂತ ಶಿಕ್ಷಣ ಸಂಸ್ಥೆಗಳು ಈಗ ಸೌಮ್ಯ, ಬೆಳವಣಿಗೆ ಆಧಾರಿತ ಪರ್ಯಾಯ ಪದಗಳತ್ತ ಗಮನಹರಿಸಿವೆ. ಪೂರ್ಣಗೊಂಡಿದೆ, ಪ್ರಗತಿಯಲ್ಲಿದೆ, ಸಾಧಿಸಲಾಗಿದೆ, ಇನ್ನೂ ಸಾಧಿಸಬೇಕಾಗಿದೆ, ಹೆಚ್ಚಿನ ಅಭ್ಯಾಸದ ಅಗತ್ಯವಿದೆ ಅಥವಾ ಸುಧಾರಣೆಯ ಅಗತ್ಯವಿದೆ ಎಂಬಂತಹ ಪದಗಳು ಶಿಕ್ಷಣದ ನೈಜ ಉದ್ದೇಶವನ್ನು ಬಿಂಬಿಸುತ್ತವೆ. ಇವು ವಿದ್ಯಾರ್ಥಿಗಳನ್ನು ಕಲಿಕೆಯಿಂದ ವಿಮುಖರನ್ನಾಗಿಸುವುದಿಲ್ಲ. ಸಿಬಿಎಸ್‌ಇ 2020ರಿಂದಲೇ ಅಂಕಪಟ್ಟಿಯಲ್ಲಿ 'ಫೇಲ್' ಎಂಬುದರ ಬದಲು 'ಅಗತ್ಯ ಪುನರಾವರ್ತನೆ' ಎಂಬ ಪದವನ್ನು ಬಳಸುತ್ತಿದೆ.

ಸ್ವೀಡನ್, ಫಿನ್‌ಲ್ಯಾಂಡ್, ಅಮೆರಿಕ ಸೇರಿದಂತೆ ಕೆಲ ದೇಶಗಳಲ್ಲಿ 'ಫೇಲ್'ಗೆ ಪರ್ಯಾಯವಾದ ಪದಗಳು ಬಳಕೆಯಲ್ಲಿವೆ. 'ಪಾಸ್' ಎಂಬುದು ಪೂರ್ಣ ಸಾಮರ್ಥ್ಯದ ಸೂಚಕವಲ್ಲ ಅಥವಾ 'ಫೇಲ್' ಎಂಬುದು ಅಸಾಮರ್ಥ್ಯಕ್ಕೆ ಪುರಾವೆಯೂ ಅಲ್ಲ.

ಮನೋವೈಜ್ಞಾನಿಕ ಅಧ್ಯಯನಗಳ ಪ್ರಕಾರ, ಭಾಷೆ ಅಥವಾ ಪರಿಭಾಷೆಯು ಗ್ರಹಿಕೆಯನ್ನು ರೂಪಿಸುತ್ತದೆ, ನಿರೀಕ್ಷೆಗಳ ಮೇಲೆ ಪ್ರಭಾವ ಬೀರುತ್ತದೆ, ಲೋಪವನ್ನು ಬಲಪಡಿಸುತ್ತದೆ ಅಥವಾ ಕಡಿಮೆ ಮಾಡುತ್ತದೆ. ಆದ್ದರಿಂದ 'ಫೇಲ್' ಬದಲು ಅದಕ್ಕೆ ಪೂರಕವಾಗಿ ಅನ್ಯ ಪದಗಳನ್ನು ಬಳಕೆ ಮಾಡುವುದರಿಂದ ವಿದ್ಯಾರ್ಥಿಗಳ ಮೇಲಿನ ಭಾವನಾತ್ಮಕ ಹೊರೆ ಕಡಿಮೆಯಾಗುತ್ತದೆ.

ಪಠ್ಯಕ್ರಮ, ಬೋಧನೆ, ಮೌಲ್ಯಮಾಪನ ವಿಧಾನಗಳಲ್ಲಿ ಆಧುನಿಕತೆಗೆ ತಕ್ಕಂತೆ ಬದಲಾವಣೆಗಳು ಆಗಿರುವಂತೆಯೇ ಫಲಿತಾಂಶದ ಪರಿಭಾಷೆಯೂ ಬದಲಾಗಬೇಕು. ಇಂದಿನ ವಿದ್ಯಾರ್ಥಿಗಳಿಗೆ ಪೂರಕವಾಗಿ ಅವುಗಳನ್ನು ಆಧುನೀಕರಿಸಬೇಕು. ಫಲಿತಾಂಶ ನೀಡಿಕೆಯಲ್ಲಿ ಸ್ಫೂರ್ತಿದಾಯಕ, ಪ್ರೇರಣಾದಾಯಕ ಹಾಗೂ ಪ್ರೋತ್ಸಾಹದಾಯಕವಾದ ಸುಧಾರಿತ ಪದಗಳು ಬಳಕೆಯಾಗಬೇಕು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ | ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ | ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

48) ಬ್ಯಾಂಕು ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳು ಯಾವುವು?

ಉತ್ತರ:– ಬ್ಯಾಂಕು ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳು ಹೀಗಿವೆ

* ಬ್ಯಾಂಕು ಖಾತೆಯು ಹಣದ ಭದ್ರತೆ ಕಾಪಾಡುತ್ತದೆ.
* ಬ್ಯಾಂಕು ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.
* ಬ್ಯಾಂಕು ಖಾತೆಯು ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.
* ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.
* ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ ಮಾಡಿಕೊಡುತ್ತದೆ.
* ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು

49) ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಕುರಿತು ಬರೆಯಿರಿ.

ಉತ್ತರ : ಸ್ವಾತಂತ್ರ್ಯ ಬಂದ ಹೊಸದರಲ್ಲಿ ಜನರಿಗೆ ಉತ್ತಮವಾದ ಆಡಳಿತ ನೀಡಲು ಜನರಾಡುವ ಭಾಷೆಯನ್ನು ಆಧರಿಸಿ ಪ್ರಾಂತ್ಯಗಳ ರಚನೆ ಆಗಬೇಕೆಂಬ ಕೂಗು ತೀವ್ರವಾಗಿತ್ತು. ಕೇಂದ್ರ ಸರ್ಕಾರವು 1953ರಲ್ಲಿ ಸರ್ಕಾರ ನ್ಯಾಯಮೂರ್ತಿ ಫಜಲ್ ಆಲಿ ಆಯೋಗ ರಚಿಸಿತು. ಇದರಲ್ಲಿ ಫಜಲ್ ಆಲಿ ಅಧ್ಯಕ್ಷರಾಗಿದ್ದರೆ ಕೆ. ಎಂ. ಫಣಿಕ್ಕರ್ ಮತ್ತು ಎಚ್. ಎನ್. ಕುಂಜ್ರು ಸದಸ್ಯರಾಗಿದ್ದರು.

ಮೊದಲ ಭಾಷಾವಾರು ರಾಜ್ಯವಾಗಿ 1953ರಲ್ಲಿ ಆಂಧ್ರ ಪ್ರದೇಶ ರಚನೆಯಾಯಿತು. ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ವಿಂಗಡಣಾ ಕಾನೂನು ಜಾರಿಗೆ ಬಂತು. ಈ ಕಾನೂನಿನ ಪ್ರಕಾರ ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು.

50) ಉದ್ಯಮಶೀಲತೆಯ/ಉದ್ಯಮಿಯ ಗುಣಲಕ್ಷಣಗಳನ್ನು ಬರೆಯಿರಿ

ಉತ್ತರ:– ಉದ್ಯಮಶೀಲತೆಯ/ಉದ್ಯಮಿಯ ಗುಣಲಕ್ಷಣಗಳು :

* ಸೃಜನಾತ್ಮಕ – ಹೊಸ ಪದ್ಧತಿಯನ್ನು ರೂಢಿಸಿ ತರುವುದು.
* ಕ್ರಿಯಾತ್ಮಕ
* ನಾಯಕತ್ವ
* ಗುಂಪು ಕಟ್ಟುವುದು.
* ಪ್ರಚೋದನೆಯ ಸಾಧನೆ
* ಸಮಸ್ಯೆಯ ಪರಿಹಾರ
* ಗುರಿಮುಟ್ಟುವಿಕೆ
* ನಷ್ಟ ಭರಿಸಲಿಕ್ಕೆ ಸಿದ್ಧ
* ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.
* ವಚನಬದ್ಧತೆ.

51) ಅರಣ್ಯಗಳು ಬಹು ಉಪಯುಕ್ತವಾದ ಸಂಪನ್ಮೂಲಗಳಾಗಿವೆ, ಸಮರ್ಥಿಸಿ (ಏಪ್ರಿಲ್ 2026)

ಉತ್ತರ:– ಹೌದು! ಅರಣ್ಯಗಳು ಬಹು ಉಪಯುಕ್ತವಾದ ಸಂಪನ್ಮೂಲಗಳಾಗಿವೆ, ಕಾರಣ

1) ಅವು ಶುದ್ಧ ವಾಯು, ಆಹಾರ, ಮತ್ತು ಮೇವನ್ನು ಒದಗಿಸುತ್ತವೆ
2) ಅವು ಪ್ರಾಣಿ ಮತ್ತು ಪಕ್ಷಿಗಳಿಗೆ ಆಶ್ರಯ ತಾಣಗಳಾಗಿವೆ.
3) ಅವು ಜೈವಿಕ ಪರಿಸರ ಸಮತೋಲನ ಮಾಡಲು ಸಹಾಯ ಮಾಡುತ್ತವೆ.
4) ಅವು ಔಷಧ ಸಸ್ಯಗಳ ಆಗರಗಳಾಗಿವೆ.
5) ಅವು ಉತ್ತಮ ಮಳೆ ತರಲು ಸಹಾಯ ಮಾಡುತ್ತವೆ.
6) ಅವು ಪ್ರವಾಸಿಗರನ್ನು ಆಕರ್ಷಿಸುತ್ತವೆ.
7) ಅವು ಉದ್ಯೋಗಾವಕಾಶವನ್ನು ಸೃಷ್ಟಿಸುತ್ತವೆ.

52) ಭಾರತದಲ್ಲಿ ಕಾಲುವೆ ನೀರಾವರಿಯನ್ನು ವ್ಯಾಪಕವಾಗಿ ಬಳಸಿಕೊಂಡ ರಾಜ್ಯಗಳಾವುವು?

ಉತ್ತರ:– ಭಾರತದಲ್ಲಿ ಕಾಲುವೆ ನೀರಾವರಿ ವ್ಯವಸ್ಥೆಯು ವ್ಯಾಪಕವಾಗಿ ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಆಂಧ್ರಪ್ರದೇಶ, ಗುಜರಾತ್, ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅಭಿವೃದ್ಧಿಗೊಂಡಿದೆ.

42) ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ' ಚರ್ಚಿಸಿರಿ.

ಉತ್ತರ. ನೈರುತ್ಯ ಮಾನ್ಸೂನ್ ಮಾರುತಗಳು ಒಂದು ವಿಧದಲ್ಲಿ ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತವೆ. ಈ ಮಳೆ ವಿಫಲವಾದರೆ ಬರಗಾಲ ಬರುವುದು. ಅತಿ ಹೆಚ್ಚಾದಾಗ ಪ್ರವಾಹ ಉಂಟಾಗಿ ಪ್ರಾಣ ಹಾನಿ ಮತ್ತು ಆಸ್ತಿಗಳಿಗೆ ಹಾನಿ ಉಂಟಾಗುತ್ತದೆ. ಆದ್ದರಿಂದ ಭಾರತದ ವ್ಯವಸಾಯವು ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ

53) ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ. ಹೇಗೆ?

ಉತ್ತರ:– ಜಮ್ಮು ಕಾಶ್ಮೀರಿನ ರಾಜನಾಗಿದ್ದ ಹರಿಸಿಂಗ್‌ನು ಸ್ವತಂತ್ರವಾಗುಳಿಯಲು ನಿರ್ಧರಿಸಿದ್ದನು, ಜಮ್ಮು ಕಾಶ್ಮೀರವು ಭಾರತಕ್ಕೆ ಸೇರಿ ಬಿಡಬಹುದೆಂಬ ಆತಂಕದಿಂದ ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರಿಗೆ ದಾಳಿ ಮಾಡುವಂತೆ ಪ್ರಚೋದಿಸಿತು. ಕಾಶ್ಮೀರದ ಸ್ವಾತಂತ್ರಕ್ಕಾಗಿ ದುಡಿದ ಷೇಕ್ ಅಬ್ದುಲ್ಲಾನ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಧಾರ್ಮಿಕ ಸಂವಿಧಾನವನ್ನು ಹೊಂದಿರುವ ಪಾಕಿಸ್ತಾನಕ್ಕಿಂತ ಪ್ರಜಾಪ್ರಭುತ್ವ ಗಣರಾಜ್ಯ ಸಂವಿಧಾನವನ್ನು ಹೊಂದಿರುವ ಭಾರತದೊಂದಿಗೆ ಗುರುತಿಸಿಕೊಳ್ಳುವುದೇ ಉತ್ತಮವೆಂದು ಹೋರಾಟ ನಡೆಸಿತು. ಇಂತಹದೊಂದು ಒತ್ತಡದಿಂದಾಗಿ ರಾಜಾ ಹರಿಸಿಂಗನು ಭಾರತ ಸರ್ಕಾರದ ಸಹಾಯವನ್ನು ಕೋರಿದನು. ಪಾಕಿಸ್ತಾನದ ಉದ್ದೇಶ ವಿಫಲವಾಗಿ ಕಾಶ್ಮೀರ ಕೆಲವು ಷರತ್ತುಗಳೊಂದಿಗೆ ಭಾರತದೊಂದಿಗೆ ವಿಲೀನವಾಯಿತು ಆದರೆ ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು. ಇದರ ವಿರುದ್ಧ ಭಾರತವು ವಿಶ್ವಸಂಸ್ಥೆಗೆ ದೂರು ಸಲ್ಲಿಸಿತು. ವಿಶ್ವಸಂಸ್ಥೆ ಕದನ ವಿರಾಮದ ಆದೇಶವನ್ನು ಜನವರಿ 1, 1949ರಂದು ನೀಡಿತು. ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯುವ್ಯ ಪ್ರದೇಶವನ್ನು 'ಪಾಕ್ ಆಕ್ರಮಿತ ಪ್ರದೇಶ'ವೆಂದು ಈಗಲೂ ಕರೆಯಲಾಗುತ್ತದೆ. ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ.

54) ಅನಕ್ಷರತೆಯನ್ನು ನಿವಾರಿಸಲು ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಉತ್ತರ: (1) ಸರ್ವೋನ್ನತ ನ್ಯಾಯಾಲಯವು ತನ್ನ ತೀರ್ಪಿನಲ್ಲಿ "ಶಿಕ್ಷಣದ ಹಕ್ಕು 21(ಎ)ನೇ ವಿಧಿಯನ್ವಯ ಮೂಲಭೂತ ಹಕ್ಕು ಎನಿಸಿದ್ದು, ಅದು ಜೀವಿಸುವ ಹಕ್ಕಿನಿಂದ ನೇರವಾಗಿ ಹರಿದು ಬರುವಂತಹುದು" ಎಂದು ಘೋಷಿಸಿದೆ.

(2) 2009ನೇ ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕಾನೂನು 2010ನೇ ಏಪ್ರಿಲ್ 1ರಿಂದ ಜಾರಿಗೆ ಬಂದಿದೆ. ಇದು ಭಾರತದ ಅನಕ್ಷರತೆಯನ್ನು ಹೋಗಲಾಡಿಸುವಲ್ಲಿ ಒಂದು ಪ್ರಮುಖ ಹೆಜ್ಜೆ ಎನಿಸಿದೆ. ಈಗ ಶಿಕ್ಷಣ ನೀಡುವುದು ಮಕ್ಕಳ ಹೆತ್ತವರಿಗೆ ಹಾಗೂ ಸರ್ಕಾರಕ್ಕೆ ಸಂಯುಕ್ತ ಜವಾಬ್ದಾರಿಯಾಗಿದೆ.

55) ಪ್ಲಾಸಿ ಕದನದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ

ಉತ್ತರ:– ಬಂಗಾಳದ ನವಾಬನಾದ ಅಲಿವರ್ದಿ ಖಾನನು 1756ರಲ್ಲಿ ನಿಧನನಾದನು. ನಂತರ ಅವನ ಮೊಮ್ಮಗನಾದ ಸಿರಾಜ್–ಉದ್–ದೌಲನು ಅಧಿಕಾರಕ್ಕೆ ಬಂದನು. ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.

ಮೊದಲು ನವಾಬನ ವಿರೋಧಿಗಳಾದ ಮಾಣಿಕ್‌ಚಂದ್, ನೇಮಿಚಂದ್, ಜಗತ್‌ಸೇಠ್ (ಬಂಗಾಳದ ಲೇವಾದೇವಿಗಾರ) ಮೊದಲಾದ ಶ್ರೀಮಂತರನ್ನು ತನ್ನತ್ತ ಸೆಳೆದುಕೊಂಡನು. ನಂತರ ಸಿರಾಜನ ಸೇನಾಪತಿಯಾದ

(ಮುಂದುವರಿಯುವುದು)

MATHS

REVISION : MODEL QUESTIONS

49) Solve the following system of equations by matrix method: $x + y + z = 6$ $y = 3z = 11$ $x - 2y + z = 0$.

Ans:- *(.......Contd)*

$$\text{adj}\,A = \begin{bmatrix} \begin{vmatrix} 1 & 3 \\ -2 & 1 \end{vmatrix} & -\begin{vmatrix} 3 & -3 \\ -1 & 1 \end{vmatrix} & \begin{vmatrix} 3 & 0 \\ -1 & 3 \end{vmatrix} \\ -\begin{vmatrix} -3 & 2 \\ 3 & 1 \end{vmatrix} & \begin{vmatrix} 7 & 2 \\ -1 & 1 \end{vmatrix} & -\begin{vmatrix} 7 & -3 \\ -1 & 3 \end{vmatrix} \\ \begin{vmatrix} -3 & 2 \\ 0 & -3 \end{vmatrix} & -\begin{vmatrix} 7 & 2 \\ 3 & -3 \end{vmatrix} & \begin{vmatrix} 7 & -3 \\ 3 & 0 \end{vmatrix} \end{bmatrix}^T = \begin{vmatrix} 7 & 3 & -1 \\ -3 & 0 & 3 \\ 2 & -3 & 1 \end{vmatrix}^T$$

$$\text{adj}\,A = \begin{bmatrix} 7 & 3 & -1 \\ -3 & 0 & 3 \\ 2 & -3 & 1 \end{bmatrix} \Rightarrow A^{-1} = \frac{\text{adj}\,A}{|A|}$$


$$X = A^{-1}B$$

$$\Rightarrow \frac{1}{9}\begin{bmatrix} 7 & 3 & -1 \\ -3 & 0 & 3 \\ 2 & -3 & 1 \end{bmatrix}\begin{bmatrix} 6 \\ 11 \\ 0 \end{bmatrix} \Rightarrow \frac{1}{9}\begin{bmatrix} 9 \\ 18 \\ 27 \end{bmatrix}$$

$$\Rightarrow x = 1, \quad y = 2, \quad z = 3$$

50) Using integration find the area of the region bounded by the triangle whose vertices are (-1, 0) (1, 3) & (3, 2)

Ans:-



$$\text{Equation of } A(-1,0); B(1,3) = \frac{y_2 - y_1}{x_2 - x_1} = \frac{y - y_1}{x - x_1}$$

$$= \frac{3-0}{1-(-1)} = \frac{y-0}{x-(-1)} = \frac{3(x+1)}{2} = y$$

$$y = \frac{3x+3}{2}$$

||| ly eqn of AC is $y = \frac{-x+7}{2}$ & eqn of BC is $y = \frac{x+1}{2}$

Required area of triangle ABC

$$= \int_{-1}^{1} \frac{3x+3}{2}dx + \int_{1}^{3} \frac{-x+7}{2}dx - \int_{-1}^{3} \frac{x+1}{2}dx$$

$$\Rightarrow \frac{3}{2}\left[\frac{x^2}{2} + x\right]_{-1}^{1} + \left[\frac{-x^2}{4} + \frac{7x}{2}\right]_{1}^{3} - \left[\frac{x^2}{4} + \frac{1}{2}x\right]_{-1}^{3}$$

$$\Rightarrow \frac{3}{2}(2) + \frac{20}{4} - 4 = 4 \text{ sq units}$$

51) Find $\int \frac{dx}{\sqrt{a^2 - x^2}}$ hence evaluate $\int \frac{dx}{7 - 6x - x^2}$

Ans:- Let $x = a \sin\theta \Rightarrow dx = a\cos\theta\, d\theta$

$\theta = \sin^{-1}\frac{x}{a}$

$$\int \frac{a\cos\theta\, d\theta}{\sqrt{a^2 - a^2\sin^2\theta}} = \frac{a}{a}\int \frac{\cos\theta\, d\theta}{\sqrt{1 - \sin^2\theta}} = \int d\theta = \theta + c = \sin^{-1}\frac{x}{a} + c$$

$$\int \frac{dx}{\sqrt{7 - 6x - x^2}} = \int \frac{dx}{\sqrt{16 - (x+3)^2}} = \sin^{-1}\left(\frac{x+3}{4}\right) + c$$

52) The probability of solving the specific problem independently by the persons' A and B are 1/2 and 1/3 respectively. In case, if both the persons try to solve the problem independently, then calculate the probability that the problem is solved

Ans: Given that, the two events say A and B are independent if $P(A \cap B) = P(A).\ P(B)$

From the given data, we can observe that $P(A) = 1/2$ & $P(B) = 1/3$

The probability that the problem is solved = Probability that person A solves the problem or the person B solves the Problem

This can be written as:

$= P(A \cup B) = P(A) + P(B) - P(A \cap B)$

If A and B are independent, then $P(A \cap B) = P(A).\ P(B)$

Now, substitute the values,

$= (1/2) \times (1/3)$

$P(A \cap B) = 1/6$

Now, the probability of problem solved is written as

$P(\text{Problem is solved}) = P(A) + P(B) - P(A \cap B)$

$= (1/2) + (1/3) - (1/6)$

$= (3/6) + (2/6) - (1/6)$

$= 4/6$

$= 2/3$

Hence, the probability of the problem solved is 2/3.

53) Solve the different equation $x \log x \frac{dy}{dx} + y = \frac{2}{x}\log x$

Ans :– Given $\frac{dy}{dx} + \frac{y}{x\log x} = \frac{2}{x^2}$ is a L.D.E

compare with $\frac{dy}{dx} + py = Q$

we get, $P = \frac{1}{x\log x}$ and $Q = \frac{2}{x^2}$

$$\text{I.F} = e^{\int p\,dx} = e^{\int \frac{1}{x\log x}dx} = e^{\log(\log x)} \qquad (\log x = t)$$

$$= \log x$$

$$y\log x = \int \frac{2}{x^2}\log x\, dx + c$$

$$= 2\int \frac{1}{x^2}\log x\, dx + c \quad \text{(integrating by parts)}$$

$$y\log x = 2\left[\log x\left(\frac{-1}{x}\right) - \int \frac{1}{x}\left(\frac{-1}{x}\right)dx\right] + c$$

$$y\log x = \frac{-2\log x}{x} - \frac{2}{x} + c$$

54)

Show that

(i) $\sin^{-1}(2x\sqrt{1 - x^2}) = 2\sin^{-1}x$

Soln:- LHS

$\sin^{-1}(2x\sqrt{1 - x^2})$

Putting $x = \sin\theta$

$= \sin^{-1}(2\sin\theta\sqrt{1 - \sin^2\theta})$

$= \sin^{-1}(2\sin\theta\sqrt{\cos^2\theta})$ *(As $1 - \sin^2\theta = \cos^2\theta$)*

$= \sin^{-1}(2\sin\theta\cos\theta)$

$= \sin^{-1}(\sin 2\theta)$ *(Using $\sin 2x = 2\sin x\cos x$)*

‘ಫ್ರೀ ಲೆಫ್ಟ್’; ದಟ್ಟಣೆ ನಿಯಂತ್ರಣ

ಸಿಗ್ನಲ್‌ಗಳಲ್ಲಿ ತಾಂತ್ರಿಕ ಲೋಪದಿಂದ ವಾಹನ ದಟ್ಟಣೆ: ಇನ್ಫ್ರಾ ಕೈಜೆನ್ ವರದಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬಹುತೇಕ ಸಿಗ್ನಲ್‌ಗಳಲ್ಲಿ ‘ಫ್ರೀ ಲೆಫ್ಟ್’ ಕೆಲಸ ಮಾಡುತ್ತಿಲ್ಲ. ಸಿಗ್ನಲ್‌ಗಳು ಪ್ರದಕ್ಷಿಣಾಕಾರವಾಗಿ ಕಾರ್ಯನಿರ್ವಹಿಸಿದರೆ ಎಡಬದಿಗೆ ತಿರುವು ಪಡೆದು ವಾಹನ ಸಂಚರಿಸುವುದು ಸರಾಗವಾದರೆ ಶೇಕಡ 20ರಷ್ಟು ವಾಹನದಟ್ಟಣೆ ಕಡಿಮೆಯಾಗಲಿದೆ. ಆದರೆ, ಎಡ ತಿರುವಿಗೆ ಅವಕಾಶ ಇಲ್ಲದಂತೆ ಸಿಗ್ನಲ್‌ಗಳು ಕಾರ್ಯ ನಿರ್ವಹಿಸುತ್ತಿವೆ.



‘ಇನ್ಫ್ರಾ ಕೈಜೆನ್’ ಸರ್ಕಾರೇತರ ಸಂಸ್ಥೆಯು ನಗರದಲ್ಲಿ ಹಲವು ಸಿಗ್ನಲ್‌ಗಳನ್ನು ಅಧ್ಯಯನ ಮಾಡಿ ಈ ವರದಿಯನ್ನು ಸಿದ್ಧಪಡಿಸಿದ್ದು, ಪೊಲೀಸ್ ಇಲಾಖೆಗೂ ಸಲ್ಲಿಸಿದೆ.

‘ನಗರದ ಟ್ರಾಫಿಕ್ ಸಮಸ್ಯೆಗೆ ನೂರಾರು ಕೋಟಿ ರೂಪಾಯಿ ವೆಚ್ಚದ ಎತ್ತರಿಸಿದ ಮಾರ್ಗಗಳು ಇಲ್ಲವೇ ಸುರಂಗ ರಸ್ತೆಗಳು ಪರಿಹಾರ ಎಂದು ಬಿಂಬಿಸಲಾಗುತ್ತದೆ. ವಾಹನ ದಟ್ಟಣೆಗೆ ರಸ್ತೆಗಳ ಕೊರತೆಯಷ್ಟೇ ಕಾರಣವಲ್ಲ, ಸಿಗ್ನಲ್‌ಗಳಲ್ಲಿನ ಸಣ್ಣ ತಾಂತ್ರಿಕ ತಪ್ಪು ಕೂಡ ಕಾರಣ. ಸಿಗ್ನಲ್‌ಗಳ ದಿಕ್ಕು ಬದಲಾಯಿಸಿದರೆ ಶೇ 20ರಿಂದ ಶೇ 30ರಷ್ಟು ದಟ್ಟಣೆ ಕಡಿಮೆಯಾಗಲಿದೆ’ ಎಂದು ‘ಇನ್ಫ್ರಾ ಕೈಜೆನ್’ ಹೇಳಿದೆ.

‘ಆ್ಯಂಟಿ-ಕ್ಲಾಕ್‌ವೈಸ್’ ಎಡವಟ್ಟು: ದೇಶದಲ್ಲಿ ವಾಹನಗಳು ಎಡಬದಿಯಲ್ಲಿ ಸಂಚರಿಸುವ ನಿಯಮ ಜಾರಿಯಲ್ಲಿದೆ. ಸಂಚಾರ ಸುಗಮ ಆಗಬೇಕಿದ್ದರೆ ಸಿಗ್ನಲ್‌ಗಳು ಅದಕ್ಕೆ ಸರಿಯಾಗಿ ಒಂದಾದ ಮೇಲೆ ಒಂದು ಬದಲಾಗಬೇಕು. ಉದಾಹರಣೆಗೆ ನಾಲ್ಕು ರಸ್ತೆಗಳು ಕೂಡುವ ಜಾಗದಲ್ಲಿ ನಾಲ್ಕು ಕಡೆಗೆ ಸಿಗ್ನಲ್ ಲೈಟ್‌ಗಳು ಇರುತ್ತವೆ. ಅವು ಒಂದು ಕಡೆ ವಾಹನ ಸಂಚಾರಕ್ಕೆ ಹಸಿರು ಸೂಚನೆ ನೀಡಿದ ಬಳಿಕ ಅದರ ಎಡ ಬದಿಗೆ ಇರುವ ರಸ್ತೆಯ ವಾಹನಗಳಿಗೆ ಸಂಚಾರಕ್ಕೆ ಅವಕಾಶ ನೀಡಬೇಕು. ಆ ನಂತರ ಅದರ ಎಡ ಬದಿಯ ರಸ್ತೆಯ ವಾಹನಗಳಿಗೆ ಹೀಗೆ ಪ್ರದಕ್ಷಿಣಾಕಾರವಾಗಿ ಸಂಚಾರ ತೆರೆದುಕೊಳ್ಳಬೇಕು. ಆದರೆ, ಅಪ್ರದಕ್ಷಿಣಾಕಾರವಾಗಿ (ಆ್ಯಂಟಿ ಕ್ಲಾಕ್‌ವೈಸ್) ತೆರೆದುಕೊಳ್ಳುತ್ತಿರುವುದರಿಂದ ಎಡ ತಿರುವು ಪಡೆಯಬೇಕಿರುವ ವಾಹನಗಳೂ ಕನಿಷ್ಠ ಒಂದು ನಿಮಿಷ ಹೆಚ್ಚುವರಿಯಾಗಿ ನಿಲ್ಲುವಂತಾಗಿದೆ ಎಂದು ವಿವರಿಸಿದೆ.

ಇನ್ಫ್ರಾ ಕೈಜೆನ್ ತಂಡದ ಸಮೀಕ್ಷೆ ಪ್ರಕಾರ ಬೆಂಗಳೂರಿನ 32 ಪ್ರಮುಖ ಸಿಗ್ನಲ್‌ಗಳಲ್ಲಿ ಶೇ 31ರಷ್ಟು ಸಿಗ್ನಲ್‌ಗಳು ವಿರುದ್ಧ ದಿಕ್ಕಿನಿಂದ ಕೆಲಸ ಮಾಡುತ್ತಿವೆ. ಇದರಿಂದಾಗಿ ‘ಫ್ರೀ ಲೆಫ್ಟ್’ ಸಿಗಬೇಕಾದ ಜಾಗದಲ್ಲಿ ವಾಹನ ಸಿಕ್ಕಿಹಾಕಿಕೊಳ್ಳುತ್ತಿವೆ.

ತುಮಕೂರು ರಸ್ತೆಯಲ್ಲಿ ಬೆಂಗಳೂರಿನ ಪ್ರವೇಶ ದ್ವಾರದಂತಿರುವ 8ನೇ ಮೈಲಿ ಜಂಕ್ಷನ್, ದಾಸರ ಹಳ್ಳಿ ಜಂಕ್ಷನ್‌ಗಳಲ್ಲಿ ವಾಹನಗಳು ಕಡಿಮೆ ಇದ್ದಾಗಲೂ ಅಪ್ರದಕ್ಷಿಣೆ ಸಿಗ್ನಲ್‌ಗಳಿಂದಾಗಿ ದಟ್ಟಣೆ ಆಗುತ್ತಿದೆ. ಎಂ.ಜಿ. ರಸ್ತೆ, ಜಕ್ಕೂರು, ವಿಮಾನ ನಿಲ್ದಾಣ ರಸ್ತೆಯ ಹಲವು ಜಂಕ್ಷನ್‌ಗಳು, ಹಲವು ವಾಹನ ನಿಬಿಡ ಕಾರಿಡಾರ್‌ಗಳಲ್ಲೂ ಈ ಸಣ್ಣ ತಪ್ಪು ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಪ್ರತಿ ಸಿಗ್ನಲ್‌ಗಳಲ್ಲಿ ಹಸಿರು ದೀಪ ಸೂಚನೆ ಒಂದು ಸುತ್ತು ಮುಗಿಯುವಾಗ ಅರ್ಧ ನಿಮಿಷ ತಡವಾದರೂ ದಟ್ಟಣೆಯ ಅವಧಿಯಲ್ಲಿ ನೂರಾರು ವಾಹನಗಳು ಸಾಲುಗಟ್ಟಿ ನಿಲ್ಲಬೇಕಾಗುತ್ತದೆ. ಈ ತಾಂತ್ರಿಕ ಸಮಸ್ಯೆಯನ್ನು ಸರಿಪಡಿಸಿದರೆ ಸಂಚಾರ ಸರಾಗವಾಗಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

‘ಸಂಚಾರ ಪೊಲೀಸರಿಗೆ ವಿವರ’


ವೇಣುಗೋಪಾಲ್

‘ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ. ಸಲೀಂ ಅವರಿಗೆ ಈ ವರದಿಯನ್ನು ಸಲ್ಲಿಸಲಾಗಿದೆ. ನಮ್ಮ ಸಂಚಾರ ಪೊಲೀಸರಿಗೆ ಈ ಬಗ್ಗೆ ವಿವರ ನೀಡಿ. ಅದಕ್ಕಾಗಿ ಒಂದು ದಿನ ನಿಗದಿ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಪ್ರದಕ್ಷಿಣಾಕಾರವಾಗಿ ಸಿಗ್ನಲ್ ತೆರೆಯುವ ಬಗ್ಗೆ ಅವರು ಹೇಳಿದ ದಿನ ವಿವರಿಸಲಾಗುವುದು. ಪ್ರಾಯೋಗಿಕವಾಗಿಯೂ ತೋರಿಸಲಾಗುವುದು’ ಎಂದು ಇನ್ಫ್ರಾ ಕೈಜೆನ್ ಸಂಸ್ಥಾಪಕ ನಿರ್ದೇಶಕ ವೇಣುಗೋಪಾಲ್ ಕೆ.ಎನ್. ತಿಳಿಸಿದರು.

ಜಕ್ಕೂರಿನಲ್ಲಿ ಪ್ರಯೋಗ


ಶಿವರಾಜಕುಮಾರ್

‘ನಮ್ಮ ವರದಿಯನ್ನು ಸಂಚಾರ ವಿಭಾಗದ ಎಸಿಪಿ (ಯೋಜನೆ) ಅವರಿಗೆ ಸಲ್ಲಿಸಿದ್ದೇವೆ. ಜಕ್ಕೂರು ಸರ್ಕಲ್‌ನಲ್ಲಿ ಪ್ರಾಯೋಗಿಕವಾಗಿ ತೋರಿಸಿ. ಅಲ್ಲಿನ ಪರಿಣಾಮ ನೋಡಿಕೊಂಡು ಉಳಿದ ಸರ್ಕಲ್‌ಗಳಲ್ಲಿ ಪ್ರದಕ್ಷಿಣೆ ಸಿಗ್ನಲಿಂಗ್ ವ್ಯವಸ್ಥೆ ಮಾಡಲಾಗುವುದು ಎಂಬುದಾಗಿ ತಿಳಿಸಿದ್ದಾರೆ’ ಎಂದು ಇನ್ಫ್ರಾ ಕೈಜೆನ್ ಅಧ್ಯಕ್ಷ ಶಿವರಾಜಕುಮಾರ್ ಕಮ್ಮಾರ್ ತಿಳಿಸಿದರು.


‘ಎಂ.ಜಿ. ರಸ್ತೆಯಲ್ಲಿಯೂ ಇದೆ ಸಮಸ್ಯೆ’

ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣದ ಬಳಿ ಇರುವ ಸಿಗ್ನಲ್‌ನಲ್ಲಿಯೂ ಈ ಸಮಸ್ಯೆ ಇದೆ. ಕುಂಬ್ಳೆ ಸರ್ಕಲ್ ಕಡೆಯಿಂದ ಬಂದ ವಾಹನಗಳು ಕಾಮರಾಜ್ ರಸ್ತೆ ಕಡೆಗೆ, ಟ್ರಿನಿಟಿ ನಿಲ್ದಾಣದ ಕಡೆಗೆ ಹಾಗೂ ಬ್ರಿಗೇಡ್ ರಸ್ತೆ ಕಡೆಗೆ ಸಾಗುತ್ತವೆ.

ಕೆಂಪು ಸಿಗ್ನಲ್ ಬಂದ ಕೂಡಲೇ ಈ ಮೂರು ಕಡೆ ಸಾಗುವ ವಾಹನಗಳು ನಿಲುಗಡೆಗೊಳ್ಳುತ್ತವೆ. ಆ ನಂತರ ಕಾಮರಾಜ್ ರಸ್ತೆ ಕಡೆಯಿಂದ ಬರುವ ವಾಹನಗಳಿಗೆ ಹಸಿರು ಸೂಚನೆ ಸಿಕ್ಕಿದರೆ ಆ ಕಡೆಯಿಂದ ಬರುವ ವಾಹನಗಳು ಮುಂದಕ್ಕೆ ಸಾಗುವುದರ ಜೊತೆಗೆ ಕುಂಬ್ಳೆ ಸರ್ಕಲ್ ಕಡೆಯಿಂದ ಬರುವ ಕಾಮರಾಜ್ ರಸ್ತೆ ಕಡೆಗೆ, ಕಾಮರಾಜ್ ರಸ್ತೆಯಿಂದ ಟ್ರಿನಿಟಿ ರಸ್ತೆ ಕಡೆಗೆ, ಟ್ರಿನಿಟಿ ಕಡೆಯಿಂದ ಬ್ರಿಗೇಡ್ ಕಡೆಗೆ ಎಡ ತಿರುವು ಪಡೆದು ವಾಹನಗಳು ಸರಾಗವಾಗಿ ಸಾಗಲು ಸಾಧ್ಯ. ಆದರೆ, ಇಲ್ಲಿ ಕುಂಬ್ಳೆ ಸರ್ಕಲ್ ಕಡೆಯ ವಾಹನಗಳಿಗೆ ಹಸಿರು ಸೂಚನೆ ಸಿಕ್ಕಿದ ಬಳಿಕ ಕಾಮರಾಜ್ ರಸ್ತೆ ಕಡೆಯ ವಾಹನಗಳಿಗೆ ಹಸಿರು ಸೂಚನೆ ನೀಡುವ ಬದಲು ಬ್ರಿಗೇಡ್ ರಸ್ತೆಯ ವಾಹನಗಳಿಗೆ ಅವಕಾಶ ನೀಡಲಾಗುತ್ತದೆ ಎಂದು ಇನ್ಫ್ರಾ ಕೈಜೆನ್ ವಿವರಿಸಿದೆ.

ಚಾಲಕನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಹಿಳಾ ಪ್ರಯಾಣಿಕರೊಬ್ಬರಿಗೆ ಕಿರುಕುಳ ನೀಡಿದ ಕ್ಯಾಬ್ ಚಾಲಕನ ವಿರುದ್ಧ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಚ್ಚುವರಿ ಹಣ ಪಡೆದು, ಲಗೇಜ್ ನೀಡದೆ ತೊಂದರೆ ನೀಡಿರುವುದಾಗಿ ಆರೋಪಿಸಿ ಮಹಿಳೆ ದೂರು ನೀಡಿದ್ದರು.

ಸರ್ಜಾಪುರ ನಿವಾಸಿ ಪ್ರಿಯಾಂಷಿ ಆ್ಯಪ್ ಮೂಲಕ ಕ್ಯಾಬ್ ಬುಕ್ ಮಾಡಿ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಆ್ಯಪ್‌ನಲ್ಲಿ ಪ್ರಯಾಣ ದರ ₹982 ತೋರಿಸಿದ್ದರೂ, ವಿಮಾನ ನಿಲ್ದಾಣ ತಲುಪಿದ ಬಳಿಕ ಚಾಲಕ ₹1,448 ನೀಡುವಂತೆ ಒತ್ತಾಯಿಸಿದ್ದಾನೆ. ಹೆಚ್ಚುವರಿ ಹಣ ನೀಡದಿದ್ದರೆ ಲಗೇಜ್ ವಾಪಸ್ ನೀಡುವುದಿಲ್ಲ ಎಂದು ಬೆದರಿಕೆ ಹಾಕಿದ್ದರಿಂದ ಆತಂಕಕ್ಕೊಳಗಾದ ಮಹಿಳೆ ಬೇಡಿಕೆಯಷ್ಟು ಮೊತ್ತ ಪಾವತಿಸಿದ್ದಾರೆ.

ಈ ಸಂಬಂಧ ಸಂತ್ರಸ್ತೆ ಕರ್ನಾಟಕ ಪೊಲೀಸ್ ಆ್ಯಪ್ ಮೂಲಕ ದೂರು ದಾಖಲಿಸಿದ್ದರು. ದೂರಿನ ಅಧಾರದ ಮೇಲೆ ಸ್ಥಳಕ್ಕೆ ಧಾವಿಸಿದ ಹೊಯ್ಸಳ ಸಿಬ್ಬಂದಿ, ಹೆಚ್ಚುವರಿಯಾಗಿ ವಸೂಲಿ ಮಾಡಿದ್ದ ಹಣವನ್ನು ವಾಪಸ್ ನೀಡುವಂತೆ ಚಾಲಕನಿಗೆ ಸೂಚಿಸಿದ್ದಾರೆ. ಆದರೆ, ಚಾಲಕ ಪೊಲೀಸರ ಮಾತು ಕೇಳದೆ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ್ದಾರೆ. ಪೊಲೀಸರನ್ನು ಎಳೆದಾಡಿ ದೈಹಿಕ ತೊಂದರೆ ನೀಡಿದ್ದಾರೆ ಎಂದು ಎಎಸ್‌ಐ ದೂರಿನಲ್ಲಿ ತಿಳಿಸಿದ್ದಾರೆ.

ಚಾಲಕನ ವಿರುದ್ಧ ವಿಮಾನ ನಿಲ್ದಾಣ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ತನಿಖೆ ಕೈಗೊಂಡಿದ್ದಾರೆ.

ಎಟಿಎಸ್ ಅಟ್ಯಾಕರ್ಸ್ ತಂಡಕ್ಕೆ ಸಿ.ಎಂ ಕಪ್ ಬ್ಯಾಡ್ಮಿಂಟನ್ ಟ್ರೋಫಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೂರ್ನಿಯಲ್ಲಿ ಸಾಂಘಿಕ ಆಟ ಪ್ರದರ್ಶಿಸಿದ ಎಟಿಎಸ್ ಅಟ್ಯಾಕರ್ಸ್ ತಂಡವು 2026ರ ಚೊಚ್ಚಲ ಸಿ.ಎಂ ಕಪ್ ಬ್ಯಾಡ್ಮಿಂಟನ್ ಟ್ರೋಫಿಯನ್ನು ಗೆದ್ದುಕೊಂಡಿತು.

9 ಡ್ರೀಮ್ಸ್ ಸಂಸ್ಥೆ ಆಶ್ರಯದಲ್ಲಿ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಂಗಣದಲ್ಲಿ ಭಾನುವಾರ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಪ್ರೋವಿನ್ ಪ್ಯಾಂಥರ್ಸ್ ತಂಡವನ್ನು ಮಣಿಸಿ ಎಟಿಎಸ್ ಅಟ್ಯಾಕರ್ಸ್ ತಂಡ ಗೆಲುವಿನ ನಗೆ ಬೀರಿತು.

ಲೀಗ್ ಹಂತದಲ್ಲಿದ್ದ ಎಂಟು ತಂಡಗಳ ಪೈಕಿ ಇನ್‌ಸ್ಪೈರ್ ಚಾಲೆಂಜರ್ಸ್, ಎಲೈಟ್ ಬ್ಯಾಡ್ಮಿಂಟನ್ ಕ್ಲಬ್, ಎಟಿಎಸ್ ಅಟ್ಯಾಕರ್ಸ್ ಮತ್ತು ಪ್ರೋವಿನ್ ಪ್ಯಾಂಥರ್ಸ್ ತಂಡಗಳು ಸೆಮಿಫೈನಲ್ ಪ್ರವೇಶಿಸಿದ್ದವು.

ಮೊದಲ ಸೆಮಿಫೈನಲ್‌ನಲ್ಲಿ ಎಟಿಎಸ್ ಅಟ್ಯಾಕರ್ಸ್ ತಂಡವು ಎಲೈಟ್ ಬ್ಯಾಡ್ಮಿಂಟನ್ ಕ್ಲಬ್ ತಂಡವನ್ನು ಮಣಿಸಿದರೆ, ಎರಡನೇ ಸೆಮಿಫೈನಲ್‌ನಲ್ಲಿ ಪ್ರೋವಿನ್ ಪ್ಯಾಂಥರ್ಸ್ ತಂಡವು ಇನ್‌ಸ್ಪೈರ್ ಚಾಲೆಂಜರ್ಸ್ ತಂಡವನ್ನು ನೇರ ಗೇಮ್‌ಗಳಲ್ಲಿ ಸೋಲಿಸಿ ಫೈನಲ್ ಪ್ರವೇಶಿಸಿದವು.

ಬೆಂಗಳೂರು ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಹಾಗೂ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ವಿಜೇತ ತಂಡಗಳಿಗೆ ಪ್ರಶಸ್ತಿ ವಿತರಿಸಿದರು. ಬೆಂಗಳೂರು ಪ್ರೆಸ್ ಕ್ಲಬ್‌ನ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ, ಕವಳ ಚಿತ್ರದ ನಿರ್ಮಾಪಕ ಬಿ. ಲೋಕೇಶ್, ಸಕ್ರಾ ವರ್ಲ್ಡ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಯುಚಿ ನಗಾನೋ ಭಾಗವಹಿಸಿದ್ದರು.

ಮುತ್ತತ್ತಿ: ನದಿಯಲ್ಲಿ ಮುಳುಗಿ ಯುವಕ ಸಾವು

ಪ್ರಜಾವಾಣಿ ವಾರ್ತೆ


ಭಾರ್ಗವ್

ಹಲಗೂರು (ಮಂಡ್ಯ ಜಿಲ್ಲೆ): ಸಮೀಪದ ಮುತ್ತತ್ತಿಯಲ್ಲಿ ಕಾವೇರಿ ನದಿಯಲ್ಲಿ ಶನಿವಾರ ನೀರಿನ ಸೆಳೆತಕ್ಕೆ ಸಿಲುಕಿ ಯುವಕರೊಬ್ಬರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಪಾಪಯ್ಯ ಗಾರ್ಡನ್ ನಿವಾಸಿ ಆರ್. ವಿಜಯ್ ಕುಮಾರ್ ಅವರ ಪುತ್ರ ಭಾರ್ಗವ್ (22) ಮೃತ ಯುವಕ ಎಂದು ಗುರುತಿಸಲಾಗಿದೆ.

ಬೆಂಗಳೂರಿನ ಬನಶಂಕರಿಯ ಖಾಸಗಿ ಶಾಲೆಯಲ್ಲಿ ಬಸ್ ಚಾಲಕನಾಗಿದ್ದ ಭಾರ್ಗವ್, ಶನಿವಾರ ಎಂಟು ಮಂದಿ ಸ್ನೇಹಿತರೊಂದಿಗೆ ಆಟೊರಿಕ್ಷಾ ಮತ್ತು ಕಾರಿನಲ್ಲಿ ಮುತ್ತತ್ತಿ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಪ್ರವಾಸ ಬಂದಿದ್ದರು. ಊಟ ಮುಗಿಸಿ ಕಾವೇರಿ ನದಿಯಲ್ಲಿ ಈಜಲು ಹೋದಾಗ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿ ಹೋದರು. ಸ್ಥಳೀಯ ಈಜುಗಾರರ ಸಹಾಯದಿಂದ ಮೃತದೇಹವನ್ನು ಭಾನುವಾರ ಮಧ್ಯಾಹ್ನ ನದಿಯಿಂದ ಹೊರತೆಗೆಯಲಾಯಿತು.

ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಕ್ಷಿಣ ಕಾಳಿಕಾದೇವಿಯ ದೇವಸ್ಥಾನ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತೀಯ ಪರಂಪರೆ, ನಾಗರಿಕತೆಯು ಜೀವಂತವಾಗಿ ಉಳಿದಿರುವುದಕ್ಕೆ ನಮ್ಮ ಭಕ್ತಿ ಪರಂಪರೆ, ಸಂಸ್ಕೃತಿ ಹಾಗೂ ಸಂಸ್ಕಾರಗಳೇ ಕಾರಣ’ ಎಂದು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದ ಡಾ.ಕೆ.ಸುಧಾಕರ್ ತಿಳಿಸಿದರು.


ಯಲಹಂಕ ಕ್ಷೇತ್ರದ ಚೊಕ್ಕನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ದಕ್ಷಿಣ ಕಾಳಿಕಾದೇವಿಯ ನೂತನ ದೇವಸ್ಥಾನ, ಶಿಲಾವಿಗ್ರಹ ಪ್ರತಿಷ್ಠಾಪನೆ, ಕಳಶ ಸ್ಥಾಪನೆ ಹಾಗೂ ಮಹಾ ಕುಂಭಾಭಿಷೇಕ ಮಹೋತ್ಸವದಲ್ಲಿ ಅವರು ಮಾತನಾಡಿದರು.

‘ನಮ್ಮ ಸನಾತನ ಧರ್ಮಕ್ಕೂ, ಭಾರತೀಯ ಸಂಸ್ಕೃತಿಗೂ ಅವಿನಾಭಾವ ಸಂಬಂಧವಿದೆ. ಇವು ಒಂದೇ ನಾಣ್ಯದ ಎರಡು ಮುಖಗಳು. ಎಲ್ಲಿ ಶಕ್ತಿ ದೇವತೆಗಳನ್ನು ಆರಾಧಿಸುತ್ತಾರೋ ಅಲ್ಲಿ ಮಹಿಳೆಯರಿಗೆ ವಿಶೇಷವಾದ ಶಕ್ತಿ, ಆರೋಗ್ಯ ದೊರೆಯುತ್ತದೆ. ನಮ್ಮ ಧಾರ್ಮಿಕ ಪರಂಪರೆಯನ್ನು ಶ್ರದ್ಧೆಯಿಂದ ಪಾಲಿಸಿಕೊಂಡು ಮುಂದೆ ಸಾಗಬೇಕು’ ಎಂದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಕೊರಟಗೆರೆ ತಾಲ್ಲೂಕು ಎಲೆರಾಂಪುರದ ಕುಂಚಿಟಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಹನುಮಂತನಾಥ ಸ್ವಾಮೀಜಿ, ಮೈಸೂರಿನ ಮದ್ದಗಲಿಂಗಯ್ಯನ ಹುಂಡಿ ವಿರಕ್ತಮಠದ ಗೌರಿಶಂಕರ ಸ್ವಾಮೀಜಿ ವಹಿಸಿದ್ದರು. ಬೆಂಗಳೂರು ಹಾಲು ಒಕ್ಕೂಟ(ಬಮೂಲ್)ದ ನಿರ್ದೇಶಕ ಸತೀಶ್ ಕಡತನಮಲೆ, ಬಿಜೆಪಿ ಮುಖಂಡ ಎಚ್.ಬಿ. ಹನುಮಯ್ಯ, ದಕ್ಷಿಣ ಕಾಳಿಕಾದೇವಿ ದೇವಾಲಯದ ಧರ್ಮದರ್ಶಿಗಳು, ಕಟ್ಟೆಮನೆ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಅರುಣ್ ಗುರೂಜಿ, ಸಮಾಜ ಸೇವಕ ರಮೇಶ್, ದಾನಿ ಅಣ್ಣಾದೊರೈ, ಅರಕೆರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಆರ್. ತಿಮ್ಮೇಗೌಡ, ಮುಖಂಡರಾದ ಐವರಕಂಡಪುರ ಅಜಯ್ ಕುಮಾರ್, ಕೆ.ಸಿ. ಬಾಬು, ಆವಲಹಳ್ಳಿ ಗಿರೀಶ್, ನಂಜುಂಡೇಗೌಡ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ವ್ಯಾಪ್ಸ್ ಟೆಕ್ನೊಸಾಫ್ಟ್‌ನ ರಜತ ಮಹೋತ್ಸವ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಬಿ.ಎಸ್. ಪಾಟೀಲ, ಸಿದ್ದೇಶ್ ಕುಮಾರ್, ಆಯೋಜನೆ: ವ್ಯಾಪ್ಸ್ ಅಕ್ಷಯ ಫೌಂಡೇಷನ್ ಟ್ರಸ್ಟ್, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಸಭಾಂಗಣ, ಜಿಕೆವಿಕೆ ಆವರಣ, ಸಂಜೆ 4


ನಿರ್ಮಲಾನಂದನಾಥ ಸ್ವಾಮೀಜಿ

ಕೆ.ವೈ. ನಾರಾಯಣಸ್ವಾಮಿ ಅವರ ‘ನೀರಗನ್ನಡಿ’ ನಾಟಕ ಪ್ರದರ್ಶನ: ನಿರ್ದೇಶನ: ಬಿ. ಸುರೇಶ, ಸಂಗೀತ: ಎಂ.ಡಿ. ಪಲ್ಲವಿ, ರಂಗ ವಿನ್ಯಾಸ: ಶಶಿಧರ್ ಅಡಪ, ವಸ್ತ್ರ ವಿನ್ಯಾಸ: ಮಂಗಳ ಎನ್., ಸಂಘಟನೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಆಯೋಜನೆ: ನಟರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

‘ಸಮಗ್ರ ಮಹಾಭಾರತ’ ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಮತ್ತು ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

ಚಿತ್ರಾವಳಿ



ವಚನಜ್ಯೋತಿ ಬಳಗ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಸಂಸ್ಥಾಪಕರ ದಿನಾಚರಣೆಯಲ್ಲಿ ಹಿಂದೂಸ್ಥಾನಿ ಗಾಯಕಿ ಸರಸ್ವತಿ ಹೆಗಡೆ ಅವರಿಗೆ ಶಿವಲಿಂಗ ಪ್ರಶಸ್ತಿಯನ್ನು ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಪ್ರದಾನ ಮಾಡಿದರು. ಇದೇ ಸಂದರ್ಭದಲ್ಲಿ ಸರಸ್ವತಿ ಹೆಗಡೆ ಹಾಗೂ ಅವರ ಪತಿ ಶ್ರೀಪಾದ ಹೆಗಡೆ ಅವರನ್ನು ಸನ್ಮಾನಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಚಂದ್ರಶೇಖರ್, ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ, ಸೋಮಶೇಖರ ಗಾಂಜಿ, ಶಿವಕುಮಾರಸ್ವಾಮಿ ತಡಗ ಉಪಸ್ಥಿತರಿದ್ದರು



ಅಂತರರಾಷ್ಟ್ರೀಯ ಓರಲ್ ಮತ್ತು ಮ್ಯಾಕ್ಸಿಲೋಫೇಶಿಯಲ್ ಸರ್ಜನ್ ದಿನಾಚರಣೆ ಅಂಗವಾಗಿ ರಾಜೀವ್ ಗಾಂಧಿ ದಂತ ಕಾಲೇಜು ಮತ್ತು ಆಸ್ಪತ್ರೆ ಆಯೋಜಿಸಿದ್ದ ವಾಕಥಾನ್‌ಗೆ ಡಾ. ಅಕ್ಷಯ್ ಶೆಟ್ಟಿ ಚಾಲನೆ ನೀಡಿದರು. ಭಾರತೀಯ ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಡಾ. ನಾಗರಾಜಪ್ಪ ದಾಸ್, ಕರ್ನಾಟಕ ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರ ಸಂಘದ (ಕೆಎಒಎಂಎಸ್‌ಐ) ಕಾರ್ಯಕಾರಿ ಸಮಿತಿ ಸದಸ್ಯ ಡಾ. ಪ್ರಶಾಂತ್ ರಾಜಾರಾಮ್, ಕಾರ್ಯದರ್ಶಿ ಡಾ. ಗಿರೀಶ್ ಗೌಡ ಉಪಸ್ಥಿತರಿದ್ದರು

ಬೇಸಿಗೆ ಬಂದರೂ ಆರಂಭ ಆಗದ ಕೊಳವೆ ಬಾವಿ ದುರಸ್ತಿ

ಎರಡು ವರ್ಷದಿಂದ ಆಗದ ನಿರ್ವಹಣೆ ವಿಳಂಬ ನೀತಿಗೆ ಅಸಮಾಧಾನ

● ಉಮೇಶಭಟ್ಟ ಪಿ.ಎಚ್.

ಬೆಂಗಳೂರು: ಬೇಸಿಗೆ ಶುರುವಾಗುತ್ತಿದ್ದು ಕೆಲವು ಭಾಗಗಳಲ್ಲಿ ನೀರಿಗೆ ಬೇಡಿಕೆ ಹೆಚ್ಚುತ್ತಿದೆ. ಆದರೆ, ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಕೊಳವೆಬಾವಿಗಳ ದುರಸ್ತಿಗೆ ಮುಂದಾಗಿಲ್ಲ ಎನ್ನುವ ಅಸಮಾಧಾನ ವ್ಯಕ್ತವಾಗಿದೆ.

ಕಾವೇರಿ 5ನೇ ಹಂತದ ಯೋಜನೆ ಜಾರಿಯಾದ ನಂತರ ನಗರಕ್ಕೆ ಸರಬರಾಜು ಆಗುವ ನೀರಿನ ಪ್ರಮಾಣ ಹೆಚ್ಚಾಗಿದೆ. ಆದರೂ ಕೊಳವೆಬಾವಿಗಳ ಮೇಲಿನ ಅವಲಂಬನೆ ತಗ್ಗಿಲ್ಲ. ಮಳೆಗಾಲದಲ್ಲಿ ಅಂತರ್ಜಲ ಮಟ್ಟ ವೃದ್ಧಿಯಾಗಲಿದ್ದು ಆ ನಂತರ ನಾಲ್ಕೈದು ತಿಂಗಳು ಕೊಳವೆಬಾವಿಗಳ ನೀರಿನ ಅಗತ್ಯ ಬೀಳುವುದಿಲ್ಲ. ಆದರೆ, ಬೇಸಿಗೆ ಬಂದಾಗ ಕೊಳವೆಬಾವಿಗಳ ನೀರಿನ ಮೇಲೆ ಅವಲಂಬನೆ ಆಗುವವರ ಸಂಖ್ಯೆ ಅಧಿಕವಾಗಿದೆ.

ನಗರದ ಹಳೆಯ ಪ್ರದೇಶಗಳೂ ಸೇರಿದಂತೆ ಕೆಲವು ಭಾಗಗಳಲ್ಲಿ ಬೇಸಿಗೆ ವೇಳೆ ನೀರಿನ ಸಮಸ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಈಗಿನಿಂದಲೇ ಕೊಳವೆ ಬಾವಿಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವ ಚಟುವಟಿಕೆ ಆರಂಭಿಸಬೇಕು. ಬೇಸಿಗೆಗೂ ಮುನ್ನವೇ ಆಗಬೇಕಾಗಿದ್ದ ದುರಸ್ತಿ ಕಾರ್ಯಗಳ ವಿಳಂಬದಿಂದ ತೊಂದರೆ ಆಗಬಹುದು ಎಂದು ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ 15,761 ಸಾರ್ವಜನಿಕ ಕೊಳವೆ ಬಾವಿಗಳಿದ್ದು, ಇದರಲ್ಲಿ 14,940 ನಿರ್ವಹಣೆಯಲ್ಲಿವೆ. ಇವುಗಳಲ್ಲಿ ಬೇಸಿಗೆ ವೇಳೆ 3,000 ಕೊಳವೆ ಬಾವಿಗಳು ಸಂಪೂರ್ಣ ಬತ್ತುತ್ತವೆ. ಶೇಕಡ 50ರಷ್ಟರಲ್ಲಿ ಮಾತ್ರ ಅಂತರ್ಜಲದ ಕಾರಣದಿಂದ ನೀರಿನ ಲಭ್ಯತೆ ಇರಲಿದೆ.

ಜಲಮಂಡಳಿ ಇವುಗಳ ನಿರ್ವಹಣೆಯ ಮೇಲುಸ್ತುವಾರಿ ವಹಿಸುತ್ತದೆ. ಮಳೆಗಾಲದಲ್ಲಿ ಇವುಗಳ ಅಗತ್ಯತೆ ಹೆಚ್ಚು ಬರುವುದಿಲ್ಲ. ಬೇಸಿಗೆ ವೇಳೆ ಕೊಳವೆಬಾವಿಗಳಿಂದಲೇ ಸುಮಾರು 500 ಎಂಎಲ್‌ಡಿ ನೀರನ್ನು ಪಡೆದು ಸರಬರಾಜು ಮಾಡಲಾಗುತ್ತದೆ.

ಖಾಸಗಿ ವ್ಯಾಪ್ತಿಯಲ್ಲಿ 4 ಲಕ್ಷಕ್ಕೂ ಅಧಿಕ ಕೊಳವೆಬಾವಿಗಳಿದ್ದು, ಅಗತ್ಯ ಬಿದ್ದಾಗ ಈ ಕೊಳವೆಬಾವಿಗಳಿಂದಲೂ 950 ಎಂಎಲ್‌ಡಿ ನೀರನ್ನು ಹಿಂದಿನ ವರ್ಷಗಳಲ್ಲಿ ಬಳಸಲಾಗಿದೆ. 2025ರಲ್ಲಿ ಉತ್ತಮ ಮಳೆಯಾಗಿದ್ದರಿಂದ ಕೊಳವೆ ಬಾವಿ ನೀರಿಗೆ ಹೆಚ್ಚಿನ ಬೇಡಿಕೆ ಇರಲಿಲ್ಲ. ಈ ವರ್ಷ ಎಷ್ಟು ಬೇಕಾಗಬಹುದು ಎನ್ನುವ ಅಂದಾಜು ಮಾಡಲಾಗುತ್ತಿದೆ.

‘ಜಲಮಂಡಳಿ ವ್ಯಾಪ್ತಿಯಲ್ಲಿ ಕೊಳವೆಬಾವಿಗಳ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ. ದುರಸ್ತಿಯೂ ನಿಯಮಿತವಾಗಿ ಆಗಬೇಕು. ಬೇಸಿಗೆ ವೇಳೆಯಲ್ಲಿ ಮಾತ್ರ ಇತ್ತ ಕಡೆ ಗಮನ ಹರಿಸಿ ಉಳಿದ ಎಂಟು ತಿಂಗಳು ಇವುಗಳನ್ನು ಮರೆಯುವುದೇ ಹೆಚ್ಚು. ಬೇಸಿಗೆ ಬಿಟ್ಟು ಉಳಿದ ಕಾಲದಲ್ಲೂ ಸಮಸ್ಯೆಯಾದರೆ ಕೊಳವೆಬಾವಿಯೇ ಆಸರೆ ಎನ್ನುವುದನ್ನು ಜಲಮಂಡಳಿ ಮರೆಯಬಾರದು’ ಎಂದು ಸಾರ್ವಜನಿಕರು ಹೇಳುತ್ತಾರೆ.

ಎರಡು ವರ್ಷದ ಹಿಂದೆ ದುರಸ್ತಿ: ಎರಡು ವರ್ಷದ ಹಿಂದೆ ಬೇಸಿಗೆಯಲ್ಲಿ ತೊಂದರೆ ಉಂಟಾಗಿದ್ದರಿಂದ, ಆಗ ಸಾರ್ವಜನಿಕ ಕೊಳವೆಬಾವಿಗಳನ್ನು ಸಂಪೂರ್ಣವಾಗಿ ದುರಸ್ತಿ ಮಾಡಲಾಗಿತ್ತು. ಇದರಲ್ಲಿ ಕೆಲವು ಹಾಳಾಗಿವೆ. ನಿರ್ವಹಣೆ ಇಲ್ಲದ ಕಾರಣ, ಕೆಲವೊಂದು ಬಳಕೆಯಾಗುತ್ತಿಲ್ಲ.

‘ಹಾಳಾಗಿರುವ ಕೊಳವೆ ಬಾವಿಗಳ ಕುರಿತು ಆಗಾಗ ದೂರು ಬರುತ್ತಿರುತ್ತವೆ. ಬೇಸಿಗೆ ವೇಳೆ ಬೇಡಿಕೆ ಬರುತ್ತಿರುವುದರಿಂದ ದುರಸ್ತಿ ಮಾಡಲಾಗುತ್ತದೆ. ಫೆಬ್ರುವರಿಯಲ್ಲಿ ಬೇಡಿಕೆ ಆಧರಿಸಿ ದುರಸ್ತಿ ಕೈಗೊಳ್ಳುತ್ತೇವೆ. ಮುಂದಿನ ವರ್ಷ ಸಾಮೂಹಿಕವಾಗಿ ದುರಸ್ತಿ ಮಾಡುವ ಯೋಜನೆ ಇದೆ’ ಎಂದು ಜಲಮಂಡಳಿಯ ಕೊಳವೆಬಾವಿ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಈ ಬಾರಿ ಕೊಳವೆಬಾವಿ ಕೊರೆಸಲು ಯಾವುದೇ ಅಡ್ಡಿಯಿಲ್ಲ. ಜಲಮಂಡಳಿಗೆ ಅರ್ಜಿ ನೀಡಬೇಕು. ಪೊಲೀಸ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅನುಮತಿ ಪಡೆದ ನಂತರ ಕೊಳವೆ ಬಾವಿ ಕೊರೆಸಬಹುದು. ಈ ವರ್ಷ ನಿಷೇಧದ ಬಗ್ಗೆ ಯಾವುದೇ ಸೂಚನೆಯಿಲ್ಲ. ಮಾರ್ಚ್‌ನಲ್ಲಿ ನೀರಿನ ಬೇಡಿಕೆ ಆಧರಿಸಿ ನಿರ್ಧಾರ ಕೈಗೊಳ್ಳಬಹುದು’ ಎನ್ನುತ್ತವೆ ಜಲಮಂಡಳಿ ಮೂಲಗಳು.

ನೀರಿನ ಬೇಡಿಕೆ ಹೇಗೆ

1.40 ಕೋಟಿ ಜನಸಂಖ್ಯೆ	**15,761** ಸಾರ್ವಜನಿಕ ಕೊಳವೆ ಬಾವಿಗಳ ಸಂಖ್ಯೆ
11.50 ಲಕ್ಷ ನೀರಿನ ಸಂಪರ್ಕ ಸಂಖ್ಯೆ	**5** ಲಕ್ಷ ಖಾಸಗಿ ಕೊಳವೆ ಬಾವಿಗಳು
10 ಟಿಎಂಸಿ ಬೇಸಿಗೆಯಲ್ಲಿ ಬೇಕಾದ ನೀರಿನ ಪ್ರಮಾಣ	**500** ಎಂಎಲ್‌ಡಿ ಕೊಳವೆ ಬಾವಿ ನೀರು ಪ್ರಮಾಣ

ದೂರುಗಳ ಪ್ರಮಾಣ ಹೆಚ್ಚಳ

ಬೇಸಿಗೆಗೆ ಸಿದ್ಧತೆ ಮಾಡಿಕೊಳ್ಳುವ ಮುನ್ನ ಹಿರಿಯ ಅಧಿಕಾರಿಗಳ ಹಂತದಲ್ಲಿ ಪೂರ್ವಭಾವಿ ತಯಾರಿ ಶುರುವಾಗಿದೆ. ಫೆಬ್ರುವರಿಯಿಂದ ಮೇ ಅಂತ್ಯದವರೆಗೂ ಬೇಸಿಗೆ ವಾತಾವರಣ ಇದ್ದರೂ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ನೀರಿನ ಬೇಡಿಕೆ, ದೂರುಗಳ ಪ್ರಮಾಣವೂ ಹೆಚ್ಚಿರಲಿದೆ.

ಜಲಮಂಡಳಿ ವ್ಯಾಪ್ತಿಯ ಉಪ ವಿಭಾಗಗಳು ಹಾಗೂ ಸೇವಾ ಠಾಣೆಗಳ ವ್ಯಾಪ್ತಿಯಲ್ಲಿ ಹಿಂದಿನ ಬೇಸಿಗೆ ವೇಳೆ ಕೈಗೊಂಡ ಕ್ರಮಗಳು, ಈ ಬಾರಿ ಸಮಸ್ಯೆ ಎದುರಾಗಬಹುದಾದ ಪ್ರದೇಶಗಳು, ಇದನ್ನು ಎದುರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವರದಿ ಸಿದ್ಧಪಡಿಸಲು ಸೂಚನೆ ನೀಡಲಾಗಿದೆ.

ಮಾಕಳಿ: ಹೊತ್ತಿ ಉರಿದ ಗೋದಾಮು

ಪ್ರಜಾವಾಣಿ ವಾರ್ತೆ

ನೆಲಮಂಗಲ: ಉತ್ತರ ತಾಲ್ಲೂಕು ಮಾಕಳಿಯಲ್ಲಿ ಗೋದಾಮುಗಳಿಗೆ ಬೆಂಕಿ ಹೊತ್ತಿಕೊಂಡು ಅಪಾರ ಪ್ರಮಾಣದ ವಸ್ತುಗಳು ಸುಟ್ಟು ಕರಕಲಾಗಿವೆ.

ಭಾನುವಾರ ರಜಾ ದಿನವಾದ ಕಾರಣ ಹೆಚ್ಚಿನ ಸಿಬ್ಬಂದಿ ಇರಲಿಲ್ಲ. ಬೆಳಿಗ್ಗೆ 11.30ರ ಸುಮಾರಿಗೆ ಸುಗಂಧ ದ್ರವ್ಯ ಗೋದಾಮಿನಲ್ಲಿ ಕಾಣಿಸಿಕೊಂಡ ಬೆಂಕಿ ಅಕ್ಕಪಕ್ಕದ ಹವಾನಿಯಂತ್ರಕ, ನಾಯಿಗಳಿಗೆ ನೀಡುವ ಸಂಸ್ಕರಿಸಿದ ಆಹಾರ, ಅನಿಲ ಸಿಲಿಂಡರ್‌ಗಳ ಗೋದಾಮಿಗೂ ವ್ಯಾಪಿಸಿದೆ. ಸಿಲಿಂಡರ್‌ಗಳನ್ನು ತಕ್ಷಣ ಸ್ಥಳಾಂತರಿಸಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿದೆ.

ಸ್ಥಳಕ್ಕೆ ಬಂದ ಅಗ್ನಿಶಾಮಕದಳದವರು 10ಕ್ಕೂ ಹೆಚ್ಚು ವಾಹನ ಬಳಸಿ ಬೆಂಕಿ ನಂದಿಸಲು ಯಶಸ್ವಿಯಾದರು.

ಬೆಂಕಿಯ ಕೆನ್ನಾಲಗೆ, ದಟ್ಟ ಹೊಗೆಯನ್ನು ಗಮನಿಸಿದ ಅಕ್ಕಪಕ್ಕದ ಗ್ರಾಮಸ್ಥರು, ಸಾರ್ವಜನಿಕರು ಗೋದಾಮಿನ ಬಳಿ ಬಂದಿದ್ದರು.

‘ಸಣ್ಣ ಪ್ರಮಾಣದಲ್ಲಿ ಕಾಣಿಸಿಕೊಂಡ ಬೆಂಕಿಯನ್ನು ಗೋದಾಮಿನಲ್ಲಿ ಅಳವಡಿಸಿರುವ ಅಗ್ನಿಶಾಮಕ ಉಪಕರಣಗಳ ಸಹಾಯದಿಂದ ಸಿಬ್ಬಂದಿ ನಂದಿಸಿದ್ದರೆ ಈ ಪ್ರಮಾಣದ ಅನಾಹುತ ಸಂಭವಿಸುತ್ತಿರಲಿಲ್ಲ. ಪಕ್ಕದಲ್ಲೇ ಇದ್ದ ಒಟ್ಟು ನಾಲ್ಕು ಗೋದಾಮುಗಳು ಹೊತ್ತಿ ಉರಿದಿವೆ’ ಎಂದು ಪ್ರತ್ಯಕ್ಷದರ್ಶಿ ತಿಳಿಸಿದ್ದಾರೆ.



ಮಾಕಳಿಯ ಗೋದಾಮುಗಳಲ್ಲಿ ಸಂಭವಿಸಿದ ಅಗ್ನಿ ಅವಘಡದಿಂದ ದಟ್ಟ ಹೊಗೆ ಆವರಿಸಿತ್ತು

ಮೊಬೈಲ್ ದೋಚಿ ಪರಾರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸಂಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಬಸ್ ನಿಲ್ದಾಣದ ಬಳಿ ನಿಂತಿದ್ದ ಸಿಬಿಐ ಕಚೇರಿಯ ಹೆಡ್‌ ಕಾನ್‌ಸ್ಟೆಬಲ್ ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡು ಕಳ್ಳರಿಬ್ಬರು ಪರಾರಿಯಾಗಿದ್ದಾರೆ.

ಗಂಗಾನಗರ ನಿವಾಸಿ, ಹೆಡ್‌ಕಾನ್‌ಸ್ಟೆಬಲ್ ಎನ್.ಕೃಷ್ಣ ಅವರು ನೀಡಿದ ದೂರಿನ ಮೇಲೆ ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಗಿದೆ.

ಕೆಲಸದ ನಿಮಿತ್ತ ದೆಹಲಿಗೆ ತೆರಳಲು ಎನ್.ಕೃಷ್ಣ ಅವರು ಫೆ. 16ರ ಬೆಳಗಿನ ಜಾವ 5 ಗಂಟೆ ಸುಮಾರಿಗೆ ಸಿ.ಬಿ.ಎಸ್ ಬಸ್ ಸ್ಟಾಪ್ ಹತ್ತಿರ ನಿಂತಿದ್ದರು. ಬಸ್ ಬರಲು ತಡವಾದ ಕಾರಣ ಟ್ಯಾಕ್ಸಿ ಬುಕ್ ಮಾಡಲು ಮೊಬೈಲ್ ಹೊರ ತೆಗೆಯುತ್ತಿದ್ದಂತೆ ಬೈಕ್‌ನಲ್ಲಿ ಬಂದ ಅಪರಿಚಿತರಿಬ್ಬರು ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದರು.

ರಸ್ತೆಯಲ್ಲಿ ಹೋಗುತ್ತಿದ್ದ ಬೇರೆಯವರ ಮೊಬೈಲ್ ಪಡೆದು ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ದೂರು ದಾಖಲಿಸಿದ್ದಾರೆ. ದೆಹಲಿಯಿಂದ ವಾಪಸ್ ಬಂದ ಬಳಿಕ ಫೆಬ್ರುವರಿ 19ರಂದು ಠಾಣೆಗೆ ಬಂದು, ಮೊಬೈಲ್ ಕಿತ್ತುಕೊಂಡು ಹೋಗಿರುವ ಅಪರಿಚಿತರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಕೋರಿದ್ದಾರೆ.

ವಾಹನ ಡಿಕ್ಕಿ: ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಬಳಿಯ ಧನನಾಯಕನಹಳ್ಳಿ ಮುಖ್ಯ ರಸ್ತೆಯಲ್ಲಿ ಶನಿವಾರ ರಾತ್ರಿ ದ್ವಿಚಕ್ರ ವಾಹನ ಮತ್ತು ಸರಕು ಸಾಗಣೆ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಮುನಿಯಪ್ಪ (19) ಎಂಬ ಯುವಕ ಮೃತಪಟ್ಟಿದ್ದಾರೆ.

ಧನನಾಯಕನಹಳ್ಳಿಯ ಮುನಿಯಪ್ಪ, ಕೆಂಗೇರಿಯ ಬೈಕ್ ಷೋರೂಂನಲ್ಲಿ ಕೆಲಸ ಮಾಡುತ್ತಿದ್ದು, ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದ ತನ್ನ ತಂದೆಗೆ ಊಟ ತೆಗೆದುಕೊಂಡು ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕ್ಯಾಂಟರ್ ಚಾಲಕ ಏಕಮುಖ ಸಂಚಾರದ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ವೇಗವಾಗಿ ವಾಹನ ಚಾಲನೆ ಮಾಡಿಕೊಂಡು ಬಂದು ಮುನಿಯಪ್ಪ ಅವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಅಸ್ವಸ್ಥಗೊಂಡರು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಕ್ಯಾಂಟರ್ ಚಾಲಕನ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ. ಘಟನೆ ನಂತರ ಆತ ವಾಹನ ಬಿಟ್ಟು ಪರಾರಿ ಆಗಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಜ್ಞಾನಭಾರತಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೂಲಿ ಕಾರ್ಮಿಕ ಸಾವು: ನೈಸ್ ರಸ್ತೆ ಬಳಿಯ ಮಂಗನಹಳ್ಳಿ ರಸ್ತೆಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಗಾಯಗೊಂಡಿದ್ದ ಶ್ರೀರಾಮುಲು ರೆಡ್ಡಿ (72) ಎಂಬುವವರು ಶನಿವಾರ ರಾತ್ರಿ ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶದ ಶ್ರೀರಾಮುಲು ರೆಡ್ಡಿ, ಮಂಗನಹಳ್ಳಿಯಲ್ಲಿ ವಾಸವಾಗಿದ್ದರು. ಕೂಲಿ ಕೆಲಸ ಮಾಡುತ್ತಿದ್ದ ಅವರು ಫೆ.17ರಂದು ನಡೆದು ಹೋಗುತ್ತಿದ್ದಾಗ ಬೈಕ್ ಡಿಕ್ಕಿ ಹೊಡೆದಿತ್ತು. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಜ್ಞಾನಭಾರತಿ ಸಂಚಾರ ಠಾಣೆ ಪೊಲೀಸರು ಹೇಳಿದ್ದಾರೆ.

ಗಮನ ಬೇರೆಡೆ ಸೆಳೆದು ಕಳವು

ಅಪರಾಧ ಸುದ್ದಿ

ಗ್ರಾಹಕನ ಸೋಗಿನಲ್ಲಿ ಚಿನ್ನಾಭರಣ ಮಳಿಗೆಗೆ ಬಂದ ಕಿಡಿಗೇಡಿಯೊಬ್ಬ ಮಾಲೀಕನ ಗಮನ ಬೇರೆಡೆ ಸೆಳೆದು ಚಿನ್ನಾಭರಣ ಕದ್ದು ಪರಾರಿಯಾಗಿರುವ ಘಟನೆ ನಾಗಸಂದ್ರ ಬಳಿಯ ಮಂಜುನಾಥ್ ನಗರದಲ್ಲಿ ನಡೆದಿದೆ.

ಮಂಜುನಾಥ್ ನಗರದ ಪೂರನ್ ಚಿನ್ನಾಭರಣ ಮಳಿಗೆಯಲ್ಲಿ ಕಳವು ನಡೆದಿದ್ದು, ಮಾಲೀಕ ವಿನೋದ್ ದೂರು ಕೊಟ್ಟಿದ್ದಾರೆ. ಆರೋಪಿಯು ಸುಮಾರು 18 ಗ್ರಾಂ ತೂಕದ ಚಿನ್ನದ ಉಂಗುರ ಕದ್ದು ಪರಾರಿಯಾಗಿದ್ದಾನೆ ಎಂದು ಬಾಗಲಗುಂಟೆ ಠಾಣೆ ಪೊಲೀಸರು ತಿಳಿಸಿದ್ದಾರೆ.

ಗ್ರಾಹಕನ ಸೋಗಿನಲ್ಲಿ ಪೂರನ್ ಮಳಿಗೆಗೆ ಬಂದಿದ್ದ ಕಿಡಿಗೇಡಿ, ಉಂಗುರ ತೋರಿಸುವಂತೆ ಕೇಳಿದ್ದಾನೆ. ವಿನೋದ್, ಕೆಲ ಉಂಗುರ ತೋರಿಸಿದ ಬಳಿಕ ಒಂದು ಉಂಗುರವನ್ನು ಆಯ್ಕೆ ಮಾಡಿ ತೂಕ ಹಾಕಿ ಕೊಡುವಂತೆ ಕೇಳಿದ್ದಾನೆ. ವಿನೋದ್, ತೂಕ ಹಾಕಲು ಒಳಗೆ ಹೋದಾಗ ಕಿಡಿಗೇಡಿ, ಒಡವೆ ಬಾಕ್ಸ್‌ನಲ್ಲಿನ ಮತ್ತೊಂದು ಉಂಗುರವನ್ನು ಕದ್ದು, ಅದರ ಬದಲು ನಕಲಿ ಚಿನ್ನದ ಉಂಗುರ ಇಟ್ಟಿದ್ದಾನೆ. ಮಾಲೀಕ ಉಂಗುರ ತೂಕ ಹಾಕಿಕೊಂಡು ಬಂದ ನಂತರ ಕಿಡಿಗೇಡಿ ಉಂಗುರ ಬೇಡವೆಂದು ಹೇಳಿ ಹೊರಟು ಹೋಗಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ದಿನದ ವ್ಯಾಪಾರ ಮುಗಿದ ನಂತರ ಒಡವೆ ಬಾಕ್ಸ್‌ನಲ್ಲಿನ ಉಂಗುರಗಳ ತಪಾಸಣೆ ಮಾಡಿದಾಗ ನಕಲಿ ಚಿನ್ನದ ಉಂಗುರ ಪತ್ತೆಯಾಗಿದೆ. ಅನುಮಾನಗೊಂಡ ಅವರು ಮಳಿಗೆಯ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದಾಗ ಕಳವು ಮಾಡಿರುವುದು ಗೊತ್ತಾಗಿದೆ. ಆರೋಪಿಯ ಮುಖಚರ್ಯೆ ಮಳಿಗೆಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಅದರ ಜಾಡು ಹಿಡಿದು ಆತನ ಪತ್ತೆಗೆ ಕ್ರಮ ಕೈಗೊಂಡಿದ್ದೇವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕಾರು ಅಪಘಾತ: ಮಾಜಿ ಶಾಸಕ ಸುರೇಶ್‌ಗೌಡ ಪಾರು

ಪ್ರಜಾವಾಣಿ ವಾರ್ತೆ

ಮಂಡ್ಯ: ನಾಗಮಂಗಲ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಕೆ. ಸುರೇಶಗೌಡ ಅವರ ಕಾರು ಅಪಘಾತವಾಗಿದ್ದು, ಕೈಗೆ ಬಲವಾದ ಪೆಟ್ಟು ಬಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಾರು ಚಾಲಕ ಶೇಖರ್ ಅವರಿಗೂ ಸಣ್ಣಪುಟ್ಟ ಗಾಯಗಳಾಗಿವೆ. ಕಾರಿನಲ್ಲಿ ಅಂಗರಕ್ಷಕ ಶಿವು ಹಾಗೂ ಬಿಂಡೇನಹಳ್ಳಿ ಗ್ರಾಮದ ಪ್ರಸನ್ನ ಪ್ರಯಾಣಿಸುತ್ತಿದ್ದರು.

ದೊಡ್ಡಹೊಸಗಾವಿ ಸಮೀಪದ ಮಲೆಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ನಡೆದಿದ್ದ ವಿವಾಹದಲ್ಲಿ ಸುರೇಶ್‌ಗೌಡ ಅವರು ಪಾಲ್ಗೊಂಡು ನಾಗಮಂಗಲಕ್ಕೆ ತೆರಳುತ್ತಿದ್ದರು. ಮಂಡ್ಯದ ಬಸರಾಳು ಹೋಬಳಿಯ ಬೊಂತೆಕೊಪ್ಪಲು ಸಮೀಪ ಶನಿವಾರ ಮಧ್ಯರಾತ್ರಿ ಚಾಲಕನ ನಿಯಂತ್ರಣ ತಪ್ಪಿದ ಕಾರು ಕಿರು ಸೇತುವೆಗೆ ಡಿಕ್ಕಿ ಹೊಡೆದು, ಅಪಘಾತ ಸಂಭವಿಸಿದೆ.

ಪೊಲೀಸರಿಗೆ ಅಂಗರಕ್ಷಕ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಸುರೇಶಗೌಡ ಅವರನ್ನು ಆದಿಚುಂಚನಗಿರಿಯ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ರವಾನಿಸಲಾಗಿದೆ. ಸುರೇಶಗೌಡ ಅವರು ಗುಣಮುಖರಾಗುತ್ತಿದ್ದು, ಎರಡು ದಿನಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಆಗಲಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.



ಮಾಜಿ ಶಾಸಕ ಕೆ.ಸುರೇಶ್‌ಗೌಡ ಅವರ ಕಾರು ಅಪಘಾತವಾಗಿರುವ ದೃಶ್ಯ

ಸಿ.ಎಂ– ಮಾಜಿ ಸಿ.ಎಂ 'ಜಾತಿ ರಾಜಕೀಯ'ದ ಜಿದ್ದು

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ, ಅಧಿಕಾರ ಹಸ್ತಾಂತರದ ಚರ್ಚೆ ನಡೆಯುತ್ತಿರುವ ನಡುವೆ, 'ಕುರಿ ಕಾಯುತ್ತಿದ್ದವನು ಮುಖ್ಯಮಂತ್ರಿ ಆದದ್ದೇ ಪಟ್ಟಭದ್ರರ ಕಣ್ಣು ಕೆಂಪಾಗಲು ಕಾರಣ' ಎಂದು ಸಿದ್ದರಾಮಯ್ಯ ಅವರು ಮಾಡಿದ 'ಎಕ್ಸ್' ಪೋಸ್ಟ್‌ಗೆ, 'ಈಗ ಮುಖ್ಯಮಂತ್ರಿ ಕುರ್ಚಿ ಬಿಡುವುದಿಲ್ಲ ಎನ್ನುವುದನ್ನು ಹೇಳಲು ಜಾತಿಯ ಅಸ್ತ್ರ ಬಳಸಿರಬಹುದು' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದರು. 'ಜಾತಿ ರಾಜಕೀಯ' ಮುಂದಿಟ್ಟು ಇಬ್ಬರ ಜಿದ್ದಾಜಿದ್ದಿಯ ಹೇಳಿಕೆಗಳು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

'ಒಕ್ಕಲಿಗ ನಾಯಕರನ್ನು ದೇವೇಗೌಡರು ಮುಗಿಸಿದರು'


ಸಿದ್ದರಾಮಯ್ಯ

'ತಂದೆ ಮತ್ತು ಮಕ್ಕಳು ತಮ್ಮ ಕುಟುಂಬದ ಸ್ವಾರ್ಥಕ್ಕಾಗಿ ರಾಜಕೀಯ ಕ್ಷೇತ್ರದಲ್ಲಿ ಉಳಿದವರನ್ನು ಬಿಟ್ಟುಬಿಡಿ, ಸ್ವಜಾತಿ ನಾಯಕರು ಕೂಡಾ ಬೆಳೆಯದಂತೆ ಒಬ್ಬೊಬ್ಬರನ್ನೇ ಮುಗಿಸುತ್ತಾ ಬಂದವರು. ಹಿಂದೆ, ಇಂದು ಮತ್ತು ಮುಂದೆ ಜಾತ್ಯತೀತ ಜನತಾದಳದ ತುತ್ತತುದಿಯ ನಾಯಕರು ಗೌಡರ ಕುಟುಂಬದವರೇ ಆಗಿರುತ್ತಾರೆ ಎನ್ನುವುದು ಸತ್ಯ' ಎಂದು ಕುಮಾರಸ್ವಾಮಿಗೆ ಸಿದ್ದರಾಮಯ್ಯ ಕುಟುಕಿದ್ದಾರೆ. ಸಿದ್ದರಾಮಯ್ಯ ಅವರ ತಿರುಗೇಟು ಹೀಗಿದೆ...

'ಎಚ್‌.ಡಿ. ದೇವೇಗೌಡರು ಎಷ್ಟು ಮಂದಿ ಒಕ್ಕಲಿಗ ನಾಯಕರನ್ನು ಜೆಡಿ(ಎಸ್) ಪಕ್ಷದಲ್ಲಿ ಬೆಳೆಸಿದ್ದಾರೆ? ಹಾಸನದ ಪುಟ್ಟಸ್ವಾಮಿಗೌಡ, ಸಿ.ಎಸ್. ಪುಟ್ಟೇಗೌಡ, ಜವರೇಗೌಡ, ಕೆ.ಎಂ. ವಿಶ್ವನಾಥ್, ಹನುಮೇಗೌಡ, ಮಂಡ್ಯದ ಕೆ.ಎನ್. ನಾಗೇಗೌಡ, ಕೆ.ಆರ್. ಪೇಟೆ ಕೃಷ್ಣ, ವೈ.ಕೆ. ರಾಮಯ್ಯ, ಸಿ. ಬೈರೇಗೌಡ, ಬಚ್ಚೇಗೌಡ, ಬಿ.ಎಲ್. ಶಂಕರ್, ಸಿ. ನಾರಾಯಣಸ್ವಾಮಿ, ಚಲುವರಾಯಸ್ವಾಮಿ ಮೊದಲಾದವರೆಲ್ಲ ಯಾಕೆ ದೇವೇಗೌಡರನ್ನು ಬಿಟ್ಟು ಹೊರಬಂದರು ಎನ್ನುವುದನ್ನು ನಾನು ವಿವರಿಸಿ ಹೇಳಬೇಕಾಗಿಲ್ಲ'.

'ಒಕ್ಕಲಿಗ ನಾಯಕರನ್ನು ಗುರುತಿಸಿ ರಾಜಕೀಯವಾಗಿ ಬೆಳೆಸಿದ್ದು ಕಾಂಗ್ರೆಸ್ ಪಕ್ಷ ಮಾತ್ರ. ಕೆಂಗಲ್ ಹನುಮಂತಯ್ಯ ಅವರಿಂದ ಹಿಡಿದು ಎಸ್.ಎಂ. ಕೃಷ್ಣವರೆಗೆ ನೂರಾರು ಒಕ್ಕಲಿಗ ನಾಯಕರನ್ನು ಬೆಳೆಸಿದೆ. ದೇವೇಗೌಡರಿಂದ ಮೋಸಕ್ಕೊಳಗಾದ ನಾಯಕರಿಗೆ ಅವಕಾಶ ನೀಡಿ ರಾಜಕೀಯವಾಗಿ ಬೆಳೆಸುತ್ತಿರುವುದು ಕೂಡಾ ಕಾಂಗ್ರೆಸ್ ಪಕ್ಷ. ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್.ಎಂ. ಕೃಷ್ಣ ಅವರು ರಾಜ್ಯದ ಸಿ.ಎಂ ಆಗಿದ್ದರೆ, ಅದಕ್ಕೆ ಕಾಂಗ್ರೆಸ್ ಕಾರಣ.'

'ಒಕ್ಕಲಿಗರಿಗೆ ಸಮರ್ಥ ನಾಯಕತ್ವ ನೀಡಲು ಸಾಧ್ಯ ಇರುವವರು ಈಗಲೂ ಕಾಂಗ್ರೆಸ್‌ನಲ್ಲಿಯೇ ಇರುವುದು. ಡಿ.ಕೆ. ಶಿವಕುಮಾರ್, ಟಿ.ಬಿ. ಜಯಚಂದ್ರ, ಕಿಮ್ಮನೆ ರತ್ನಾಕರ್, ಎಂ. ಕೃಷ್ಣಪ್ಪ, ಕೃಷ್ಣ ಬೈರೇಗೌಡ, ಪಿರಿಯಾಪಟ್ಟಣ ವೆಂಕಟೇಶ್, ಹೀಗೆ ನಮ್ಮಲ್ಲಿರುವ ಒಕ್ಕಲಿಗರ ನಾಯಕರ ದೊಡ್ಡ ಪಟ್ಟಿಯೇ ಇದೆ. ಜೆಡಿ(ಎಸ್)ನಲ್ಲಿ ಎಷ್ಟು ಮಂದಿ ಒಕ್ಕಲಿಗ ನಾಯಕರಿದ್ದಾರೆ. ಮುಂದೊಂದು ದಿನ ದೇವೇಗೌಡರ ಕುಟುಂಬವನ್ನು ಹೊರತುಪಡಿಸಿ ಯಾರಾದರೂ ರಾಜ್ಯದ ಮುಖ್ಯಮಂತ್ರಿಗಳಾದರೆ ಅದು ಕಾಂಗ್ರೆಸ್ ಪಕ್ಷದಿಂದಲೇ ಆಗಲಿದೆ'

'ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದಿಂದ ಒಕ್ಕಲಿಗರು, ಲಿಂಗಾಯತರು, ಹಿಂದುಳಿದವರು ಮುಖ್ಯಮಂತ್ರಿಗಳಾಗಿದ್ದಾರೆ, ಹಿಂದುಳಿದ ಜಾತಿಗೆ ಸೇರಿದ ನನ್ನನ್ನು ಗುರುತಿಸಿ 2ನೇ ಬಾರಿ ಮುಖ್ಯಮಂತ್ರಿಯಾಗುವ ಅವಕಾಶ ಕಲ್ಪಿಸಿಕೊಟ್ಟಿರುವುದು ಕೂಡಾ ಕಾಂಗ್ರೆಸ್ ಪಕ್ಷ. ಜಾತಿಯಿಂದ ಮಾತ್ರವಲ್ಲ, ಅರ್ಹತೆಯ ಬಲದಿಂದಲೇ ಮುಖ್ಯಮಂತ್ರಿಯಾಗುವಂತಹ ದಲಿತ ಸಮುದಾಯದ ನಾಯಕರು ಕೂಡಾ ಕಾಂಗ್ರೆಸ್‌ನಲ್ಲೇ ಇರುವುದು. ಮುಂದೊಂದು ದಿನ ದಲಿತ ಸಮುದಾಯದಿಂದ ಯಾರಾದಾರೂ ರಾಜ್ಯದ ಮುಖ್ಯಮಂತ್ರಿಯಾದರೆ ಅದು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ. ಇದು ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ, ಜೆಡಿಎಸ್ ಗಳಿಗೆಇರುವ ವ್ಯತ್ಯಾಸ'

'ಅಧಿಕಾರ ಇರಲಿ, ಇಲ್ಲದೆ ಇರಲಿ ಸಾಮಾಜಿಕ ನ್ಯಾಯದ ಪರವಾದ ನನ್ನ ನಿಲುವು ಅಚಲ. ನಮ್ಮಲ್ಲಿನ ಜಾತಿ ವ್ಯವಸ್ಥೆ ಬಗ್ಗೆ ನನ್ನನ್ನು ಟೀಕಿಸುತ್ತಿರುವ ರಾಜಕಾರಣಿಗಳಿಗಿಂತ ಹೆಚ್ಚಿನ ಸ್ಪಷ್ಟತೆ ನನಗಿದೆ. ಈ ಬಗ್ಗೆ ನಾನು ಸಾರ್ವಜನಿಕ ಸಂವಾದಕ್ಕೆ ಸಿದ್ಧವಾಗಿದ್ದೇನೆ'.

'ಕುರ್ಚಿ ಬಿಡಿ, ಒಕ್ಕಲಿಗರ ಮೇಲೆ ಪ್ರೀತಿ ಪ್ರದರ್ಶಿಸಿ'


ಕುಮಾರಸ್ವಾಮಿ

'ಒಕ್ಕಲಿಗರನ್ನು ಸಿ.ಎಂ ಮಾಡುವುದು ಕಾಂಗ್ರೆಸ್ಸೇ ಎನ್ನುವುದಾದರೆ, ತತ್‌ಕ್ಷಣಕ್ಕೇ ನೀವು ಕುರ್ಚಿ ಬಿಡಬೇಕಲ್ಲವೇ? ಒಕ್ಕಲಿಗರ ಮೇಲೆ ನಿಮ್ಮ ಪ್ರೀತಿ ಪ್ರದರ್ಶನಕ್ಕೆ ಇದು ಸಕಾಲ' ಎಂದು ಸಿದ್ದರಾಮಯ್ಯ ಅವರಿಗೆ ಕುಮಾರಸ್ವಾಮಿ ಸವಾಲು ಹಾಕಿದ್ದಾರೆ. ಕುಮಾರಸ್ವಾಮಿಯವರ ಮಾತಿನ ವರಸೆ ಹೀಗಿದೆ..

'ನೀವು ಪಟ್ಟಿ ಮಾಡಿರುವ ಒಕ್ಕಲಿಗ ನಾಯಕರ ಹೆಸರುಗಳನ್ನು ಓದಿದೆ. ಪಾಪ.. ನೀವು ಅವರ ಹೆಸರುಗಳನ್ನು ಉಲ್ಲೇಖಿಸಿ ಅವರನ್ನೂ ಅಪಹಾಸ್ಯ ಮಾಡಿದ್ದೀರಿ. ನೀವೂ ಅಪಹಾಸ್ಯಕ್ಕೆ ತುತ್ತಾಗಿದ್ದಲ್ಲದೆ, ನಗೆಪಾಟಲಿಗೀಡಾಗಿದ್ದೀರಿ. ನಿಮ್ಮ ರಾಜಕೀಯ ಸ್ವಾರ್ಥಕ್ಕೆ ಆ 13 ಜನರ ಶೆಲ್ಟರ್ ಪಡೆದಿದ್ದೀರಿ'

'ಅವರೆಲ್ಲರೂ ದೇವೇಗೌಡರಿಂದ ಅಧಿಕಾರ ಅನುಭವಿಸಲೇ ಇಲ್ಲವೇ? ಆಗ ಅವರೆಲ್ಲರೂ ಕೂತಿದ್ದ ಅಧಿಕಾರ ಸ್ಥಾನಗಳಲ್ಲಿ ದೇವೇಗೌಡರೇ ಕೂತಿದ್ದರಾ? ಅವರೆಲ್ಲರೂ ನಿಮ್ಮಂತೆಯೇ ದೇವೇಗೌಡರ ಶ್ರಮ, ತ್ಯಾಗದಿಂದ ಅಧಿಕಾರ ಉಂಡು, ಪೊಗದಸ್ತಾಗಿ ಬೆಳೆದು ಬೇಲಿ ಹಾರಿದವರು! ನೀವು ಹೇಳಿದಂತೆ ಕುಟುಂಬವೇ ಮಿಗಿಲು ಎಂದು ಗೌಡರು ಭಾವಿಸಿದ್ದಿದ್ದರೆ ಈ ಪಟ್ಟಿಯಲ್ಲಿನ ಒಬ್ಬರೂ ಶಾಸಕ, ಮಂತ್ರಿ,ಎಂಪಿ ಆಗುತ್ತಲೇ ಇರಲಿಲ್ಲ. ನಿಮ್ಮನ್ನೂ ಸೇರಿಸಿ! ಏನಂತೀರಿ? ನೀವೆಲ್ಲರೂ ನೆರಳು ಕೊಟ್ಟ ವೃಕ್ಷಕ್ಕೆ ನಿರ್ದಯದಿಂದ ಕೊಡಲಿ ಹಾಕಿದಿರಿ. ಉಂಡು ಹೋದಿರಿ, ಕೊಂಡು ಹೋದಿರಿ!'.

'ಸಾಮಾಜಿಕ ನ್ಯಾಯದ ಸೋಗುಗಾರ, ಸಾಮಾಜಿಕ ನ್ಯಾಯದ ಸಂಹಾರಿ ನೀವು. ನಿಮಗೆ ರಾಜಕೀಯ ಶಕ್ತಿ-ಬದುಕು ಕೊಟ್ಟ ದೇವೇಗೌಡರ ಕಡೆ ಬೆಟ್ಟು ಮಾಡುವುದು ಆಘಾತಕಾರಿ. ಇವತ್ತು ನಿಮಗೆ ಸಿಕ್ಕಿರುವ ಅಧಿಕಾರ, ಸಾಮಾಜಿಕ ನ್ಯಾಯಕಾರ ಎಂಬ ಪೋಷಾಕು ಎಲ್ಲವೂ ದೇವೇಗೌಡರ ದೇಣಿಗೆ'.

'ನಿಮ್ಮ ಸ್ವಾರ್ಥಕ್ಕೆ ಜಾತಿ ಎಳೆದು ತಂದಂತೆ, ಹಿರಿಯರಾದ ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್.ಎಂ. ಕೃಷ್ಣ ಅವರನ್ನು ಏಕೆ ಎಳೆದು ತರುತ್ತೀರಿ? ಅವರ ಹೆಸರೇಳುವ ಸಾಸಿವೆ ಕಾಳಷ್ಟು ಯೋಗ್ಯತೆ, ನೈತಿಕತೆ ನಿಮಗಿದೆಯೇ? ರಾಜಕೀಯದ ಕಡೆಗಾಲದಲ್ಲಿ ಅವರನ್ನು ಎಷ್ಟು ತುಚ್ಛವಾಗಿ ನಡೆಸಿಕೊಂಡಿರಿ ಎನ್ನುವುದನ್ನು ಜನ ಮರೆತಿಲ್ಲ. ಒಕ್ಕಲಿಗರನ್ನು ಬೆಳೆಸಿದ್ದು ಕಾಂಗ್ರೆಸ್ಸು ಅಂತೀರಿ.. ಬರೀ ಬುರಡೆ.. ವಿಧಾನಸೌಧ ಕಟ್ಟಿದ ಕೆಂಗಲ್ ಅವರಿಗೆ ನಿಮ್ಮ ನೆಹರೂ ಕೊಟ್ಟ ಕಿರುಕುಳ, ಮಾಡಿದ ಅಪಮಾನ ಅಷ್ಟಿಷ್ಟಾ? ಸಾಮಾಜಿಕ ನ್ಯಾಯದ ಹರಿಕಾರ ದೇವರಾಜ ಅರಸು ಅವರಿಗೆ ಬೆನ್ನಿಗಿರಿದ ದೂರ್ತರು ಯಾರು? ಯಾವ ಪಕ್ಷದವರು?'

'ಎರಡನೇ ಅವಧಿಗೆ ನೀವು ಸಿ.ಎಂ ಆಗುವ ಮುನ್ನ ಅಗ್ರಿಮೆಂಟ್ ಆಗಿತ್ತಲ್ಲಾ, ಅದನ್ನು ಬಹಿರಂಗವಾಗಿ ಹೇಳುವ ಉದಾರತೆ ತೋರಿ. ದಿಲ್ಲಿಯಲ್ಲಿ ನಿಮ್ಮಿಬ್ಬರ ನಡುವೆ ಆಗಿದ್ದ ಆ ಅಗ್ರಿಮೆಂಟ್‌ಗೆ ಸಾಕ್ಷಿ ಆಗಿದ್ದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ವೇಣುಗೋಪಾಲ್, ಸುರ್ಜೇವಾಲಾಗೆ ನಿಮ್ಮ ಸಾಮಾಜಿಕ ನ್ಯಾಯ, ಒಕ್ಕಲಿಗ ಪ್ರೀತಿಯ ಪರಾಕಾಷ್ಠೆ ಈಗೀಗ ಅರ್ಥವಾಗಿದೆ ಎಂದು ಭಾವಿಸುತ್ತೇನೆ. ಅವರೆಲ್ಲರ ಮಾನಸಿಕ ಸ್ವಾಸ್ಥ್ಯ ಸರಿ ಇದೆ ಎಂದು ನಾನಾದರೂ ನಂಬಿದ್ದೇನೆ'.

ಎಚ್‌ಡಿಕೆ– ಪರಮೇಶ್ವರ ರಹಸ್ಯ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಮತ್ತು ಗೃಹ ಸಚಿವ ಜಿ. ಪರಮೇಶ್ವರ ಅವರು ರಹಸ್ಯವಾಗಿ ಚರ್ಚೆ ನಡೆಸಿರುವುದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿದೆ.

ನಗರದ ರೇಸ್‌ಕೋರ್ಸ್ ರಸ್ತೆಯಲ್ಲಿರುವ ತಾಜ್ ವೆಸ್ಟ್‌ಎಂಡ್ ಹೋಟೆಲ್‌ನಲ್ಲಿ ಶನಿವಾರ ಬೆಳಿಗ್ಗೆ ಕುಮಾರಸ್ವಾಮಿ ಅವರನ್ನು ಪರಮೇಶ್ವರ ಭೇಟಿಯಾಗಿದ್ದರು. ಅರ್ಧ ಗಂಟೆಗೂ ಹೆಚ್ಚು ಸಮಯ ಉಭಯ ನಾಯಕರು ಪ್ರತ್ಯೇಕವಾಗಿ ಮಾತುಕತೆ ನಡೆಸಿರುವುದು ಗಮನ ಸೆಳೆದಿದೆ. ಯಾವ ವಿಷಯದ ಕುರಿತು ಚರ್ಚೆ ನಡೆಸಿದರು ಎಂಬ ಮಾಹಿತಿ ಲಭ್ಯವಾಗಿಲ್ಲ.

ಆದರೆ, ರಾಜ್ಯ ಕಾಂಗ್ರೆಸ್‌ನಲ್ಲಿ ಬಿರುಸಿನ ಚಟುವಟಿಕೆ ನಡೆಯುತ್ತಿರುವ ಹೊತ್ತಿನಲ್ಲೇ ಕುಮಾರಸ್ವಾಮಿ ಅವರನ್ನು ಪರಮೇಶ್ವರ ಅವರು ಭೇಟಿಯಾಗಿ ಸಮಾಲೋಚನೆ ನಡೆಸಿರುವುದು ಮಹತ್ವ ಪಡೆದುಕೊಂಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಪರಮೇಶ್ವರ ಅವರು ತಮ್ಮ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅಥವಾ ಕ್ಷೇತ್ರಕ್ಕೆ ಸಂಬಂಧಿಸಿದ ಇತರೆ ವಿಚಾರವಾಗಿ ಚರ್ಚಿಸಲು ಕುಮಾರಸ್ವಾಮಿ ಅವರನ್ನು ಭೇಟಿ ಆಗಿರಬಹುದು' ಎಂದು ಹೇಳಿದರು.


ಶಿವಮೊಗ್ಗದ ಕೋಟೆ ಮಾರಿಕಾಂಬದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಕೋಟೆ ಮಾರಿಕಾಂಬ ಟಗರು ಕಾಳಗ ಸಮಿತಿ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಮುಖಾಮುಖಿ ಆದ ಟಗರುಗಳು
–ಚಿತ್ರ: ಶಿವಮೊಗ್ಗ ನಾಗರಾಜ್

ಧರ್ಮನೇಮ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.


ಮಂಗಳೂರು ಹೋಬಳಿ ಮನೆತನ ಜಪ್ಪು ಗುಡ್ಡೆಚಾವಡಿಯ ಪ್ರವೇಶೋತ್ಸವ, ಧರ್ಮ ದೈವಗಳ ಪುನರ್‌ಪ್ರತಿಷ್ಠೆ ಅಂಗವಾಗಿ ಭಾನುವಾರ ಧರ್ಮನೇಮ ಕಾರ್ಯಕ್ರಮ ನಡೆಯಿತು

'ಕರೆದಾಗ ದೆಹಲಿಗೆ ಹೋಗುತ್ತೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅವರು (ಹೈಕಮಾಂಡ್) ಯಾವಾಗ ಕರೆಯುತ್ತಾರೊ ಆಗೆಲ್ಲಾ ದೆಹಲಿಗೆ ಹೋಗುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಮುಂದಿನ ವಾರ ದೆಹಲಿಗೆ ಹೋಗುತ್ತೀರಾ' ಎಂಬ ಸುದ್ದಿಗಾರರ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

'ನಾನು ದೆಹಲಿಗೆ ಹೋಗುವುದು, ಬರುವುದು ಇದ್ದೇ ಇರುತ್ತದೆ. ನಾನು ಹೋಗದೆ ಮತ್ಯಾರು ಹೋಗುತ್ತಾರೆ' ಎಂದೂ ಶಿವಕುಮಾರ್ ಪ್ರಶ್ನಿಸಿದರು.

'ಅಸ್ಸಾಂಗೆ ಹೋಗಿದ್ದಾಗ ಪ್ರಿಯಾಂಕಾ ಗಾಂಧಿ ಜೊತೆ ರಾಜ್ಯ ರಾಜಕೀಯದ ಬಗ್ಗೆ ಚರ್ಚೆ ಮಾಡಿದ್ದೀರಾ' ಎಂದು ಕೇಳಿದಾಗ, 'ರಾಜ್ಯ ರಾಜಕೀಯದ ಬಗ್ಗೆ ಎಲ್ಲೆಂದರಲ್ಲಿ ನಾನು ಚರ್ಚೆ ಮಾಡುವುದಿಲ್ಲ. ಅದು ಸಾರ್ವಜನಿಕವಾಗಿ ಚರ್ಚಿಸುವ ವಿಚಾರವೂ ಅಲ್ಲ' ಎಂದರು.

ದೇಶದ ಹಿತಕ್ಕಾಗಿ ರಾಹುಲ್ ಗಾಂಧಿ ಧ್ವನಿ: ಅಮೆರಿಕ ವಿಧಿಸಿರುವ ತೆರಿಗೆ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ರಾಹುಲ್ ಗಾಂಧಿ ಟೀಕೆ ಮಾಡಿರುವ ಬಗ್ಗೆ ಕೇಳಿದಾಗ, 'ರಾಹುಲ್ ಗಾಂಧಿ ದೇಶದ ಹಿತಕ್ಕಾಗಿ ಏನು ಬೇಕೊ ಅದನ್ನು ಮಾಡುತ್ತಾರೆ, ಮಾತನಾಡುತ್ತಾರೆ. ಅಮೆರಿಕದ ಜೊತೆಗಿನ ತೆರಿಗೆ ಒಪ್ಪಂದದಿಂದ ದೇಶದ ಪ್ರತಿ ರೈತನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ರಾಹುಲ್ ಗಾಂಧಿ ಅವರು ಲೋಕಸಭೆ ವಿರೋಧ ಪಕ್ಷದ ನಾಯಕರಾಗಿ ಚರ್ಚೆ ಮಾಡುತ್ತಾರೆ' ಎಂದರು.

'ಬಾಯಿ ಮುಚ್ಚಿಕೊಂಡಿದ್ದರೆ ಒಳ್ಳೆಯದು'


ಶಿವಕುಮಾರ್

ಕಾರವಾರ: 'ಶಾಸಕರಾದ ಇಕ್ಬಾಲ್ ಹುಸೇನ್, ರವಿ ಗಣಿಗ, ಶಿವಗಂಗಾ ಬಸವರಾಜ್ ಸೇರಿ ಕಾಂಗ್ರೆಸ್‌ನ ಕೆಲ ಶಾಸಕರು ಬಾಯಿ ಮುಚ್ಚಿಕೊಂಡಿದ್ದರೆ ನನಗೆ ಒಳ್ಳೆಯದಾಗುತ್ತದೆ' ಎಂದೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದ್ದಾರೆ.

ಕಾರವಾರದಲ್ಲಿ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ವಿದೇಶಕ್ಕೆ ಪ್ರವಾಸ ಹೋದ ಶಾಸಕರೂ ನಮ್ಮವರೆ. ಅವರು ಮರಳಿದ ಬಳಿಕ ಏಕೆ ಹೋಗಿದ್ದರು ಎಂದು ಕೇಳುತ್ತೇನೆ' ಎಂದು ಪ್ರತಿಕ್ರಿಯಿಸಿದರು.

ಇಂದು ನರೇಗಾ ಬಚಾವ್ ಸಮಾವೇಶ

ನರೇಗಾ ಉಳಿಸಿ ಸಮಾವೇಶ ಚಿಕ್ಕಬಳ್ಳಾಪುರದಲ್ಲಿ ಸೋಮವಾರ (ಫೆ. 23) ಹಮ್ಮಿಕೊಂಡಿದ್ದು, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದು ಶಿವಕುಮಾರ್ ಅವರು ಹೇಳಿದರು.

ನರೇಗಾ ರಕ್ಷಣೆಗೆ ಆಗ್ರಹಿಸಿ ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ಪಾದಯಾತ್ರೆ ಮಾಡಲಾಗಿದೆ. ಬಾಕಿ ಇರುವ ಕ್ಷೇತ್ರಗಳಲ್ಲೂ ಮಾಡುತ್ತೇವೆ ಎಂದು ಅವರು ತಿಳಿಸಿದರು.

ಪರೀಕ್ಷೆ ಬರೆದ 8,725 ಅನಕ್ಷರಸ್ಥರು

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ವತಿಯಿಂದ ಜಿಲ್ಲೆಯಾದ್ಯಂತ ಭಾನುವಾರ ಹಮ್ಮಿಕೊಂಡಿದ್ದ ಅಕ್ಷರದ ಸಾಮಾನ್ಯ ಜ್ಞಾನದ ಪರೀಕ್ಷೆಗೆ 8,725 ಅನಕ್ಷರಸ್ಥರು ಹಾಜರಾದರು.

ಅನಕ್ಷರಸ್ಥರನ್ನು ಅಕ್ಷರಸ್ಥರರಾಗಿಸಲು ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆಯು 'ಸಾವಿರ ಗ್ರಾಮ ಪಂಚಾಯಿತಿ ಕಾರ್ಯಕ್ರಮ'ದ ಅಂಗವಾಗಿ ಸಂಜೆ ತರಗತಿಗಳನ್ನು ನಡೆಸಲಾಗುತ್ತಿದೆ. ಈ ತರಗತಿಗೆ ಹಾಜರಾಗಿದ್ದ ಅನಕ್ಷರಸ್ಥರು ಭಾನುವಾರ ಪರೀಕ್ಷೆ ಬರೆದರು.

ಜಿಲ್ಲೆಯ 21 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕಾರ್ಯಕ್ರಮದ ತರಗತಿಗಳು ನಡೆದಿದ್ದವು. ಅಲ್ಲಿಯ ಅನಕ್ಷರಸ್ಥರು, ಭಾನುವಾರ ಪರೀಕ್ಷೆ ಎದುರಿಸಿದರು.

ಬೆಳಿಗ್ಗೆ 8.30ರಿಂದ 10.30ರ ವರೆಗೆ ಮೊದಲನೇ ಪರೀಕ್ಷೆ ನಡೆಯಿತು. ಬೆಳಿಗ್ಗೆ 11.30ರಿಂದ 1.30ರ ವರೆಗೆ ಎರಡನೇ ಅವಧಿಯ ಪರೀಕ್ಷೆ ಹಾಗೂ ಮಧ್ಯಾಹ್ನ 2.30ರಿಂದ 4.30ರ ವರೆಗೆ ಮೂರನೇ ಅವಧಿಯ ಪರೀಕ್ಷೆ ಜರುಗಿತು. ಪರೀಕ್ಷಾರ್ಥಿಗಳು ತಮಗೆ ಬಿಡುವಿದ್ದಾಗ ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿ ಪರೀಕ್ಷೆ ಬರೆದರು.

'ಜಿಲ್ಲೆಯ 101 ಪರೀಕ್ಷಾ ಕೇಂದ್ರಗಳಲ್ಲಿ 440 ಕೊಠಡಿ ಮೇಲ್ವಿಚಾರಕರನ್ನು ನೇಮಿಸಲಾಗಿತ್ತು' ಎಂದು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಬಿ.ಎಂ. ಬೇವಿನಮರದ ಹೇಳಿದರು.

'ಅಕ್ಷರ ಜ್ಞಾನ ಪಡೆದವರ ಕಲಿಕೆ ಖಾತರಿಗೆ ಈ ಪರೀಕ್ಷೆ ನಡೆಸಲಾಗಿದೆ. ಅನಕ್ಷರಸ್ಥರಿಗೆ ಪುಸ್ತಕ, ಪೆನ್ಸಿಲ್, ರಬ್ಬರ್, ನೋಟ್‌ಬುಕ್ ಸೇರಿ ಕಲಿಕಾ ಸಾಮಗ್ರಿಗಳನ್ನು ನೀಡಿ, 6 ತಿಂಗಳು ಕಲಿಕಾಭ್ಯಾಸ ಮಾಡಿಸಲಾಗಿದೆ' ಎಂದರು.

ಪ್ರಿಯಾಂಕ್ ಅವರಲ್ಲಿ ದಲಿತತ್ವ ಇಲ್ಲ: ಛಲವಾದಿ

ಪ್ರಜಾವಾಣಿ ವಾರ್ತೆ


ಛಲವಾದಿ ನಾರಾಯಣ ಸ್ವಾಮಿ

ಬೆಂಗಳೂರು: 'ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರಲ್ಲಿ ದಲಿತತ್ವ ಇಲ್ಲ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರು ಹೇಳುತ್ತಾರೆಯೇ ಹೊರತು ದಲಿತತ್ವ ಅವರ ಕುಟುಂಬದಲ್ಲಿ ಇಲ್ಲ' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

'ಪ್ರಿಯಾಂಕ್ ಅವರು ಅಪ್ಪನ ನೆರಳಿನಲ್ಲಿ ಅಧಿಕಾರ ಅನುಭವಿಸುತ್ತಿದ್ದಾರೆ. ಅವರಿಗೆ ಯಾವ ಬದ್ಧತೆಯೂ ಇಲ್ಲ. ನಿಜವಾದ ರಾಜಕಾರಣಿಯೂ ಅಲ್ಲ' ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

'ಒಳಮೀಸಲಾತಿ ವಿಚಾರವಾಗಿ ಪ್ರಿಯಾಂಕ್ ಈವರೆಗೆ ಒಂದೂ ಮಾತು ಆಡಲಿಲ್ಲ. ಒಳ ಮೀಸಲಾತಿ ನ್ಯೂನತೆಗಳ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಗಮನ ಸೆಳೆದಿದ್ದೆ. ಅನ್ಯಾಯವಾಗುತ್ತಿದೆ ಎಂದು ಮುಖ್ಯಮಂತ್ರಿಯವರಿಗೆ ಸದನದಲ್ಲಿ ಎಚ್ಚರಿಸಿದ್ದೆ. ಆದರೆ, ಅವರು ಗಮನಹರಿಸಲಿಲ್ಲ. ಇದನ್ನು ಸರಿ ಮಾಡಿ ಎಂದು ಡಾ.ಎಚ್.ಸಿ.ಮಹದೇವಪ್ಪ ಅವರಿಗೂ ಹೇಳಿದ್ದೆ. ಅವರೂ ಗಮನಹರಿಸಲಿಲ್ಲ. ಒಳಮೀಸಲಾತಿಯಲ್ಲಿ ಜನಾಂಗಗಳ ಲೋಪ ಇಲ್ಲ. ಅದು ಸರ್ಕಾರದ ಲೋಪ. ಸರ್ಕಾರವೇ ಸರಿ ಮಾಡಬೇಕು' ಎಂದು ಆಗ್ರಹಿಸಿದರು.

'ಕಾಂಗ್ರೆಸ್ ಸಾಮಾಜಿಕ ನ್ಯಾಯದ ವಿರುದ್ಧ ಇದೆ. ಸ್ವಾತಂತ್ರ್ಯ ಬಂದು 80 ವರ್ಷ ಆದರೂ ಅಂದಿನಿಂದ ನೀವು ದಲಿತರನ್ನು ವಂಚನೆ ಮಾಡುತ್ತಾ ಬಂದಿದ್ದೀರಿ. ಪರಮೇಶ್ವರ ಅವರು ಚುನಾವಣೆಯಲ್ಲಿ ಸೋತಾಗ ಕಣ್ಣೀರು ಹಾಕಿದರೆಂದು ಆಗ ಅವರನ್ನು ವಿಧಾನಪರಿಷತ್ ಸದಸ್ಯ ಮಾಡಿ ಮಂತ್ರಿ ಮಾಡಿದಿರಿ. ಉಪಮುಖ್ಯಮಂತ್ರಿ ಮಾಡಲಿಲ್ಲ. ಈ ಬಾರಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆದಾಗ ಪರಮೇಶ್ವರ ಅವರನ್ನು ಉಪಮುಖ್ಯಮಂತ್ರಿ ಮಾಡಬಹುದಿತ್ತು. ಸಾಮಾಜಿಕ ನ್ಯಾಯ ಕಾಂಗ್ರೆಸ್‌ನಲ್ಲಿ ಸತ್ತು ಹೋಗಿದೆ. ಆದರೆ ಬಿಜೆಪಿಯಲ್ಲಿ ಸಾಮಾಜಿಕ ನ್ಯಾಯವಿದೆ. ಹೀಗಾಗಿ ಗೋವಿಂದ ಕಾರಜೋಳ ಅವರನ್ನು ಉಪಮುಖ್ಯಮಂತ್ರಿ ಮಾಡಿದೆವು. ಅಂಬೇಡ್ಕರ್ ಅವರಿಗೆ ಬಿಜೆಪಿ ಕೊಟ್ಟಷ್ಟು ಗೌರವ ಯಾರೂ ನೀಡಿಲ್ಲ' ಎಂದರು.

₹7 ಕೋಟಿ ಹಣ ಅಕ್ರಮವಾಗಿ ವರ್ಗಾವಣೆ

ಒಂದನೇ ಪುಟದಿಂದ...

'ಕಡಿಮೆ ಮೊತ್ತ ಇರುವ ಕಾರಣ ತನ್ನ ಖಾತೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದ್ದ ಆಯುಷ್, ಕೆಲವು ದಿನಗಳ ಮಟ್ಟಿಗೆ ಬಳಸಲು ವಿದ್ಯಾರ್ಥಿಯ ಖಾತೆಯ ವಿವರವನ್ನು ಕೇಳಿದ್ದಾನೆ. ಇಬ್ಬರೂ ಸ್ನೇಹಿತರಾಗಿದ್ದರಿಂದ ವಿದ್ಯಾರ್ಥಿ, ತನ್ನ ಕರ್ನಾಟಕ ಗ್ರಾಮೀಣ ಬ್ಯಾಂಕ್ ಪಾಸ್‌ಬುಕ್, ಎಟಿಎಂ ಕಾರ್ಡ್, ನೆಟ್ ಬ್ಯಾಂಕಿಂಗ್ ವಿವರಗಳು ಮತ್ತು ಖಾತೆಗೆ ಲಿಂಕ್ ಆಗಿದ್ದ ಏರ್‌ಟೆಲ್ ಸಿಮ್ ಕಾರ್ಡ್ ಅನ್ನು ಆಯುಷ್‌ಗೆ ನೀಡಿದ್ದಾನೆ. ವಿದ್ಯಾರ್ಥಿಗೆ ತನ್ನ ಖಾತೆ ದುರುಪಯೋಗ ಆಗಿರುವ ಬಗ್ಗೆ ಅರಿವು ಇರಲಿಲ್ಲವೆಂದು ತೋರುತ್ತಿದೆ. ತನಿಖೆ ಪ್ರಗತಿಯಲ್ಲಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ನಂತರ ಬ್ಯಾಂಕ್ ಪ್ರತಿನಿಧಿಗಳು ವಿದ್ಯಾರ್ಥಿಯ ನಿವಾಸಕ್ಕೆ ಭೇಟಿ ನೀಡಿ, ಸೈಬರ್ ವಂಚಕರು ₹7 ಕೋಟಿ ಹಣ ವಹಿವಾಟು ನಡೆಸಿರುವುದರಿಂದ ಖಾತೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದ್ದಾರೆ.

'ದೊಡ್ಡ ಮೊತ್ತದ ವಹಿವಾಟು ಕೇವಲ ಎರಡು ದಿನಗಳಲ್ಲಿ ನಡೆದಿದ್ದರಿಂದ, ಬ್ಯಾಂಕ್ ಅಧಿಕಾರಿಗಳು ಪರಿಶೀಲನೆ ನಡೆಸಿದರು. ವಿದ್ಯಾರ್ಥಿ ಹೆಸರಿನಲ್ಲಿ ಖಾತೆ ಇದ್ದುದರಿಂದ ಭೌತಿಕ ಪರಿಶೀಲನೆ ಪ್ರಾರಂಭವಾಯಿತು. ಅಲ್ಲದೆ, ಶಂಕಾಸ್ಪದ ವಹಿವಾಟುಗಳ ಬಗ್ಗೆ ಕೇಂದ್ರ ಸರ್ಕಾರದಿಂದ ಬ್ಯಾಂಕ್‌ಗಳಿಗೆ ಎಚ್ಚರಿಕೆ ಸಂದೇಶಗಳು ಬರುತ್ತವೆ. ಇದರಿಂದ ಹಣದ ಅಕ್ರಮ ವರ್ಗಾವಣೆಯನ್ನು ತಡೆಯಬಹುದು. ಬಳಿಕ ಬ್ಯಾಂಕ್‌ಗೆ ಲಿಂಕ್ ಆಗಿದ್ದ ಫೋನ್ ನಂಬರ್ ಬದಲಿಸಿರುವ ಕಾರಣ ಸಂತ್ರಸ್ತ ಯುವಕನಿಗೆ ವಹಿವಾಟಿನ ಬಗ್ಗೆ ಸಂದೇಶಗಳು ಬಂದಿಲ್ಲ' ಎಂದು ಅಧಿಕಾರಿ ತಿಳಿಸಿದರು.

'ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಲು ಮ್ಯೂಲ್ ಅಕೌಂಟ್ (ನಕಲಿ ಖಾತೆಗಳು) ಬಳಸುತ್ತಿರುವ ಅನುಮಾನದ ಮೇಲೆ ಶನಿವಾರ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ. ಆಯುಷ್ ವಿದ್ಯಾರ್ಥಿಯ ಬ್ಯಾಂಕ್ ಖಾತೆಯನ್ನು ಟೆಲಿಗ್ರಾಂ ಮೂಲಕ ವಿದೇಶದಲ್ಲಿರುವ ಸೈಬರ್ ಅಪರಾಧಿಗಳಿಗೆ ನೀಡಿರುವ ಅನುಮಾನವಿದೆ. ಬ್ಯಾಂಕ್‌ನಲ್ಲಿ ನಕಲಿ ಖಾತೆಗಳನ್ನು ತೆರೆದು ಜನರಿಗೆ ವಂಚಿಸುತ್ತಿದ್ದ ಸೈಬರ್ ಜಾಲದ ವಿರುದ್ಧ ರಾಜ್ಯ ಸೈಬರ್ ಕಮಾಂಡ್ ಘಟಕದ ಅಧಿಕಾರಿಗಳು ವಿಶೇಷ ಕಾರ್ಯಾಚರಣೆ ಮುಂದುವರಿಸಿದ್ದಾರೆ' ಎಂದರು.

ಜೂನ್ ಒಳಗೆ ಜಿ.ಪಂ, ತಾ.ಪಂ ಚುನಾವಣೆ

ಒಂದನೇ ಪುಟದಿಂದ...

ಗೋಕರ್ಣ ಸ್ಥಳೀಯ ಸಂಸ್ಥೆಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ ಏರಿಸಬೇಕು ಎಂಬ ಬೇಡಿಕೆ ಉಲ್ಲೇಖಿಸಿ ಈ ಮಾತು ಹೇಳಿದ ಅವರು, 'ಚುನಾವಣೆ ಮುಗಿಯುವವರೆಗೆ ಇದು ಸಾಧ್ಯವಾಗದು' ಎಂದರು.

'ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬ ಪ್ರಸ್ತಾವವನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ. ಈ ಕುರಿತು ಮರು ಪ್ರಸ್ತಾವ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಯಾವುದೇ ಸಮುದಾಯವನ್ನು ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರ್ಪಡೆಗೊಳಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ' ಎಂದೂ ಹೇಳಿದರು.

ಕರಾವಳಿಗೆ ಹೊಸ ನೀತಿ: ಇದೇ ಕಾರ್ಯಕ್ರಮದಲ್ಲಿ ಮಾತನಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, 'ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ನೀತಿ ರೂಪಿಸಲಾಗುತ್ತಿದೆ' ಎಂದರು.

'ಮಿತಿ ಮೀರಿದ ಕಾಂಗ್ರೆಸ್ ಗೂಂಡಾಗಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಗೂಂಡಾಗಿರಿ ರಾಜ್ಯದಲ್ಲಿ ಮಿತಿ ಮೀರಿದೆ. ಎಲ್ಲವನ್ನೂ ಕಾದು ನೋಡುತ್ತಿರುವ ಕನ್ನಡಿಗರು ಸುಮ್ಮನೆ ಕೂರುವವರಲ್ಲ. ಕಾಂಗ್ರೆಸ್ ಪಕ್ಷವನ್ನು ರಾಜ್ಯದಿಂದ ಒದ್ದು ಓಡಿಸುವ ಕಾಲ ದೂರವಿಲ್ಲ'ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಎಚ್ಚರಿಸಿದ್ದಾರೆ.

ದೆಹಲಿಯಲ್ಲಿ ಎಐ ಶೃಂಗದಲ್ಲಿ ದೇಶದ ಮರ್ಯಾದೆಯನ್ನು ಹಾಳು ಮಾಡಲು ಹೋಗಿದ್ದ ಕಾಂಗ್ರೆಸ್ಸಿಗರಿಗೆ ಸಾರ್ವಜನಿಕರೇ ಬೂಟುಗಾಲಿನಲ್ಲಿ ಒದ್ದು ಹೊರಗೆ ಹಾಕಿದ್ದಾರೆ. ಇಲ್ಲೂ ಅದೇ ಆಗಲಿದೆ ಎಂದು ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

ತಾಮ್ರ ಗಣಿ ಪುನರಾರಂಭಕ್ಕೆ ಅಧ್ಯಯನ

ಚಿನ್ನದ ಬೆಲೆ ಏರಿಕೆಯಿಂದ ತಾಮ್ರಕ್ಕೆ ಹೆಚ್ಚಿದೆ ಬೇಡಿಕೆ, ಮತ್ತೆ ಆರಂಭಗೊಳ್ಳುವುದೇ ಗಣಿ?

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಚಿನ್ನದ ಬೆಲೆ ಗಗನಕ್ಕೇರಿರುವ ಹೊತ್ತಿನಲ್ಲಿ ಚಿನ್ನ ತಯಾರಿಕೆಗೆ ಪ್ರಮುಖ ಕಚ್ಚಾ ವಸ್ತುವಾಗಿರುವ ತಾಮ್ರಕ್ಕೆ ತೀವ್ರ ಬೇಡಿಕೆ ಸೃಷ್ಟಿಯಾಗಿದ್ದು, ನಗರದ ಹೊರವಲಯದಲ್ಲಿರುವ ಇಂಗಳದಾಳು ತಾಮ್ರ ಗಣಿಯಲ್ಲಿ ಗಣಿಗಾರಿಕೆ ಪುನಾರಂಭಿಸುವ ಸಂಬಂಧ ಕಾರ್ಯಸಾಧ್ಯತಾ ಪರೀಕ್ಷೆ ಆರಂಭಗೊಂಡಿದೆ.

ಇಂಗಳದಾಳು ಗುಡ್ಡದಲ್ಲಿ 1994ರವರೆಗೂ ವ್ಯಾಪಕ ತಾಮ್ರ ಗಣಿಗಾರಿಕೆ ನಡೆದಿತ್ತು. ತಾಮ್ರಕ್ಕೆ ಬೇಡಿಕೆ ಕಡಿಮೆಯಾದ ಕಾರಣ 1990ರ ದಶಕದಲ್ಲಿ ಗಣಿಗಾರಿಕೆ ಸ್ಥಗಿತಗೊಂಡಿತ್ತು. ಅದೇ ಗಣಿಯಲ್ಲಿ ಮತ್ತೆ ಗಣಿಗಾರಿಕೆ ಸಾಧ್ಯವೇ? ಎಂದು ಕೇಂದ್ರ ಸರ್ಕಾರಿ ಸ್ವಾಮ್ಯದ ಮೆಕಾನ್ ಇಂಡಿಯಾ ಕಂಪನಿ ತಜ್ಞರು ಅಧ್ಯಯನ ನಡೆಸಿದ್ದಾರೆ.

ಶಾತವಾಹನರ ಕಾಲದಲ್ಲೇ ಚಂದ್ರವಳ್ಳಿ ಪ್ರದೇಶದಲ್ಲಿ ತಾಮ್ರದ ನಾಣ್ಯ ಠಂಕಿಸಲಾಗುತ್ತಿತ್ತು. ಇಲ್ಲಿ ಚಿನ್ನ ಸಿಗುತ್ತಿದ್ದ ಕಾರಣ ಚಿನ್ನದ ಗಿರಿ ಎನ್ನಲಾಗುತ್ತಿತ್ತು. ನಂತರ ಚಿತ್ರದುರ್ಗವಾಯಿತು ಎಂದು ಇತಿಹಾಸ ಹೇಳುತ್ತದೆ. ಶಾತವಾಹನರ ಕಾಲದ ತಾಮ್ರದ ನಾಣ್ಯಗಳು ಈಗಲೂ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲದಲ್ಲಿವೆ.

ರಾಜ್ಯ ಸರ್ಕಾರ 1965ರಲ್ಲಿ ತಾಮ್ರದ ಗಣಿಗಾರಿಕೆ ಆರಂಭಿಸಿತು. 1994ರವರೆಗೆ ಇಲ್ಲಿ ಹೊರತೆಗೆದ ತಾಮ್ರ ವಿವಿಧೆಡೆ ರವಾನೆಯಾಗುತ್ತಿತ್ತು. ಹಿಂದೂಸ್ಥಾನ್ ಕಾಪರ್ ಲಿಮಿಟೆಡ್ (ಎಚ್‌ಸಿಎಲ್) ತಾಮ್ರ ಖರೀದಿಸುತ್ತಿತ್ತು. ನಂತರ ತಾಮ್ರಕ್ಕೆ ಬೇಡಿಕೆ ಕುಸಿದ ಕಾರಣ ಎಚ್‌ಸಿಎಲ್ ಖರೀದಿ ನಿಲ್ಲಿಸಿತು, ಗಣಿಗಾರಿಕೆ ನಿಂತು ಹೋಯಿತು.


ಬಳಿಕ ತಾಮ್ರದ ಗಣಿಯು ಹಟ್ಟಿ ಚಿನ್ನದ ಗಣಿ ನಿಯಮಿತ (ಎಚ್‌ಜಿಎಂಎಲ್) ದೊಂದಿಗೆ ವಿಲೀನಗೊಂಡಿತು. 1992ರಿಂದ 2002ರವರೆಗೆ ಎಚ್‌ಜಿಎಂಎಲ್ ಚಿತ್ರದುರ್ಗ ಚಿನ್ನದ ಗಣಿ (ಸಿಜಿಯು) ಹೆಸರಲ್ಲಿ ಅಲ್ಪಪ್ರಮಾಣದಲ್ಲಿ ಚಿನ್ನವನ್ನೂ ತೆಗೆಯಿತು. ನಂತರ ಅದೂ ಸ್ಥಗಿತಗೊಂಡಿತ್ತು.

ಕಳೆದ ಸೆಪ್ಟೆಂಬರ್ 9ರಂದು ಶಾಸಕ ಕೆ.ಸಿ. ವೀರೇಂದ್ರ ಅವರು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆಗಳ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ಪತ್ರ ಬರೆದು ತಾಮ್ರ ಗಣಿ ಪುನರಾರಂಭಕ್ಕೆ ಕೋರಿದ್ದರು. ಈ ಕುರಿತು ಪರಿಶೀಲಿಸುವಂತೆ ಸಚಿವರು ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಇಲಾಖೆಯನ್ನು ಕೋರಿದ್ದರು. ಸಚಿವ ಕಿಶನ್ ರೆಡ್ಡಿ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಗಣಿಗಾರಿಕೆ ಆರಂಭದ ಸಾಧ್ಯತೆಗಳನ್ನು ಪರಿಶೀಲಿಸುವಂತೆ ಸೂಚಿಸಿದ್ದರು.

ಕಳೆದೆರಡು ತಿಂಗಳಿಂದ ಕಾರ್ಯಸಾಧ್ಯತಾ ಪರೀಕ್ಷೆ ಆರಂಭಗೊಂಡಿದೆ. ಗಣಿ ಸಮೀಪದಲ್ಲಿಯೇ ಘೋಷಿತ ಅರಣ್ಯ, ಜೋಗಿಮಟ್ಟಿ ವನ್ಯಜೀವಿ ಧಾಮವೂ ಇರುವುದರಿಂದ ಇಲ್ಲಿ ತಾಮ್ರಗಣಿ ಪುನಾರಂಭಿಸಬಹುದೇ ಎಂಬ ಕುರಿತೂ ಅಧ್ಯಯನ ನಡೆಯುತ್ತಿದೆ ಎಂದು ಹಟ್ಟಿ ಚಿನ್ನದ ಗಣಿ ನಿಯಮಿತದ ಅಧಿಕಾರಿಗಳು ತಿಳಿಸಿದರು.

ಮುಖ್ಯಾಂಶಗಳು

- ಇಂಗಳದಾಳು 1994ರವರೆಗೂ ವ್ಯಾಪಕ ತಾಮ್ರ ಗಣಿಗಾರಿಕೆ
- ಮತ್ತೆ ಗಣಿಗಾರಿಕೆಗೆ ನಡೆಸಲು ಯತ್ನ
- ಮೆಕಾನ್ ಇಂಡಿಯಾ ಕಂಪನಿ ತಜ್ಞರಿಂದ ಅಧ್ಯಯನ



ಚಿತ್ರದುರ್ಗದ ಹೊರವಲಯದಲ್ಲಿರುವ ಇಂಗಳದಾಳು ತಾಮ್ರ ಗಣಿ ಪ್ರದೇಶದಲ್ಲಿದ್ದ ಕಚೇರಿಯ ಕಟ್ಟಡದ ನೋಟ ಪ್ರಜಾವಾಣಿ ಚಿತ್ರ– ಚಂದ್ರಪ್ಪ ವಿ

> ಎರಡು ತಿಂಗಳಲ್ಲಿ ಕಾರ್ಯಸಾಧ್ಯತಾ ಪರೀಕ್ಷೆ ವರದಿ ಬರಲಿದೆ. ಅದನ್ನು ಆಡಳಿತ ಮಂಡಳಿ ಸಭೆಯಲ್ಲಿ ಅಂಗೀಕರಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು
>
> **ಸಂಜೀವ್ ಸೋಲಂಕರ್**
> ಭೂ ಅನ್ವೇಷಣಾ ವ್ಯವಸ್ಥಾಪಕ, ಹಟ್ಟಿ ಚಿನ್ನದ ಗಣಿ ನಿಯಮಿತ

ಹೊಸ ತಂತ್ರಜ್ಞಾನ ಅಳವಡಿಕೆ ಅವಶ್ಯ

‘ಇಂಗಳದಾಳು ತಾಮ್ರ ಗಣಿ ಉತ್ತುಂಗದ ಸ್ಥಿತಿಯನ್ನು ಕಂಡಿದ್ದೇನೆ. 2 ಕಿ.ಮೀ ವ್ಯಾಪ್ತಿಯ ಗಣಿ ಸುರಂಗದೊಳಗೆ ಓಡಾಡಿದ್ದೇನೆ. ಈಗಲೂ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಪರಿಸರಕ್ಕೆ ಧಕ್ಕೆಯಾಗದಂತೆ ಗಣಿಗಾರಿಕೆ ಸಾಧ್ಯವಿದೆ. ಇದು ಸರ್ಕಾರಕ್ಕೆ ಆರ್ಥಿಕ ಶಕ್ತಿಯಾಗಲಿದೆ, ಉದ್ಯೋಗಕ್ಕೂ ದಾರಿಯಾಗಲಿದೆ’ ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿವೃತ್ತ ಭೂವಿಜ್ಞಾನಿ ಜೆ.ಪರಶುರಾಮ ಅವರು ಈ ಕುರಿತು ಪ್ರತಿಕ್ರಿಯಿಸಿದರು.

ಚಿಟಿಕೆ ಸುದ್ದಿ

ಒಂದೇ ಕಡೆ ಸಿಕ್ಕ 6 ಹೆಬ್ಬಾವುಗಳು



ಕಾರವಾರ: ನಗರದ ಕಠಿಣಕೋಣದ ವಿಜಯ ತಳೇಕರ ಎಂಬುವವರ ಮನೆಯ ಆವರಣದಲ್ಲಿ ಭಾನುವಾರ 6 ಹೆಬ್ಬಾವುಗಳು ಕಾಣಿಸಿಕೊಂಡಿವೆ.

ಕಬ್ಬಿಣದ ಸಾಮಗ್ರಿಗಳ ನಡುವೆ ಹೆಬ್ಬಾವುಗಳು ನೆಲೆಯೂರಿದ್ದವು. ಅರಣ್ಯ ಇಲಾಖೆಯ ಗಸ್ತು ವನಪಾಲಕ ಗೋಪಾಲ ನಾಯ್ಕ ಮತ್ತು ರಾಜೇಶ ನಾಯ್ಕ ಹಾವುಗಳನ್ನು ಸೆರೆಹಿಡಿದು, ಕಾಡಿಗೆ ಬಿಟ್ಟಿದ್ದಾರೆ.

‘ಈ ಹೆಬ್ಬಾವುಗಳು 8 ರಿಂದ 12 ಅಡಿ ಉದ್ದವಿದ್ದವು. ಬೇಸಿಗೆಯ ಆರಂಭ ಹಾವುಗಳ ಸಂತಾನೋತ್ಪತ್ತಿಯ ಅವಧಿ. ಹೀಗಾಗಿ, ಒಂದೇ ಕಡೆ ಇಷ್ಟು ಹಾವು ಕಾಣಿಸಿಕೊಂಡಿವೆ’ ಎಂದು ಗೋಪಾಲನಾಯ್ಕ ಹೇಳಿದರು.

ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ: ಶ್ರೀರಾಮುಲು

ಬಾಗಲಕೋಟೆ: ‘ಕಲ್ಲು ತೂರಾಟ ಮಾಡಿದವರು, ಅವರಿಗೆ ಕುಮ್ಮಕ್ಕು ನೀಡಿದವರನ್ನು ಬಂಧಿಸಬೇಕು. ಅದು ಬಿಟ್ಟು, ಹಿಂದೂ ಕಾರ್ಯಕರ್ತರ ಬಂಧನ ಏಕೆ’ ಎಂದು ಮಾಜಿ ಸಚಿವ ಶ್ರೀರಾಮುಲು ಪ್ರಶ್ನಿಸಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಿಡಿಗೇಡಿ ಮುಸ್ಲಿಮರನ್ನು ಬಂಧಿಸುವವರೆಗೂ ಬಿಡುವುದಿಲ್ಲ. ಅವರನ್ನು ಗಡಿಪಾರು ಮಾಡಬೇಕು. ಅವರ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಗಲಾಟೆ ತಡೆಯುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ’ ಎಂದು ಟೀಕಿಸಿದರು.


ಶ್ರೀರಾಮುಲು

‘ಕಲ್ಲು ತೂರಾಟ ಪ್ರಕರಣದಲ್ಲಿ ಮಸೀದಿಯ ಸಮಿತಿಯಲ್ಲಿ ಇರುವವರೂ ಶಾಮೀಲಾಗಿದ್ದಾರೆ. ಇದೊಂದು ಪೂರ್ವನಿಯೋಜಿತ ಕೃತ್ಯ’ ಎಂದು ಆರೋಪಿಸಿದರು.

ಸುದ್ದಿ 2 ನಿಮಿಷ

ಮೈಸೂರು: ಬೇಸಿಗೆಯಲ್ಲೂ ಮಳೆಯ ಸಿಂಚನ

ಮೈಸೂರು: ನಗರ ಸೇರಿದಂತೆ ಜಿಲ್ಲೆಯಾದ್ಯಂತ ಭಾನುವಾರ ತಡರಾತ್ರಿ ಎರಡು ತಾಸು ಉತ್ತಮ ಮಳೆಯಾಯಿತು. ಮೈಸೂರು ನಗರದಲ್ಲಿ ಮಧ್ಯರಾತ್ರಿ ಜೋರು ವರ್ಷಧಾರೆಯಾಯಿತು.

ಬೇಸಿಗೆಯ ಆರಂಭದಲ್ಲೇ ಮಧ್ಯರಾತ್ರಿ ಅಕಾಲಿಕ ಮಳೆಯಿಂದ ಜನರು ಪುಳಕಗೊಂಡರು. ರಸ್ತೆಗಳು ಮಳೆನೀರಿನಿಂದ ತುಂಬಿದವು. ಶಿವರಾತ್ರಿ ನಂತರದಲ್ಲಿ ಸೆಖೆ ಹೆಚ್ಚಾಗಿದ್ದು, ವರುಣ ಸಿಂಚನವು ಬೇಗೆ ನೀಗಿಸಿತು.

ಗ್ರಾಮೀಣ ಭಾಗದಲ್ಲಿಯೂ ಉತ್ತಮ ಮಳೆ ಬಿದ್ದಿದ್ದು, ಹೊಲಗಳಲ್ಲಿ ನೀರು ನಿಂತಿತ್ತು. ಮಾವಿನ ಮರಗಳಲ್ಲಿ ಕಾಯಿಗಳು ಬಲಿಯುವ ಹಂತದಲ್ಲಿದ್ದು, ಮಾವು ಕೃಷಿಗೆ ಮಳೆ ವರದಾನವಾಗಿದೆ.

ಮಂಡ್ಯ ಜಿಲ್ಲೆಯ ವಿವಿಧೆಡೆ, ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಕೊಣನೂರು ಭಾಗದಲ್ಲಿ ಜೋರು ಗಾಳಿ ಸಹಿತ ತುಂತುರು ಮಳೆಯಾಯಿತು. ಕೊಡಗು ಜಿಲ್ಲೆಯ ಸುಂಟಿಕೊಪ್ಪ ತುಂತುರು ಮಳೆ ಬಿದ್ದಿತು.

ಉಚಿತ ಶಿಕ್ಷಣ: ಪರೀಕ್ಷೆ ಬರೆದ 20,146 ವಿದ್ಯಾರ್ಥಿಗಳು



ಮೂಡುಬಿದಿರೆ: ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯಲ್ಲಿ 2026-27ನೇ ಸಾಲಿಗೆ 6 ರಿಂದ 9ನೇ ತರಗತಿಯ ಉಚಿತ ಶಿಕ್ಷಣ ಸೌಲಭ್ಯದಡಿ ಪ್ರವೇಶಕ್ಕಾಗಿ ಭಾನುವಾರ ನಡೆದ ಪ್ರವೇಶ ಪರೀಕ್ಷೆಗೆ ವಿವಿಧ ಜಿಲ್ಲೆಗಳಿಂದ 20,146 ವಿದ್ಯಾರ್ಥಿಗಳು ಹಾಜರಾದರು.

6ನೇ ತರಗತಿಗೆ 16,014, 7ನೇ ತರಗತಿಗೆ 1,374, 8ನೇ ತರಗತಿಗೆ 1,983 ಹಾಗೂ 9ನೇ ತರಗತಿಗೆ ಪ್ರವೇಶ ಬಯಸಿ 775 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಇವರಲ್ಲಿ ಬೆಳಗಾವಿ ಜಿಲ್ಲೆಯ 7,353, ಬಾಗಲಕೋಟೆ ಜಿಲ್ಲೆಯ 4,080 ಹಾಗೂ ವಿಜಯಪುರ ಜಿಲ್ಲೆಯ 2,961 ವಿದ್ಯಾರ್ಥಿಗಳಿದ್ದರು.

ಅರ್ಜಿಯನ್ನು ಸಲ್ಲಿಸಲು ಕ್ಯು ಆರ್ ಕೋಡ್ ಸಹಿತವಾಗಿ ಆನ್‌ಲೈನ್‌ನಲ್ಲಿ ವ್ಯವಸ್ಥೆ ಮಾಡಲಾಗಿತ್ತು. 5 ಕೇಂದ್ರಗಳಲ್ಲಿ ಪರೀಕ್ಷೆ ನಡೆದವು.

ಕನ್ನಡ ಮಾಧ್ಯಮದಲ್ಲಿ ಉಚಿತ ಶಿಕ್ಷಣ ಸೌಲಭ್ಯದಡಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ, ವಿದ್ಯಾರ್ಥಿನಿಲಯ, ಪಠ್ಯಪುಸ್ತಕ ಉಚಿತವಾಗಿ ನೀಡಲಾಗುತ್ತದೆ. ಸದ್ಯ ಕನ್ನಡ ಮಾಧ್ಯಮ ಶಾಲೆಯಲ್ಲಿ 6ರಿಂದ 10ನೇ ತರಗತಿಯವರೆಗೆ 750ಕ್ಕೂ ಅಧಿಕ ಮಕ್ಕಳು ಸೌಲಭ್ಯ ಪಡೆಯುತ್ತಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

‘ಬಾಗಲಕೋಟೆ ಚಲೋ’ 26ರಂದು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆ ಮೇಲಿನ ಕಲ್ಲು, ಚಪ್ಪಲಿ ತೂರಾಟ ಖಂಡಿಸಿ ಫೆ.26ರಂದು ‘ಬಾಗಲಕೋಟೆ ಚಲೋ’ ಹೆಸರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲು ಹಿಂದೂ ಮುಖಂಡರು ಕರೆದಿದ್ದ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಚರಂತಿಮಠದ ಶಿವಾನುಭವ ಮಂಟಪದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಮಾತನಾಡಿದ ಹಿಂದೂ ಜಾಗರಣ ವೇದಿಕೆ ಮುಖಂಡ ಕುಮಾರ ಸ್ವಾಮಿ ಹಿರೇಮಠ, ‘ಫೆ.26ರಂದು ಬೆಳಿಗ್ಗೆ 10ಕ್ಕೆ ಕಿಲ್ಲಾದ ಅಂಬಾ ಭವಾನಿ ದೇವಸ್ಥಾನದಿಂದ ಬೃಹತ್ ಮೆರವಣಿಗೆ ಮಾಡಲಾಗುತ್ತದೆ’ ಎಂದರು.

ವಕೀಲ ಕಿರಣ ಪವಾಡಶೆಟ್ಟರ್ ಅವರು, ‘ಘಟನೆಗೆ ಸಂಬಂಧಿಸಿ 8 ಜನರನ್ನು ಬಂಧಿಸಿದರೆ ಸಾಲದು. ಮಸೀದಿಯಲ್ಲಿ ಸೇರಿದ್ದವರು, ಮಸೀದಿಯ ಮೌಲ್ವಿ ಹಾಗೂ ಸಮಿತಿ ಪದಾಧಿಕಾರಿಗಳ ಮೇಲೂ ಪ್ರಕರಣ ದಾಖಲಿಸಿ ಬಂಧಿಸಬೇಕೆಂಬ ಬೇಡಿಕೆಯನ್ನಿಟ್ಟು ಗಡುವು ನೀಡಲಾಗಿತ್ತು. ಆದರೆ, ಪೊಲೀಸರು ಕ್ರಮಕ್ಕೆ ಮುಂದಾಗಿಲ್ಲ. ಅದಕ್ಕೇ ಪ್ರತಿಭಟನೆ ಮಾಡಲಾಗುತ್ತಿದೆ’ ಎಂದರು.

ಅಲ್ಲದೆ, ಅದೇ ಮಾರ್ಗದಲ್ಲಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆ ಮಾಡಲಾಗುವುದು ಎಂದರು.

ಸಂಸದರಾದ ಪಿ.ಸಿ.ಗದ್ದಿಗೌಡರ, ಗೋವಿಂದ ಕಾರಜೋಳ, ರಾಜ್ಯಸಭೆ ಸದಸ್ಯ ನಾರಾಯಣ ಭಾಂಡಗೆ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್. ಪೂಜಾರ, ಹಣಮಂತ ನಿರಾಣಿ, ಮಾಜಿ ಶಾಸಕ ವೀರಣ್ಣ ಚರಂತಿಮಠ, ಅರುಣ ಶಹಾಪುರ ಭಾಗಿಯಾಗಿದ್ದರು.

ಜಾತ್ರೆ ಸಂಭ್ರಮ...

ಪ್ರಜಾವಾಣಿ ಚಿತ್ರ: ರಾಜಕುಮಾರ ನಳ್ಳಿಕರ


ಯಾದಗಿರಿ ತಾಲ್ಲೂಕಿನ ಅಬ್ಬೆ ತುಮಕೂರಿನ ವಿಶ್ವಾರಾಧ್ಯರ ಜಾತ್ರೆಯ ಅಂಗವಾಗಿ ಭಾನುವಾರ ಸಂಜೆ ಜರುಗಿದ ರಥೋತ್ಸವದಲ್ಲಿ ಸೇರಿದ್ದ ಭಕ್ತಸಮೂಹ

ನವಿತಾಗೆ ‘ಕ್ವೀನ್ ಎಲಿಜಬೆತ್’ ಪ್ರಶಸ್ತಿ

ಮಡಿಕೇರಿ: ಮಡಿಕೇರಿಯ ಡಾ.ಕನ್ನಂಡ ನವಿತಾ ಸೋಮಯ್ಯ ಅವರು ಸ್ತನ ಕ್ಯಾನ್ಸರ್ ಕುರಿತು ನಡೆಸಿದ ಸಂಶೋಧನೆಗಾಗಿ ಯುನೈಟೆಡ್ ಕಿಂಗ್‌ಡಮ್‌ನ ಶೈಕ್ಷಣಿಕ ಮತ್ತು ಸಂಶೋಧನಾ ವಲಯದ ಅತ್ಯುನ್ನತ ರಾಷ್ಟ್ರೀಯ ಗೌರವ ‘ಕ್ವೀನ್ ಎಲಿಜಬೆತ್’ ಪ್ರಶಸ್ತಿ ಲಭಿಸಿದೆ.


ನವಿತಾ

ಅವರು ಲಂಡನ್‌ನ ‘ಇನ್‌ಸ್ಟಿಟ್ಯೂಟ್ ಆಫ್ ಕ್ಯಾನ್ಸರ್ ರಿಸರ್ಚ್’ (ಐಸಿಆರ್)ನಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಈ ಸಂಸ್ಥೆಯಲ್ಲಿನ ಒಟ್ಟು 8 ವಿಜ್ಞಾನಿಗಳು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಫೆ.24ರಂದು ಬೆಳಿಗ್ಗೆ 11.30ಕ್ಕೆ ಸೇಂಟ್ ಜೇಮ್ಸ್ ಪ್ಯಾಲೇಸ್‌ನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಅವರು ಮಡಿಕೇರಿಯ ಕನ್ನಂಡ ಪೊನ್ನಪ್ಪ ಸೋಮಯ್ಯ ಹಾಗೂ ಡಾ.ಕನ್ನಂಡ ನಿರ್ಮಲಾ ಸೋಮಯ್ಯ (ತಾಯಿ ಮನೆ: ನಾಯಕಂಡ) ದಂಪತಿಯ ಪುತ್ರಿ. ಪ್ರಸ್ತುತ ಅವರು ಐಸಿಆರ್‌ನಲ್ಲಿ ವಿಜ್ಞಾನಿ ಹಾಗೂ ಗ್ರೂಪ್ ಲೀಡರ್ ಆಗಿದ್ದಾರೆ. 65ಕ್ಕೂ ಹೆಚ್ಚು ಸಂಶೋಧನಾ ಮತ್ತು 6 ಅಧ್ಯಯನ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ತಿಪ್ಪೆಯಲ್ಲಿ ಸರ್ಕಾರಿ ಆಸ್ಪತ್ರೆ ಔಷಧ ಪತ್ತೆ

ಪ್ರಜಾವಾಣಿ ವಾರ್ತೆ

ರಾಯಚೂರು: ಇಲ್ಲಿನ ಜಲಾಲ್ ನಗರಕ್ಕೆ ಹೋಗುವ ರಸ್ತೆಯ ಸ್ಮಶಾನದ ಬಳಿ, ಅವಧಿ ಮುಗಿಯದ ಕೆಮ್ಮು, ನೆಗಡಿಯ ಟಾನಿಕ್, ಸಿರಿಂಜ್ ಸೇರಿ ಇತರೆ ಔಷಧಿಗಳನ್ನು ತಿಪ್ಪೆಯಲ್ಲಿ ಬಿಸಾಡಿದ್ದು, ಭಾನುವಾರ ಕಂಡುಬಂದಿದೆ.

ರಾಶಿ ರಾಶಿ ಸಿರಿಂಜ್, ಚಿಕ್ಕ ಮಕ್ಕಳ ಕೆಮ್ಮಿನ ಸಿರಪ್ ಕಂಡು ಸ್ಥಳೀಯ ಯುವಕರು ಆರೋಗ್ಯ ಇಲಾಖೆಯ ಗಮನಕ್ಕೆ ತಂದಿದ್ದಾರೆ.

ರಿಮ್ಸ್ ಆಸ್ಪತ್ರೆ, ನಮ್ಮ ಕ್ಲಿನಿಕ್ ಸೇರಿ ಸರ್ಕಾರಿ ಆಸ್ಪತ್ರೆಗಳಲ್ಲಿ ಹೊರ ರೋಗಿಗಳಿಗೆ ಔಷಧಿ ಹೊರಗೆ ಖರೀದಿಸಲು ಆಸ್ಪತ್ರೆಯ ವೈದ್ಯರು ಚೀಟಿ ಬರೆದು ಕೊಡುತ್ತಾರೆ. ಆದರೆ, ಸ್ಮಶಾನದ ಬಳಿ ತಿಪ್ಪೆಯಲ್ಲಿ ಔಷಧಿ ಬಿಸಾಕಿ ಹಾಳು ಮಾಡಿದ್ದು ಖಂಡನೀಯ ಎಂದು ಸ್ಥಳೀಯರು ಆಕ್ರೋಶ ಹೊರಹಾಕಿದರು.

ಆರೋಗ್ಯಾಧಿಕಾರಿ ಭೇಟಿ: ವಿಷಯ ತಿಳಿದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸುರೇಂದ್ರ ಬಾಬು ಔಷಧ ನಿಯಂತ್ರಕ ಅಧಿಕಾರಿಗಳು, ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.



ತಿಪ್ಪೆಯಲ್ಲಿ ಪತ್ತೆಯಾದ ಸರ್ಕಾರಿ ಆಸ್ಪತ್ರೆಯ ಔಷಧಿಗಳು

ಇಲ್ಲಿ ಬಿಸಾಡಿರುವ ಕಾಫ್ ಸಿರಪ್ ಫಿಜಿಷಿಯನ್ ಸ್ಯಾಂಪಲ್ ಅಂತಿದೆ. ಕೆಲವು ಬಯಾಲಾಜಿಕಲ್ ಲಿಮಿಟೆಡ್, ಸಿರಿಂಜ್ ಗವರ್ನಮೆಂಟ್ ಸಪ್ಲೈ ಅಂತಿದೆ. ಈ ಔಷಧಿಗಳು ಎಲ್ಲಿಂದ, ಹೇಗೆ ಬಂದಿದೆ ಎಂದು ತನಿಖೆ ನಡೆಸಲಾಗುತ್ತದೆ. ಸರ್ಕಾರಿ ಆಸ್ಪತ್ರೆಯಿಂದ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಬಳಿಕ ಆರೋಗ್ಯ ಇಲಾಖೆಯ ಸಿಬ್ಬಂದಿ ಚೀಲಗಳಲ್ಲಿ ಔಷಧಿಗಳನ್ನು ತುಂಬಿಕೊಂಡು ಹೋದರು.

ಶಾಸಕರು, ಅಧಿಕಾರಿಗಳಿಗೂ ತಟ್ಟಿದ ಪ್ರತಿಭಟನೆಯ ಬಿಸಿ • ₹20 ಲಕ್ಷ ಪರಿಹಾರ ವಿತರಣೆ

ಕಾಡಾನೆಗೆ ಮಹಿಳೆ ಬಲಿ: ದಿನವಿಡೀ ರಸ್ತೆ ತಡೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಾಲ್ಲೂಕಿನ ಹುಣಸೇಹಳ್ಳಿ ಸಮೀಪದ ಹ್ಯಾರಂಬಿಪುರ ಗ್ರಾಮದಲ್ಲಿ ಕಾಡಾನೆ ದಾಳಿಗೆ ವಿಜಯನಗರ ಜಿಲ್ಲೆಯ ಕಾರ್ಮಿಕ ಮಹಿಳೆ ಬಲಿಯಾಗಿದ್ದಾರೆ. ಒಂದು ವಾರದಲ್ಲಿ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದರಿಂದ ಆಕ್ರೋಶಗೊಂಡ ಸ್ಥಳೀಯರು ದಿನವಿಡೀ ರಸ್ತೆಯಲ್ಲಿ ಶವ ಇಟ್ಟು ಪ್ರತಿಭಟನೆ ನಡೆಸಿದರು.

ಪೊಲೀಸರು ಜನರನ್ನು ಚದುರಿಸಿ ಮೃತದೇಹವನ್ನು ಸ್ಥಳಾಂತರಿಸಿದರು. ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಗೆದ್ದಲಗಟ್ಟೆ ಕಾಮಯ್ಯನಟ್ಟಿ ಬೋರಮ್ಮ(45) ಮೃತಪಟ್ಟವರು. ನಾಗೇಶ್‌ಗೌಡ ಎಂಬುವರ ತೋಟದಲ್ಲಿ ಕೆಲಸಕ್ಕೆಂದು ಕಾರ್ಮಿಕರು ಭಾನುವಾರ ಬೆಳಿಗ್ಗೆ 9ರ ಸುಮಾರಿನಲ್ಲಿ ಹೋಗಿದ್ದರು. ಬೋರಮ್ಮ ಅವರ ಮೇಲೆ ಆನೆ ದಾಳಿ ನಡೆಸಿದ ಕೂಡಲೇ ಉಳಿದ ಕಾರ್ಮಿಕರು ಅಲ್ಲಿಂದ ಓಡಿ ಹೋಗಿದ್ದಾರೆ.

ಬೋರಮ್ಮ ಸ್ಥಳದಲ್ಲೇ ಮೃತಪಟ್ಟಿದ್ದು, ಆಕ್ರೋಶಗೊಂಡ ಸ್ಥಳೀಯರು ಶವವನ್ನು ಕಡಬಗೆರೆಯಲ್ಲಿ ರಸ್ತೆ ಮಧ್ಯ ಇಟ್ಟು ಪ್ರತಿಭಟಿಸಿದ್ದರಿಂದ ಚಿಕ್ಕಮಗಳೂರು– ಶೃಂಗೇರಿ ರಾಜ್ಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಂಡಿತ್ತು. ಸ್ಥಳಕ್ಕೆ ಬಂದ ಅಧಿಕಾರಿಗಳು, ಶಾಸಕ ಟಿ.ಡಿ. ರಾಜೇಗೌಡರು ಪ್ರತಿಭಟನಾಕಾರರ ಆಕ್ರೋಶ ಎದುರಿಸಿದರು.

‘ನಾಗೇಶಗೌಡ ಅವರ ತೋಟದಲ್ಲಿ ಕಳೆದ ಸೋಮವಾರ ಕಾಡಾನೆ ದಾಳಿ ನಡೆಸಿತ್ತು. ಅಂದು ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ತಿಳವಳ್ಳಿ ಯಲ್ಲಪ್ಪ ಶೇಖಪ್ಪ ಮಾರೇಕ್ಕನವರ ಮೃತಪಟ್ಟಿದ್ದರು. ಮೂರು ದಿನಗಳಿಂದ ಕಾಡಾನೆ ಸೆರೆಗೆ ಕಾರ್ಯಾಚರಣೆ ನಡೆಸುತ್ತಿರುವ ಅರಣ್ಯ ಇಲಾಖೆ, ಕಾಡಾನೆಗಳು ಬೇರೆ ಕಡೆ ಇವೆ ಎಂದು ಮಾಹಿತಿ ನೀಡಿದ್ದರು. ಆದ್ದರಿಂದ ತೋಟದಲ್ಲಿ ಭಾನುವಾರ ಕೆಲಸ ಆರಂಭಿಸಲಾಗಿತ್ತು. ಅರಣ್ಯ ಇಲಾಖೆಯ ಬೇಜವಾಬ್ದಾರಿಯಿಂದ ಮತ್ತೊಂದು ಜೀವ ಹಾನಿಯಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಂದು ವರ್ಷದಲ್ಲಿ 9 ಜನ ಸತ್ತಿದ್ದಾರೆ. ಆನೆಗಳ ಕಾಟ ತಪ್ಪಿಸಲು ಶಾಶ್ವತ ಕ್ರಮ ಕೈಗೊಳ್ಳಬೇಕು. ಮೃತರ ಕುಟುಂಬಕ್ಕೆ ₹50 ಲಕ್ಷ ಪರಿಹಾರ ನೀಡಬೇಕು. ಅಲ್ಲಿಯ ತನಕ ಪ್ರತಿಭಟನೆ ನಿಲ್ಲದು ಎಂದು ಪಟ್ಟುಹಿಡಿದರು.

ಕಾಡಾನೆ ಸಮಸ್ಯೆಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗುವುದು ಎಂದು ಶಾಸಕ ಟಿ.ಡಿ.ರಾಜೇಗೌಡ ಸಮಾಧಾನಪಡಿಸಲು ಪ್ರಯತ್ನಿಸಿದರೂ ಪ್ರತಿಭಟನೆ ಮುಂದುವರಿಯಿತು. ಅರಣ್ಯ ಸಚಿವ ಈಶ್ವರ ಖಂಡ್ರೆ ಅವರೊಂದಿಗೆ ದೂರವಾಣಿ ಮೂಲಕವಾದರೂ ಮಾತನಾಡಿಸಬೇಕು ಎಂದು ಸ್ಥಳೀಯರು ಪಟ್ಟು ಹಿಡಿದರು.

ಸಂಜೆ ವೇಳೆಗೆ ಜಿಲ್ಲಾಧಿಕಾರಿ ಎನ್.ಎಂ. ನಾಗರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರಕುಮಾರ್ ದಯಾಮ ಸ್ಥಳಕ್ಕೆ ಬಂದರು. ಅವರ ವಿರುದ್ಧವೂ ಸ್ಥಳೀಯರು ಮುಗಿ ಬಿದ್ದರು. ಇದರ ನಡುವೆ ಮೃತರ ಕುಟುಂಬಕ್ಕೆ ₹20 ಲಕ್ಷ ಪರಿಹಾರ ನೀಡಿದ ಬಳಿಕ ಪೊಲೀಸರು ಆಂಬುಲೆನ್ಸ್‌ನಲ್ಲಿ ಶವ ಸ್ಥಳಾಂತರಿಸಿದರು.

ಇಷ್ಟಾದರೂ ಸ್ಥಳೀಯರು ಪ್ರತಿಭಟನೆ ಮುಂದುವರಿಸಿದ್ದರು. ಬಿಜೆಪಿ ಮುಖಂಡ ಡಿ.ಎನ್. ಜೀವರಾಜ್, ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಸುಧಾಕರ ಶೆಟ್ಟಿ ಸೇರಿ ಕೆಲ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು. ಈ ವೇಳೆ ಪೊಲೀಸ್ ವಾಹನವನ್ನೂ ತಡೆಯಲು ಜನರು ಯತ್ನಿಸಿದರು. ಗುಂಪನ್ನು ಪೊಲೀಸರು ಚದುರಿಸಿದರು. ಬಳಿಕ ವಾಹನ ಸಂಚಾರ ಸುಗಮಗೊಂಡಿತು.


ಕಡಬಗೆರೆಯಲ್ಲಿನ ಚಿಕ್ಕಮಗಳೂರು–ಶೃಂಗೇರಿ ರಾಜ್ಯ ಹೆದ್ದಾರಿಯಲ್ಲಿ ಶವ ಇಟ್ಟು ಸ್ಥಳೀಯರು ಪ್ರತಿಭಟನೆ ನಡೆಸಿದರು

ಕಾಡಾನೆ ಸೆರೆ

ಕಡಬಗೆರೆಯಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸುತ್ತಿದ್ದರೆ ಮತ್ತೊಂದೆಡೆ ಆನೆ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಬೆರಣಗೋಡು ಸಮೀಪದ ಕೆರೆಮನೆ ಬಳಿ ಕಾಡಾನೆಗೆ ಅರಿವಳಿಕೆ ಚುಚ್ಚುಮದ್ದನ್ನು ವೈದ್ಯರ ತಂಡ ನೀಡಿತು. ಸಾಕಾನೆಗಳ ಮೂಲಕ ಆನೆಯನ್ನು ಲಾರಿಗೆ ಏರಿಸಿ ಸ್ಥಳಾಂತರ ಮಾಡಲಾಯಿತು.

ಮುಂದೆ ದಲಿತ ನಾಯಕರೆ ಸಿ.ಎಂ ಆಗಬೇಕು: ಸಚಿವ ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಮಡಿಕೇರಿ: ‘ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ದಲಿತ ನಾಯಕರು ಮುಖ್ಯಮಂತ್ರಿ ಆಗಬೇಕು’ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಇಲ್ಲಿ ಪ್ರತಿಪಾದಿಸಿದರು.


ಡಾ.ಎಚ್‌.ಸಿ. ಮಹದೇವಪ್ಪ

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, ‘ರಾಜ್ಯದಲ್ಲಿ ದಲಿತ ನಾಯಕರು ಮುಖ್ಯಮಂತ್ರಿ ಆಗಬಾರದು ಎಂದೇನಿಲ್ಲ. ಆದರೆ, ಅದಕ್ಕೆ ಅವಕಾಶಗಳು, ಸನ್ನಿವೇಶಗಳು ಬರಬೇಕಿದೆ’ ಎಂದರು.

‘ದಲಿತರೇ ಕಾಂಗ್ರೆಸ್‌ನ ಬೆನ್ನೆಲುಬು ಎಂಬುದು ಹೈಕಮಾಂಡ್‌ಗೆ ತಿಳಿದಿದೆ. ಬೆನ್ನೆಲುಬು ಕಳೆದುಕೊಂಡು ಪಕ್ಷ ಬಲವಾಗಿರಲು ಸಾಧ್ಯವಿಲ್ಲ. ಹೀಗಾಗಿ, ಬೆನ್ನೆಲುಬನ್ನು ಬಲಪಡಿಸಬೇಕು’ ಎಂದು ಪ್ರತಿಪಾದಿಸಿದರು.

‘ದಲಿತರು ಗಣನೀಯ ಪ್ರಮಾಣದಲ್ಲಿ ಕರ್ನಾಟಕದಲ್ಲಿ ಇದ್ದಾರೆ. ಅವರು ಸದಾ ಪಕ್ಷಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಆದರೆ, ಬೇರೆಯವರು ಮುಖ್ಯಮಂತ್ರಿ ಆಗಬೇಕು ಎಂಬ ಚರ್ಚೆ ಈಗ ನಡೆದಿದೆ’ ಎಂದರು.

‘ಕಾಂಗ್ರೆಸ್ ಹೈಕಮಾಂಡ್ ಹಾಗೂ ಸಿದ್ದರಾಮಯ್ಯ ಅವರಿಂದ ಹಿಡಿದು ಎಲ್ಲರೂ ಸೇರಿ ಸೂಕ್ತವಾದ ದಲಿತ ನಾಯಕರಿಗೆ ಸಿ.ಎಂ ಹುದ್ದೆ ನೀಡಬೇಕು. ಇದರಲ್ಲಿ ಗೊಂದಲಗಳು ಆಗಬಾರದು. ಅದು ಎಲ್ಲರ ಆಸೆ’ ಎಂದರು.

‘ಡಿ.ಕೆ.ಶಿವಕುಮಾರ್ ಅವರ ಹೈಕಮಾಂಡ್ ತನ್ನ ಶ್ರಮಕ್ಕೆ ಸ್ಥಾನಮಾನವನ್ನು ಕೊಡುತ್ತದೆ’ ಎಂಬ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ‘ಹೈಕಮಾಂಡ್ ಪ್ರತಿಯೊಂದನ್ನೂ ಪರಾಮರ್ಶೆ ಮಾಡುತ್ತದೆ’ ಎಂದರು.

‘ಮಧ್ಯಪ್ರವೇಶಿಸದಿದ್ದರೆ ಪಕ್ಷಕ್ಕೆ ತೊಂದರೆ’

ಬಾಗಲಕೋಟೆ: ‘ಮುಖ್ಯಮಂತ್ರಿ ಬದಲಾವಣೆ ಕುರಿತು ರಾಜ್ಯದಲ್ಲಿರುವ ಗೊಂದಲವನ್ನು ಬಗೆಹರಿಸಲು ನೀವು ಮಧ್ಯಪ್ರವೇಶಿಸಬೇಕು. ಇಲ್ಲದಿದ್ದರೆ ಪಕ್ಷಕ್ಕೆ ತೊಂದರೆಯಾಗುತ್ತದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಿದ್ದೇವೆ’ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಗೊಂದಲ ಮುಂದುವರೆದರೆ ಕಾರ್ಯಕರ್ತರು, ಸರ್ಕಾರಕ್ಕೆ ತೊಂದರೆ ಎಂದು ತಿಳಿಸಿದ್ದೇವೆ. ಆದಷ್ಟು ಬೇಗ ಮಾಡುತ್ತೇವೆ ಎಂದಿದ್ದಾರೆ’ ಎಂದು ತಿಳಿಸಿದರು.

‘ರಾಜ್ಯ ಬಜೆಟ್ ಬಳಿಕ ಮಹತ್ತರ ಬದಲಾವಣೆಯಾಗುವ ಬಗ್ಗೆ ಗೊತ್ತಿಲ್ಲ. ಗೊಂದಲ ನಿಲ್ಲಲಿ ಎನ್ನುವುದಷ್ಟೇ ನಮ್ಮ ವಿಚಾರ. ಎರಡೂವರೆ ವರ್ಷ ಎಂಬುದನ್ನು ನಾವು ಕೇಳಿಲ್ಲ. ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ. ಉಳಿದದ್ದು ಹೈಕಮಾಂಡ್‌ಗೆ ಬಿಟ್ಟದ್ದು’ ಎಂದರು.

‘ಮುಂದಿನ ಮುಖ್ಯಮಂತ್ರಿ ಸತೀಶಣ್ಣಾ’

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಅಂಬಡಗಟ್ಟಿ ಕ್ರಾಸ್‌ನ ಖಾಸಗಿ ಕಾರ್ಯಕ್ರಮಕ್ಕಾಗಿ ಭಾನುವಾರ ಆಗಮಿಸಿದ್ದ ಸಚಿವ ಸತೀಶ ಜಾರಕಿಹೊಳಿ ಅವರನ್ನು ಕಂಡ ಅಭಿಮಾನಿಗಳು, ‘ಮುಂದಿನ ಸಿ.ಎಂ’ ಎಂದು ಘೋಷಣೆ ಕೂಗಿ ಹರ್ಷ ವ್ಯಕ್ತಪಡಿಸಿದರು.



ಕಲ್ಯಾಣ ಮಂಟಪದ ಆವರಣದಲ್ಲಿ ‘ಮುಂದಿನ ಮುಖ್ಯಮಂತ್ರಿ ಸತೀಶಣ್ಣಾ ಜಾರಕಿಹೊಳಿ’ ಎಂಬ ನಾಮಫಲಕಗಳು ರಾರಾಜಿಸಿದವು.

ಸಚಿವ ಶಿವಾನಂದ ಪಾಟೀಲರಿಗೆ ಮಾತೃ ವಿಯೋಗ

ವಿಜಯಪುರ: ಜವಳಿಸಚಿವ ಶಿವಾನಂದ ಪಾಟೀಲ ಅವರ ತಾಯಿ ಗಂಗಾಬಾಯಿ ಸಿದ್ಧರಾಮಪ್ಪ ಪಾಟೀಲ (84) ಅವರು ಭಾನುವಾರ ಬೆಳಗಿನ ಜಾವ ನಿಧನರಾದರು.


ಗಂಗಾಬಾಯಿ ಸಿದ್ಧರಾಮಪ್ಪ ಪಾಟೀಲ

ಅವರಿಗೆ ಪುತ್ರರಾದ ಸಚಿವ ಶಿವಾನಂದ ಪಾಟೀಲ, ಬಿಜೆಪಿ ಮುಖಂಡ ವಿಜುಗೌಡ ಪಾಟೀಲ, ಶಿವಶರಣಗೌಡ ಪಾಟೀಲ ಹಾಗೂ ಪುತ್ರಿ ಮಹಾದೇವಿ ಪಾಟೀಲ ಇದ್ದಾರೆ.

ಅಂತ್ಯಕ್ರಿಯೆ ಭಾನುವಾರ ನಗರದ ಜಮಖಂಡಿ ರಸ್ತೆಯಲ್ಲಿರುವ ತೋಟದಲ್ಲಿ ನಡೆಯಿತು. ಮಠಾಧೀಶರು, ರಾಜಕೀಯ ಗಣ್ಯರು ಹಾಗೂ ಸಾರ್ವಜನಿಕರು ಅಂತಿಮ ನಮನ ಸಲ್ಲಿಸಿದರು.

ಸಿಗದ ವರ್ಗಾವಣೆ: ಸಾರಿಗೆ ನೌಕರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಸವಣೂರು (ಹಾವೇರಿ ಜಿಲ್ಲೆ): ಕೆಎಸ್‌ಆರ್‌ಟಿಸಿ ನೌಕರ ಮಹದೇವಪ್ಪ ಪಕೀರಪ್ಪ ಎರೇಸೀಮಿ (49) ಇಲ್ಲಿನ ಬಸ್‌ನಿಲ್ದಾಣದ ಆವರಣದ ಇಂಧನ ಶಾಖೆಯ ಕೊಠಡಿಯಲ್ಲಿ ಭಾನುವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಾವೇರಿ ವಿಭಾಗೀಯ ಉಪಾಧ್ಯಕ್ಷ, ಸವಣೂರ ಬಸ್ ಘಟಕದ ಚಾಲಕ ಬೋಧಕರಾಗಿ ಕೆಲಸ ಮಾಡುತ್ತಿದ್ದರು. ಪ್ರಸ್ತುತ ಅಧಿಕಾರಿಗಳ ಸೂಚನೆಯಂತೆ ನಿಗಮದ ಇಂಧನ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.


ಮಹದೇವಪ್ಪ ಪಕೀರಪ್ಪ

‘ಮಕ್ಕಳ ಶಿಕ್ಷಣಕ್ಕೆ ಹಣಕಾಸಿನ ತೊಂದರೆಯಿತ್ತು. ಚಾಲಕರ ಹುದ್ದೆಗೆ ವರ್ಗಾವಣೆ ಮಾಡಬೇಕು ಎಂದು ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ‘ನಿಗಮದ ಇಂಧನ ಶಾಖೆಯಲ್ಲಿಯೇ ಮುಂದುವರೆಯಬೇಕು’ ಎಂದು ಅಧಿಕಾರಿಗಳು ಸೂಚಿಸಿದ್ದರು. ಇದರಿಂದ ಮನನೊಂದಿದ್ದರು’ ಎಂದು ಮಹದೇವಪ್ಪ ಅವರ ಪತ್ನಿ ಲಕ್ಷ್ಮೀ ಮಹದೇವಪ್ಪ ಎರೇಸೀಮಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣ ದಾಖಲಾಗಿದೆ.

ಕಮಲಾಕರ ಭಟ್ಟ ವಿರುದ್ಧ ಪೋಕ್ಸೊ

ಶಿವಮೊಗ್ಗ: ಬಾಲಕಿಯ ಮೈಮುಟ್ಟಿ ದೌರ್ಜನ್ಯ ಎಸಗಿದ ಆರೋಪದಡಿ ಜೋತಿಷಿ ಕಮಲಾಕರ ಭಟ್ಟ ವಿರುದ್ಧ ಇಲ್ಲಿನ ತುಂಗಾ ನಗರ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ. ವಸಂತ ನಾಯ್ಕ ಹತ್ಯೆ ಪ್ರಕರಣದ ಆರೋಪಿಯಾಗಿದ್ದು ಸದ್ಯ ಜೈಲಿನಲ್ಲಿದ್ದಾರೆ. ಅವರ ವಿರುದ್ಧ ಭಾನುವಾರ ರಾತ್ರಿ ಪೋಕ್ಸೊ ಕಾಯ್ದೆಯಡಿ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

ಬಂಡೀಪುರ ಮತ್ತು ನಾಗರಹೊಳೆ ರಕ್ಷಿತಾರಣ್ಯ

ರೈತರ ವಿರೋಧದ ನಡುವೆ ಸಫಾರಿ ಆರಂಭ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ರೈತ ಸಂಘಟನೆಗಳ ವಿರೋಧದ ನಡುವೆಯೂ ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಭಾನುವಾರ ಸಫಾರಿ ಪುನರಾರಂಭಗೊಂಡಿತು.

ಮಧ್ಯಾಹ್ನ 3 ಗಂಟೆಗೆ ಮೇಲುಕಾಮನಹಳ್ಳಿ ಸಫಾರಿ ಕೇಂದ್ರದಿಂದ ನಾಲ್ಕು ಮಿನಿ ಬಸ್‌ಗಳು ಹಾಗೂ ಮೂರು ಜಿಪ್ಸಿ ವಾಹನಗಳು ಪ್ರವಾಸಿಗರನ್ನು ಸಫಾರಿಗೆ ಕರೆದೊಯ್ದವು.

ರೈತರಿಂದ ತೀವ್ರ ವಿರೋಧ ವ್ಯಕ್ತವಾಗಿರುವ ಕಾರಣದಿಂದಾಗಿ ಸಫಾರಿ ಕೇಂದ್ರ, ಗುಂಡ್ಲುಪೇಟೆ, ಹಂಗಳ ಚೆಕ್‌ಪೋಸ್ಟ್ ಹಾಗೂ ಕಲ್ಲಿಗೌಡನಹಳ್ಳಿ ಗೇಟ್ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಫೆ.23ರಿಂದ ಪ್ರತಿದಿನ ಐದು ತಾಸು ಸಫಾರಿ ನಡೆಯಲಿದ್ದು ಬೆಳಿಗ್ಗೆ 6.30ರಿಂದ 9 ಗಂಟೆ ಹಾಗೂ ಮಧ್ಯಾಹ್ನ 3.30ರಿಂದ 6ಗಂಟೆಯವರೆಗೆ ಸಫಾರಿಗೆ ಸರ್ಕಾರದಿಂದ ಅನುಮತಿ ನೀಡಲಾಗಿದೆ. ಕೆಲವು ಷರತ್ತುಗಳನ್ನು ವಿಧಿಸಿದ್ದು, ಅವುಗಳನ್ನು ಪಾಲಿಸುವಂತೆಯೂ ಸೂಚಿಸಲಾಗಿದೆ.

ಅರಣ್ಯ ಇಲಾಖೆ ಹಾಗೂ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ವಾಹನಗಳಲ್ಲಿ ಪ್ರವಾಸಿಗರು ಸಫಾರಿಗೆ ತೆರಳಬಹುದು. ಮಾನವ– ಪ್ರಾಣಿ ಸಂಘರ್ಷ ಹೆಚ್ಚಾದ ಕಾರಣದಿಂದ ನ.7ರಿಂದ ಸಫಾರಿ ಸ್ಥಗಿತವಾಗಿತ್ತು.



ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಭಾನುವಾರ ಪ್ರವಾಸಿಗರು ಅರಣ್ಯ ಇಲಾಖೆ ವಾಹನಗಳಲ್ಲಿ ಸಫಾರಿಗೆ ತೆರಳುತ್ತಿರುವುದು

ಮಡಿಕೇರಿ ವರದಿ: ಕೊಡಗು ಜಿಲ್ಲೆಯ ನಾಗರಹೊಳೆ ಹುಲಿ ರಕ್ಷಿತಾರಣ್ಯದ ಪೊನ್ನಂಪೇಟೆ ತಾಲ್ಲೂಕಿನ ನಾಣಚ್ಚಿಯಲ್ಲಿ ಸಫಾರಿ ಭಾನುವಾರ ಪುನರಾರಂಭಗೊಂಡಿತು. ಎರಡು ವಾಹನಗಳಲ್ಲಿ 15 ಮಂದಿಯಷ್ಟೇ ಸಫಾರಿಗೆ ತೆರಳಿದ್ದರು.

ಚಿಟಿಕೆ ಸುದ್ದಿ

ಸ್ವಾಮೀಜಿ ವಿರುದ್ಧ ಪೋಕ್ಸೊದಡಿ ಎಫ್‌ಐಆರ್

ಲಖನೌ, ಉತ್ತರಪ್ರದೇಶ (ಪಿಟಿಐ): ಕಳೆದ ವರ್ಷ ಕುಂಭಮೇಳದ ವೇಳೆ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ದಡಿ ಸ್ವಾಮಿ ಅವಿ ಮುಕ್ತೇಶ್ವರಾನಂದ ಮತ್ತು ಅವರ ಶಿಷ್ಯ ಮುಕುಂದಾನಂದ ಬ್ರಹ್ಮಚಾರಿ ವಿರುದ್ಧ ಪೋಕ್ಸೊ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.



ಅವಿಮುಕ್ತೇಶ್ವ ರಾನಂದ

ಇಬ್ಬರ ವಿರುದ್ಧ ಪ್ರಕರಣ ದಾಖಲಿಸುವಂತೆ ಪ್ರಯಾಗರಾಜ್‌ನ ಪೋಕ್ಸೊ ವಿಶೇಷ ನ್ಯಾಯಾಲಯವೊಂದು ಶನಿವಾರ ಆದೇಶ ನೀಡಿತ್ತು. ಆದೇಶದಂತೆ, ಝೂಸಿ ಪೊಲೀಸ್ ಠಾಣೆಯಲ್ಲಿ ಸ್ವಾಮಿ ಅವಿಮುಕ್ತೇಶ್ವರಾನಂದ, ಅವರ ಶಿಷ್ಯ ಮುಕುಂದಾನಂದ ಬ್ರಹ್ಮಚಾರಿ ಹಾಗೂ ಮೂವರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ವಾರಾಣಸಿಯಲ್ಲಿರುವ ಆಶ್ರಮದಲ್ಲಿ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿ ಕೃಷ್ಣ ಜನ್ಮಭೂಮಿ ಮುಕ್ತಿ ನಿರ್ಮಾಣ ಟ್ರಸ್ಟ್‌ನ ಅಧ್ಯಕ್ಷ ಅಶುತೋಷ್ ಬ್ರಹ್ಮಚಾರಿ ಅರ್ಜಿಯನ್ನು ಸಲ್ಲಿಸಿದ್ದರು.

ಬಿಜೆಪಿ ಸೇರಿದ ಭೂಪೇನ್ ಬೋರಾ

ಗುವಾಹಟಿ (ಪಿಟಿಐ): ಅಸ್ಸಾಂ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಭೂಪೇನ್ ಕುಮಾರ್ ಬೋರಾ ಅವರು ಭಾನುವಾರ ಆಡಳಿತಾರೂಢ ಬಿಜೆಪಿ ಸೇರ್ಪಡೆಯಾದರು.



ಭೂಪೇನ್ ಬೋರಾ

ಅಸ್ಸಾಂ ಬಿಜೆಪಿ ಕಚೇರಿಯ 'ವಾಜಪೇಯಿ ಭವನ'ದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಸೈಕಿಯಾ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು. ಈ ಬೆನ್ನಲ್ಲೇ, ರಾಜ್ಯ ಕಾರ್ಯಕಾರಿ ಸಮಿತಿಗೆ ಬೋರಾ ಅವರನ್ನು ಸೇರ್ಪಡೆ ಮಾಡಲಾಗಿದೆ.

ಬೋರಾ ಅವರ ಜೊತೆಗೆ ಕಾಂಗ್ರೆಸ್ ಪಕ್ಷದ ನಾಯಕರಾದ ಸಂಜು ಬೋರಾ, ರಾಜೇಶ್ ಕುಮಾರ್ ಜೋಶಿ, ಕಂಗಮ್ ದಾಸ್, ಗಗನ್ ಚಂದ್ರ ಬೋರಾ ಸೇರಿದಂತೆ 10ಕ್ಕೂ ಹೆಚ್ಚು ಜನರು ಬಿಜೆಪಿಗೆ ಸೇರ್ಪಡೆಯಾದರು.

'ಗೋಮಾಂಸ ಉತ್ಸವ'ಕ್ಕೆ ಮುಸ್ಲಿಂ ಲೀಗ್ ವಿರೋಧ

ಕೊಯಿಕ್ಕೋಡ್ (ಕೇರಳ) (ಪಿಟಿಐ): 'ಕೇರಳ ಸ್ಟೋರಿ 2' ಚಿತ್ರದ ವಿರುದ್ಧ ಆಡಳಿತಾರೂಢ ಸಿಪಿಎಂನ ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ನಡೆಸಿದ 'ಗೋಮಾಂಸ ಉತ್ಸವ'ವನ್ನು ಮುಸ್ಲಿಂ ಲೀಗ್ ಭಾನುವಾರ ಟೀಕಿಸಿದ್ದು, ಇದನ್ನು 'ಪ್ರಚೋದನಕಾರಿ ಪ್ರತಿಭಟನೆ' ಎಂದು ಹೇಳಿದೆ.

'ಗೋಮಾಂಸ ಉತ್ಸವವು ಮುಸ್ಲಿಂ ಮತದಾರರನ್ನು ದಾರಿ ತಪ್ಪಿಸಲು, ವಂಚಿಸಲು ಮತ್ತು ಓಲೈಸಲು ಸಿಪಿಎಂ ಮಾಡಿರುವ ಅಗ್ಗದ ಗಿಮಿಕ್' ಎಂದು ಮುಸ್ಲಿಂ ಲೀಗ್‌ನ ರಾಜ್ಯ ಕಾರ್ಯದರ್ಶಿ ಪಿ.ಎಂ.ಎ ಸಲಾಂ ಆರೋಪಿಸಿದ್ದಾರೆ.

'ಯಾವುದೇ ಸಮುದಾಯಕ್ಕೂ, ಗೋಮಾಂಸಕ್ಕೂ ಸಂಬಂಧ ಇಲ್ಲ. ಭಾರತದ ಕೆಲವು ಬೃಹತ್ ಗೋಮಾಂಸ ರಫ್ತುದಾರರು ಮತ್ತು ಸಂಸ್ಕರಣಾ ಘಟಕಗಳ ಮಾಲೀಕರಲ್ಲಿ ಬಿಜೆಪಿ, ಆರ್.ಎಸ್.ಎಸ್. ಮತ್ತು ಮುಸ್ಲಿಮರೊಂದಿಗೆ ಸಂಬಂಧ ಹೊಂದಿರುವ ಜನರು ಇದ್ದಾರೆ' ಎಂದು ಅವರು ಹೇಳಿದ್ದಾರೆ.

'ಕೇರಳ ಸ್ಟೋರಿ 2' ಚಿತ್ರವನ್ನು ಟೀಕಿಸಿದ ಸಲಾಂ ಅವರು, 'ಗೋಮಾಂಸ ತಿನ್ನದವರನ್ನು ಯಾರೂ ತಿನ್ನಿ ಎಂದು ಒತ್ತಾಯಿಸುತ್ತಿಲ್ಲ. ಇಂತಹ ಚಿತ್ರಗಳು ಸಮುದಾಯಗಳ ನಡುವೆ ವಿಭಜನೆಯನ್ನು ಸೃಷ್ಟಿಸುತ್ತವೆ' ಎಂದು ಆರೋಪಿಸಿದ್ದಾರೆ.

ನೇಮಂ ಕ್ಷೇತ್ರದಿಂದ ಸ್ಪರ್ಧೆಗೆ ರಾಜೀವ್ ಇಂಗಿತ

ತಿರುವನಂತಪುರ (ಪಿಟಿಐ): ಕೇರಳ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರು, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ನೇಮಂ ಕ್ಷೇತ್ರದಿಂದ ಸ್ಪರ್ಧಿಸುವ ಇಂಗಿತವನ್ನು ವ್ಯಕ್ತ ಪಡಿಸಿದರು.



ರಾಜೀವ್ ಚಂದ್ರಶೇಖರ್

ಭಾನುವಾರ ನೇಮಂನಲ್ಲಿ ಪಕ್ಷದ ಚುನಾವಣಾ ಪ್ರಚಾರ ಆರಂಭಿಸಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ನೇಮಂ ಕ್ಷೇತ್ರದಿಂದ ಸ್ಪರ್ಧಿಸುವಿರಾ ಎಂಬ ಪ್ರಶ್ನೆಗೆ, 'ಅದು ನನ್ನಾಸೆಯೂ ಹೌದು. ರಾಷ್ಟ್ರೀಯ ನಾಯಕತ್ವವು ಅದನ್ನು ನಿರ್ಧರಿಸುತ್ತದೆ. ತಿರುವನಂತಪುರದಲ್ಲಿ ಬದಲಾವಣೆ ತರುವುದು ನನ್ನ ಗುರಿ' ಎಂದರು.

'ನೇಮಂ ಕ್ಷೇತ್ರದಲ್ಲೂ ಬದಲಾವಣೆ ತರಲು ಬಯಸಿದ್ದೇನೆ. ಅದಕ್ಕಾಗಿ ಪಕ್ಷವು ಅವಕಾಶ ನೀಡಲಿದೆ ಎಂಬ ವಿಶ್ವಾಸವಿದೆ' ಎಂದರು.


ಎನ್‌ಕೌಂಟರ್: 3 ಉಗ್ರರು ಹತ

ಕಿಶ್ತವಾಡದಲ್ಲಿ ಗುಂಡಿನ ಚಕಮಕಿ
ಜೆಇಎಂನ ಕಮಾಂಡರ್ ಸೈಫುಲ್ಲಾ ಸಾವು

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಖ್ಯಾಂಶಗಳು
- ಹತರಾದ ಭಯೋತ್ಪಾದಕರು ಪಾಕಿಸ್ತಾನದ ಪ್ರಜೆಗಳು
- ಎಕೆ–47 ರೈಫಲ್‌ಗಳು, ಇತರ ಶಸ್ತ್ರಾಸ್ತ್ರಗಳು ವಶಕ್ಕೆ
- ಗುಪ್ತಚರ ಮಾಹಿತಿ ಆಧರಿಸಿ ಕಾರ್ಯಾಚರಣೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಕಿಶ್ತವಾಡ ಜಿಲ್ಲೆಯ ಛಾಟ್ರೂ ಪ್ರದೇಶದಲ್ಲಿ ಭಾನುವಾರ ಭದ್ರತಾ ಪಡೆಗಳು ಮತ್ತು ಭಯೋತ್ಪಾದಕರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಪಾಕಿಸ್ತಾನ ಮೂಲದ 'ಜೈಶ್-ಎ-ಮೊಹಮ್ಮದ್' ಸಂಘಟನೆಯ ಮೂವರು ಭಯೋತ್ಪಾದಕರು ಹತರಾಗಿದ್ದಾರೆ. ಇವರಲ್ಲಿ ಒಬ್ಬ ಜೆಇಎಂನ ಕಮಾಂಡರ್ ಸೈಫುಲ್ಲಾ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಇಲ್ಲಿನ ದಟ್ಟ ಅರಣ್ಯ ಪ್ರದೇಶದಲ್ಲಿ ಭಯೋತ್ಪಾದಕರು ಇರುವ ಕುರಿತು ಗುಪ್ತಚರ ಮಾಹಿತಿ ಆಧರಿಸಿ ಸೇನೆ, ಜಮ್ಮು ಮತ್ತು ಕಾಶ್ಮೀರ ಪೊಲೀಸರು ಮತ್ತು ಅರೆ ಸೇನಾ ಪಡೆ ಜಂಟಿಯಾಗಿ ಬೆಳಿಗ್ಗೆಯಿಂದಲೇ ಶೋಧ ಕಾರ್ಯಾಚರಣೆ ಆರಂಭಿಸಿದವು.

ಈ ವೇಳೆ ಭಯೋತ್ಪಾದಕರು ಭದ್ರತಾ ಪಡೆಗಳ ವಿರುದ್ಧ ಗುಂಡಿನ ದಾಳಿ ನಡೆಸಿದರು. ಅದಕ್ಕೆ ಪ್ರತಿಯಾಗಿ ಗುಂಡಿನ ದಾಳಿ ನಡೆಸಲಾಯಿತು. ಈ ವೇಳೆ ಮೂವರು ಭಯೋತ್ಪಾದಕರು ಹತರಾದರು. ಎನ್‌ಕೌಂಟರ್ ನಡೆದ ಸ್ಥಳದಿಂದ ಎರಡು ಎಕೆ–47 ರೈಫಲ್‌ಗಳು, ಇತರ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

5 ವರ್ಷಗಳ ಹಿಂದೆ ನುಸುಳಿದ್ದ ಸೈಫುಲ್ಲಾ

ಕುಖ್ಯಾತ ಭಯೋತ್ಪಾದಕನಾಗಿದ್ದ ಜೆಇಎಂನ ಕಮಾಂಡರ್ ಸೈಫುಲ್ಲಾ ಸುಮಾರು ಐದು ವರ್ಷಗಳ ಹಿಂದೆ ಜಮ್ಮು ಮತ್ತು ಕಾಶ್ಮೀರಕ್ಕೆ ನುಸುಳಿದ್ದ ಎಂದು ವರದಿಯಾಗಿದೆ. ಅಂದಿನಿಂದಲೂ ಈ ಪ್ರದೇಶದಲ್ಲಿ ಸಕ್ರಿಯನಾಗಿದ್ದ ಈತ, ಭದ್ರತಾ ಪಡೆಗಳ ಮೇಲೆ ನಡೆದ ಹಲವು ಮಾರಕ ದಾಳಿಗಳ ಸಂಚುಕೋರನಾಗಿದ್ದ 2024ರಲ್ಲಿ ನಾಲ್ವರು ಸೈನಿಕರನ್ನು ಹತ್ಯೆ ಮಾಡಿದ ದಾಳಿಯಲ್ಲಿ ಈತನ ಪಾತ್ರ ಪ್ರಮುಖವಾಗಿತ್ತು ಎಂದು ಮೂಲಗಳು ತಿಳಿಸಿವೆ. ಈ ಹಿಂದೆ ಹಲವು ಎನ್‌ಕೌಂಟರ್‌ಗಳ ವೇಳೆ ಈತ ತಪ್ಪಿಸಿಕೊಂಡಿದ್ದ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಾಥಮಿಕ ಮಾಹಿತಿ ಪ್ರಕಾರ, ಹತರಾದ ಭಯೋತ್ಪಾದಕರು ಪಾಕಿಸ್ತಾನಿ ಪ್ರಜೆಗಳು ಮತ್ತು ನಿಷೇಧಿತ 'ಜೈಶ್-ಎ-ಮೊಹಮ್ಮದ್' ಸಂಘಟನೆ ಸದಸ್ಯರು ಎಂಬುದು ಗೊತ್ತಾಗಿದೆ ಎಂದು ಅವರು ತಿಳಿಸಿದ್ದಾರೆ.

'ಭದ್ರತಾ ಪಡೆಗಳು ಎನ್‌ಕೌಂಟರ್ ಪ್ರದೇಶದಲ್ಲಿ ಪ್ರಾಬಲ್ಯ ಸಾಧಿಸಿ, ಮೂವರು ಭಯೋತ್ಪಾದಕರನ್ನು ಹೊಡೆದುರುಳಿಸಿವೆ' ಎಂದು ಸೇನೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಜಮ್ಮುವಿನಲ್ಲಿ ಹೆಚ್ಚುತ್ತಿರುವ ಉಗ್ರ ಚಟುವಟಿಕೆ: ಕಿಶ್ತವಾಡ ಸೇರಿದಂತೆ ಜಮ್ಮುವಿನ ವಿವಿಧೆಡೆ ಇತ್ತೀಚೆಗೆ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚುತ್ತಿವೆ. ಕಾಶ್ಮೀರಕ್ಕೆ ಹೋಲಿಸಿದರೆ ಹೆಚ್ಚು ಶಾಂತಿಯುತ ಎಂದು ಪರಿಗಣಿಸಲಾಗಿದ್ದ ಜಮ್ಮುವಿನಲ್ಲಿ ಎರಡು ವರ್ಷಗಳಿಂದ ಭಯೋತ್ಪಾದಕರು ಮತ್ತು ಭದ್ರತಾ ಪಡೆಗಳ ನಡುವೆ ಹಲವು ಬಾರಿ ಘರ್ಷಣೆಗಳು ನಡೆದಿವೆ. ಕಿಶ್ತವಾಡ, ಉಧಂಪುರ, ಕಠುವಾ, ರಾಜೌರಿ, ಪೂಂಚ್ ಮತ್ತು ಇತರ ಜಿಲ್ಲೆಗಳಲ್ಲಿ ಘರ್ಷಣೆಗಳಾದ ವರದಿಗಳಿವೆ.

ಜೈಶ್-ಎ-ಮೊಹಮ್ಮದ್, ಲಷ್ಕರ್-ಎ-ತಯಬಾ ಮತ್ತು ಅವುಗಳ ಅಂಗ ಸಂಸ್ಥೆಗಳಂತಹ ಭಯೋತ್ಪಾದಕ ಗುಂಪುಗಳು ಇಲ್ಲಿನ ಅರಣ್ಯ ಪ್ರದೇಶಗಳನ್ನು ಬಳಸಿಕೊಂಡು ದಾಳಿಗಳನ್ನು ಮರು ಸಂಘಟಿಸುತ್ತಿವೆ ಎಂದು ಮೂಲಗಳು ತಿಳಿಸಿವೆ. ಇವುಗಳನ್ನು ಭದ್ರತಾಪಡೆಗಳು ದಿಟ್ಟವಾಗಿ ಎದುರಿಸುತ್ತಿವೆ ಎಂದು ಅವು ಹೇಳಿವೆ.

ಸ್ಫೋಟಕ್ಕೆ ಸಂಚು: ಎಂಟು ಮಂದಿ ಸೆರೆ

ಒಂದನೇ ಪುಟದಿಂದ...

ಪೋಸ್ಟರ್ ನೀಡಿದ ಸುಳಿವು: ನವದೆಹಲಿಯ ಕಾಶ್ಮೀರಿ ಗೇಟ್‌ನ ಮೆಟ್ರೊ ಪಿಲ್ಲರ್ ಮೇಲೆ ಭಾರತ ವಿರೋಧಿ ಪೋಸ್ಟರ್‌ಗಳನ್ನು ಅಳವಡಿಸಲಾಗಿತ್ತು. ಅದರ ಮೂಲ ಪತ್ತೆಹಚ್ಚಲು ಹೋದ ದೆಹಲಿ ಪೊಲೀಸರು, ಕೃತ್ಯ ಎಸಗಿದವರು ಕೋಲ್ಕತ್ತದ ನಿವಾಸಿಗಳು ಎಂಬುದು ಖಚಿತಪಡಿಸಿಕೊಂಡಿದ್ದರು.

ಸ್ಥಳೀಯ ಪೊಲೀಸರಿಂದ ಈ ಪ್ರಕರಣವನ್ನು ದೆಹಲಿ ಪೊಲೀಸ್ ಇಲಾಖೆಯ ವಿಶೇಷ ಘಟಕಕ್ಕೆ ಹಸ್ತಾಂತರಿಸಲಾಗಿತ್ತು. ತಕ್ಷಣವೇ ತಂಡವು ಕೋಲ್ಕತ್ತಕ್ಕೆ ತೆರಳಿತ್ತು. ಸ್ಥಳೀಯ ಪೊಲೀಸರ ನೆರವಿನೊಂದಿಗೆ ಕಾರ್ಯಾಚರಣೆ ಆರಂಭಿಸಿದ್ದ ಪೊಲೀಸರು ಉಮರ್ ಫಾರೂಖ್ ಹಾಗೂ ರೊಬಿಲ್-ಉಲ್-ಇಸ್ಲಾಂನನ್ನು ಮೊದಲಿಗೆ ಬಂಧಿಸಿದ್ದರು. ವಿಚಾರಣೆ ವೇಳೆ ಇಬ್ಬರೂ ಬಾಂಗ್ಲಾದೇಶದ ನಿವಾಸಿಗಳು ಎಂದು ದೃಢಪಟ್ಟಿತ್ತು.

'ಮತ್ತಷ್ಟು ವಿಚಾರಣೆ ನಡೆಸಿದಾಗ ಶಬ್ಬೀರ್ ಅಹಮ್ಮದ್ ಲೋನ್ ಕೂಡ ಇವರ ಜೊತೆ ಕೈ ಜೋಡಿಸಿದ್ದು ಕಂಡುಬಂತು. 2007ಕ್ಕೂ ಮೊದಲು ಈತ ಪಾಕಿಸ್ತಾನಕ್ಕೆ ತೆರಳಿ ಅಲ್ಲಿನ ಲಷ್ಕರ್-ಎ-ತಯಬಾ (ಎಲ್‌ಇಟಿ) ಭಯೋತ್ಪಾದಕ ಸಂಘಟನೆಯೊಂದಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರ ತರಬೇತಿ ಪಡೆದುಕೊಂಡಿದ್ದ. 2019ರಲ್ಲಿ ಜೈಲಿನಿಂದ ಬಿಡುಗಡೆಯಾದ ಬಳಿಕ ಈತ ಬಾಂಗ್ಲಾದೇಶದಲ್ಲಿ ಆಶ್ರಯ ಪಡೆದುಕೊಂಡು, ಮತ್ತೆ ಎಲ್‌ಇಟಿ ಜೊತೆಗೆ ಸಂಪರ್ಕ ಸಾಧಿಸಿದ್ದನು' ಎಂದು ಪ್ರಮೋದ್ ಕುಮಾರ್ ಕುಶ್ವಾಹಾ ಮಾಹಿತಿ ನೀಡಿದ್ದಾರೆ.

'ಮತ್ತೆ ತನ್ನ ಸದಸ್ಯರನ್ನು ಒಟ್ಟುಗೂಡಿಸಿದ್ದ ಶಬ್ಬೀರ್, ಇವರ ಜೊತೆಗೆ ದಾಳಿಯ ಅಣಕು ತರಬೇತಿ ನಡೆಸಿದ್ದ. ದೆಹಲಿ ಮಾತ್ರವಲ್ಲದೇ, ಫೆಬ್ರುವರಿ 10ರಂದು ಕೋಲ್ಕತ್ತದಲ್ಲಿ ಕೂಡ ಪೋಸ್ಟರ್ ಅಂಟಿಸಿದ್ದ. ಕೋಲ್ಕತ್ತದಲ್ಲಿ ಬಾಡಿಗೆ ಮನೆಯೊಂದರಲ್ಲಿ ನೆಲಸಿದ್ದ' ಎಂದು ವಿವರಿಸಿದ್ದಾರೆ.

ಈತನ ವಿಚಾರಣೆ ವೇಳೆ ಬಾಂಗ್ಲಾದೇಶದ ನಿವಾಸಿಗಳು ತಮಿಳುನಾಡಿನಲ್ಲಿ ನೆಲಸಿರುವುದು ಕಂಡುಬಂತು. ದೇಶದಲ್ಲಿ ಭಯೋತ್ಪಾದಕ ಕೃತ್ಯವೆಸಗಲು ಅವರನ್ನು ಭಾರತಕ್ಕೆ ಕರೆತರಲಾಗಿತ್ತು. ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಅವರನ್ನು ಬಂಧಿಸಲಾಗಿದೆ' ಎಂದು ಕುಶ್ವಾಹಾ ತಿಳಿಸಿದ್ದಾರೆ

ಕಾಂಗ್ರೆಸ್ ನಾಯಕರು ಕ್ಷಮೆ ಕೇಳಲಿ: ಸಚಿವ ಜೋಶಿ

ಪ್ರಜಾವಾಣಿ ವಾರ್ತೆ

ಧಾರವಾಡ: 'ನವದೆಹಲಿಯಲ್ಲಿ ನಡೆದ ಎ.ಐ ಶೃಂಗಸಭೆಯ 'ಎಕ್ಸ್ ಪೋ' ದಲ್ಲಿ ಕಾಂಗ್ರೆಸ್ ಯುವ ಕಾರ್ಯಕರ್ತರು ಮಾಡಿದ ಗಲಾಟೆಯಿಂದ ದೇಶ ತಲೆ ತಗ್ಗಿಸುವಂತಾಗಿದ್ದು, ಈ ಬಗ್ಗೆ ಕಾಂಗ್ರೆಸ್ ನಾಯಕರು ಕ್ಷಮೆ ಕೇಳಬೇಕು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆಗ್ರಹಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಹುಲ್ ಗಾಂಧಿ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ಗೂಂಡಾ ವರ್ತನೆ ಮಾಡುತ್ತಿದೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ವಾದ್ರಾ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ಈ ಬಗ್ಗೆ ಕ್ಷಮೆ ಕೇಳಬೇಕು' ಎಂದು ಒತ್ತಾಯಿಸಿದರು.



'ನಮ್ಮ ದೇಶದ ಬಗ್ಗೆ ಕಳಕಳಿ ಇದ್ದರೆ, ದೇಶದ ಘನತೆ ಬಗ್ಗೆ ಯೋಚನೆ ಇದ್ದಿದ್ದರೆ ಇಷ್ಟೊಂದು ಕಟುವಾಗಿ ಟೀಕೆ ಮಾಡುತ್ತಿರಲಿಲ್ಲ. ಇವರು ದೇಶಕ್ಕೆ ಅಪಮಾನ ಮಾಡಿದ್ದಾರೆ' ಎಂದರು.

'ಶರ್ಟ್ ಬಿಚ್ಚಿ ಪ್ರತಿಭಟಿಸಿದ್ದು ವ್ಯವಸ್ಥೆ ಮೇಲಿನ ದಾಳಿ'

ನವದೆಹಲಿ (ಪಿಟಿಐ): 'ಭಾರತೀಯ ಯುವ ಕಾಂಗ್ರೆಸ್ (ಐವೈಸಿ) ಕಾರ್ಯಕರ್ತರು ಎ.ಐ ಶೃಂಗಸಭೆಯಲ್ಲಿ ಪ್ರತಿಭಟಿಸಿದ ಮತ್ತು ನಡೆದುಕೊಂಡ ರೀತಿಯು ನ್ಯಾಯಸಮ್ಮತ ಭಿನ್ನಾಭಿಪ್ರಾಯದಂತೆ ಇಲ್ಲ. ಬದಲಿಗೆ ಅದು ಸಾರ್ವಜನಿಕ ವ್ಯವಸ್ಥೆ ಮೇಲಿನ ಸ್ಪಷ್ಟ ದಾಳಿಯಾಗಿದೆ' ಎಂದು ದೆಹಲಿ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.



ಐವೈಸಿ ಕಾರ್ಯಕರ್ತರ ನಡವಳಿಕೆಯಿಂದ ದೇಶದ ರಾಜತಾಂತ್ರಿಕತೆಯ ಪ್ರತಿಷ್ಠೆಗೂ ಧಕ್ಕೆಯಾಗಿದೆ ಎಂದು ಅದು ಹೇಳಿದೆ.

'ಭಾರತ ಮಂಟಪ' ಸಭಾಂಗಣದಲ್ಲಿ ಶರ್ಟ್ ಬಿಚ್ಚಿ ಪ್ರತಿಭಟಿಸಿದ ಐವೈಸಿಯ ನಾಲ್ವರು ಕಾರ್ಯಕರ್ತರನ್ನು ಪೊಲೀಸರು ಶನಿವಾರ ನ್ಯಾಯಾಲಯದಲ್ಲಿ ಹಾಜರುಪಡಿಸಿದಾಗ, ನ್ಯಾಯಾಧೀಶ ರವಿ ಅವರು ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದರು. ಅಲ್ಲದೆ ಆರೋಪಿಗಳನ್ನು ಐದು ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದರು.

'ಜಾಗತಿಕ ಮಟ್ಟದ ಶೃಂಗದಲ್ಲಿ ವಿವಿಧ ದೇಶಗಳ ಪ್ರತಿನಿಧಿಗಳು, ಗಣ್ಯರು ಭಾಗವಹಿಸಿದ್ದರು. ಈ ಸಮಾವೇಶ ನಡೆಯುತ್ತಿದ್ದಾಗ ಒಳನುಗ್ಗಿ ಆಕ್ರಮಣಕಾರಿ ಘೋಷಣೆಗಳನ್ನು ಹೊಂದಿರುವ ಟಿ-ಶರ್ಟ್‌ಗಳನ್ನು ಧರಿಸಿ ಪ್ರತಿಭಟಿಸಿದ್ದಾರೆ. ಅದನ್ನು ತಡೆಯಲು ಬಂದ ಪೊಲೀಸರ ಮೇಲೆ ಗಂಭೀರ ಗಾಯಗಳಾಗುವಂತೆ ಹಲ್ಲೆ ನಡೆಸಿದ್ದಾರೆ ಎಂಬ ಆರೋಪಗಳು ಅವರ ಮೇಲಿವೆ' ಎಂದು ಆದೇಶದಲ್ಲಿ ಹೇಳಲಾಗಿದೆ.

'ಪ್ರತಿಭಟನಕಾರರ ಈ ನಡವಳಿಕೆಯು ಕಾರ್ಯಕ್ರಮದ ಪಾವಿತ್ರ್ಯವನ್ನಷ್ಟೆ ಅಲ್ಲದೆ, ವಿದೇಶಿ ಗಣ್ಯರ ಮುಂದೆ ದೇಶದ ರಾಜತಾಂತ್ರಿಕ ಪ್ರತಿಷ್ಠೆಗೂ ಧಕ್ಕೆ ತಂದಿದೆ' ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ.

ಎ.ಐ ಶೃಂಗದಲ್ಲಿ ಕಾಂಗ್ರೆಸ್ ನಾಯಕರ ನಡವಳಿಕೆ ಬಗ್ಗೆ ಮೋದಿ ತೀವ್ರ ಖಂಡನೆ

ಕೊಳಕು ರಾಜಕೀಯಕ್ಕೆ ಬಳಕೆ: ಪ್ರಧಾನಿ ಮೋದಿ

ಮೀರತ್ (ಉತ್ತರ ಪ್ರದೇಶ) (ಪಿಟಿಐ): ಕಾಂಗ್ರೆಸ್ ಪಕ್ಷವು ಅಂತರ ರಾಷ್ಟ್ರೀಯ ಕಾರ್ಯಕ್ರಮವನ್ನು 'ಕೊಳಕು ಮತ್ತು ನಾಚಿಕೆಗೇಡಿನ' ರಾಜಕೀಯ ಅಖಾಡವಾಗಿ ಬಳಸಿಕೊಂಡಿತು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ವಾಗ್ದಾಳಿ ನಡೆಸಿದರು.

ದೆಹಲಿಯಲ್ಲಿ ನಡೆದ ಎಐ ಶೃಂಗದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರು ಶರ್ಟ್ ಬಿಚ್ಚಿ ಪ್ರತಿಭಟನೆ ನಡೆಸಿದ್ದನ್ನು ಅವರು ಖಂಡಿಸಿದರು.

ನಮೋ ಭಾರತ್ ರೈಲು ಮತ್ತು ಮೀರತ್ ಮೆಟ್ರೊ ನಿಲ್ದಾಣ ಸೇರಿದಂತೆ ಹಲವು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದ ಬಳಿಕ ಅವರು ಮಾತನಾಡಿದರು.

'ಸೈದ್ಧಾಂತಿಕವಾಗಿ ಕಾಂಗ್ರೆಸ್ ಎಷ್ಟು ದಿವಾಳಿಯಾಗಿದೆ ಮತ್ತು ಗಬ್ಬೆದ್ದು ಹೋಗಿದೆ ಎಂಬುದನ್ನು ಅದರ ನಡೆಯು ಸೂಚಿಸುತ್ತದೆ' ಎಂದು ಟೀಕಿಸಿದರು. 'ನೀವು ಈಗಾಗಲೇ 'ನಗ್ನ'ರಾಗಿದ್ದೀರಿ ಎನ್ನುವುದು ದೇಶಕ್ಕೆ ತಿಳಿದಿದೆ. ಮತ್ತೆ ಏಕೆ ಇನ್ನಷ್ಟು ಬೆತ್ತಲೆ ಯಾಗುವಿರಿ' ಎಂದು ವ್ಯಂಗ್ಯವಾಡಿದರು.



ಪ್ರಧಾನಿ ನರೇಂದ್ರ ಮೋದಿ ಅವರು ಶತಾಬ್ದಿ ನಗರ ನಿಲ್ದಾಣದಿಂದ ಮೀರತ್ ದಕ್ಷಿಣ ನಿಲ್ದಾಣದವರೆಗೆ ಮೆಟ್ರೊದಲ್ಲಿ ಪ್ರಯಾಣಿಸಿದರು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ಪಂಕಜ್ ಚೌಧರಿ ಜೊತೆಗಿದ್ದರು –ಪಿಟಿಐ ಚಿತ್ರ

'ಕಾಂಗ್ರೆಸ್ ಪಕ್ಷವು ಎಲ್ಲಾ 'ಮಿತಿಗಳನ್ನು ಮೀರಿದೆ'. ಪಕ್ಷದ ನಡೆಗೆ ದೇಶದಾದ್ಯಂತ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಘಟನೆಯನ್ನು ಟೀಕಿಸಿ ಸತ್ಯ ಮತ್ತು ದೇಶದ ಪರವಾಗಿ ನಿಂತಿದ್ದಕ್ಕೆ ಹಲವು ವಿರೋಧ ಪಕ್ಷಗಳಿಗೆ ಧನ್ಯವಾದ' ಎಂದು ಹೇಳಿದರು.

'ಕಾಂಗ್ರೆಸ್‌ನ ನಾಯಕರು ನನ್ನ ಸಾವು ಬಯಸುತ್ತಾರೆ. ಅವರು ನನ್ನ ತಾಯಿಯನ್ನು ನಿಂದಿಸಲೂ ಹಿಂಜರಿಯುವುದಿಲ್ಲ. ಅವರು ಬಿಜೆಪಿ ಮತ್ತು ಎನ್‌ಡಿಎಯನ್ನು ವಿರೋಧಿಸುತ್ತಾರೆ. ಅದನ್ನು ನಾವು ಸಹಿಸುತ್ತೇವೆ. ಆದರೆ ಎ.ಐ ಶೃಂಗವು ಬಿಜೆಪಿ ಕಾರ್ಯಕ್ರಮವಲ್ಲ; ಅದು ದೇಶದ ಕಾರ್ಯಕ್ರಮ ಎಂಬುದನ್ನು ಕಾಂಗ್ರೆಸ್ ನೆನಪಿಟ್ಟುಕೊಳ್ಳಬೇಕು' ಎಂದು ಹೇಳಿದರು.

ಮೀರತ್ ಮೆಟ್ರೊ, 'ನಮೋ ಭಾರತ್' ರೈಲಿಗೆ ಹಸಿರು ನಿಶಾನೆ

ಪ್ರಧಾನಿ ನರೇಂದ್ರ ಮೋದಿ ಅವರು ಮೀರತ್ ಮೆಟ್ರೊ ಮತ್ತು 'ನಮೋ ಭಾರತ್' ರೈಲಿಗೆ ಭಾನುವಾರ ಹಸಿರು ನಿಶಾನೆ ತೋರಿದರು.

ಶತಾಬ್ದಿ ನಗರ ನಿಲ್ದಾಣದಿಂದ ಮೀರತ್ ದಕ್ಷಿಣ ನಿಲ್ದಾಣದವರೆಗೆ ಅವರು ಮೆಟ್ರೊದಲ್ಲಿ ಪ್ರಯಾಣಿಸಿದರು.

ಇದೇ ಸಂದರ್ಭದಲ್ಲಿ, ಸುಮಾರು ₹12,930 ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೂ ಚಾಲನೆ ನೀಡಿದರು.

82 ಕಿ.ಮೀ. ಉದ್ದದ ದೆಹಲಿ–ಮೀರತ್ ನಮೋ ಭಾರತ್ ಕಾರಿಡಾರ್ ಅನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ಭಾರತದ ಮೊದಲ ನಮೋ ಭಾರತ್ ರೀಜನಲ್ ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಂ (ಆರ್‌ಆರ್‌ಟಿಎಸ್) ಅನ್ನು ಉದ್ಘಾಟಿಸಿದರು.

ಗಂಟೆಗೆ 180 ಕಿ.ಮೀ. ವೇಗದಲ್ಲಿ ಸಾಗುವ 'ನಮೋ ಭಾರತ್' ರೈಲು, ದೇಶದ ಮೊದಲ ಪ್ರಾದೇಶಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆಯಾಗಿದೆ. ಇದು ಸಾಹಿಬಾಬಾದ್, ಗಾಜಿಯಾಬಾದ್, ಮೋದಿನಗರ ಮತ್ತು ಮೀರತ್‌ನಂತಹ ಪ್ರಮುಖ ನಗರಗಳನ್ನು ದೆಹಲಿಯೊಂದಿಗೆ ಸಂಪರ್ಕಿಸುತ್ತದೆ.

ಮೀರತ್ ಮೆಟ್ರೊ ದೇಶದ ಅತ್ಯಂತ ವೇಗದ ಮೆಟ್ರೊ ವ್ಯವಸ್ಥೆಯಾಗಿದೆ. ಇದರ ಕಾರ್ಯಾಚರಣೆಯ ಗರಿಷ್ಠ ವೇಗ ಗಂಟೆಗೆ 120 ಕಿ.ಮೀ. ಆಗಿದೆ. ಇದು ನಿಗದಿತ ಸ್ಥಳಗಳಲ್ಲಿ ನಿಲುಗಡೆಯಾಗಿಯೂ 30 ನಿಮಿಷಗಳಲ್ಲಿ ಗಮ್ಯಸ್ಥಾನವನ್ನು ತಲುಪಲಿದೆ.

ಇದು ರಸ್ತೆಯಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲಿದೆ ಮತ್ತು ವಾಹನಗಳು ಹೊರಸೂಸುವ ಇಂಗಾಲದ ಡೈ ಆಕ್ಸೈಡ್ ಪ್ರಮಾಣವನ್ನು ತಗ್ಗಿಸಲಿದೆ.

ಶಬರಿಮಲೆ ಅರ್ಚಕ ಮಹಾ ಕಳ್ಳ: ಸಿಪಿಎಂ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಶಬರಿಮಲೆ ದೇಗುಲದ ಮುಖ್ಯ ಅರ್ಚಕ ಕಂಡರಾರು ರಾಜೀವರು ಅವರು 'ಮಹಾಕಳ್ಳ' ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಂ.ವಿ. ಗೋವಿಂದನ್ ಹೇಳಿದ್ದಾರೆ.

'ಚಿನ್ನ ದರೋಡೆಯಲ್ಲಿ ಭಾಗಿಯಾಗಿರುವ ಮಹಾ ಕಳ್ಳರ ಪಟ್ಟಿಯಲ್ಲಿ ಅರ್ಚಕ ಕೂಡ ಇದ್ದರು. ತನಿಖೆ ಇನ್ನೂ ಪ್ರಗತಿಯಲ್ಲಿದೆ. ಪ್ರಕರಣದಲ್ಲಿ ಇತರ ಆರೋಪಿಗಳ ವಿರುದ್ಧ ಜಾರಿ ನಿರ್ದೇಶನಾಲಯ ಕ್ರಮ ಕೈಗೊಂಡರೂ, ಅರ್ಚಕನ ವಿರುದ್ಧ ಯಾಕೆ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಗೋವಿಂದನ್ ಅವರು ಪ್ರಶ್ನಿಸಿದ್ದಾರೆ.

'ಪ್ರಕರಣದ ಪ್ರಮುಖ ಆರೋಪಿ ಉಣ್ಣಿಕೃಷ್ಣನ್ ಪೋಟಿ ಸಿಪಿಎಂ ನಂಟಿನ ವ್ಯಕ್ತಿ ಎಂದು ಆರಂಭದಲ್ಲಿ ಕಾಂಗ್ರೆಸ್ ಆರೋಪಿಸಿತ್ತಾದರೂ, ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ವಿ. ವೇಣುಗೋಪಾಲ್ ಕೇರಳ ದೇವಸ್ವಂ ಸಚಿವರಾಗಿದ್ದಾಗ ಅವರು ಶಬರಿಮಲೆಗೆ ಪ್ರವೇಶಿಸಿದ್ದಾರೆ ಎನ್ನುವುದು ಬಹಿರಂಗವಾಗಿದೆ' ಎಂದು ಗೋವಿಂದನ್ ಹೇಳಿದ್ದಾರೆ.

ಚಿನ್ನ ದರೋಡೆ ಪ್ರಕರಣದಲ್ಲಿ ಶಬರಿಮಲೆ ದೇವಾಲಯದ ಮುಖ್ಯ ಅರ್ಚಕ ಕಂಡರಾರು ರಾಜೀವರು ಅವರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂದು ನ್ಯಾಯಾಲಯವು ಇತ್ತೀಚೆಗಷ್ಟೆ ಜಾಮೀನು ನೀಡಿತ್ತು.

ಶಬರಿಮಲೆ ದೇವಸ್ಥಾನಕ್ಕೆ 10–50ರ ವಯಸ್ಸಿನ ಮಹಿಳೆಯರ ಪ್ರವೇಶವನ್ನು ವಿರೋಧಿಸಿದ್ದಕ್ಕಾಗಿ, ಚಿನ್ನ ದರೋಡೆ ಪ್ರಕರಣದಲ್ಲಿ ಅರ್ಚಕ ರಾಜೀವರು ಅವರನ್ನು ಬಂಧಿಸಲಾಗಿದೆ ಎಂದು ಅವರ ಜಾಮೀನು ಅರ್ಜಿಯಲ್ಲಿ ಆರೋಪಿಸಲಾಗಿತ್ತು.

ಅರ್ಚಕನನ್ನು ಸಿಲುಕಿಸಲಾಗಿದೆ: ಕಾಂಗ್ರೆಸ್

ಚಿನ್ನ ದರೋಡೆ ಪ್ರಕರಣದಲ್ಲಿ ಶಬರಿಮಲೆ ಪ್ರಧಾನ ಅರ್ಚಕನನ್ನು ಉದ್ದೇಶಪೂರ್ವಕವಾಗಿ ಸಿಲುಕಿಸಲಾಗಿದೆ ಎಂದು ಹಿರಿಯ ಕಾಂಗ್ರೆಸ್ ನಾಯಕ ಭಾನುವಾರ ಆರೋಪಿಸಿದ್ದಾರೆ. ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ಅವರನ್ನು ಬಂಧಿಸಿರುವುದರ ಹಿಂದೆ ರಾಜಕೀಯ ಹಸ್ತಕ್ಷೇಪದ ಶಂಕೆಯಿದೆ ಎಂದು ಅವರು ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಮುಖ್ಯಮಂತ್ರಿ ಕಚೇರಿಯ ನಿಯಂತ್ರಣದಲ್ಲಿದೆ. ತನಿಖೆಯ ದಿಕ್ಕನ್ನು ಬೇರೆಡೆಗೆ ತಿರುಗಿಸಲು ಮತ್ತು ಅದು ದೇವಸ್ವಂ ಸಚಿವ ವಿ.ಎನ್. ವಾಸವನ್ ಮತ್ತು ಮಾಜಿ ಸಚಿವ ಕಡಕಂಪಳ್ಳಿ ಸುರೇಂದ್ರನ್ ಅವರನ್ನು ತಲುಪದಂತೆ ನೋಡಿಕೊಳ್ಳಲು ಅರ್ಚಕನನ್ನು ಬಂಧಿಸಲಾಯಿತು' ಎಂದು ಆರೋಪಿಸಿದ್ದಾರೆ.

'ಕೇರಳ ಹೈಕೋರ್ಟ್ ನೀಡಿದ ನಿರ್ದೇಶನಗಳನ್ನು ಪಾಲಿಸಲು ಎಸ್‌ಐಟಿ ವಿಫಲವಾಗಿದೆ ಮತ್ತು ಪ್ರಕರಣದ ಹಿಂದಿನ ಪಿತೂರಿಯ ಬಗ್ಗೆ ಅದು ಸರಿಯಾಗಿ ತನಿಖೆ ನಡೆಸಲಿಲ್ಲ. ಅಯ್ಯಪ್ಪ ಸ್ವಾಮಿಯನ್ನು ತಂದೆಯೆಂದು ಪೂಜಿಸುವ ಅರ್ಚಕನನ್ನು ಯಾವುದೇ ಪುರಾವೆಯಿಲ್ಲದೆ 41 ದಿನಗಳ ಕಾಲ ಜೈಲಿನಲ್ಲಿ ಇರಿಸಲಾಯಿತು' ಎಂದು ಅವರು ಆರೋಪಿಸಿದ್ದಾರೆ.

'ಅಬ್ ಕಿ ಬಾರ್ ಟ್ರಂಪ್ ಸೆ ಹಾರ್'

ನವದೆಹಲಿ (ಪಿಟಿಐ): ಭಾರತ–ಅಮೆರಿಕ ನಡುವಿನ ವ್ಯಾಪಾರದ ಮಧ್ಯಂತರ ಒಪ್ಪಂದ ಕುರಿತು ಕೇಂದ್ರ ಸರ್ಕಾರವನ್ನು ಟೀಕಿಸಿರುವ ಕಾಂಗ್ರೆಸ್, 'ಇದು ಅಬ್ ಕಿ ಬಾರ್ ಟ್ರಂಪ್ ಸೆ ಹಾರ್' (ಈ ಸಲ ಟ್ರಂಪ್‌ನಿಂದ ಸೋಲು) ಅನ್ನು ಪ್ರತಿಬಿಂಬಿಸುತ್ತದೆ ಎಂದು ವ್ಯಂಗ್ಯವಾಡಿದೆ.



'ಜಗತ್ತಿನ ವಿವಿಧ ದೇಶಗಳ ಆಮದುಗಳ ಮೇಲೆ ಟ್ರಂಪ್ ವಿಧಿಸಿದ್ದ ಸುಂಕವನ್ನು ಅಮೆರಿಕದ ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಹೀಗಾಗಿ ಎರಡೂ ದೇಶಗಳ ನಡುವಿನ ವ್ಯಾಪಾರ ಕುರಿತ ಮಧ್ಯಂತರ ಒಪ್ಪಂದವನ್ನು ಶೈತ್ಯಾಗಾರದಲ್ಲಿ ಇಡಬೇಕು' ಎಂದು ಕಾಂಗ್ರೆಸ್ ಭಾನುವಾರ ಆಗ್ರಹಿಸಿದೆ.

ಮಧ್ಯಂತರ ಒಪ್ಪಂದದ ಚೌಕಟ್ಟಿನ ನಿಯಮಗಳ ಕುರಿತು ಮತ್ತೆ ಮಾತುಕತೆ ನಡೆಸಬೇಕು. ಆಮದು ಉದಾರೀಕರಣ, ಕೃಷಿ ಉತ್ಪನ್ನಗಳ ಕುರಿತ ಷರತ್ತುಗಳನ್ನು ರದ್ದುಗೊಳಿಸಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಒತ್ತಾಯಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು 2019ರಲ್ಲಿ ಹ್ಯೂಸ್ಟನ್‌ನಲ್ಲಿ 'ಅಬ್ ಕಿ ಬಾರ್ ಟ್ರಂಪ್ ಸರ್ಕಾರ್' ಎಂದು ಘೋಷಣೆ ಕೂಗಿದ್ದರು. ಆದರೆ ಉಭಯ ದೇಶಗಳ ನಡುವಿನ ವ್ಯಾಪಾರ ಕುರಿತ ಮಧ್ಯಂತರ ಒಪ್ಪಂದದ ಚೌಕಟ್ಟನ್ನು ಗಮನಿಸಿದರೆ, 'ಅಬ್ ಕಿ ಬಾರ್ ಟ್ರಂಪ್ ಸೆ ಹಾರ್' ಎಂಬುದು ಸ್ಪಷ್ಟವಾಗಿದೆ ಎಂದು ಅವರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದರು.

'ಅಧ್ಯಕ್ಷ ಟ್ರಂಪ್ ಅವರು ಫೆಬ್ರುವರಿ 2ರಂದು ಈ ಒಪ್ಪಂದವನ್ನು ಘೋಷಿಸಿದರು. ಅಷ್ಟು ತರಾತುರಿಯಲ್ಲಿ ಒಪ್ಪಂದವನ್ನು ಘೋಷಿಸುವಂತೆ ಅವರನ್ನು ಬಲವಂತಪಡಿಸುವ ಅಗತ್ಯವೇನಿತ್ತು' ಎಂದು ರಮೇಶ್ ಪ್ರಶ್ನಿಸಿದರು.

'ದೇಶದ ಭದ್ರತಾ ಕ್ಷೇತ್ರದ ವೈಫಲ್ಯಗಳ ಕುರಿತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಲೋಕಸಭೆಯಲ್ಲಿ ಪ್ರಸ್ತಾಪಿಸಿದ್ದರು. ಇದರ ಗಮನವನ್ನು ಬೇರೆಡೆ ಸೆಳೆಯಲು ಈ ಒಪ್ಪಂದದ ಘೋಷಣೆ ಮಾಡಿಸಲಾಯಿತೇ' ಎಂದು ಅವರು ಪ್ರಶ್ನಿಸಿದರು.

'ಅಧ್ಯಕ್ಷ ಟ್ರಂಪ್ ಅವರು ಈಗ ಸುಂಕಗಳನ್ನು ಬದಲಾಯಿಸಿದ್ದಾರೆ. ಹೀಗಾಗಿ ಭಾರತವು ತನ್ನ ಬದ್ಧತೆಗಳನ್ನು ಬದಲಾಯಿಸುವ ಎಲ್ಲ ಹಕ್ಕನ್ನು ಹೊಂದಿದೆ' ಎಂದು ಅವರು ಪ್ರತಿಪಾದಿಸಿದರು.

'ಸುಂಕಕ್ಕೆ ಸಂಬಂಧಿಸಿದಂತೆ ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪು ಯಾವುದೇ ಸಮಯದಲ್ಲಿ ಬರಬಹುದು ಎಂಬುದು ತಿಳಿದಿದ್ದರೂ ಪ್ರಧಾನಿ ಮತ್ತು ವಾಣಿಜ್ಯ ಸಚಿವರು ಒಪ್ಪಂದಕ್ಕಾಗಿ ಆತುರಪಟ್ಟಿದ್ದು ಏಕೆ?' ಎಂದೂ ಅವರು ಕೇಳಿದರು.

ಅಂಗಾಂಗ ದಾನ: ಮೋದಿ ಶ್ಲಾಘನೆ

ನವದೆಹಲಿ (ಪಿಟಿಐ): ಅಂಗಾಂಗ ದಾನದ ಉದಾತ್ತ ನಡೆಯನ್ನು ಶ್ಲಾಘಿಸಿದ ಪ್ರಧಾನಿ ನರೇಂದ್ರ ಮೋದಿ, ಈ ವಿಷಯದ ಜಾಗೃತಿಯಿಂದ ಅಗತ್ಯವಿರುವ ವ್ಯಕ್ತಿಗಳಿಗೆ ನೆರವಾಗುವ ಜೊತೆಗೆ ದೇಶದ ವೈದ್ಯಕೀಯ ಕ್ಷೇತ್ರದ ಸಂಶೋಧನೆಯನ್ನು ಬಲಪಡಿಸಲಿದೆ ಎಂದು ತಿಳಿಸಿದರು.

ಇತ್ತೀಚೆಗೆ ಕೇರಳದ 10 ತಿಂಗಳ ಮಗು ಆಲಿನ್ ಶೆರಿನ್ ಅಬ್ರಹಾಂ ಮೃತಪಟ್ಟ ಸಂದರ್ಭದಲ್ಲಿ ಹೆತ್ತವರು ಅಂಗಾಂಗ ದಾನ ಮಾಡಿದ್ದನ್ನು ಸ್ಮರಿಸಿದರು.

'ಕೆಲವು ದಿನಗಳ ಹಿಂದೆ, ಕೇರಳದ ಮಗು ಆಲಿನ್ ಶೆರಿನ್ ಅಬ್ರಹಾಂ ಪ್ರಾಣ ಕಳೆದುಕೊಂಡಿತು. ಹೆತ್ತವರ ನೋವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಇಂತಹ ನೋವಿನ ಸಂದರ್ಭದಲ್ಲಿಯೂ ಮಗುವಿನ ತಂದೆ ಅರುಣ್ ಅಬ್ರಹಾಂ, ತಾಯಿ ಶೆರಿನ್ ಅವರು ಅಂಗಾಂಗ ದಾನದ ಕುರಿತು ತೆಗೆದುಕೊಂಡ ನಿರ್ಧಾರವು ದೇಶದ ಪ್ರತಿಯೊಬ್ಬ ನಾಗರಿಕರ ಹೃದಯದಲ್ಲಿ ಗೌರವ ತುಂಬುವಂತೆ ಮಾಡಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಆಲಿನ್ ಶೆರಿನ್ ನಮ್ಮ ಜೊತೆಗಿರಲು ಸಾಧ್ಯವಿಲ್ಲ. ಆದರೆ, ಆಕೆಯ ಹೆಸರು ದೇಶದ ಅತ್ಯಂತ ಕಿರಿಯ ಅಂಗಾಂಗ ದಾನಿ ಎಂದು ದಾಖಲೆಯಾಗಿದೆ' ಎಂದು ಸ್ಮರಿಸಿದರು.

ಲಕ್ಷ್ಮೀ ಸಾಧನೆಗೂ ಮೆಚ್ಚುಗೆ: 'ಕಳೆದ ವರ್ಷ ದೆಹಲಿ ಮೂಲದ ಲಕ್ಷ್ಮೀ ದೇವಿ ಅವರು 14 ಕಿ.ಮೀ. ಚಾರಣ ಮಾಡಿ ಕೇದರಾನಾಥ ದೇವಸ್ಥಾನಕ್ಕೆ ತಲುಪಿದ್ದರು. ಈ ಚಾರಣ ಕೈಗೊಳ್ಳುವ ಮುನ್ನ ಅವರ ಹೃದಯವು ಶೇಕಡಾ 15ರಷ್ಟು ಮಾತ್ರ ಕೆಲಸ ಮಾಡುತ್ತಿತ್ತು. ನಂತರ ಮೃತ ವ್ಯಕ್ತಿಯಿಂದ ಹೃದಯ ದಾನ ಪಡೆದುಕೊಂಡು, ಕಸಿ ಮಾಡಿಸಿಕೊಂಡು ಈ ಚಾರಣ ಮಾಡಿ, ಜೀವನವನ್ನೇ ಬದಲಾಯಿಸಿಕೊಂಡಿದ್ದಾರೆ' ಎಂದು ಈ ವೇಳೆ ಮೆಚ್ಚುಗೆ ವ್ಯಕ್ತಪಡಿಸಿದರು.

'ಪಶ್ಚಿಮ ಬಂಗಾಳದ ಗೌರಂಗ್ ಬ್ಯಾನರ್ಜಿ ಕೂಡ ಸಮುದ್ರಮಟ್ಟದಿಂದ 14 ಸಾವಿರ ಅಡಿ ಎತ್ತರದಲ್ಲಿರುವ ನಾಥುಲಾಗೆ ಎರಡು ಬಾರಿ ಯಶಸ್ವಿಯಾಗಿ ಏರಿದ್ದರು. ವಿಶೇಷವೆಂದರೆ, ಶ್ವಾಸಕೋಶ ಕಸಿ ಮಾಡಿಸಿಕೊಂಡ ನಂತರ ಈ ಸಾಧನೆ ಮಾಡಿದ್ದರು. ಅದೇ ರೀತಿ, ರಾಜಸ್ಥಾನದ ಸಿಕಾರ್‌ನ ರಾಮ್‌ದೇವ್ ಸಿಂಗ್ ಅವರು ಮೂತ್ರಪಿಂಡ ಕಸಿ ಮಾಡಿಕೊಂಡ ಕ್ರೀಡಾ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ' ಎಂದು ಸ್ಮರಿಸಿದರು.

ಮೋದಿ ಉಲ್ಲೇಖಿಸಿದ ಅಂಶಗಳು
- ತಮಿಳುನಾಡಿನ ಜನರ ಹೃದಯದಲ್ಲಿ ಅಮ್ಮ ಜಯಲಲಿತಾ ನೆಲಸಿದ್ದಾರೆ.
- ಎ.ಐ ಶೃಂಗಸಭೆಯಲ್ಲಿನ ಸಾಧನೆಗಳ ನೆನಪು
- ಜಾಗತಿಕ ಮಟ್ಟದಲ್ಲಿ ಬೇಡಿಕೆ ಇರುವ ಉತ್ಪನ್ನ, ಸೇವೆಗಳನ್ನು ಭಾರತ ಉತ್ಪಾದಿಸಬೇಕು
- ನವೋದ್ಯಮಿಗಳಿಗೆ ಪ್ರಧಾನಿ ಸಲಹೆ
- 250 ವರ್ಷಗಳ ಕೇರಳದ ಕುಂಭಮೇಳ ನೆನಪು

'ಮನದ ಮಾತು' ಕಾರ್ಯಕ್ರಮದಲ್ಲಿ ಅಂಗಾಂಗ ದಾನದ ಉದಾತ್ತ ಕಾರ್ಯಕ್ಕೆ ಶ್ಲಾಘನೆ

ನಂಜನಗೂಡು ರಸಬಾಳೆ ಉಲ್ಲೇಖ

ನವದೆಹಲಿ(ಪಿಟಿಐ): 'ದೇಶದ ಕೃಷಿ ಉತ್ಪನ್ನಗಳು ವಿದೇಶಕ್ಕೂ ರವಾನೆಯಾಗುತ್ತಿವೆ. ನಂಜನಗೂಡಿನ ರಸಬಾಳೆ, ಮೈಸೂರಿನ ವೀಳ್ಯದೆಳೆ ಹಾಗೂ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಲಿಂಬೆಹಣ್ಣು ಮಾಲ್ದೀವ್ಸ್‌ಗೂ ರಫ್ತಾಗುತ್ತಿದೆ' ಎಂದು ಮೋದಿ ಪ್ರಶಂಸಿಸಿದರು.



ಮಾಸಿಕ 'ಮನದ ಮಾತು' ಕಾರ್ಯಕ್ರಮದಲ್ಲಿ ಈ ವಿಷಯ ಉಲ್ಲೇಖಿಸಿದ ಅವರು, 'ಈ ಉತ್ಪನ್ನಗಳು ವಿಶೇಷ ರುಚಿ ಹಾಗೂ ಗುಣಮಟ್ಟ ಹೊಂದಿದ್ದು, ಭೌಗೋಳಿಕ ಮಾನ್ಯತೆಯನ್ನು ಹೊಂದಿವೆ. ಗುಣಮಟ್ಟದ ಜೊತೆಗೆ ಬೆಳೆಯುವ ಪ್ರಮಾಣವು ಏರಿಕೆಯಾಗಿದೆ' ಎಂದರು.

'ಕೇರಳದ ಕೃಷಿ ಭೂಮಿಯೊಂದರಲ್ಲಿ 570 ತಳಿ ಭತ್ತ ಬೆಳೆಯಲಾಗಿದ್ದು, ಒಡಿಶಾದ ರೈತರೊಬ್ಬರು ನೀರು ಉಳಿಸುವ ಮೂಲಕ ಹೆಚ್ಚಿನ ಆದಾಯ ಗಳಿಸುತ್ತಿದ್ದಾರೆ ರೈತರ ಕಠಿಣ ಶ್ರಮದಿಂದಲೇ ವಿಶ್ವದಲ್ಲಿ ಅತಿ ಹೆಚ್ಚು ಭತ್ತ ಬೆಳೆಯುವ ರಾಷ್ಟ್ರವಾಗಿ ಭಾರತ ಹೊರಹೊಮ್ಮಿರುವುದು ಅಂಕಿಅಂಶಗಳಿಂದ ಕಂಡುಬಂದಿದೆ. ದೇಶದ ಅಗತ್ಯವನ್ನು ಪೂರೈಸುವ ಜೊತೆಗೆ ವಿಶ್ವಕ್ಕೂ ಪೂರೈಕೆ ಮಾಡುತ್ತಿದೆ' ಎಂದು ಹೇಳಿದರು.

'25 ದೇಶಗಳಿಗೆ ಇಂಡಿ ಲಿಂಬೆ ರಫ್ತು'



ವಿಜಯಪುರ: ಪ್ರಧಾನಿ ಮನ್‌ಕಿ ಬಾತ್‌ನಲ್ಲಿ ಉಲ್ಲೇಖಿಸಿ, ಶ್ಲಾಘಿಸಿದ ಇಂಡಿ 'ಕಾಗ್ಜಿ' (KAGZI) ಲಿಂಬೆ ವಿದೇಶಗಳಿಗೆ ರಫ್ತಾಗುತ್ತಿದೆ.

ಬಾಂಗ್ಲಾದೇಶ, ನೇಪಾಳ, ದುಬೈ, ಅಬುದಾಬಿ, ಕುವೈತ್, ಶ್ರೀಲಂಕಾ, ಪಾಕಿಸ್ತಾನ, ಮಾಲ್ದೀವ್ಸ್ ಸೇರಿ 25 ದೇಶಗಳಿಗೆ ಉತ್ಕೃಷ್ಟ ಗುಣಮಟ್ಟದ ಲಿಂಬೆಯನ್ನು ರಫ್ತು ಮಾಡಲಾಗುತ್ತಿದೆ.

ಹಿಂದೆ ವಾರ್ಷಿಕ ಪ್ರತಿವರ್ಷ ₹350 ರಿಂದ ₹500 ಕೋಟಿ ವಹಿವಾಟು ನಡೆಯುತ್ತಿದ್ದ ಇಂಡಿ ನಿಂಬೆ ಇಂದು ₹ 600 ಕೋಟಿಯಿಂದ ₹ 800 ಕೋಟಿ ವಹಿವಾಟು ನಡೆಯುತ್ತಿದೆ ಎಂದು ನಿಂಬೆ ಅಭಿವೃದ್ಧಿ ಮಂಡಳಿ ತಿಳಿಸಿದೆ.

'ಇಂಡಿ ಲಿಂಬೆಗೆ ಜಿಐ ಟ್ಯಾಗ್ ಮತ್ತು ವಿದೇಶಕ್ಕೆ ರಫ್ತು ಕುರಿತು ಪ್ರಧಾನಿ ಪ್ರಸ್ತಾಪಿಸಿರುವುದು ಜಿಲ್ಲೆಯ ಲಿಂಬೆ ಬೆಳೆಗಾರರಿಗೆ ಸ್ಫೂರ್ತಿ ನೀಡಿದಂತಾಗಿದೆ' ಎಂದು ಬಿಜೆಪಿ ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ ಗುರುಲಿಂಗಪ್ಪ ಅಂಗಡಿ ಪ್ರತಿಕ್ರಿಯಿಸಿದ್ದಾರೆ.

ವೀಳ್ಯದೆಲೆ ರಫ್ತಿಗೆ ಮೆಚ್ಚುಗೆ



ಮೈಸೂರು: ಜಿಲ್ಲೆಯ ಹೆಗ್ಗುರುತುಗಳಾದ ನಂಜನಗೂಡು ರಸಬಾಳೆ ಹಾಗೂ ಮೈಸೂರು ವೀಳ್ಯದೆಲೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಡೆದ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದ್ದಾರೆ.

'ಈ ಉತ್ಪನ್ನಗಳು ಈಚೆಗೆ ಮಾಲ್ದೀವ್ಸ್‌ಗೆ ರಫ್ತಾಗಿದ್ದನ್ನು ಉಲ್ಲೇಖಿಸಿದ್ದಾರೆ. 'ಇವು, ರುಚಿ, ಗುಣಮಟ್ಟಕ್ಕೆ ಹೆಸರಾಗಿವೆ. ಜಿಐ ಟ್ಯಾಗ್ (ಭೌಗೋಳಿಕ ಸೂಚ್ಯಂಕ) ಪಡೆದಿವೆ. ಇಂದಿನ ರೈತರು ಗುಣಮಟ್ಟವನ್ನು ಬಯಸುತ್ತಾರೆ. ಇಳುವರಿ ಹೆಚ್ಚಿಸುತ್ತಿದ್ದಾರೆ ಮತ್ತು ಛಾಪು ಮೂಡಿಸುತ್ತಿದ್ದಾರೆ' ಎಂದು ಶ್ಲಾಘಿಸಿದ್ದಾರೆ.

ನಂಜನಗೂಡು ರಸಬಾಳೆ ಹಾಗೂ ಮೈಸೂರು ವೀಳ್ಯದೆಲೆಯನ್ನು ಮೈಸೂರಿನಿಂದ ಇದೇ ಮೊದಲಿಗೆ ಮಾಲ್ದೀವ್ಸ್‌ಗೆ ರಫ್ತು ಮಾಡಿದ್ದ ಬಗ್ಗೆ 'ಪ್ರಜಾವಾಣಿ'ಯಲ್ಲಿ ಜ.29ರಂದು ವಿಶೇಷ ವರದಿ ಪ್ರಕಟವಾಗಿತ್ತು.

ವಿಶಿಷ್ಟ ರುಚಿಯ ಕಾರಣದಿಂದಾಗಿ ಜಿಐ ಪದಾರ್ಥಗಳ ಪಟ್ಟಿಯಲ್ಲಿರುವ 'ನಂಜನಗೂಡು ರಸಬಾಳೆ'ಯು ದ್ವೀಪಗಳ ದೇಶ ಮಾಲ್ದೀವ್ಸ್‌ನಲ್ಲಿ ಮಾರಾಟವಾಗಿತ್ತು. ಸುತ್ತೂರಿನ ಐಸಿಎಆರ್- ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರವು (ಕೆವಿಕೆ) ಸೇತುವೆಯಾಗಿ ಕೆಲಸ ಮಾಡಿತ್ತು. ರಸಬಾಳೆಯು ಮಾಲ್ದೀವ್ಸ್ ಗ್ರಾಹಕರ ಗಮನಸೆಳೆದಿತ್ತು. ಇದರೊಂದಿಗೆ, ಈ ಬೆಳೆಗಳ ರಫ್ತಿಗೆ ಇರುವ ಅವಕಾಶದ ಬಾಗಿಲು ತೆರೆಯುವ ಕೆಲಸ ನಡೆದಿತ್ತು.

500 ಕೆ.ಜಿ. ನಂಜನಗೂಡು ರಸಬಾಳೆ ಹಾಗೂ 35 ಕೆ.ಜಿ. ಮೈಸೂರು ವೀಳ್ಯದೆಲೆ ರಫ್ತಾಗಿತ್ತು. ನಂಜನಗೂಡು ತಾಲ್ಲೂಕಿನ ಕುರಹಟ್ಟಿಯ ಕೆ.ಎಂ. ಶಿವರಾಜು ಹಾಗೂ ರವೀಶ್ ಎನ್., ನಾಗಪ್ಪ ಅವರಿಂದ ಖರೀದಿಸಿ ರವಾನಿಸಲಾಗಿತ್ತು. ಉತ್ತಮ ದರವೂ ಸಿಕ್ಕಿತ್ತು. ಈ ಪ್ರಯತ್ನವನ್ನು ಪ್ರಧಾನಿ ಮೋದಿ ಉಲ್ಲೇಖಿಸಿದ್ದಾರೆ.

'ಮೈಸೂರಿನ ಕೃಷಿ ಉತ್ಪನ್ನಗಳ ಪ್ರಧಾನಿ ಪ್ರಸ್ತಾಪಿಸಿದ್ದು ಖುಷಿ ತಂದಿದೆ. ಕೃಷಿಕರಿಗೆ ಹೆಮ್ಮೆಯ ವಿಷಯವಾಗಿದೆ' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಭಕ್ತಿಯಲ್ಲಿ ಬೇಡಿಕೆಯಿಲ್ಲ; ಅರ್ಪಣೆ ಇದೆ.


-ರವೀಂದ್ರನಾಥ ಟ್ಯಾಗೋರ್

ಸಂಪಾದಕೀಯ

ಆಹಾರ ಪೊಟ್ಟಣಗಳ ಮೇಲೆ ವಿವರ ಎಫ್‌ಎಸ್‌ಎಸ್‌ಎಐ ಹೊಣೆ ಹೊರಲಿ

ಸಕ್ಕರೆ, ಉಪ್ಪು ಮತ್ತು ಪರ್ಯಾಪ್ತ ಕೊಬ್ಬು ಹೆಚ್ಚಿನ ಪ್ರಮಾಣದಲ್ಲಿ ಇರುವ ಎಚ್ಚರಿಕೆಯ ಸಂದೇಶವನ್ನು ಪ್ಯಾಕ್ ಆಗಿರುವ ಆಹಾರದ ಪೊಟ್ಟಣದ ಮುಂಭಾಗದಲ್ಲಿಯೇ ಪ್ರಕಟಿಸುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವನೆಯು ಬಹುವರ್ಷಗಳಿಂದ ಚರ್ಚೆಯಲ್ಲಿದೆ. ಈ ವಿಚಾರವಾಗಿ ಅಂತಿಮ ತೀರ್ಮಾನ ಕೈಗೊಳ್ಳಬೇಕೆಂದು ಕೇಂದ್ರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಶೀಘ್ರವೇ ನಿರ್ಧಾರವೊಂದನ್ನು ಕೈಗೊಳ್ಳಲಾಗುತ್ತದೆ ಎಂದು ಸೂಚನೆಯನ್ನು ಈ ಹಿಂದೆ ನೀಡಿತ್ತು. ವಿಷಯದ ಬಗ್ಗೆ ವರದಿ ಸಿದ್ಧಪಡಿಸುವಂತೆ ಅಹಮದಾಬಾದ್‌ನ ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆಗೆ (ಐಐಎಂ-ಎ) ಸೂಚನೆಯನ್ನು ನೀಡಿತ್ತು. ಈ ರೀತಿ ಕಡ್ಡಾಯವಾಗಿ ಎಚ್ಚರಿಕೆಯ ಸಂದೇಶ ಪ್ರಕಟಿಸುವುದರಿಂದ ಜನರಲ್ಲಿ ಆರೋಗ್ಯಕರವಾದ ಆಹಾರ ಸೇವನೆಯ ಅಭ್ಯಾಸ ಬೆಳೆಸಲು ನೆರವಾಗುತ್ತದೆ; ಕೆಲವು ಬಗೆಯ ಕಾಯಿಲೆಗಳನ್ನು ತಡೆಯಲು ಕೂಡ ಸಾಧ್ಯವಾಗುತ್ತದೆ ಎಂದು ಹೇಳಿತ್ತು. ಈ ಬಗೆಯ ಸಂದೇಶ ಪ್ರಕಟಿಸುವುದನ್ನು 2023ರಿಂದ ಜಾರಿಗೊಳಿಸಲಾಗುತ್ತದೆ, ನಾಲ್ಕು ವರ್ಷಗಳ ನಂತರದಲ್ಲಿ ಅದನ್ನು ಕಡ್ಡಾಯ ಮಾಡಲಾಗುತ್ತದೆ ಎಂಬ ವರದಿಗಳೂ ಇದ್ದವು. ಈ ವ್ಯವಸ್ಥೆಯ ಅಡಿಯಲ್ಲಿ ಪೌಷ್ಟಿಕಾಂಶಗಳ ಮಾಹಿತಿ ನೀಡುವ, ಎಚ್ಚರಿಕೆಯ ಸಂದೇಶವನ್ನು ನೀಡುವ ಪದ್ಧತಿ ಜಾರಿಗೆ ಬರಬೇಕಿತ್ತು. ಪ್ಯಾಕ್ ಮಾಡಲಾಗುವ ಆಹಾರ ವಸ್ತುಗಳಿಗೆ 0.5ರಿಂದ 5ರವರೆಗೆ ಅಂಕ ನೀಡಬೇಕಾಗಿತ್ತು.

ಆಹಾರದ ಪೊಟ್ಟಣದ ಮುಂಭಾಗದಲ್ಲಿ ಈ ವಿವರಗಳನ್ನು ಪ್ರಕಟಿಸುವ ಕುರಿತಂತೆ ಕಾನೂನಿನಲ್ಲಿ ಅಗತ್ಯ ಇರುವ ಬದಲಾವಣೆಗಳು ಏನು ಎಂಬುದರ ಬಗ್ಗೆ ತಿಳಿಸಲು ತಜ್ಞರ ಸಮಿತಿಯೊಂದನ್ನು ಸುಪ್ರೀಂ ಕೋರ್ಟ್ ಕಳೆದ ವರ್ಷ ಸೂಚಿಸಿತ್ತು. ಈಚೆಗೆ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರವನ್ನು ಸಲ್ಲಿಸಿರುವ ಎಫ್‌ಎಸ್‌ಎಸ್‌ಎಐ, ಪೊಟ್ಟಣದಲ್ಲಿ ಬರುವ ಆಹಾರ ವಸ್ತುಗಳನ್ನು ವ್ಯವಸ್ಥಿತವಾಗಿ ಗುರುತಿಸುವ-ವರ್ಗೀಕರಿಸುವ ಉದ್ದೇಶ ತನಗಿದೆ ಎಂದು ಹೇಳಿದೆ. ಈ ಬಗೆಯ ಮಾಹಿತಿಯನ್ನು ಗ್ರಾಹಕರು ಯಾವ ಬಗೆಯಲ್ಲಿ ಬಳಸುತ್ತಾರೆ ಎಂಬುದನ್ನು ತಿಳಿಯಲು ಸಮೀಕ್ಷೆ ನಡೆಸುವ, ಆ ಮಾಹಿತಿಯನ್ನು ನೀಡುವ ವಿಚಾರವಾಗಿ ಜಾಗತಿಕ ಮಟ್ಟದಲ್ಲಿ ಯಾವ ಕ್ರಮ ಅನುಸರಿಸಲಾಗುತ್ತಿದೆ ಎಂಬುದನ್ನು ತಿಳಿಯುವ, ಎಐಐಎಂ-ಎ ವಲಯದ ಉದ್ದಿಮೆಗಳ ಜೊತೆ ಸಮಾಲೋಚನೆ ನಡೆಸುವ ಪ್ರಸ್ತಾವವನ್ನು ಪ್ರಾಧಿಕಾರ ಮಾಡಿದೆ.



ಆಹಾರ ಪದಾರ್ಥಗಳಲ್ಲಿ ಯಾವೆಲ್ಲ ವಸ್ತುಗಳು ಇವೆ ಎನ್ನುವ ಮಾಹಿತಿ ಪೊಟ್ಟಣಗಳ ಮೇಲೆ ಇರುವುದು ಅಗತ್ಯ. ಈ ವಿಚಾರವಾಗಿ ಸ್ಪಷ್ಟ ನಿಯಮಗಳು ರೂಪುಗೊಳ್ಳಬೇಕು.

ಆದರೆ ಎಫ್‌ಎಸ್‌ಎಸ್‌ಎಐ ಕ್ರಮದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠವು 'ಪ್ರಾಧಿಕಾರವು ಬಹುರಾಷ್ಟ್ರೀಯ ಕಂಪನಿಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ, ದೇಶದ ಜನರ ಆರೋಗ್ಯದ ಹಕ್ಕಿನ ಬಗ್ಗೆ ಆಲೋಚಿಸಬೇಕು' ಎಂದು ಹೇಳಿದೆ. ಸಲಹೆಗಳನ್ನು ಆಹ್ವಾನಿಸುವ ಬಗ್ಗೆ ಆಲೋಚಿಸಿ, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ಪೀಠವು ಪ್ರಾಧಿಕಾರಕ್ಕೆ ಸೂಚಿಸಿದೆ. ಪೊಟ್ಟಣದಲ್ಲಿ ಇರುವ ಎಲ್ಲ ಆಹಾರ ವಸ್ತುಗಳ ವಿಚಾರದಲ್ಲಿ, ಪೊಟ್ಟಣದ ಮುಂಭಾಗದಲ್ಲಿಯೇ ಎಚ್ಚರಿಕೆಯ ಸಂದೇಶವನ್ನು ಪ್ರಕಟಿಸಬೇಕು ಎಂಬ ಮನವಿ ಇರುವ ಅರ್ಜಿಗಳ ವಿಚಾರಣೆ ನಡೆಸಿದ ಪೀಠವು ಈ ಸೂಚನೆ ನೀಡಿದೆ. ಪೊಟ್ಟಣದ ಮೇಲೆ ಅಂಕಗಳನ್ನು ಪ್ರಕಟಿಸುವುದನ್ನು ಅರ್ಜಿದಾರರು ವಿರೋಧಿಸಿದ್ದಾರೆ. ಈ ರೀತಿ ಅಂಕಗಳನ್ನು ಪ್ರಕಟಿಸುವುದರಿಂದ ಸಕ್ಕರೆ, ಉಪ್ಪು ಮತ್ತು ಪರ್ಯಾಪ್ತ ಕೊಬ್ಬಿನ ಮಟ್ಟ ಅತಿಯಾಗಿರುವ ವಿಚಾರ ಗ್ರಾಹಕರಿಗೆ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಜೀವನಶೈಲಿಗೆ ಸಂಬಂಧಿಸಿದ ಕಾಯಿಲೆಗಳು ದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗುತ್ತಿರುವ ಸಂದರ್ಭದಲ್ಲಿ ಈ ಬಗೆಯಲ್ಲಿ ಆಹಾರದ ಬಗ್ಗೆ ಕೆಲವು ಅಗತ್ಯ ಮಾಹಿತಿಗಳನ್ನು ಒದಗಿಸುವುದು ಮುಖ್ಯವಾಗುತ್ತದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 11ಕ್ಕೂ ಹೆಚ್ಚಿನವರಿಗೆ ಮಧುಮೇಹದ ಸಮಸ್ಯೆ ಇದೆ. ಜಗತ್ತಿನ ಮಧುಮೇಹದ ರಾಜಧಾನಿ ಎಂಬ ಅಪಖ್ಯಾತಿಗೆ ಭಾರತ ಪಾತ್ರವಾಗಿದೆ. ಅತಿಯಾದ ಉದ್ವೇಗ, ಬೊಜ್ಜು, ಅತಿಯಾದ ಕೊಬ್ಬಿನ ಸಮಸ್ಯೆ ಕೂಡ ವ್ಯಾಪಕವಾಗಿದೆ. ಪ್ಯಾಕ್ ಮಾಡಿರುವ ಆಹಾರದಲ್ಲಿ ಬಳಕೆಯಾಗಿರುವ ಪದಾರ್ಥಗಳ ಬಗ್ಗೆ, ಅತಿಯಾಗಿ ಸಂಸ್ಕರಿಸಲಾಗಿರುವ ಆಹಾರದಲ್ಲಿ ಬಳಸಲಾಗಿರುವ ಪದಾರ್ಥಗಳ ಬಗ್ಗೆ ಜನರಿಗೆ ಸರಿಯಾಗಿ ಮಾಹಿತಿ ಒದಗಿಸಬೇಕು, ಎಚ್ಚರಿಕೆಯ ಸಂದೇಶ ನೀಡಬೇಕು. ಜನರಿಗೆ ಇಂತಹ ಆಹಾರ ವಸ್ತುಗಳ ಬದಲು ಆರೋಗ್ಯಕರವಾದ ಪರ್ಯಾಯ ಆಯ್ಕೆಗಳು ಬೇಕು. ಆಹಾರ ವಸ್ತುಗಳ ಬಗ್ಗೆ ನೀಡುವ ಮಾಹಿತಿಯು ವಿವರವಾಗಿರಬೇಕು, ಎಲ್ಲ ಅಂಶಗಳನ್ನೂ ಒಳಗೊಂಡಿರಬೇಕು. ಈ ವಿಚಾರವಾಗಿ ನಿಯಮಗಳನ್ನು ರೂಪಿಸಿ, ಅವುಗಳನ್ನು ಅನುಷ್ಠಾನಕ್ಕೆ ತರುವ ಹೊಣೆಯು ಎಫ್‌ಎಸ್‌ಎಸ್‌ಎಐ ಮೇಲಿದೆ.

ಭಾರತಕ್ಕೆ ಅಮೆರಿಕ 'ಸುಪ್ರೀಂ' ಬಲ?



ವಿಶ್ಲೇಷಣೆ

ವೇಣುಗೋಪಾಲ್ ಟಿ.ಎಸ್.

> ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದದಲ್ಲಿ ಭಾರತ ಪಡೆದಿರುವುದಕ್ಕಿಂತಲೂ ಬಿಟ್ಟುಕೊಟ್ಟಿರುವುದೇ ಹೆಚ್ಚು. ಈ ಒಪ್ಪಂದ ಭಾರತದ ಹಿತಾಸಕ್ತಿಗೆ ಧಕ್ಕೆ ಉಂಟುಮಾಡುವ ಸಾಧ್ಯತೆಯೇ ಹೆಚ್ಚು. ಈ ಸಂದರ್ಭದಲ್ಲೇ, ಅಮೆರಿಕದ ಸುಪ್ರೀಂ ಕೋರ್ಟ್ ಟ್ರಂಪ್ ಸುಂಕ ಸಮರಕ್ಕೆ ಪ್ರಹಾರ ನೀಡಿದೆ. ಆ ತೀರ್ಪಿನ ಅನುಕೂಲ ಭಾರತಕ್ಕೆ ದೊರೆಯುತ್ತದೆಯೆ?

ವಿಶ್ವ ಆರ್ಥಿಕತೆ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಪ್ರಸ್ತುತ ಎಲ್ಲವೂ ಅನಿಶ್ಚಿತವಾಗಿದೆ. ಇಂದಿದ್ದ ಪರಿಸ್ಥಿತಿ ನಾಳೆ ಇರುವುದಿಲ್ಲ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇತರ ದೇಶಗಳ ಮೇಲೆ ವಿಧಿಸಿದ್ದ ಸುಂಕವನ್ನು ಅಮೆರಿಕದ ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಆದರೆ, ಟ್ರಂಪ್ ಮಾತ್ರ 'ಭಾರತದೊಂದಿಗಿನ ಒಪ್ಪಂದ ಮುಂದುವರಿಯುತ್ತದೆ. ಭಾರತ ಸುಂಕ ಕಟ್ಟುತ್ತದೆ' ಎಂದಿದ್ದಾರೆ. ಭಾರತದ ನಿಲುವು ಇನ್ನೂ ಸ್ಪಷ್ಟವಾಗಿಲ್ಲ.

ಅಮೆರಿಕದ ಸರಕುಗಳಿಗೆ ಭಾರತ ಒಂದು ದೊಡ್ಡ ಮಾರುಕಟ್ಟೆ. ಜೊತೆಗೆ ಸುಂಕದಿಂದ ಬಂಡವಾಳವೂ ಹೆಚ್ಚು ಸಂಗ್ರಹವಾಗುತ್ತದೆ. ಇಡೀ ಜಗತ್ತು ತನ್ನ ರಾಜಕೀಯ, ಆರ್ಥಿಕ ಹಾಗೂ ಮಿಲಿಟರಿ ಆಸಕ್ತಿಗೆ ಅನುಗುಣವಾಗಿ ನಡೆಯಬೇಕು ಅನ್ನುವ ಪ್ರಯತ್ನವನ್ನು ಅಮೆರಿಕ ನಿಲ್ಲಿಸುವುದಿಲ್ಲ. ಬೇರೆ ಮಾರ್ಗ ಹಿಡಿಯುತ್ತದೆ. ಆದರೆ, ಭಾರತಕ್ಕೆ ಅಮೆರಿಕದೊಂದಿಗೆ ಮಾಡಿಕೊಂಡಿರುವ ಒಪ್ಪಂದ ಹಿತಕರವಲ್ಲದಿದ್ದರೂ ಟ್ರಂಪ್ ತೋರಿಸಿದ ದಾರಿಯಲ್ಲಿ ನಡೆಯುತ್ತಿದ್ದೇವೆ.

ಭಾರತದೊಂದಿಗಿನ ವ್ಯಾಪಾರ ಒಪ್ಪಂದದ ಮೊದಲ ಸೂಚನೆ ಸಿಕ್ಕಿದ್ದು ಟ್ರಂಪ್ ಅವರ ಸೋಷಿಯಲ್ ಮೀಡಿಯಾ ಪೋಸ್ಟ್‌ನಿಂದ. ಪ್ರಧಾನಿ ನರೇಂದ್ರ ಮೋದಿಯವರು, 'ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿ, ಅಮೆರಿಕದಿಂದ ಹೆಚ್ಚಿನ ತೈಲ ಖರೀದಿಸಲು ಒಪ್ಪಿದ್ದಾರೆ. ಅಮೆರಿಕದ ಸರಕು ಸೇವೆಗಳ ಮೇಲಿನ ಸುಂಕವನ್ನು ಭಾರತ ರದ್ದುಗೊಳಿಸುತ್ತದೆ. ಅದಕ್ಕೆ ಪ್ರತಿಯಾಗಿ ಭಾರತೀಯ ಸರಕುಗಳ ಮೇಲಿನ ಸುಂಕವನ್ನು ಅಮೆರಿಕ ಶೇ 18ಕ್ಕೆ ಇಳಿಸುತ್ತದೆ. ಅಮೆರಿಕದಿಂದ 500 ಶತಕೋಟಿ ಡಾಲರ್ ಮೌಲ್ಯದ ಉತ್ಪನ್ನಗಳನ್ನು ಖರೀದಿಸಲು ಮೋದಿ ಒಪ್ಪಿದ್ದಾರೆ' ಎಂದು ಅದು ತಿಳಿಸಿತ್ತು. ನಂತರದಲ್ಲಿ ಮೋದಿಯವರು ಅಮೆರಿಕ ಸುಂಕವನ್ನು ಶೇ 18ಕ್ಕೆ ಇಳಿಸುತ್ತಿದೆ ಎಂದಷ್ಟೆ ತಿಳಿಸಿದರು. ಉಳಿದ ವಿಷಯಗಳಿಗೆ ಮೌನವಾಗಿದ್ದರು.

ಒಪ್ಪಂದದ ಸಂಪೂರ್ಣ ವಿವರಗಳು ಲಭ್ಯವಿಲ್ಲದಿದ್ದರೂ ಕೆಲವು ಅಂಶಗಳು ಸ್ಪಷ್ಟವಾಗಿವೆ. ರಷ್ಯಾದಿಂದ ತೈಲವನ್ನು ಖರೀದಿಸಿದ್ದಕ್ಕಾಗಿ ಭಾರತಕ್ಕೆ ದಂಡವಾಗಿ ಹೇರಿದ್ದ ಶೇ 25ರ ಸುಂಕವನ್ನು ಅಮೆರಿಕ ಹಿಂತೆಗೆದುಕೊಳ್ಳುತ್ತಿದೆ. ಆದರೆ, ರಷ್ಯಾದಿಂದ ನೇರವಾಗಿ ಅಥವಾ ಪರೋಕ್ಷವಾಗಿ ಭಾರತ ತೈಲ ಖರೀದಿಸಿದರೆ ಮತ್ತೆ ಶೇ 25ರಷ್ಟು ಸುಂಕ ವಿಧಿಸಲಾಗುತ್ತದೆ. ಆ ಬಗ್ಗೆ ಭಾರತದ ನಿಲುವು ಏನೆಂಬುದು ಸ್ಪಷ್ಟವಾಗಿಲ್ಲ. ಇಲ್ಲಿಯವರೆಗೂ ಅಮೆರಿಕದ ಒತ್ತಡವನ್ನು ಅನ್ಯಾಯ, ಅತಾರ್ಕಿಕ, ಅಸಮಂಜಸ ಎಂದು ಭಾರತದ ವಿದೇಶಾಂಗ ಸಚಿವರು ಖಂಡಿಸಿದ್ದರು. ಭಾರತ ತನ್ನ ಸ್ವಾಭಿಮಾನ, ಸ್ವಾಯತ್ತತೆ ಹಾಗೂ ಜನತೆಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತದೆ ಎಂದೂ ಹೇಳಿದ್ದರು. ಈಗ ಭಾರತ ಈ ನಿಲುವಿನಿಂದ ಹಿಂದೆ ಸರಿದಂತೆ ಕಾಣುತ್ತದೆ. ರಷ್ಯಾದಿಂದ ತೈಲ ಖರೀದಿಯನ್ನು ಕಡಿಮೆ ಮಾಡಲಾರಂಭಿಸಿದೆ. 2024ರಲ್ಲಿ ನಮ್ಮ ಒಟ್ಟು ತೈಲದಲ್ಲಿ ಶೇ 40ರಷ್ಟು ರಷ್ಯಾದಿಂದ ಬರುತ್ತಿತ್ತು. 2025ರಲ್ಲಿ ಅದು ಶೇ 25ಕ್ಕೆ ಇಳಿದಿದೆ. ಹಿಂದೆ ಇರಾನ್ ಹಾಗೂ ವೆನೆಜುವೆಲಾಗಳಿಂದ ತೈಲ ಖರೀದಿಯ ವಿಷಯದಲ್ಲೂ ಅಮೆರಿಕದ ಒತ್ತಡಕ್ಕೆ ಭಾರತ ಮಣಿದಿತ್ತು. ಇರಾನ್ ಜೊತೆಗಿನ ಎಲ್ಲ ವ್ಯಾಪಾರ ನಿಲ್ಲಿಸಿತ್ತು. ಭಾರತದ ತೈಲ ಬಳಕೆಯನ್ನು ಗಮನಿಸಲು ಟ್ರಂಪ್ ಉನ್ನತ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಿದ್ದಾರೆ ಅನ್ನುವ ವರದಿಗಳಿವೆ. ಜೊತೆಗೆ, 'ಅಮೆರಿಕದ ರಾಷ್ಟ್ರೀಯ ಸುರಕ್ಷತೆ, ವಿದೇಶಿ ನೀತಿ ಹಾಗೂ ಆರ್ಥಿಕ ವಿಷಯಗಳೊಂದಿಗೆ ಭಾರತ ಹೊಂದಾಣಿಕೆಗೆ ಸಿದ್ಧವಾಗಿದೆ' ಎಂದಿರುವುದು ಆತಂಕವನ್ನು ಮೂಡಿಸಿದೆ.

ಭಾರತ ಮುಂದಿನ ಐದು ವರ್ಷಗಳಲ್ಲಿ ಅಮೆರಿಕದಿಂದ 500 ಶತಕೋಟಿ ಡಾಲರ್ ಮೌಲ್ಯದ 'ಇಂಧನ ಉತ್ಪನ್ನಗಳು, ವಿಮಾನ ಮತ್ತು ವಿಮಾನದ ಬಿಡಿಭಾಗಗಳು, ವಿರಳ ಲೋಹಗಳು, ತಂತ್ರಜ್ಞಾನದ ಉತ್ಪನ್ನಗಳನ್ನು' ಖರೀದಿಸುವ ಇಂಗಿತವನ್ನು ವ್ಯಕ್ತಪಡಿಸಿದೆ. ಪ್ರಸ್ತುತ ಭಾರತ ಸುಮಾರು 50 ಶತಕೋಟಿ ಡಾಲರ್ ಮೌಲ್ಯದ ಸರಕುಗಳನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತಿದೆ. ಒಪ್ಪಂದಕ್ಕೆ ನಾವು ಬದ್ಧರಾದರೆ ಇದರ ಹತ್ತರಷ್ಟು ಆಮದು ಮಾಡಿಕೊಳ್ಳಬೇಕಾಗುತ್ತದೆ. ಇದು ನಮ್ಮ ಆರ್ಥಿಕತೆಗೆ ಹೊರೆಯಾಗುತ್ತದೆ. ನಮ್ಮ ಆರ್ಥಿಕತೆಗೆ ಅನುಕೂಲವಾಗುವ ಯಾವ ಸರಕುಗಳನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳಬಹುದು ಎನ್ನುವುದೂ ದೊಡ್ಡ ಪ್ರಶ್ನೆಯೇ. ಅಂತಿಮವಾಗಿ ರಷ್ಯಾದ ತೈಲದ ಬದಲಿಗೆ ಹೆಚ್ಚಿನ ಬೆಲೆ ತೆತ್ತು ಅಮೆರಿಕದಿಂದ ತೈಲವನ್ನೋ ಶಸ್ತ್ರಾಸ್ತ್ರಗಳನ್ನೋ ಖರೀದಿಸಬೇಕಾಗುತ್ತದೆ. ಅಮೆರಿಕದಿಂದ ಸರಕುಗಳನ್ನು ಕೊಳ್ಳಲು 50 ಶತಕೋಟಿ ಡಾಲರಿಗಿಂತ ಹೆಚ್ಚಿನ ಹಣ ವ್ಯಯಿಸಿದರೆ, ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುವ ಪ್ರಮಾಣವನ್ನು ತಗ್ಗಿಸಬೇಕಾಗುತ್ತದೆ. ಯುರೋಪ್, ನ್ಯೂಜಿಲೆಂಡ್ ಇತ್ಯಾದಿ ದೇಶಗಳೊಂದಿಗೆ ನಾವು ಮಾಡಿಕೊಂಡಿರುವ ವ್ಯಾಪಾರ ಒಪ್ಪಂದವನ್ನು ಮಾನ್ಯ ಮಾಡುವುದಕ್ಕೂ ಕಷ್ಟವಾಗುತ್ತದೆ. ಇದು ಸಮಾನ ಒಪ್ಪಂದವೂ ಇಲ್ಲ. ನಿರ್ಬಂಧ ಭಾರತಕ್ಕೆ ಮಾತ್ರ, ಅಮೆರಿಕಕ್ಕೆ ನಿರ್ಬಂಧವೇ ಇಲ್ಲ. ಎರಡು ದೇಶಗಳೂ ಗಣನೀಯವಾಗಿ ತಾಂತ್ರಿಕ ಉತ್ಪನ್ನಗಳ ವ್ಯಾಪಾರವನ್ನು ಹೆಚ್ಚಿಸುತ್ತವೆ ಎಂದು ಪಟ್ಟಿ ಮಾಡಿದ್ದ ಉತ್ಪನ್ನಗಳ ಪಟ್ಟಿಯಲ್ಲಿರುವುದೆಲ್ಲ ಅಮೆರಿಕ ರಫ್ತು ಮಾಡುವ ವಸ್ತುಗಳು!


ಈವರೆಗೆ ಆಹಾರ ಮತ್ತು ಕೃಷಿ ಉತ್ಪನ್ನಗಳನ್ನು ಅಂತರರಾಷ್ಟ್ರೀಯ ವ್ಯಾಪಾರ ಒಪ್ಪಂದಗಳಿಂದ ಹೊರಗಿಡಲಾಗಿತ್ತು. ಈಗ ಮೊದಲ ಬಾರಿಗೆ ಅವುಗಳನ್ನು ಒಪ್ಪಂದದ ಭಾಗವನ್ನಾಗಿಸಲಾಗಿದೆ. ಅಮೆರಿಕದ ಮೆಕ್ಕೆಜೋಳ (ಕಾರ್ನ್) ಹಾಗೂ ಸೋಯಾಗಳನ್ನು ಚೀನಾ ಕೊಳ್ಳುತ್ತಿಲ್ಲ. ಹಾಗಾಗಿ ಅಮೆರಿಕಕ್ಕೆ ಪರ್ಯಾಯ ಮಾರುಕಟ್ಟೆ ಬೇಕಾಗಿದೆ. ಭಾರತದಲ್ಲಿ ಅವುಗಳಿಗೆ ಒಳ್ಳೆಯ ಮಾರುಕಟ್ಟೆಯಿದೆ. ಭಾರತದ ಮೇಲಿನ ಒತ್ತಡಕ್ಕೆ ಇದು ಕೂಡ ಕಾರಣ. ಭಾರತದಲ್ಲಿ ಕುಲಾಂತರಿ ತಳಿಗಳಿಗೆ ಅವಕಾಶವಿಲ್ಲ. ಹಾಗಾಗಿ ಅಮೆರಿಕದ ಕುಲಾಂತರಿ ಮೆಕ್ಕೆಜೋಳ ಮತ್ತು ಸೋಯಾಕಾಳನ್ನು ನಿಷೇಧಿಸಲಾಗಿದೆ. ಆದರೆ ಒಣಗಿಸಿದ ಡಿಸ್ಟಿಲ್ಡ್ ಮೆಕ್ಕೆಜೋಳ (ಡಿಡಿಜಿಎಸ್) ಅಂದರೆ ಎಥೆನಾಲ್ ತಯಾರಿಸಿದ ಮೇಲೆ ಉಳಿಯುವ ಉಪಉತ್ಪನ್ನದ ಮಾರಾಟಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದನ್ನು ಹಸು, ಕೋಳಿ ಇತ್ಯಾದಿಗಳ ಮೇವಾಗಿ ಬಳಸಲಾಗುತ್ತದೆ. ಅಂದರೆ, ಅಮೆರಿಕದ ಕುಲಾಂತರಿ ಮೆಕ್ಕೆಜೋಳ ಡಿಡಿಜಿಎಸ್ ರೂಪದಲ್ಲಿ ಭಾರತವನ್ನು ಪ್ರವೇಶಿಸಲಿದೆ.

ಈಗಿನ ಒಪ್ಪಂದದ ಪ್ರಕಾರ ಭಾರತವು ಅಮೆರಿಕದ ಎಲ್ಲಾ ಕೈಗಾರಿಕಾ ಸರಕುಗಳು, ಪಶು ಆಹಾರಕ್ಕಾಗಿ ಬಳಸುವ ಒಣಗಿಸಿದ ಡಿಸ್ಟಿಲರಿ ಧಾನ್ಯಗಳು, ಕೆಂಪುಜೋಳ, ಗೋಡಂಬಿ-ಬಾದಾಮಿ, ತಾಜಾ ಮತ್ತು ಸಂಸ್ಕರಿಸಿದ ಹಣ್ಣುಗಳು, ಸೋಯಾ ಎಣ್ಣೆ, ವೈನ್ ಮತ್ತು ಸ್ಪಿರಿಟ್ ಹಾಗೂ ಇನ್ನಿತರ ಉತ್ಪನ್ನಗಳ ಮೇಲಿನ ಸುಂಕಗಳನ್ನು ತೆಗೆದುಹಾಕುತ್ತದೆ ಅಥವಾ ಕಡಿಮೆ ಮಾಡುತ್ತದೆ.

ಅಮೆರಿಕದಲ್ಲಿ ಬೆಳೆದ ಜೋಳಕ್ಕೆ ನಮ್ಮ ಮಾರುಕಟ್ಟೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಈವರೆಗೆ ಜೋಳದ ಮೇಲೆ ಹಾಕುತ್ತಿದ್ದ ಶೇ 57.75ರಷ್ಟು ಸುಂಕವನ್ನು ರದ್ದುಗೊಳಿಸಬೇಕಾಗುತ್ತದೆ. ವಿಶ್ವದಲ್ಲಿ ಅತಿಹೆಚ್ಚು ಜೋಳವನ್ನು ರಫ್ತು ಮಾಡುತ್ತಿರುವ ಅಮೆರಿಕಕ್ಕೆ ಭಾರತದ ಮಾರುಕಟ್ಟೆ ಬೇಕು. ವಿಪರೀತ ಸಬ್ಸಿಡಿ ಪಡೆದು ಬೆಳೆದ ಜೋಳವನ್ನು ಯಾವುದೇ ಸುಂಕವಿಲ್ಲದೆ ಭಾರತಕ್ಕೆ ಆಮದು ಮಾಡಿಕೊಳ್ಳಲು ಒಪ್ಪಿಕೊಂಡಿದ್ದೇವೆ. ಇದರಿಂದ ಜೋಳ ಬೆಳೆಯುವ ರಾಜ್ಯಗಳಿಗೆ ಸಮಸ್ಯೆಯಾಗುತ್ತದೆ.

ಭಾರತವು ಅಮೆರಿಕದ ಮೇಲಿನ ಸುಂಕವನ್ನು ತೆಗೆಯಲು ಒಪ್ಪಿಕೊಂಡಿದೆ. ಅದಕ್ಕೆ ಪ್ರತಿಯಾಗಿ ಅಮೆರಿಕ ತಾನು ವಿಧಿಸಿರುವ ಸುಂಕದಲ್ಲಿ ಶೇ 7ರಷ್ಟು ತಗ್ಗಿಸಲು ಮುಂದಾಗಿದೆ. ಇದರಿಂದ ಬಾಂಗ್ಲಾ ಮೊದಲಾದ ದೇಶಗಳೊಂದಿಗೆ ಅಮೆರಿಕದಲ್ಲಿ ಸ್ಪರ್ಧಿಸುವುದಕ್ಕೆ ಭಾರತಕ್ಕೆ ಸಾಧ್ಯವಾಗುತ್ತದೆ ಎನ್ನಲಾಗಿದೆ. ಆದರೆ, ಬಾಂಗ್ಲಾದ ಸರಕುಗಳ ಮೇಲಿನ ಸುಂಕವನ್ನು ಈಗ ಶೇ 19ಕ್ಕೆ ಇಳಿಸಲಾಗಿದೆ. ಜೊತೆಗೆ ಅಮೆರಿಕದಿಂದ ಹತ್ತಿ ಮತ್ತು ನೂಲನ್ನು ಖರೀದಿಸಿದರೆ ಸುಂಕವನ್ನು ಪೂರ್ತಿಯಾಗಿ ರದ್ದು ಮಾಡುವುದಾಗಿ ತಿಳಿಸಿದೆ. ಭಾರತಕ್ಕೂ ಈ ಅವಕಾಶ ಇದೆ. ಆದರೆ, ಬಾಂಗ್ಲಾದೇಶ ಕಳೆದ ವರ್ಷ ಭಾರತದಿಂದ 1.6 ಶತಕೋಟಿ ಡಾಲರ್ ಮೌಲ್ಯದ ನೂಲನ್ನು ಖರೀದಿಸಿತ್ತು. ಇನ್ನು ಮುಂದೆ ಅದು ಅಮೆರಿಕದಿಂದ ಖರೀದಿಸಬಹುದು. ಆಗ ನಮ್ಮ ನೂಲು ಮತ್ತು ಹತ್ತಿ ಕೊಳ್ಳುವವರು ಯಾರು?

ಒಟ್ಟಾರೆಯಾಗಿ, ನಾವು ಪಡೆದುಕೊಂಡಿದ್ದಕ್ಕಿಂತ ಬಿಟ್ಟುಕೊಟ್ಟಿದ್ದೇ ಹೆಚ್ಚು. ವಾಸ್ತವದಲ್ಲಿ ಭಾರತದ ಹಿತಾಸಕ್ತಿಯನ್ನು ಅಮೆರಿಕ ಕಡೆಗಣಿಸುತ್ತಲೇ ಬಂದಿದೆ. ಚೀನಾ, ಟರ್ಕಿ ಇತ್ಯಾದಿ ದೇಶಗಳೂ ರಷ್ಯಾದಿಂದ ತೈಲವನ್ನು ಆಮದು ಮಾಡಿಕೊಳ್ಳುತ್ತಿವೆ, ಆದರೆ ಸುಂಕ ವಿಧಿಸಿದ್ದು ಭಾರತದ ಮೇಲೆ ಮಾತ್ರ. ಹಾಗೆಯೇ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದೊಂದಿಗೆ ಅಮೆರಿಕ ಮಾಡಿಕೊಂಡಿರುವ ಒಪ್ಪಂದದಲ್ಲಿ ಭಾರತದ ಹಿತಾಸಕ್ತಿಯನ್ನು ನಿರ್ಲಕ್ಷಿಸಲಾಗಿದೆ. ದಿನದಿಂದ ದಿನಕ್ಕೆ ಟ್ರಂಪ್ ಅವರ ಒತ್ತಡ ಹಾಗೂ ಬೇಡಿಕೆಗಳು ಹೆಚ್ಚುತ್ತಿವೆ. ಸದ್ಯಕ್ಕೆ ಬೇಳೆಕಾಳುಗಳು, ಸೋಯಾಬೀನ್, ಮೆಕ್ಕೆಜೋಳ ಹೊರಗಿದ್ದರೂ, ಮುಂದಿನ ದಿನಗಳಲ್ಲಿ ಅವುಗಳನ್ನು ಸೇರಿಸುವ ಒತ್ತಡ ಬರುತ್ತದೆ. ಹಾಗೆಯೇ ಡಿಜಿಟಲ್ ಸೇವೆಗಳ ಮೇಲೆ ಸುಂಕವನ್ನು ತೆಗೆಯುವುದಕ್ಕೂ ಒತ್ತಡ ಪ್ರಾರಂಭವಾಗಿತ್ತು. ದ್ವಿಪಕ್ಷೀಯ ಒಪ್ಪಂದಗಳ ಮೂಲಕ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಅಮೆರಿಕ ನಮ್ಮ ಮೇಲೆ ನಿರಂತರ ಒತ್ತಡ ಹೇರುತ್ತಿದೆ. ಈ ಸಂದರ್ಭದಲ್ಲಿ ನಮಗೆ ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪು ಆಸರೆಯಾಗಬಹುದು. ನಮ್ಮ ದೇಶದ, ಆರ್ಥಿಕತೆಯ ಹಾಗೂ ಜನತೆಯ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳುವುದು ಭಾರತದ ಆದ್ಯತೆಯಾಗಬೇಕು. ಅದಕ್ಕೆ ತಕ್ಕನಾಗಿ ಸರಿಯಾದ ಸಮಯಕ್ಕೆ ಈ ತೀರ್ಪು ಬಂದಿದೆ. ಅದರ ಅನುಕೂಲ ಎಷ್ಟರಮಟ್ಟಿಗೆ ದೊರೆಯುವುದೋ ನೋಡಬೇಕು.



ವಾಚಕರ ವಾಣಿ

ಶಾಲಾ ಪ್ರವೇಶ: ವಯೋಮಿತಿ ಗೊಂದಲ

ಒಂದನೇ ತರಗತಿ ದಾಖಲಾತಿಗೆ ಕನಿಷ್ಠ ಆರು ವರ್ಷ ಕಡ್ಡಾಯಗೊಳಿಸಿರುವ ಸರ್ಕಾರದ ನಿರ್ಧಾರವು ಹಲವು ಪೋಷಕರಲ್ಲಿ ಆತಂಕ ಹೆಚ್ಚಿಸಿದೆ. ಈ ನಿರ್ಧಾರದ ಅನುಷ್ಠಾನದಿಂದ, ಕೆಲವು ದಿನಗಳ ವಯಸ್ಸಿನ ವ್ಯತ್ಯಾಸವಿರುವ ಮಕ್ಕಳು ಒಂದು ಶೈಕ್ಷಣಿಕ ವರ್ಷವನ್ನು ಕಳೆದುಕೊಳ್ಳುವಂತಾಗಿದೆ. ಈಗಾಗಲೇ ಎಲ್‌ಕೆಜಿ, ಯುಕೆಜಿ ಮುಗಿಸಿರುವ ಮಕ್ಕಳು ವಯಸ್ಸಿನ ಕಾರಣಕ್ಕೆ ಮತ್ತೆ ಅದೇ ತರಗತಿಯಲ್ಲಿ ಕುಳಿತುಕೊಳ್ಳುವುದು ಅವರ ಮಾನಸಿಕ ಉತ್ಸಾಹವನ್ನು ಕುಗ್ಗಿಸುತ್ತದೆ. ಪೋಷಕರಿಗೆ ಇದು ಆರ್ಥಿಕ ಹೊರೆಯೂ ಹೌದು. ಹಾಗಾಗಿ, ವಯೋಮಿತಿಗೆ ಸಂಬಂಧಿಸಿದ ನಿರ್ಧಾರವನ್ನು ಸರ್ಕಾರ ಸಡಿಲಿಸುವುದು ಅಗತ್ಯ.

ಸಂಧ್ಯಾ ಎಚ್.ಎಸ್., ಹಂಪಿ

'ಜಾತಿ ದೆವ್ವ' ಮನೋವೈಕಲ್ಯದ ಪ್ರತಿರೂಪ

ದೇವಿಯ ದರ್ಶನಕ್ಕೆ ಹೋಗಿದ್ದ ಪರಿಶಿಷ್ಟ ಜಾತಿಯ ನವ ದಂಪತಿಯನ್ನು ದೇಗುಲದಿಂದ ಹೊರಗೆ ಕಳುಹಿಸಿರುವ ಘಟನೆ ತುಮಕೂರು ಜಿಲ್ಲೆಯಲ್ಲಿ ವರದಿಯಾಗಿದೆ. ಪರಿಶಿಷ್ಟರನ್ನು ಹೊರದಬ್ಬಿರುವವರೂ ಹಿಂದುಳಿದ ಜಾತಿಯವರೇ ಆಗಿದ್ದಾರೆ. ಊರಿನ ಎಲ್ಲರೂ ಒಗ್ಗಟ್ಟಾಗಿ ನಿಂತು ಯಾವ ದೆವ್ವದ ವಿರುದ್ಧ ಹೋರಾಟ ಮಾಡಬೇಕಾಗಿತ್ತೋ, ಒಳಗೊಳಗೆ ಅದನ್ನೇ ಒಲಿಸಿಕೊಂಡು ಒಬ್ಬರಿಗೊಬ್ಬರು ಇತರರ ಮೇಲೆ ಭಯ ಹುಟ್ಟಿಸುವ ಕೆಲಸ ಮಾಡುತ್ತಾ, ದೆವ್ವವನ್ನು ಊರೊಳಗೆ ಉಳಿಸಿಕೊಂಡಂತಾಗಿದೆ. ಹೀಗಿರುವಾಗ, ಈ ಶ್ರೇಣೀಕೃತ ಜಾತಿ ದೆವ್ವವನ್ನು ಹೇಗೆ ಓಡಿಸುವುದು? ಜಾತಿ ವ್ಯವಸ್ಥೆಯ ಬಲೆಗೆ ಬಿದ್ದಿರುವ ಸಮಾಜ ಸಾವಿರಾರು ವರ್ಷಗಳಿಂದ ಮೇಲೇಳಲಾಗದೆ ಹೇಗೆ ನರಳುತ್ತಿದೆ ಎಂಬುದನ್ನು ಅಧ್ಯಯನ ಮಾಡಿ, ಹೋರಾಟ ಮಾಡಿದ ಅಂಬೇಡ್ಕರ್ ಅವರ ಶ್ರಮಕ್ಕೆ ಜನರು ಬೆಲೆ ಕೊಡುತ್ತಿಲ್ಲವೆ? ಅಥವಾ ಸರ್ಕಾರಕ್ಕೂ ಜಾತಿ ದೆವ್ವದ ಸಂಬಂಧ ಇದ್ದು, ಸರಿಯಾದ ಸಮಾಜ ಶಿಕ್ಷಣವನ್ನು ನೀಡುತ್ತಿಲ್ಲವೆ?

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಅತಿಥಿ ಶಿಕ್ಷಕರಿಗೂ ಇರಲಿ ರಜೆ ಸೌಲಭ್ಯ

ಸರ್ಕಾರಿ ಶಾಲೆಯ ಕಾಯಂ ಶಿಕ್ಷಕರಿಗೆ ವರ್ಷಕ್ಕೆ 15 ಸಾಂದರ್ಭಿಕ ರಜೆ ಮತ್ತು ಎರಡು ಪರಿಮಿತ ರಜೆ ಪಡೆಯುವ ಅವಕಾಶವಿದೆ. ಇತ್ತೀಚೆಗೆ ಶಿಕ್ಷಕಿಯರಿಗೆ ತಿಂಗಳಿಗೊಂದು ಋತುಚಕ್ರದ ರಜಾ ಸೌಲಭ್ಯ ಕಲ್ಪಿಸಲಾಗಿದೆ. ಇದು ಮಹಿಳಾ ಸಬಲೀಕರಣದತ್ತ ರಾಜ್ಯ ಸರ್ಕಾರ ಇಟ್ಟಿರುವ ದಿಟ್ಟಹೆಜ್ಜೆ. ಆದರೆ, ಸರ್ಕಾರಿ ಶಾಲೆಗಳಲ್ಲಿ ಕಡಿಮೆ ಸಂಬಳ ಪಡೆದು ಕಾಯಂ ಶಿಕ್ಷಕರಿಗೆ ಸರಿಸಮವಾಗಿ ಕೆಲಸ ಮಾಡುತ್ತಿರುವ ಅತಿಥಿ ಶಿಕ್ಷಕರಿಗೆ ಯಾವ ರಜಾ ಸೌಲಭ್ಯವೂ ಇಲ್ಲದಿರುವುದು ವಿಷಾದನೀಯ. ಅವರಿಗೂ ರಜೆಗಳ ಅವಶ್ಯಕತೆ ಇದೆ. ಮಾನವೀಯತೆ ದೃಷ್ಟಿಯಿಂದ ಅವರಿಗೂ ರಜಾ ಸೌಲಭ್ಯ ಒದಗಿಸುವುದು ಸರ್ಕಾರದ ಜವಾಬ್ದಾರಿ.

ಶಿವಕುಮಾರ ಬಂಡೋಳಿ, ಯಾದಗಿರಿ

ಸಮಾಜದ ವ್ಯಾಧಿಗಳಿಗೆ 'ಸರ್ವಜ್ಞ ಮದ್ದು'

ಮಹಾಕವಿ ಸರ್ವಜ್ಞ ಐನೂರು ವರ್ಷಗಳ ಹಿಂದೆಯೇ ಜಾತಿಯ ಕಾರಣದಿಂದ ಅಸಮಾನತೆ, ಕೀಳರಿಮೆ ತೋರಬಾರದೆಂದು ನುಡಿದಿದ್ದಾರೆ. ಪ್ರತಿಭೆ ಎನ್ನುವುದು ಜಾತಿಯ ನೆಲೆಗಟ್ಟಿನ ಕಾರಣದಿಂದ ಬರುವುದಿಲ್ಲ; ಸತತ ಪ್ರಯತ್ನ ಮತ್ತು ಪ್ರಬಲ ಇಚ್ಛಾಶಕ್ತಿಯಿಂದ ಗಳಿಸಿಕೊಳ್ಳಲು ಸಾಧ್ಯ ಎಂಬುದು ಕವಿಯ ಅಭಿಪ್ರಾಯ. ದುರದೃಷ್ಟಕರ ಸಂಗತಿಯೆಂದರೆ, ದಾರ್ಶನಿಕ ಕವಿ ಸರ್ವಜ್ಞನನ್ನು ನೆನಪಿಸಿಕೊಳ್ಳುವ ಪ್ರಯತ್ನಗಳು ಸರಿಯಾಗಿ ನಡೆದಿಲ್ಲ. ಸರ್ವಜ್ಞ ರಚಿಸಿದ ತ್ರಿಪದಿಗಳು ಅಪೂರ್ವ ಜ್ಞಾನದ ಭಂಡಾರ. ಅವುಗಳ ಮೂಲಕ ಸಮಾಜದ ವ್ಯಾಧಿಗಳಿಗೆ ಚಿಕಿತ್ಸೆಯನ್ನೂ ನೀಡಿದ್ದಾನೆ. ಆ, ತ್ರಿಪದಿಗಳ ಸಾರವನ್ನು ಜನಸಮುದಾಯಕ್ಕೆ ತಲಪಿಸುವ ಕೆಲಸ ನಡೆಯುತ್ತಿಲ್ಲ. ಆತನ ಸಂದೇಶ ತಲಪಿಸುವ ಯೋಜನೆ ರೂಪಿಸಬೇಕಿದೆ.

ಮಲ್ಲಪ್ಪ ಫ. ಕರೇಣ್ಣನವರ, ಹಾವೇರಿ

'ಬ'ಕಾರದ ಜಿಲ್ಲೆಯಲ್ಲೇ ಗಲಭೆ ಸೃಷ್ಟಿ ಏಕೆ?

ವರ್ಷಾರಂಭದಲ್ಲಿ ಬಳ್ಳಾರಿಯಲ್ಲಿ ವಾಲ್ಮೀಕಿ ಪ್ರತಿಮೆ ಅನಾವರಣ ಕಾರ್ಯಕ್ರಮದ ಬ್ಯಾನರ್ ಕಟ್ಟುವ ವಿಚಾರದಲ್ಲಿ ಗಲಾಟೆಯಾಯಿತು. ತಿಂಗಳು ಉರುಳಿದರೂ ಪ್ರತಿಮೆಯ ಅನಾವರಣ ಆಗಿಲ್ಲ. ಫೆಬ್ರುವರಿಯಲ್ಲೂ ರಾಜ್ಯದ ಅಲ್ಲಲ್ಲಿ ಗಲಭೆ ಕಾಣಿಸಿಕೊಂಡಿದೆ. ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿಯ ಮೆರವಣಿಗೆ ಮೇಲೆ ಕಲ್ಲುತೂರಾಟ ನಡೆಸಿದ್ದರಿಂದ ಉದ್ವಿಗ್ನ ಸ್ಥಿತಿ ತಲೆದೋರಿದೆ. ಬೆಳಗಾವಿ ತಾಲ್ಲೂಕಿನ ಮಚ್ಚೆ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಮಸಿ ಹಚ್ಚಿರುವ ಕಿಡಿಗೇಡಿಗಳ ಬಂಧನಕ್ಕೆ ಸ್ಥಳೀಯರು ಆಗ್ರಹಿಸಿದ್ದಾರೆ. ಒಟ್ಟಿನಲ್ಲಿ 'ಬ'ಕಾರದ ಅಕ್ಷರದಿಂದ ಆರಂಭವಾಗುವ ಜಿಲ್ಲೆಗಳಲ್ಲೇ ಗಲಭೆಗಳು ಸಂಭವಿಸುತ್ತಿರುವಂತಿದೆ. ಈ ಗಲಭೆಗಳ ಬಗ್ಗೆ ಸಮಗ್ರ ತನಿಖೆ ನಡೆದು, ಸತ್ಯ ಹೊರಬರಲಿ. 'ಬ' ಭಯ ಸೃಷ್ಟಿಸದಿರಲಿ.

ಧನ್ವಂತರಿ ಮನ್ವಿ, ಬಳ್ಳಾರಿ

ರಂಗಶಿಕ್ಷಕರ ನೇಮಕ ವರ್ತಮಾನದ ತುರ್ತು

ರಂಗಭೂಮಿ ಶಿಕ್ಷಕರ ನೇಮಕಾತಿ ವಿಷಯವನ್ನು ಪರಿಗಣಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿರುವುದು ಆಶಾದಾಯಕ ಸಂಗತಿ. ಆದರೆ, ಇದು ಪರಿಗಣನೆಯ ಘೋಷವಾಕ್ಯ ಆಗಕೂಡದು. 'ರಂಗಭೂಮಿ ಶಿಕ್ಷಣ ನೀತಿ' ಜಾರಿಗೊಳಿಸಬೇಕು. ಅದರಿಂದ ಸಾಮಾಜಿಕ ಸ್ವಾಸ್ಥ್ಯವನ್ನು ಉಳಿಸಿ ಬೆಳೆಸಲು ಅನುಕೂಲ ಆಗಬಹುದು. ರಂಗ ಶಿಕ್ಷಣ, ವಿದ್ಯಾರ್ಥಿಗಳಲ್ಲಿ ಮೌಲ್ಯಗಳನ್ನು ಬಿತ್ತುವುದರ ಜೊತೆಗೆ ಅವರಲ್ಲಿ ಸೃಜನಶೀಲತೆಯ ಗುಣವನ್ನು ವೃದ್ಧಿಸಲು ಸಹಕಾರಿ. ಸಾಹಿತ್ಯ, ಕಲೆ, ಸಂಗೀತ, ನಟನೆ, ನೇಪಥ್ಯ, ಮಾತುಗಾರಿಕೆ - ಮುಂತಾದ ಲಲಿತಕಲೆಗಳ ಮೊತ್ತವು ರಂಗಭೂಮಿಯಲ್ಲಿದೆ. ಅದು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕತೆ ಮತ್ತು ವೈಚಾರಿಕತೆ ಬೆಳೆಸುತ್ತದೆ. ರಂಗ ಪ್ರಯೋಗಗಳಿಂದ ಅವರ ಮನೋರಂಗವು ಹೆಚ್ಚು ವಿಕಸನಗೊಳ್ಳುತ್ತದೆ. ಹಾಗಾಗಿ, ಶೀಘ್ರವಾಗಿ ರಂಗಶಿಕ್ಷಕರ ನೇಮಕಾತಿ ನಡೆಯಲಿ.

ಡಿ.ಎಸ್. ಚೌಗಲೆ, ಬೆಳಗಾವಿ

ಜಾಲಡಿ

ಕನ್ನಡ ಪರ ಬಜೆಟ್



ಜಾತಿ ಅಥವಾ ಧರ್ಮಾಧಾರಿತ ಬಜೆಟ್ ಹಂಚಿಕೆ ರಾಜ್ಯದ ಹಿತಾಸಕ್ತಿಗೆ ಧಕ್ಕೆ ತರುತ್ತದೆ. ಕರ್ನಾಟಕಕ್ಕೆ 'ಕನ್ನಡ ಬಜೆಟ್' ರಚಿಸುವುದು ಆಳುವ ಸರ್ಕಾರದ ಕರ್ತವ್ಯ ಆಗಬೇಕಿದೆ.

ಭೀಮಾಶಂಕರ ಪಾಟೀಲ್, ಅಧ್ಯಕ್ಷ, ಕರ್ನಾಟಕ ನವನಿರ್ಮಾಣ ಸೇನೆ

ಕಿಡಿನುಡಿ



ಎಚ್.ಡಿ. ಕುಮಾರಸ್ವಾಮಿ ಮತ್ತು ಎಚ್.ಡಿ. ದೇವೇಗೌಡರು ಖಂಡಿತಾ ಜಾತಿವಾದಿಗಳಲ್ಲ, ಅವರು ಸ್ವಜಾತಿ ವಿರೋಧಿಗಳು. ಅದಕ್ಕಿಂತಲೂ ಮುಖ್ಯವಾಗಿ ಕುಟುಂಬವಾದಿಗಳು. ಅವರಿಗೆ ತಮ್ಮ ಜಾತಿ ಒಂದು ಓಟ್ ಬ್ಯಾಂಕ್ ಅಷ್ಟೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 23-2-2001

• ರೈತರ ಸಮಸ್ಯೆ ಚರ್ಚೆಗೆ ಕೃಷಿ ತಜ್ಞರ ಸಭೆ

ಧಾರವಾಡ, ಫೆ. 22– ಬೆಲೆ ಕುಸಿತದಿಂದ ತೀವ್ರ ಸಂಕಷ್ಟಕ್ಕೆ ಸಿಕ್ಕಿರುವ ರೈತರ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಎಲ್ಲ ರಾಜ್ಯಗಳ ಕೃಷಿ ಕಮಿಷನರ್ ಹಾಗೂ ಕೃಷಿ ತಜ್ಞರ ಸಭೆ ಕರೆಯಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ಇಲ್ಲಿ ತಿಳಿಸಿದರು.

ಕೇಂದ್ರ ಕೃಷಿ ಕಾರ್ಯಾಚರಣೆ ಪಡೆ ಅಧ್ಯಕ್ಷ ಶರದ್ ಜೋಶಿಯವರ ಜತೆ ರೈತರ ಸಮಸ್ಯೆ ಕುರಿತು ಸಮಾಲೋಚಿಸಿದ್ದೇನೆ. ಅವರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಎಲ್ಲರೂ ತಮ್ಮ ಅನುಭವ ಹಾಗೂ ಸಮಸ್ಯೆಗಳನ್ನು ಹಂಚಿಕೊಂಡು ಸರಿಯಾದ ಅಭಿಪ್ರಾಯಕ್ಕೆ ಬರುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

• ಆ್ಯಸಿಡ್ ಎರಚಿದ ಪ್ರಕರಣ ನ್ಯಾಯಾಂಗ ತನಿಖೆಗೆ: ಖರ್ಗೆ

ಬೆಂಗಳೂರು, ಫೆ. 22– ಮಾಜಿ ಪ್ರಧಾನಿ ದೇವೇಗೌಡರ ಪತ್ನಿ ಚನ್ನಮ್ಮ ಮತ್ತು ಅವರ ಸೊಸೆ ಭವಾನಿ ಅವರ ಮೇಲೆ ಆ್ಯಸಿಡ್ ಎರಚಿದ ಪ್ರಕರಣದ ಸಮಗ್ರ ವಿಚಾರಣೆಗಾಗಿ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಯೊಬ್ಬರಿಂದ ನ್ಯಾಯಾಂಗ ವಿಚಾರಣೆ ನಡೆಸಲಾಗುವುದು ಎಂದು ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ಪ್ರಕಟಿಸಿದರು. ಜತೆಗೆ ಈ ಪ್ರಕರಣದ ತನಿಖೆಯನ್ನು ಸ್ಥಳೀಯ ಪೊಲೀಸರಿಗೆ ವಹಿಸದೆ ಸಿಒಡಿ ಪೊಲೀಸರಿಗೆ ವಹಿಸಿಕೊಡಲಾಗಿದೆ ಎಂದು ಅವರು ತಿಳಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 23-2-1951

• ಸರ್ಕಾರದ ಸಕ್ಕರೆ ಧೋರಣೆಗೆ ಪಟ್ಟಭದ್ರರ ಅಡ್ಡಿ

ನವದೆಹಲಿ, ಫೆ. 22– ಸರ್ಕಾರದ ಸಕ್ಕರೆ ನೀತಿ, ಚುನಾವಣಾ ಮತದಾರರ ಪಟ್ಟಿ ಸಿದ್ಧತೆಯಲ್ಲಿನ ಅಕ್ರಮಗಳು, ಹಕ್ಕಿನ ಮತ್ತು ಆಕ್ಷೇಪಣಾ ಪತ್ರಗಳಲ್ಲಿ ಸಂಸ್ಕೃತ ಮಿಶ್ರ ಹಿಂದಿ ಬಳಕೆ ಮುಂತಾದ ವಿಷಯಗಳು ಇಂದು ಭಾರತ ಪಾರ್ಲಿಮೆಂಟಿನಲ್ಲಿ ಚರ್ಚೆಯಾದವು.

23 ಕೋಟಿ ರೂ.ಗಳಷ್ಟು ಬೆಲೆಯ ಸಹಾಯದ್ರವ್ಯದ ಬೇಡಿಕೆಯನ್ನು ಸಭೆ ಪರಿಶೀಲಿಸಿತು. ಇದರಲ್ಲಿ 1950–51ರ ಸಾಲಿಗೆ ಬಂಡವಾಳದ ಲೆಕ್ಕದಲ್ಲಿ ಮೂರು ಕೋಟಿ ರೂ.ಗಳು ಸೇರಿವೆ.

ವ್ಯವಸಾಯ ಸಚಿವ ಕೆ.ಎಂ. ಮುನ್ಷಿಯವರು ಮಾತನಾಡುತ್ತ, ಸಕ್ಕರೆ ಕೈಗಾರಿಕೆಯನ್ನು ಹೆಚ್ಚು ಫಲವತ್ತಾದ ಪ್ರದೇಶಗಳಿಗೆ ಸಾಗಿಸದೆ ಇದ್ದರೆ ಅಥವಾ ಪ್ರತಿ ಕಾರ್ಖಾನೆಯ ಅವಶ್ಯಕತೆ ಪೂರೈಸಲು ಉತ್ತರ ಪ್ರದೇಶದ ಪಶ್ಚಿಮ ಭಾಗಗಳಲ್ಲಿ ಕಬ್ಬಿನ ಗದ್ದೆಗಳನ್ನು ಮೀಸಲಿಡದೆ ಹೋದರೆ 'ಆ ಸಮಸ್ಯೆಗೆ ಪರಿಹಾರವೇ ಇಲ್ಲ' ಎಂದರು.

ಚುರುಮುರಿ



ನಾಯಿಪಾಡು

• ಸುಮಂಗಲಾ

'**ಮೋದಿಮಾಮಾರು** ಏಷ್ಯಾ ಖಂಡದಲ್ಲಿ ಮೊದಲನೇ ಸಲ ಯಶಸ್ವಿಯಾಗಿ ಇಂಡಿಯಾ ಎಐ ಇಂಪ್ಯಾಕ್ಟ್ ಸಮ್ಮಿಟ್ ನಡೆಸಿದ್ರು! ಆವಾಗ ಯುಪಿಎ ಅಧಿಕಾರದಲ್ಲಿದ್ದಾಗ ಇಂಥದ್ದು ನಡೆಸೇ ಇರಲಿಲ್ಲ' ಎಂದು ಬೆಕ್ಕಣ್ಣ ಮೀಸೆ ತಿರುವಿ, ಅಭಿಮಾನದಿಂದ ಉಲಿಯಿತು.

'ಮಂಗ್ಯಾನಂಥವನೇ... ಆವಾಗ ಈ ಎಐ ಇರಲಿಲ್ಲ ಕಣಲೇ. ಈಗ ಎಲ್ಲಾ ಕಡಿಗಿ ಎಐ ಗಾಳಿ ಬೀಸಕ್ಕೆ ಶುರುವಾಗಿದ್ದು' ಎಂದೆ.

'ಆವಾಗ್ಲೇ ಎಐ ಗಾಳಿ ಬೀಸಿದ್ರೂ ಆಗಿನವರು ಏನೂ ಮಾಡ್ತಿರಲಿಲ್ಲ ಬಿಡು' ಎಂದು ಹಂಗಿಸಿತು.

'ಈಗಲೂ ಎಂಥಾ ಎಐ ಗಾಳಿಗೂ ದೆಹಲಿಯ ಮಾಲಿನ್ಯದ ಗಾಳಿಯನ್ನ ಕಡಿಮೆ ಮಾಡಕ್ಕೆ ಆಗಿಲ್ಲ. ಭಾರತ ಮಂಟಪದಲ್ಲಿ ಎಐ ಗಾಳಿ... ಹೊರಗೆ ಮಾಲಿನ್ಯದ ಗಾಳಿ!' ನಾನು ಅಣಕಿಸಿದೆ.

'ನೀ ಎಲ್ಲಾದಕ್ಕೆ ಕೊಂಕು ನುಡೀಬ್ಯಾಡ. ಈಗ ಜಾಗತಿಕ ಎಐ ನಕಾಶೆಯಲ್ಲಿ ಇಂಡಿಯಾದ ಹೆಸರು ಚಿನ್ನದ ಅಕ್ಷರದಲ್ಲಿ ಬರೆದಂಗೆ ಆಗೈತೆ' ಎಂದಿತು.

'ಇಂಗ್ಲೆಂಡಿನ ಮಾಜಿ ಪ್ರಧಾನಿ ರಿಷಿ ಸುನಕ್ ಹೇಳಿದನಲ್ಲ, ಎಐ ಎಲ್ಲಾ ಕೆಲಸ ಮಾಡಬೌದು, ಆದರೆ ದೆಹಲಿ ಟ್ರಾಫಿಕ್ ಸಮಸ್ಯೆ ಬಗೆಹರಿಸಕ್ಕೇ ಆಗಲ್ಲ ಅಂತ... ಈ ವಿಐಪಿಗಳು ಭಾರತ ಮಂಟಪಕ್ಕೆ ಹೋಗಿ, ವಾಪಸು ಬರೂ ಮುಂದ, ರಸ್ತೆ ಬಂದ್ ಮಾಡಿ, ಶ್ರೀಸಾಮಾನ್ಯರು ಆರೇಳು ಕಿಮೀ ನಡಕಂಡು ಹೋಗೂ ಹಂಗೆ ಮಾಡಿದ್ರು, ಗೊತ್ತೈತಿಲ್ಲೋ' ಎಂದೆ ಸಿಟ್ಟಿನಿಂದ.

'ನಡಿಯೂದು ಆರೋಗ್ಯಕ್ಕೆ ಒಳ್ಳೇದೇ!' ಬೆಕ್ಕಣ್ಣ ಉಡಾಫೆಯಿಂದ ಹೇಳಿತು.

'ಗಲ್ಗೋಟಿಯ ವಿವಿಯವ್ರು ಚೀನೀ ರೊಬಾಟ್ ನಾಯಿ ತಮ್ಮದು ಅಂತ ಹೇಳಿ ಎಷ್ಟು ನಗೆಪಾಟಲಾಯಿತು. ಅಡಿಕೆಗೆ ಹೋದ ಮಾನ ಆನೆಗೂ ಬರಂಗಿಲ್ಲಲೇ' ಎಂದೆ.

'ಅಲ್ಲಿ ಸದ್ದು ಮಾಡಿದ್ದು ನಕಲಿ ಚೀನೀ ರೊಬಾಟ್ ನಾಯಿ... ಇಲ್ಲಿ ಕೈಪಕ್ಷದವ್ರು ನಾಯಿ ಮತ್ತು ನಾಯಿ ಬಾಲದ ಬಗ್ಗೆ ಚರ್ಚೆ ನಡೆಸ್ಯಾರೆ. ಪಾಪದ ನಾಯಿಗಳು! ಸದ್ಯ... ಯಾರೂ ಬೆಕ್ಕಿನ ವಿಚಾರಕ್ಕೆ ಬಂದಿಲ್ಲ!' ಎಂದು ಮುಸಿಮುಸಿ ನಕ್ಕಿತು.

ಸಂಗತ

ರಾವುಳೆರ: ಹೆಣ್ಣು ಹೀಗಳೆವವರಿಗೆ ಮಾದರಿ

ಹೆಣ್ಣಿನ ಅಭಿವ್ಯಕ್ತಿಯನ್ನು ಹತ್ತಿಕ್ಕುವ ಪ್ರಯತ್ನಗಳೇ ಹೆಚ್ಚು. ಇದಕ್ಕೆ ಭಿನ್ನವಾಗಿ, ಆದಿವಾಸಿ ಸಮುದಾಯವೊಂದು ಮಾತೃಪ್ರಧಾನ ವ್ಯವಸ್ಥೆಯನ್ನು ಅನುಸರಿಸುತ್ತಿದೆ.


• ಪುಷ್ಪಜ ಯರವ ರಂಗ

ಭಾರತದಲ್ಲಿನ ಕುಟುಂಬ ವ್ಯವಸ್ಥೆ ಮುಖ್ಯವಾಗಿ ಪಿತೃಪ್ರಧಾನವಾದುದು. ಈ ವ್ಯವಸ್ಥೆಯಲ್ಲಿ ಪ್ರತಿಯೊಂದು ನಿರ್ಧಾರ, ಆಡಳಿತ, ಪುರುಷರದ್ದೇ. ಆದರೆ, ಹಲವೆಡೆ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಜಾರಿಯಲ್ಲಿದ್ದುದನ್ನು ಇತಿಹಾಸದಲ್ಲಿ ಕಾಣಬಹುದು. ಕೆಲವೊಂದು ಕಡೆ ಮಾತೃವಂಶ ಕುಟುಂಬ ವ್ಯವಸ್ಥೆ ಇಂದಿಗೂ ಜೀವಂತವಾಗಿದೆ. ಆಸ್ಟ್ರೇಲಿಯಾದ ಆದಿವಾಸಿ ಸಮುದಾಯದಲ್ಲಿ ಶೇ 40ರಷ್ಟು ಭಾಗ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯೇ ಇರುವುದನ್ನು ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ, ಆ ದೇಶದ ಆದಿವಾಸಿ ಲೇಖಕರಾದ ಜೂಲಿ ಜಾನ್ಸನ್ ಹೇಳಿದ್ದಾರೆ.

ಆಸ್ಟ್ರೇಲಿಯಾ ಮಾತ್ರವಲ್ಲ, ನೆರೆಯ ಕೇರಳದಲ್ಲಿಯೂ ಕೆಲವು ಮಾತೃಪ್ರಧಾನ ಸಮುದಾಯಗಳು ಇವೆ. ಆದರೆ, ನಮ್ಮಲ್ಲಿ ಕೆಲವೇ ಕೆಲವು ಆದಿವಾಸಿ ಸಮುದಾಯಗಳು ಮಾತ್ರವೇ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಹೊಂದಿವೆ. ಅವುಗಳಲ್ಲಿ, ರಾವುಳೆರ (ಪಂಜರಿ ಯರವ), ಕೊರಗ ಮತ್ತು ಮಲೆಕುಡಿಯ ಸಮುದಾಯಗಳು ಸೇರಿವೆ. ರಾವುಳೆರ ಸಮುದಾಯಕ್ಕೆ ಸೇರಿರುವುದು ನನಗೆ ಹೆಮ್ಮೆಯ ಸಂಗತಿ.

ಈ ಆದಿವಾಸಿ ಸಮುದಾಯದಲ್ಲಿ, ಹುಟ್ಟಿನಿಂದ ಸಾಯುವವರೆಗೆ ನಡೆಯುವ ಎಲ್ಲ ವಿಧಿವಿಧಾನಗಳಲ್ಲಿ ಪ್ರತಿಯೊಬ್ಬರೂ ಚೆಮ್ಮದಿಂದ (ಒಕ್ಕಲು/ಕುಲದಿಂದ) ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಈ ಸಮುದಾಯದಲ್ಲಿ ಒಟ್ಟು 13 ಚೆಮ್ಮಗಳೂ, 33 ಉಪ ಚೆಮ್ಮಗಳೂ ಇವೆ.

ಪ್ರತಿಯೊಂದು ಚೆಮ್ಮಕ್ಕೂ ಒಂದು ಹೆಣ್ಣು ದೇವರು, ಒಂದು ಗಂಡು ದೇವರು ಇವೆ. ಹೆಣ್ಣು ಮಗು ಹುಟ್ಟಿದರೆ ಹೆಚ್ಚು ಸಂಭ್ರಮಪಡುತ್ತಾರೆ, ಇದು ಇವರಲ್ಲಿ ಬಹಳ ವಿಶೇಷವಾಗಿದೆ. ತಮ್ಮ ವಂಶ ಮುಂದುವರಿಸಲು ಮಗಳು ಹುಟ್ಟಿದ್ದಾಳೆ ಎನ್ನುವುದು ಅವರ ಸಂಭ್ರಮಕ್ಕೆ ಕಾರಣ. ಹೆಣ್ಣು ಹುಟ್ಟಿದ್ದರ ಸಂಕೇತವಾಗಿ ಮನೆಯ ಮುಂದಿನ ಬಾಗಿಲಿಗೆ ಮೊರ, ತೆಂಗಿನ ಚಿಪ್ಪು ಹಾಗೂ ಬಿದಿರಿನಿಂದ ಮಾಡಿದ ತೊಟ್ಟಿಲನ್ನು ಕಟ್ಟುತ್ತಾರೆ. ಮೊರ, ತೆಂಗಿನ ಚಿಪ್ಪು ಕಟ್ಟುವ ಉದ್ದೇಶ, ಹುಟ್ಟಿರುವ ಹೆಣ್ಣು ಮನೆಯವರನ್ನು ಆಹಾರ ಕೊಟ್ಟು ನೋಡಿಕೊಳ್ಳಲಿ ಎಂಬುದರ ಆಶಯ. ತನ್ನ ಚೆಮ್ಮದ ಸಂತಾನ ಮುಂದುವರಿಸಲು ಹೆಣ್ಣು ಹುಟ್ಟಿದ್ದಾಳೆ ಎಂಬುದನ್ನು ತೋರಿಸುವ ಗುರುತಿನ ಚಿಹ್ನೆಯೇ ತೊಟ್ಟಿಲು.



ರಾವುಳೆರ ಆದಿವಾಸಿ ಸಮುದಾಯದಲ್ಲಿ ಹೆಣ್ಣುಮಕ್ಕಳು ಸೋದರಮಾವನನ್ನು ಮದುವೆಯಾಗುವಂತಿಲ್ಲ ಎಂಬ ನಿಯಮವಿದೆ. ಸೋದರಮಾವ ತನ್ನ ತಾಯಿಯ ಕುಲಕ್ಕೆ ಸೇರುವುದರಿಂದ ಮಾವನೊಂದಿಗೆ ಅಕ್ಕನ ಮಗಳ ಮದುವೆ ಸಂಬಂಧ ನಡೆಯುವುದಿಲ್ಲ. ಆದರೆ, ಸೋದರಮಾವನ ಮಗನನ್ನು ಮದುವೆ ಆಗಬಹುದು. ರಾವುಳೆರ ಸಮುದಾಯದಲ್ಲಿ ವಿಧವಾ ವಿವಾಹ ಮತ್ತು ಮರು ವಿವಾಹಕ್ಕೆ ಪ್ರೋತ್ಸಾಹವಿದೆ. ಗಂಡ ತೀರಿಕೊಂಡರೆ ಅಥವಾ ಕಾರಣಾಂತರಗಳಿಂದ ದೂರವಾದರೆ ಮತ್ತೊಂದು ವಿವಾಹಕ್ಕೆ ಮುಕ್ತ ಅವಕಾಶವಿದೆ. ಇದಕ್ಕೆ ಕುಡೊಳಿ ಎಂದು ಕರೆಯುತ್ತಾರೆ.

ರಾವುಳೆರ ಸಮುದಾಯದಲ್ಲಿ, ಮದುವೆಯ ವಯಸ್ಸಿಗೆ ಬಂದಿರುವ ಮಗಳಿಗೆ ವರ ಒಪ್ಪಿಗೆಯಾದರೆ, ಆಕೆಯ ಮನೆಯವರು ವರಪರೀಕ್ಷೆ ನಡೆಸುತ್ತಾರೆ. ಮದುವೆ ಒಪ್ಪಂದ ಆದ ದಿನದಿಂದ ಮದುವೆ ದಿನದವರೆಗೂ ಆಕೆಗೆ ಆಹಾರ ಧಾನ್ಯಗಳನ್ನು ಮತ್ತು ಖರ್ಚಿಗೆ ಬೇಕಾದ ಹಣವನ್ನು ಗಂಡಿನ ಮನೆಯವರು ಕೊಡಬೇಕು. ಅಲ್ಲದೆ, ಮದುವೆಯಾಗಲಿರುವ ಗಂಡು ಹೆಣ್ಣಿನ ಮನೆಗೆ ಕಾಡಿನಿಂದ ಸೌದೆ ತಂದು ಸೀಳಿಹಾಕಬೇಕು. ಈ ರೀತಿಯ ಕೆಲಸಗಳನ್ನು ಸರಿಯಾಗಿ ನಿರ್ವಹಿಸಿದರೆ, ಆತನಿಗೆ ಮಗಳನ್ನು ಕೊಟ್ಟು ಮದುವೆ ಮಾಡಬಹುದು ಎಂದು ಹೆಣ್ಣಿನ ಮನೆಯವರು ನಿರ್ಧರಿಸುತ್ತಾರೆ. ಅವರಿಗೆ ಒಪ್ಪಿಗೆಯಾದರೆ, ಮದುವೆಗೆ ತಗಲುವ ಸಂಪೂರ್ಣ ಖರ್ಚನ್ನು ಗಂಡಿನ ಮನೆಯವರೇ ನೋಡಿಕೊಳ್ಳಬೇಕು. ಮದುಮಗಳಿಗೆ ಚಿನ್ನಾಭರಣ ಮತ್ತು ಸೀರೆ ತಂದು ಗಂಡಿನ ಕಡೆಯವರೇ ಅಲಂಕಾರ ಮಾಡಿ ಮದುವೆ ಮಾಡಿ ಕರೆದುಕೊಂಡು ಹೋಗುತ್ತಾರೆ.

ಈ ಸಮುದಾಯದಲ್ಲಿ ಹೆಣ್ಣುಮಕ್ಕಳು ಬೇರೆ ಸಮುದಾಯದ ಹುಡುಗನನ್ನು ಮದುವೆಯಾದರೆ, ಅವರನ್ನು ಜಾತಿ ಶುದ್ಧ ಮಾಡಿ ತಮ್ಮ ಸಮುದಾಯದ ಒಂದು ಚೆಮ್ಮ(ಕುಲ)ಕ್ಕೆ ಸೇರಿಸಿಕೊಳ್ಳುತ್ತಾರೆ. ಹುಡುಗಿಯ ಚೆಮ್ಮವನ್ನು ಹೊರತುಪಡಿಸಿ ಇತರ ಯಾವುದಾದರೂ ಚೆಮ್ಮಕ್ಕೆ ಸೇರಿಸಿಕೊಳ್ಳಬೇಕು. ಗಂಡು ಮಕ್ಕಳು ಬೇರೆ ಸಮುದಾಯದ ಹೆಣ್ಣನ್ನು ಮದುವೆಯಾದರೆ, ಅವರಿಗೂ ಈ ನಿಯಮ ಅನ್ವಯವಾಗುತ್ತದೆ.

ಈ ಸಮುದಾಯದಲ್ಲಿ ಯಾರಾದರೂ ತೀರಿಕೊಂಡಾಗ, ಸ್ಮಶಾನಕ್ಕೆ ಹೆಣ್ಣುಮಕ್ಕಳಿಗೆ ಪ್ರವೇಶವಿಲ್ಲ. ಹೆಣ್ಣುಮಕ್ಕಳಿಗೆ ನೋವು ಕೊಡಬಾರದು ಎನ್ನುವುದು ಈ ನಿರ್ಬಂಧಕ್ಕೆ ಕಾರಣ. ಆದರೆ, ತಿಥಿಯ ದಿನ ನಡೆಯುವ ಪುಂಡ ತುಡೆ ಕಿಂಜಿಯೇ (ಪುಂಡ ಅಳಿಸುವುದು) ಎಂಬ ಬಹುಮುಖ್ಯವಾದ ಕಾರ್ಯವನ್ನು ಹೆಣ್ಣುಮಕ್ಕಳೇ ಮಾಡುತ್ತಾರೆ. ನ್ಯಾಯ ಪಂಚಾಯ್ತಿಗಳು ಹೆಣ್ಣುಮಕ್ಕಳನ್ನು ಒಳಗೊಂಡು ನಡೆಯುತ್ತವೆ. ಪಂಚಾಯ್ತಿ ಸಂದರ್ಭದಲ್ಲಿ ಮಹಿಳೆಯರಿಗೂ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶವಿದೆ.

ಭ್ರೂಣದಲ್ಲೇ ಹೆಣ್ಣನ್ನು ಚಿವುಟುವ ಪ್ರಯತ್ನಗಳು ನಡೆಯುವ ಹಾಗೂ ಹೆಣ್ಣನ್ನು ಸ್ವತಂತ್ರ ವ್ಯಕ್ತಿತ್ವವನ್ನು ಹತ್ತಿಕ್ಕುವ ಪ್ರಯತ್ನಗಳೇ ವ್ಯಾಪಕವಾಗಿರುವ ಸಮಾಜದಲ್ಲಿ, ಹೆಣ್ಣನ್ನು ಗೌರವದಿಂದ, ಕುಟುಂಬದ ಮುಖ್ಯಸ್ಥೆಯಾಗಿ ನೋಡುವ ಆದಿವಾಸಿ ಸಮುದಾಯ ಮಾದರಿಯಾಗಬೇಕಾಗಿದೆ.

ರಾವುಳೆರ ಸಮುದಾಯ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಹಿಂದುಳಿದಿದೆ. ಆದರೆ, ಆಚಾರ ವಿಚಾರಗಳಲ್ಲಿ ಹಿಂದುಳಿದಿಲ್ಲ. ರಾವುಳೆರ ರೀತಿಯ ಮಾತೃಪ್ರಧಾನ ಸಮುದಾಯಗಳನ್ನು ಗುರ್ತಿಸಿ, ವಿಶೇಷವಾಗಿ ಆದಿವಾಸಿ ಸಮುದಾಯಗಳನ್ನು ಗುರ್ತಿಸಿ, ಆ ಸಮುದಾಯಗಳ ಮೌಲ್ಯಗಳನ್ನು ಮುಖ್ಯವಾಹಿನಿ ಅಳವಡಿಸಿಕೊಳ್ಳಬೇಕಾಗಿದೆ.

ಲೇಖಕ: ವೃತ್ತಿಪರ ಸಾಮಾಜಿಕ ಕಾರ್ಯಕರ್ತ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಎಪ್‌ಸ್ಟೈನ್ ಫೈಲ್ಸ್ ಹಲವು ದೇಶಗಳಲ್ಲಿ ತಲ್ಲಣ ಉಂಟುಮಾಡಿದೆ. ಇಂಗ್ಲೆಂಡ್ ಪ್ರಧಾನಿ ಕೀರ್ ಸ್ಟಾರ್ಮರ್ ಆಪ್ತ, ಪೀಟರ್ ಮ್ಯಾಂಡೆಲ್‌ಸನ್ ತಲೆದಂಡವಾಗಿದೆ. ಪ್ರಧಾನಿಯ ರಾಜೀನಾಮೆಗೂ ಒತ್ತಡ ಹೇರಲಾಗುತ್ತಿದೆ. ಮಾಜಿ ರಾಜಕುಮಾರ ಆಂಡ್ರ್ಯೂ ಮೌಂಟ್‌ಬ್ಯಾಟನ್ ವಿಂಡ್ಸರ್ ಅವರನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ. ಎಪ್‌ಸ್ಟೈನ್ ಫೈಲ್ಸ್‌ನಿಂದ ಜಾಗತಿಕ ರಾಜಕಾರಣದಲ್ಲಿ ಮುಂದಿನ ದಿನಗಳಲ್ಲಿ ಹೆಚ್ಚಿನ ಪರಿಣಾಮಗಳು ಘಟಿಸಲಿವೆ ಎಂದು ಹೇಳಲಾಗುತ್ತಿದೆ

ಎಪ್‌ಸ್ಟೈನ್ ಫೈಲ್ಸ್ ರಾಜಕೀಯ ಬಿರುಗಾಳಿ

ಅಮೆರಿಕದ ಲೈಂಗಿಕ ಅಪರಾಧಿಯೊಂದಿಗೆ ನಂಟು; ವಿವಿಧ ದೇಶಗಳ ಘಟಾನುಘಟಿಗಳ ತಲೆದಂಡ

ಪ್ರಜಾವಾಣಿ ವಾರ್ತೆ

ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್‌ಗೆ ಸಂಬಂಧಿಸಿದ ದಾಖಲೆಗಳು (ಫೈಲ್ಸ್) ಜನವರಿ 30ರಂದು ಬಹಿರಂಗವಾದ ನಂತರ ಜಾಗತಿಕ ಮಟ್ಟದಲ್ಲಿ ತಲ್ಲಣ ಉಂಟಾಗಿದೆ. ರಾಜಕಾರಣ, ಉದ್ದಿಮೆ, ಮನರಂಜನೆ ಮತ್ತು ಶೈಕ್ಷಣಿಕ ವಲಯದ ಘಟಾನುಘಟಿಗಳ ಹೆಸರುಗಳು ಎಪ್‌ಸ್ಟೈನ್ ಫೈಲ್ಸ್‌ನಲ್ಲಿ ಸ್ಥಾನ ಪಡೆದಿವೆ. ಹೀನ ಚಾರಿತ್ರ್ಯದ ಎಪ್‌ಸ್ಟೈನ್‌ನೊಂದಿಗೆ ನಂಟು ಹೊಂದಿದ್ದವರ ಹೆಸರುಗಳು ಹೊರಬರುತ್ತಿವೆ.

ಅಮೆರಿಕದ ನ್ಯಾಯಾಂಗ ಇಲಾಖೆಯು 30 ಲಕ್ಷ ಪುಟಗಳ ದಾಖಲೆಗಳು, 1.8 ಲಕ್ಷ ಚಿತ್ರಗಳು, ಎರಡು ಸಾವಿರ ವಿಡಿಯೊಗಳನ್ನು ಬಿಡುಗಡೆ ಮಾಡಿದೆ. ಜಗತ್ತಿನ ವಿವಿಧ ಕ್ಷೇತ್ರಗಳ ಖ್ಯಾತನಾಮರಿಗೆ ಸಂಬಂಧಿಸಿದ ಚಿತ್ರಗಳು, ವಿಡಿಯೊಗಳು, ಇಮೇಲ್‌ಗಳು ಅವುಗಳಲ್ಲಿವೆ. ಫೈಲ್ಸ್‌ನಲ್ಲಿ ಪ್ರಸ್ತಾಪವಾಗಿರುವ ಎಲ್ಲರೂ ತಪ್ಪಿತಸ್ಥರು ಎಂದು ಹೇಳಲಾಗದಿದ್ದರೂ ಮಾನವ ಕುಲದ ಇತಿಹಾಸದಲ್ಲಿಯೇ ಅತ್ಯಂತ ನೀಚತನದ ಕೃತ್ಯವೆಸಗಿದ ಎಪ್‌ಸ್ಟೈನ್ ಜತೆಗೆ ನಂಟು ಹೊಂದಿದ್ದುದೇ ಮಹಾ ಕಳಂಕ ಎನ್ನುವಂತಾಗಿದೆ.

ಮಹಿಳೆಯರ ಕಳ್ಳಸಾಗಣೆ ಮತ್ತು ಬಾಲಕಿಯರ ಮೇಲೆ ಅತ್ಯಾಚಾರದಂಥ ಅನೇಕ ಹೇಯ ಕೃತ್ಯಗಳನ್ನು ಎಸಗಿದ್ದ ಎಪ್‌ಸ್ಟೈನ್, ಇಂಥ ಸರಣಿ ಅಪರಾಧಗಳಲ್ಲಿ ತೊಡಗಿದ್ದ. ತನ್ನ ಐಷಾರಾಮಿ ಮನೆಗಳಲ್ಲಿ ಬಾಲಕಿಯರನ್ನು ಕೂಡಿಹಾಕಿ ಅವರ ಮೇಲೆ ಲೈಂಗಿಕ ದೌರ್ಜನ್ಯ ನಡೆಯಲು ಕಾರಣನಾಗಿದ್ದ. ವಿವಿಧ ದೇಶಗಳ ಜನಪ್ರತಿನಿಧಿಗಳು, ಪ್ರಭಾವಶಾಲಿಗಳು, ಉದ್ಯಮಿಗಳು ಎಪ್‌ಸ್ಟೈನ್ ಜತೆಗೆ ನಂಟು ಹೊಂದಿದ್ದರು. ಈ ಪೈಕಿ ಅನೇಕರು ಅವನ ಮನೆಗೆ ತೆರಳಿ ಆತಿಥ್ಯ ಸ್ವೀಕರಿಸಿದ್ದರು. ತನ್ನ ವಿರುದ್ಧದ ಪ್ರಕರಣಗಳ ಕಾರಣದಿಂದ ಜೈಲು ಸೇರಿದ್ದ ಎಪ್‌ಸ್ಟೈನ್, 2019ರಲ್ಲಿ ಜೈಲಿನಲ್ಲಿಯೇ ಆತ್ಮಹತ್ಯೆ ಮಾಡಿಕೊಂಡು ಸತ್ತುಹೋದ. ಅನಂತರ ತನಿಖೆಯ ವೇಳೆ ಪತ್ತೆಯಾಗಿದ್ದ ಇಮೇಲ್‌ಗಳು, ವಿಡಿಯೊಗಳು ಮತ್ತಿತರ ದಾಖಲೆಗಳನ್ನು ಬಹಿರಂಗ ಮಾಡುವಂತೆ ಜನ ಒತ್ತಾಯ ಹೇರತೊಡಗಿದರು. ಡೊನಾಲ್ಡ್ ಟ್ರಂಪ್ ಸರ್ಕಾರವು ಅವುಗಳನ್ನು ಹಂತಹಂತವಾಗಿ ಬಹಿರಂಗ ಮಾಡುತ್ತಿದೆ.



ಮ್ಯಾಂಡೆಲ್‌ಸನ್

ಎಪ್‌ಸ್ಟೈನ್ ಫೈಲ್ಸ್‌ನಿಂದ ಮೊದಲು ತಳಮಳ ಉಂಟಾಗಿದ್ದೇ ಅಮೆರಿಕದಲ್ಲಿ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದಲೇ ಪಟ್ಟಿ ಮೊದಲಾಗುತ್ತದೆ. ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್, ಅವರ ಮಾಜಿ ಖಜಾನೆ ಕಾರ್ಯದರ್ಶಿ ಹಾಗೂ ಹಾರ್ವರ್ಡ್ ವಿಶ್ವವಿದ್ಯಾಲಯ ಮಾಜಿ ಅಧ್ಯಕ್ಷ ಲ್ಯಾರಿ ಸಮರ್ಸ್, ಟ್ರಂಪ್ ಸರ್ಕಾರದ ಹಣಕಾಸು ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್, ಟ್ರಂಪ್ ಅವರ ಮಾಜಿ ಸಲಹೆಗಾರ ಸ್ಟೀವ್ ಬ್ಯಾನನ್ ಸೇರಿದಂತೆ ರಾಜಕಾರಣದಲ್ಲಿ ಸಕ್ರಿಯವಾಗಿದ್ದ ಮತ್ತು ಈಗಲೂ ಸಕ್ರಿಯವಾಗಿರುವ ಅನೇಕರು ಎಪ್‌ಸ್ಟೈನ್ ಜತೆಗೆ ನಂಟು ಹೊಂದಿರುವುದು ಪತ್ತೆಯಾಗಿದೆ. ಈ ಪೈಕಿ ಬಹುತೇಕರು, ಎಪ್‌ಸ್ಟೈನ್ ಜತೆಗಿನ ತಮ್ಮ ನಂಟನ್ನು ಒಪ್ಪಿಕೊಂಡರೂ, ತಾವು ಯಾವುದೇ ತಪ್ಪು ಮಾಡಿಲ್ಲ ಎಂದು ಹೇಳಿದ್ದಾರೆ. ಆದರೆ, ಯಾರೂ ತಮ್ಮ ಹುದ್ದೆ/ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿಲ್ಲ. ಎಪ್‌ಸ್ಟೈನ್ ಸಂಗಾತಿ ಎನ್ನಲಾಗುವ ಗಿಲೇನ್ ಮ್ಯಾಕ್ಸ್‌ವೆಲ್ 2021ರಲ್ಲೇ ಅಪರಾಧಿ ಎಂದು ಸಾಬೀತಾಗಿದ್ದು, 20 ವರ್ಷ ಜೈಲುಶಿಕ್ಷೆಗೆ ಗುರಿಯಾಗಿದ್ದಾಳೆ. ಬಾಲಕಿಯರನ್ನು ಎಪ್‌ಸ್ಟೈನ್‌ಗೆ ಪೂರೈಸುತ್ತಿದ್ದ ಆರೋಪ ಹೊತ್ತಿರುವ ಅವಳ ತನಿಖೆಯಿಂದ ಹಗರಣಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿ ಹೊರಬರುವ ಸಾಧ್ಯತೆ ಇದೆ.

ಬ್ರಿಟನ್‌ನಲ್ಲಿ ಬಿರುಗಾಳಿ: ಬ್ರಿಟನ್‌ನ ರಾಜಕೀಯದಲ್ಲಂತೂ ಎಪ್‌ಸ್ಟೈನ್ ದಾಖಲೆಗಳು ಬಿರುಗಾಳಿಯನ್ನೇ ಎಬ್ಬಿಸಿವೆ. ಎಪ್‌ಸ್ಟೈನ್ ಜತೆಗಿನ ಸಂಪರ್ಕ ಹೊಂದಿದ್ದು ಬಹಿರಂಗವಾದ ಕಾರಣಕ್ಕೆ ಮಾಜಿ ಸಚಿವ ಮತ್ತು ಅಮೆರಿಕಕ್ಕೆ ಬ್ರಿಟನ್‌ನ ರಾಯಭಾರಿಯಾಗಿದ್ದ ಪೀಟರ್ ಮ್ಯಾಂಡೆಲ್‌ಸನ್ ತಮ್ಮ ಲೇಬರ್ ಪಕ್ಷದ ಸ್ಥಾನಕ್ಕೆ ಫೆಬ್ರುವರಿ 1ರಂದು ರಾಜೀನಾಮೆ ನೀಡಿದರು. ವಿವಾದ ತೀವ್ರಗೊಳ್ಳುತ್ತಿದ್ದಂತೆ ಫೆ.4ರಂದು ಮೇಲ್ಮನೆಗೂ ರಾಜೀನಾಮೆ ಸಲ್ಲಿಸಿದರು. ಅವರು ಎಪ್‌ಸ್ಟೈನ್‌ನಿಂದ ಹಣ ಪಡೆದ ದಾಖಲೆಗಳು ಬಹಿರಂಗವಾಗಿವೆ. 2009ರಲ್ಲಿ ವ್ಯವಹಾರ ಕಾರ್ಯದರ್ಶಿ ಆಗಿದ್ದ ಕಾಲದಲ್ಲಿ ಸರ್ಕಾರದ ಆಂತರಿಕ ವಿಚಾರಗಳನ್ನು ಅವರು ಎಪ್‌ಸ್ಟೈನ್‌ಗೆ ರವಾನಿಸಿರುವುದು ಇಮೇಲ್‌ಗಳಿಂದ ದೃಢವಾಗಿದೆ. ಮ್ಯಾಂಡೆಲ್‌ಸನ್ ನೇಮಕಕ್ಕೆ ಶಿಫಾರಸು ಮಾಡಿದ್ದ ಸ್ಟಾರ್ಮರ್ ಸರ್ಕಾರದ ಸಿಬ್ಬಂದಿ ಮುಖ್ಯಸ್ಥ ಮಾರ್ಗನ್ ಮೆಕ್‌ಸ್ವೀನಿ ಹುದ್ದೆಯಿಂದ ಕೆಳಗಿಳಿದರು.

ಇದೇ ವಿವಾದಕ್ಕೆ ಸಂಬಂಧಿಸಿದಂತೆ, ಸಂವಹನ ನಿರ್ದೇಶಕ ಟಿಮ್ ಅಲಾನ್ ಕೂಡ ಹುದ್ದೆ ತ್ಯಾಗ ಮಾಡಿದರು. ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರೂ ರಾಜೀನಾಮೆ ನೀಡಬೇಕೆಂದು ಸ್ಕಾಟ್ಲೆಂಡ್‌ನ ಲೇಬರ್ ಪಕ್ಷದ ಮುಖಂಡ ಎನಸ್ ಸಾರ್ವರ್ ಸೇರಿದಂತೆ ಹಲವರು ಒತ್ತಾಯಿಸುತ್ತಿದ್ದಾರೆ. ಮ್ಯಾಂಡೆಲ್‌ಸನ್ ವಿರುದ್ಧ ತನಿಖೆ ನಡೆಯುತ್ತಿದ್ದು, ಮುಂದೆಯೂ ಇದು ಹಲವರ ತಲೆದಂಡಕ್ಕೆ ಕಾರಣವಾಗಬಹುದು ಎನ್ನುವ ಮಾತುಗಳಿವೆ.




ಆಂಡ್ರ್ಯೂ ಮೌಂಟ್ ಬ್ಯಾಟನ್ ವಿಂಡ್ಸರ್

ಎಪ್‌ಸ್ಟೈನ್ ಫೈಲ್ಸ್‌ನಿಂದ ಇಂಗ್ಲೆಂಡ್‌ನ ರಾಜಮನೆತನದಲ್ಲಿಯೂ ತಲ್ಲಣ ಮೂಡಿದೆ. ಎಪ್‌ಸ್ಟೈನ್ ಜತೆ ಆತ್ಮೀಯತೆ ಹೊಂದಿದ್ದರು ಎನ್ನುವುದು ಬಹಿರಂಗವಾಗುತ್ತಿದ್ದಂತೆಯೇ ಮಾಜಿ ರಾಜಕುಮಾರ ಆಂಡ್ರ್ಯೂ ಮೌಂಟ್‌ಬ್ಯಾಟನ್ ವಿಂಡ್ಸರ್ ಅವರನ್ನು ಮೊದಲು ಬಕಿಂಗ್‌ಹ್ಯಾಮ್ ಅರಮನೆಯಿಂದ ಹೊರಹಾಕಲಾಗಿತ್ತು. ನಂತರ ಅವರನ್ನು ಬಂಧಿಸಿ ವಿಚಾರಣೆ ಮಾಡಲಾಗಿದೆ. 2010ರಲ್ಲಿ ಅವರು ದೇಶದ ರಹಸ್ಯ ಮಾಹಿತಿಯನ್ನು ಎಪ್‌ಸ್ಟೈನ್‌ಗೆ ರವಾನಿಸಿದ್ದರು ಎನ್ನಲಾಗಿದೆ. ಆಂಡ್ರ್ಯೂ ವಿರುದ್ಧ ತನಿಖೆ ನಡೆಯುತ್ತಿದೆ.

ಫ್ರಾನ್ಸ್‌ನಲ್ಲೂ ಎಪ್‌ಸ್ಟೈನ್ ದಾಖಲೆಗಳು ರಾಜಕೀಯದಲ್ಲಿ ಸಂಚಲನ ಸೃಷ್ಟಿಸಿವೆ. ಸಂಸ್ಕೃತಿ ಸಚಿವರಾಗಿದ್ದ ಜ್ಯಾಕ್ ಲ್ಯಾಂಗ್ ಮತ್ತು ಅವರ ಕುಟುಂಬದವರು ಎಪ್‌ಸ್ಟೈನ್ ಜೊತೆ ಹಣಕಾಸಿನ ವ್ಯವಹಾರ ಹೊಂದಿದ್ದ ವಿಷಯ ದಾಖಲೆಗಳಿಂದ ಬಯಲಾದ ಬೆನ್ನಲ್ಲೇ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಅಲ್ಲದೇ, ಫೈಲ್ಸ್ ಅನ್ನು ಪರಿಶೀಲಿಸಲು ಅಲ್ಲಿ ನ್ಯಾಯಾಧೀಶರ ಒಂದು ತಂಡವನ್ನೇ ರಚಿಸಲಾಗಿದೆ.

ನಾರ್ವೆ, ಸ್ಲೊವಾಕಿಯಾ, ಸ್ವೀಡನ್‌ಗಳಲ್ಲೂ ಎಪ್‌ಸ್ಟೈನ್ ದಾಖಲೆಗಳ ಕಾರಣಕ್ಕೆ ಕೆಲವರ ತಲೆದಂಡವಾಗಿದೆ.

ಆಧಾರ: ಟೈಮ್, ಸಿಎನ್‌ಎನ್, ನ್ಯೂಯಾರ್ಕ್ ಟೈಮ್ಸ್, ಎಎಫ್‌ಪಿ, ಪಿಟಿಐ, ರಾಯಿಟರ್ಸ್



ಬಿಜೆಪಿ, ಕೇಂದ್ರ ಸರ್ಕಾರಕ್ಕೆ ಮುಜುಗರ



ಅನಿಲ್ ಅಂಬಾನಿ



ಹರ್ದೀಪ್ ಸಿಂಗ್ ಪುರಿ

ಎಪ್‌ಸ್ಟೈನ್ ದಾಖಲೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ, ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ, ಉದ್ಯಮಿ ಅನಿಲ್ ಅಂಬಾನಿ ಸೇರಿದಂತೆ ಭಾರತದ ಹಲವರ ಹೆಸರುಗಳಿವೆ. ಈ ದಾಖಲೆಗಳು ದೇಶದ ರಾಜಕೀಯ ವಲಯದಲ್ಲಿ ದೊಡ್ಡ ಮಟ್ಟದ ಸದ್ದು ಮಾಡಿಲ್ಲ. ಆದರೆ, ಆಡಳಿತಾರೂಢ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ಮುಜುಗರ ಉಂಟುಮಾಡಿರುವುದು ಸತ್ಯ. ಪ್ರಧಾನಿ ಮೋದಿ ಅವರು ನೇರವಾಗಿ ಎಪ್‌ಸ್ಟೈನ್‌ನನ್ನು ಭೇಟಿ ಮಾಡಿಲ್ಲ. ಎಪ್‌ಸ್ಟೈನ್, ಅನಿಲ್ ಅಂಬಾನಿ ಅವರನ್ನು 'ಮೋದಿಯರ ವ್ಯಕ್ತಿ' ಎಂದು ಸಂಬೋಧಿಸಿದ್ದ ಎನ್ನುವುದು ದಾಖಲೆಗಳಿಂದ ತಿಳಿಯುತ್ತದೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಪರವಾಗಿ ಅನಿಲ್ ಅಂಬಾನಿ ಮಾತನಾಡಿರುವುದು ದಾಖಲೆಗಳಲ್ಲಿದೆ. ಕೇಂದ್ರ ಸರ್ಕಾರವು ಇದನ್ನು ತಳ್ಳಿ ಹಾಕಿದೆ. ಅನಿಲ್ ಅಂಬಾನಿ ಇದುವರೆಗೂ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಕಾಂಗ್ರೆಸ್, ಎಡಪಕ್ಷಗಳು ಸೇರಿದಂತೆ ವಿರೋಧ ಪಕ್ಷಗಳು ಎಪ್‌ಸ್ಟೈನ್ ದಾಖಲೆಗಳನ್ನು ಮುಂದಿಟ್ಟುಕೊಂಡು ಹರ್ದೀಪ್ ಸಿಂಗ್ ಪುರಿ ಅವರನ್ನು ಗುರಿಯಾಗಿಸಿಕೊಂಡು ಟೀಕಿಸುತ್ತಿವೆ. ಅವರ ರಾಜೀನಾಮೆಗೂ ಒತ್ತಾಯಿಸುತ್ತಿವೆ. ಸಚಿವ ಪುರಿ ಅವರು ತಾವು ಮೂರು ಬಾರಿ ಎಪ್‌ಸ್ಟೈನ್ ಅನ್ನು ಭೇಟಿಯಾಗಿರುವುದು ನಿಜ ಎಂದು ಒಪ್ಪಿಕೊಂಡರೂ, 'ಆತನೊಂದಿಗೆ ಸೇರಿ ಕೆಟ್ಟದ್ದೇನನ್ನೂ ಮಾಡಿಲ್ಲ. ದೇಶದಲ್ಲಿ ಉದ್ಯಮಕ್ಕೆ ಇರುವ ಅವಕಾಶದ ಬಗ್ಗೆ ಮಾತನಾಡಿದ್ದೇನೆ. ದೇಶಕ್ಕೆ ಒಳಿತಾಗುವ ವಿಷಯವನ್ನಷ್ಟೇ ಚರ್ಚಿಸಿದ್ದೇನೆ' ಎಂದು ಹೇಳಿದ್ದಾರೆ. ಬಿಜೆಪಿಯು ಪುರಿಯವರ ಬೆಂಬಲಕ್ಕೆ ನಿಂತಿದೆಯಾದರೂ, ಮಾಧ್ಯಮಗಳಲ್ಲಿ ಪುರಿ ಅವರಷ್ಟೇ ತಮ್ಮನ್ನು ಸಮರ್ಥಿಸಿಕೊಳ್ಳುವುದು ಹೆಚ್ಚು ಕಾಣಿಸುತ್ತಿದೆ.

ಮೊದಲ ಬಾರಿಗೆ 2008ರಲ್ಲಿ ಎಪ್‌ಸ್ಟೈನ್ ಶಿಕ್ಷೆಗೆ ಗುರಿಯಾಗಿದ್ದ. ಆತ ಅಪರಾಧಿ ಎಂದು ತಿಳಿದಿದ್ದರೂ, ಪುರಿ, ಅನಿಲ್ ಅಂಬಾನಿ ಹಾಗೂ ದೇಶದ ಇನ್ನಿತರರು ಆತನೊಂದಿಗೆ ಸಂಪರ್ಕ (2014ರ ನಂತರದಲ್ಲಿ) ಇಟ್ಟುಕೊಂಡಿದ್ದು ವಿವಿಧ ವಲಯಗಳಲ್ಲಿ ಆಕ್ಷೇಪಕ್ಕೆ ಕಾರಣವಾಗಿದೆ.

ಅಧಿಕಾರ ಕಳೆದುಕೊಂಡ ಪ್ರಮುಖರು

ಥಾರ್ಬ್‌ಜೋರ್ನ್ ಜಾಗ್‌ಲ್ಯಾಂಡ್: ನಾರ್ವೆಯ ಮಾಜಿ ಪ್ರಧಾನಿ ಥಾರ್ಬ್‌ಜೋರ್ನ್ ಜಾಗ್‌ಲ್ಯಾಂಡ್ ಅವರ ಹೆಸರು ಎಪ್‌ಸ್ಟೈನ್ ದಾಖಲೆಗಳಲ್ಲಿ ಉಲ್ಲೇಖವಾಗಿರುವುದು ನಾರ್ವೆಯ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ. ಅವರ ಹೆಸರು ಬಹಿರಂಗವಾಗುತ್ತಿದ್ದಂತೆಯೇ ಅಲ್ಲಿನ ಪೊಲೀಸರು ಅವರ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಿಸಿದ್ದಾರೆ. ಎಪ್‌ಸ್ಟೈನ್ ಮತ್ತು ಜಾಗ್‌ಲ್ಯಾಂಡ್ ಅವರು ಇ-ಮೇಲ್ ಮೂಲಕ ಸಂಪರ್ಕದಲ್ಲಿದ್ದರು ಎನ್ನುವುದು ದಾಖಲೆಗಳಿಂದ ಬಹಿರಂಗವಾಗಿದೆ.

ಮೋನಾ ಜೂಲ್: ಜೋರ್ಡನ್ ಮತ್ತು ಇರಾಕ್‌ಗೆ ನಾರ್ವೆಯ ರಾಯಭಾರಿಯಾಗಿದ್ದ ಮೋನಾ ಜೂಲ್ ಅವರ ಹೆಸರು ಎಪ್‌ಸ್ಟೈನ್ ದಾಖಲೆಗಳಲ್ಲಿ ಉಲ್ಲೇಖವಾಗಿರುವುದು ತಿಳಿಯುತ್ತಲೇ ಫೆ.8ರಂದು ವಿದೇಶಾಂಗ ವ್ಯವಹಾರಗಳ ಇಲಾಖೆಯು ಅವರನ್ನು ಅಮಾನತು ಮಾಡಿದೆ. ಆ ಬಳಿಕ ಆಕೆ ತಮ್ಮ ಹುದ್ದೆಗೆ ರಾಜೀನಾಮೆಯನ್ನೂ ನೀಡಿದ್ದಾರೆ. ಮೋನಾ ಮತ್ತು ಅವರ ಪತಿ ತೇರ್ಜೆ ರೊಡ್–ಲಾರ್ಸೆನ್ ಅವರು ಎಪ್‌ಸ್ಟೈನ್‌ನೊಂದಿಗೆ ಹಣಕಾಸು ವ್ಯವಹಾರ ಹೊಂದಿದ್ದರು. ಈಗ ನಾರ್ವೆ ಪೊಲೀಸರು ದಂಪತಿ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದ್ದಾರೆ.

ಜೊಯನ್ನಾ ರುಬಿನ್‌ಸ್ಟೈನ್: ನಿರಾಶ್ರಿತರಿಗಾಗಿ ಇರುವ ವಿಶ್ವಸಂಸ್ಥೆಯ ಹೈಕಮಿಷನ್‌ನಲ್ಲಿ ಸ್ವೀಡನ್ ಅನ್ನು ಪ್ರತಿನಿಧಿಸುತ್ತಿದ್ದ ಜೊಯೆನ್ನಾ ರುಬಿನ್‌ಸ್ಟೈನ್ ಅವರು ಮತ್ತು ಕುಟುಂಬದೊಂದಿಗೆ 2012ರಲ್ಲಿ ಎಪ್‌ಸ್ಟೈನ್‌ನ ಖಾಸಗಿ ದ್ವೀಪಕ್ಕೆ ಭೇಟಿ ನೀಡಿದ ಸಂಗತಿ ದಾಖಲೆಗಳಿಂದ ಬಹಿರಂಗವಾಗಿತ್ತು. ಆ ಬಳಿಕ ತಮ್ಮ ಹುದ್ದೆಗೆ ಅವರು ರಾಜೀನಾಮೆ ನೀಡಿದ್ದಾರೆ.

ಮಿರೊಸ್ಲಾವ್ ಲಾಯ್‌ಚಾಕ್: ಸ್ಲೊವಾಕಿಯಾದ ಪ್ರಧಾನಿ ರಾಬರ್ಟ್ ಫಿಕೊ ಅವರ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿದ್ದ ಮಿರೊಸ್ಲಾವ್ ಲಾಯ್‌ಚಾಕ್ ಹೆಸರು ಎಪ್‌ಸ್ಟೈನ್ ದಾಖಲೆಗಳಲ್ಲಿ ಇರುವುದು ಗೊತ್ತಾಗುತ್ತಿದ್ದಂತೆಯೇ ಅವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ. ಒಬ್ಬ ಮಹಿಳೆಯನ್ನು ಎಪ್‌ಸ್ಟೈನ್ ಮತ್ತು ಮಿರೊಸ್ಲಾವ್ ಲೇವಡಿ ಮಾಡಿದ್ದು ಇಮೇಲ್ ದಾಖಲೆಗಳಲ್ಲಿ ಪ್ರಸ್ತಾಪವಾಗಿದೆ.

ರಾಷ್ಟ್ರೀಯ

ಮತ ಪ್ರಮಾಣ ಶಂಕಾಸ್ಪದ ಏರಿಕೆ: ವೈಎಸ್‌ಆರ್‌ಸಿಪಿ

2024ರ ಚುನಾವಣೆ: ಸಮಗ್ರ ತನಿಖೆ ಆದೇಶಕ್ಕೆ ಒತ್ತಾಯ

ಅಮರಾವತಿ (ಪಿಟಿಐ): 2024ರ ಆಂಧ್ರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಮತದಾನದ ದಿನ ಅಂತಿಮ ಅವಧಿಯಲ್ಲಿ ಚಲಾವಣೆಯಾದ ಮತ ಪ್ರಮಾಣವು ಶಂಕಾಸ್ಪದ ರೀತಿಯಲ್ಲಿ ಏರಿಕೆಯಾಗಿದ್ದು, ಈ ಬಗ್ಗೆ ಚುನಾವಣಾ ಆಯೋಗ ಸಮಗ್ರ ತನಿಖೆಗೆ ಆದೇಶಿಸುವಂತೆ ವೈಎಸ್‌ಆರ್‌ಸಿಪಿ ಪಕ್ಷದ ಹಿರಿಯ ನಾಯಕ ಎಸ್. ಶೈಲಜಾನಾಥ್ ಒತ್ತಾಯಿಸಿದ್ದಾರೆ.

'ಚುನಾವಣೆಯ ದಿನ ತಡರಾತ್ರಿ ನಡೆದ ಮತದಾನದ ಪ್ರಮಾಣದಲ್ಲಿ ತೀವ್ರ ಏರಿಕೆ ಕಂಡಿದ್ದು, ಇದು ಗಂಭೀರ ಅನುಮಾನಗಳನ್ನು ಹುಟ್ಟುಹಾಕಿದೆ. ಈ ಬಗ್ಗೆ ಅಧಿಕಾರಿಗಳು ತಕ್ಷಣ ಸ್ಪಷ್ಟೀಕರಣ ನೀಡಬೇಕು' ಎಂದು ಶನಿವಾರ ತಡರಾತ್ರಿ ಪಕ್ಷ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

2024ರ ಮೇ 13ರಂದು ನಡೆದ ಚುನಾವಣೆಯಲ್ಲಿ ಆರಂಭದಲ್ಲಿ ಶೇ 68ರಷ್ಟು ಮತದಾನವಾಗಿದೆ ಎಂದು ಅಂದಾಜಿಸಲಾಗಿತ್ತು. ಆದರೆ ರಾತ್ರಿ 11.45 ರಿಂದ ಬೆಳಗಿನ ಜಾವ 2 ಗಂಟೆಯ ನಡುವೆ ಸುಮಾರು 50 ಲಕ್ಷ ಹೆಚ್ಚುವರಿ ಮತಗಳು ದಾಖಲಾಗಿವೆ. ಅಂತಿಮ ಶೇಕಡಾವಾರು ಮತದಾನ ಪ್ರಮಾಣ ಶೇ 81.85ಕ್ಕೆ ಏರಿಕೆಯಾಗಿದೆ. ಈ ವ್ಯತ್ಯಾಸದ ಬಗ್ಗೆ ಚುನಾವಣಾ ಸಮಿತಿಯು ವಿವರಣೆ ನೀಡಬೇಕು' ಎಂದು ಶೈಲಜಾನಾಥ್ ಒತ್ತಾಯಿಸಿದ್ದಾರೆ.

ಶೈಲಜಾನಾಥ್ ಅವರ ಆರೋಪಗಳನ್ನು ಅಲ್ಲಗಳೆದಿರುವ ಟಿಡಿಪಿ ನಾಯಕ ಎನ್. ವಿಜಯನ್, '2019ರ ವಿಧಾನಸಭಾ ಚುನಾವಣೆಯಲ್ಲೂ ಶೇಕಡಾವಾರು ಮತಪ್ರಮಾಣದಲ್ಲಿ ಏರಿಕೆಯಾದ ಘಟನೆ ನಡೆದಿದೆ' ಎಂದು ಹೇಳಿದ್ದಾರೆ.

ಮದ್ಯ ವ್ಯಸನಿಗಳಿಗೆ ಬೋನು

ಪ್ರಜಾವಾಣಿ ವಾರ್ತೆ



ಗ್ರಾಮದಲ್ಲಿ ಅಳವಡಿಸಿರುವ ಬೋನು

ಅಹಮದಾಬಾದ್: ಮದ್ಯ ವ್ಯಸನಿಗಳಿಂದ ಗ್ರಾಮವನ್ನು ಮುಕ್ತಗೊಳಿಸುವ ನಿಟ್ಟಿನಲ್ಲಿ ಗುಜರಾತ್‌ನ ಮೆಹ್ಸಾನಾ ಜಿಲ್ಲೆಯ ಪಂಥಾ ಗ್ರಾಮದ ಜನರು ವಿಚಿತ್ರ ಕ್ರಮವನ್ನು ಅನುಸರಿಸುತ್ತಿದ್ದಾರೆ. ಮದ್ಯ ವ್ಯಸನಿಗಳಿಗಾಗಿ ಬೋನೊಂದನ್ನು ತಯಾರಿಸಿ ಇಟ್ಟಿದ್ದಾರೆ. ಇದೀಗ ಎಲ್ಲರ ಗಮನಸೆಳೆದಿದೆ.

ಯಾರಾದರೂ ಮದ್ಯ ಸೇವಿಸಿರುವುದು ಅಥವಾ ಅಕ್ರಮವಾಗಿ ಮದ್ಯ ಮಾರಾಟ ಮಾಡುವುದು ಕಂಡುಬಂದರೆ ಅವರನ್ನು ಪೊಲೀಸರಿಗೆ ಒಪ್ಪಿಸುವ ಮೊದಲು ಗ್ರಾಮದ ಮುಂದೆ ಇರಿಸಲಾಗಿರುವ ಬೋನಿನಲ್ಲಿ ಕೂಡಿಹಾಕಲು ನಿರ್ಧರಿಸಿದ್ದಾರೆ.

2025ರ ಡಿ. 16ರಂದು ನಡೆದ ಗ್ರಾಮಸಭೆಯಲ್ಲಿ ಗ್ರಾಮಸ್ಥರೆಲ್ಲರೂ ಸೇರಿ ಬೋನು ಇಡಲು ನಿರ್ಧರಿಸಿದ್ದರು. ಅದರಂತೆ ಊರಿನ ಮುಂದೆಯೇ ಬೋನು ಇಡಲಾಗಿದೆ. ಈ ಕ್ರಮ ಕೈಗೊಂಡ ಬಳಿಕ ಗ್ರಾಮದಲ್ಲಿ ಮದ್ಯ ವ್ಯಸನಕ್ಕೆ ಸಂಬಂಧಿಸಿದ ಅಹಿತಕರ ಘಟನೆ ನಡೆದಿಲ್ಲ ಎಂದು ಗ್ರಾಮದ ಸರಪಂಚ್ ಆಗಿರುವ ಶಾಂತಬೆನ್ ಅವರ ಪತಿ ಕಪಿಲ್ ಚೌಧರಿ ಅವರು ಮಾಹಿತಿ ನೀಡಿದ್ದಾರೆ.

ಸೀಟು ಹಂಚಿಕೆ ಒಪ್ಪಂದ ಅಂತಿಮ

ಗುವಾಹಟಿ (ಪಿಟಿಐ): 'ಅಸ್ಸಾಂ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಎನ್‌ಡಿಎ ಮೈತ್ರಿಕೂಟದ ನಡುವಿನ ಸೀಟು ಹಂಚಿಕೆ ಆತಂರಿಕ ಒಪ್ಪಂದ ಅಂತಿಮಗೊಂಡಿದೆ' ಎಂದು ಅಸ್ಸಾಂ ಮುಖ್ಯ ಮಂತ್ರಿ ಹಿಮಂತ ಬಿಸ್ವ ಶರ್ಮಾ ಹೇಳಿದ್ದಾರೆ.

ಅಸ್ಸಾಂ ಗಣ ಪರಿಷದ್ (ಎಜಿಪಿ), ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್ (ಯುಪಿಪಿಎಲ್) ಮತ್ತು ಬೋಡೊ ಲ್ಯಾಂಡ್ ಪೀಪಲ್ಸ್ ಫ್ರಂಟ್ (ಬಿಪಿಎಫ್) ಎನ್‌ಡಿಎ ಮೈತ್ರಿಕೂಟದ ಭಾಗವಾಗಿದೆ. ರಭಾ ಹಾಸೊಂಗ್ ಜೊಥಾ ಸಂಗ್ರಾಮ್ ಸಮಿತಿ (ಆರ್‌ಎಚ್‌ಜೆಎಸ್‌ಎಸ್) ಮತ್ತು ಜನಶಕ್ತಿ ಪಾರ್ಟಿ (ಜಪಿ) ಮೈತ್ರಿಕೂಟದ ಭಾಗವಾಗಿದ್ದರೂ, ಈ ಎರಡೂ ಪಕ್ಷಗಳಿಂದ ಯಾರೂ ಶಾಸಕರಿಲ್ಲ.

'ಸೀಟು ಹಂಚಿಕೆ ಒಪ್ಪಂದ ಈಗಾಗಲೇ ಮುಗಿದಿದೆ. ಯಾರು ಎಲ್ಲಿ ಸ್ಪರ್ಧಿಸಬೇಕು ಎನ್ನುವುದು ನಮಗೆ ತಿಳಿದಿದೆ. ಮೈತ್ರಿಯಲ್ಲಿ ಯಾವುದೇ ಸಮಸ್ಯೆ ಇಲ್ಲ. ಶೀಘ್ರದಲ್ಲೇ ರಾಜ್ಯ ಮಟ್ಟದ ಮುಖಂಡರು ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ, ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಸಲ್ಲಿಸಲಿದ್ದಾರೆ ಎಂದು ಶರ್ಮಾ ಹೇಳಿದ್ದಾರೆ.

ಅಸ್ಸಾಂನ 126 ವಿಧಾನಸಭಾ ಕ್ಷೇತ್ರಗಳಿಗೆ ಮಾರ್ಚ್–ಏಪ್ರಿಲ್‌ನಲ್ಲಿ ಚುನಾವಣೆ ನಡೆಯಲಿದೆ. 2023ರಲ್ಲಿ ಕ್ಷೇತ್ರ ಮರು ವಿಂಗಡಣೆ ಆಗಿತ್ತು. ಆ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ.

ಸದ್ಯ ವಿಧಾನಸಭೆಯಲ್ಲಿ ಬಿಜೆಪಿ 64, ಎಜಿಪಿ 9, ಯುಪಿಪಿಎಲ್ 7, ಬಿಪಿಎಫ್ 3 ಸದಸ್ಯ ಬಲ ಹೊಂದಿವೆ. ಕಾಂಗ್ರೆಸ್‌ನ 26 ಶಾಸಕರಿದ್ದರೆ, ಎಐಯುಡಿಎಫ್ 15 ಹಾಗೂ ಸಿಪಿಎಂ 1 ಸ್ಥಾನ ಹೊಂದಿವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವ್ಯಕ್ತಿಯೊಬ್ಬರು ಮಾನವ ರೊಬೋಟ್ ಜೊತೆ ಮಾತನಾಡುತ್ತಿರುವ ವಿಡಿಯೊವನ್ನು 'ಎಕ್ಸ್'ನಲ್ಲಿ @ಅರುಣ್‌ಕೊಸ್ಲಿ ಎಂಬವರ ಖಾತೆಯಲ್ಲಿ ಪೋಸ್ಟ್ ಮಾಡಲಾಗಿದೆ. ವ್ಯಕ್ತಿಯು ರೊಬೋ ಮಾನವನನ್ನು ನಿಂದಿಸುವ ದೃಶ್ಯ ವಿಡಿಯೊದಲ್ಲಿದೆ. ಇದು ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಎಐ ಶೃಂಗಸಭೆಯಲ್ಲಿ ನಡೆದ ಘಟನೆಯ ವಿಡಿಯೊ ಎಂದು ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು.



ವಿಡಿಯೊದ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ರಿವರ್ಸ್ ಸರ್ಚ್ ವಿಧಾನದಲ್ಲಿ ಹುಡುಕಾಡಿದಾಗ ಬೇರೆಯವರೂ ಇದೇ ವಿಡಿಯೊವನ್ನು ಹಂಚಿಕೊಂಡಿರುವುದು ಕಂಡುಬಂತು. ಮತ್ತಷ್ಟು ಹುಡುಕಿದಾಗ ಫೆ.18ರಂದು ಎಕ್ಸ್ ಬಳಕೆದಾರ @....ಇಶ್ಕ್.. ಎಂಬವರು, 'ಈ ವಿಡಿಯೊದಲ್ಲಿರುವವರು ಪಾಕಿಸ್ತಾನದವರು, ವಿಡಿಯೊವು ಬಹುಶಃ ದುಬೈನಲ್ಲಿ ಚಿತ್ರೀಕರಿಸಿದ್ದು' ಎಂದು ಮಾಡಿದ್ದ ಪೋಸ್ಟ್ ಸಿಕ್ಕಿತು. ವಿಡಿಯೊದಲ್ಲಿರುವ ವ್ಯಕ್ತಿಯ ಚಿತ್ರವನ್ನು ರಿವರ್ಸ್ ಸರ್ಚ್ ವಿಧಾನದಲ್ಲಿ ಗೂಗಲ್ ಲೆನ್ಸ್ ಮೂಲಕ ಹುಡುಕಿದಾಗ, 'ಮಿಯಾನ್ ಕಶೀಫ್ ಜಮೀರ್ ಅಫೀಶಿಯಲ್' ಎಂಬ ಇನ್‌ಸ್ಟಾಗ್ರಾಂ ಖಾತೆ ಸಿಕ್ಕಿತು. ಪಾಕಿಸ್ತಾನದ ಲಾಹೋರ್ ಮೂಲದವರು ಎಂದು ಅವರು ತಮ್ಮ ಪ್ರೊಫೈಲ್‌ನಲ್ಲಿ ಬರೆದುಕೊಂಡಿದ್ದಾರೆ. ನಂತರ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ ಮಾನವ ರೊಬೋಟ್ ಹೆಸರು ಅಮೆಕಾ ಎಂದೂ, ಅದು ದುಬೈನ ಮ್ಯೂಸಿಯಂ ಆಫ್ ದ ಫ್ಯೂಚರ್‌ನಲ್ಲಿ ಇದೆ ಎಂಬುದೂ ತಿಳಿಯಿತು. ದುಬೈನಲ್ಲಿ ನಡೆದ ಘಟನೆಯ ವಿಡಿಯೊವನ್ನು ದೆಹಲಿಯಲ್ಲಿ ಎಐ ಶೃಂಗಸಭೆಯಲ್ಲಿ ನಡೆದಿದ್ದು ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಬದಲಾಗಬೇಕಿದೆ ಪಾವಿತ್ರ್ಯದ ಕಲ್ಪನೆ

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಪುಣ್ಯಸ್ಥಳಗಳಿಗೆ ಹೋಗಿಬರುವವರಿಗೆ ಅಲ್ಲಿಂದ ತಮ್ಮ ಬಾಂಧವರಿಗೆ ಏನನ್ನು ತರದಿದ್ದರೂ ಪವಿತ್ರವಾದ ನೀರನ್ನು ತರಬೇಕೆಂಬ ಹಂಬಲವಿರುತ್ತದೆ. ಅದು ನಮ್ಮ ಗಂಗಾನದಿಯ ನೀರೋ ಅಥವಾ ಮೆಕ್ಕಾದ ಝಂ ಝಂ ನೀರೋ ಯಾವುದೇ ಇರಲಿ, ದಿವ್ಯಪಾನೀಯವನ್ನು ಒಂದೆರಡು ಗುಟುಕಿನಷ್ಟಾದರೂ ಸರಿ, ಕುಡಿದು ಪಾವನರಾಗಲು ತವಕಿಸುವುದು ಸಾಮಾನ್ಯ. ಬಹುಶಃ ಈ ಬಗೆಯ ನಂಬಿಕೆಯಿಂದ ದೈವವಿಶ್ವಾಸಿಗಳ ಬದುಕು ಸಹನೀಯ ಎನಿಸಿದೆ. ಮನುಷ್ಯ ಜೀವನದ ದೀರ್ಘ ಇತಿಹಾಸದಲ್ಲಿ ಹೇಗೆ ಯಾರಿಗೆ ಯಾವಾಗ ಯಾವ ಮಣ್ಣು, ನೀರು, ಮರ, ಕಲ್ಲುಗಳು ಪವಿತ್ರ ಅಂತ ಅನಿಸಿಬಿಟ್ಟಿತು? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಹೊರಟರೆ ಬುದ್ಧಿಬಲ ಮತ್ತು ದರ್ಪ ಮನುಷ್ಯರನ್ನು ಧಾರ್ಮಿಕವಾಗಿ ಒಡೆದು ಆಳಿದ ಚಿತ್ರಗಳು ಕಾಣುತ್ತವೆ.

ಜೀವ ಜಗತ್ತಿಗೆ ಆಸರೆಯಾಗಿರುವುದು ಸದ್ಯಕ್ಕೆ ಒಂದೇ ಭೂಮಿ. ಮನುಷ್ಯನನ್ನೂ ಒಳಗೊಂಡು ಎಂಟು ಲಕ್ಷಕ್ಕೂ ಹೆಚ್ಚು ಜೀವರಾಶಿ ಈ ಮಣ್ಣಿನಲ್ಲಿ ಆಶ್ರಯ ಪಡೆದಿವೆ. ನೂರಾರು ದೇಶ, ಸಾವಿರಾರು ಭಾಷೆ ಮತ್ತು ಅಸಂಖ್ಯಾತ ಸಾಂಸ್ಕೃತಿಕ ಚಹರೆಗಳಿಂದ ತುಂಬಿದ ಈ ನೆಲವನ್ನು ತಂತಮ್ಮ ಅನುಕೂಲಕ್ಕೆ ತಕ್ಕಂತೆ ಎಲ್ಲರೂ ಪುಣ್ಯ ಭೂಮಿ, ಗಂಡುಮೆಟ್ಟಿನ ನೆಲ, ಪ್ರವಾದಿಗಳು, ಸಂತರು, ದಾರ್ಶನಿಕರು ಹುಟ್ಟಿದ ದಿವ್ಯವೂ ಪವಿತ್ರವೂ ಆದ ಮಣ್ಣಿದು ಎಂದು ಭಾವಿಸಿದ್ದಾರೆ. ತಮ್ಮ ರಾಜಕೀಯ ಆಡಳಿತದ ಕಾರಣಕ್ಕೆ ಭೌಗೋಳಿಕವಾಗಿ ಭೂಮಿಯನ್ನು ಹಂಚಿಕೊಂಡಿರುವ ಎಲ್ಲರೂ ಪ್ರಾಕೃತಿಕ ಸಂಪತ್ತನ್ನು ಮನುಷ್ಯ ಹಿತಕ್ಕಾಗಿಯೇ ಬಳಸಿಕೊಳ್ಳುತ್ತಿದ್ದಾರೆ. ಅದೇ ಕಾರಣಕ್ಕೆ ಅವೆಲ್ಲವೂ ದೈವಸೃಷ್ಟಿಯೆಂಬ ಹೆಸರಿನಲ್ಲಿ ಮನುಷ್ಯಕೇಂದ್ರಿತ ನೀತಿಗಳನ್ನು ರೂಪಿಸುತ್ತಾ ಬರಲಾಗಿದೆ. ಸಾವಿರಾರು ಮೈಲಿ ದೂರದ ನಿರ್ದಿಷ್ಟ ಪ್ರದೇಶದ ಮಣ್ಣು, ನೀರು, ಮರವನ್ನು ಪವಿತ್ರವೆಂದು ಸಾರಿರುವ ಹಿಂದಿನ ಧಾರ್ಮಿಕ ಆರ್ಥಿಕ ಹಿತಾಸಕ್ತಿಗಳು ಕೆಲವರ ಐಹಿಕ ವೈಭೋಗಕ್ಕೆ ಸಾಕ್ಷಿಯಾಗಿವೆ.

ನಿಸ್ಸಂದೇಹವಾಗಿ ಇದೊಂದು ಬೌದ್ಧಿಕ ದಾರಿದ್ರ್ಯವನ್ನು ಪೋಷಿಸುವ ರಾಜಕೀಯ ಕಲೆಗಾರಿಕೆ. ಅದೇ ಹೊತ್ತಿಗೆ ತಾವು, ತಮ್ಮವರ ಬದುಕನ್ನು ಸಾವಿರಾರು ವರ್ಷಗಳ ಕಾಲದಿಂದ ರೂಪಿಸಿದ ಸ್ಥಳೀಯವಾದ ಕಣ, ಬಯಲು, ದನಕರು, ಬಾವಿ, ಹಳ್ಳ, ಮರಗಿಡ ಮುಂತಾದುವನ್ನು ಕೇವಲ ಲೌಕಿಕವೆಂದು ಕೀಳಾಗಿಸುವ ಕುತಂತ್ರ ಕೂಡ. ಶ್ರಮಮೂಲ ಬದುಕಿಗೆ ಯಾವುದು ಅಗತ್ಯವೂ ಅನಿವಾರ್ಯವೂ ಆಗಿದೆಯೋ ಅವೆಲ್ಲವೂ ಪವಿತ್ರವೇ ಆಗಿದೆ. ಮನುಷ್ಯನ ಜೀವನಕ್ಕೆ ನಿತ್ಯವೂ ನೇರವಾಗಿ ಉಪಯೋಗಕ್ಕೆ ಬರುವ ಅವನ ಸುತ್ತಲಿನ ಕಣ, ಬಣವೆ, ಕೆರೆ, ಬಾವಿ, ಹಳ್ಳದ ನೀರು, ಜಾಲಿ, ಹುಣಸೆ, ಬೇವಿನ ಮರಗಳು, ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಮುಂತಾದ ಪ್ರಾಣಿಗಳು ನಮ್ಮ ಪವಿತ್ರ ಭಾವನೆಯ ಕೇಂದ್ರವಾಗಬೇಕು. ಜನಪದರ ಆಚರಣೆಯಲ್ಲಿ ಇರುವ ಈ ಬಗೆಯ ಪ್ರಾಧಾನ್ಯವನ್ನು ವಿದ್ಯಾವಂತ ಧಾರ್ಮಿಕರು ಸೇರಿ ರೂಪಿಸಿದ ಪಾವಿತ್ರ್ಯ ನುಂಗಿ ಹಾಕಿದೆ. ಇದು ಇನ್ನೂ ಮುಂದುವರಿದು ಹೆಣ್ಣಿನ ಗುಣಶೀಲವನ್ನು ಗಂಡು ಅಳೆಯುವ ಮಾನದಂಡವೂ ಆಗಿರುವುದು ವಿಚಿತ್ರ. ತಾನಿಡುವ ಪ್ರತಿ ಹೆಜ್ಜೆಯ ಕೆಳಗಿರುವ ಮಣ್ಣು, ನಿತ್ಯ ಕುಡಿಯುವ ನೀರು, ತಿನ್ನುವ ಅನ್ನದ ಜೊತೆಜೊತೆಗೆ ಕಷ್ಟಸುಖಗಳಿಗೆ ಆತುಕೊಳ್ಳುವ ನೆರೆಹೊರೆಯನ್ನು ಪವಿತ್ರವೆಂದು ಪರಿಗಣಿಸಿ ಬದುಕಬೇಕು. ದೂರದ ಪಾವಿತ್ರ್ಯಕ್ಕಿಂತ ಸಮೀಪದ ಸಂಬಂಧವೇ ಇಷ್ಟವಾಗಬೇಕು. ಇಲ್ಲದಿದ್ದರೆ ಪಾವಿತ್ರ್ಯದ ಹಂಗು ತೊರೆದು ಎಲ್ಲವನ್ನೂ ಸಮಾನವಾಗಿ ಪರಿಭಾವಿಸಬೇಕು. ಯಾಕೆಂದರೆ ಪ್ರಕೃತಿ ಮನುಕುಲಕ್ಕೆ ಅನಿವಾರ್ಯವೇ ಹೊರತು ಮನುಷ್ಯನಿಂದ ನಿಸರ್ಗಕ್ಕೆ ಯಾವ ಪ್ರಯೋಜನವೂ ಇಲ್ಲ. ಮಾನವ ಜನ್ಮ ದೊಡ್ಡದೂ ಅಲ್ಲ, ಪವಿತ್ರವೂ ಅಲ್ಲ. ಆನೆ ಇರುವೆಗಳ ರೀತಿ ವಿವಿಧ ಆಕಾರ ಮತ್ತು ಗಾತ್ರದ ಬೇರೆ ಬೇರೆ ಜೀವಿಗಳ ಹಾಗೆ ಮಾನವನೂ ಒಂದು ಜಂತು ಅಷ್ಟೇ. ❖

ಗುಂಡಣ್ಣ



ಪದಬಂಧ 6324


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೀರು ಧುಮುಕುವ ಸ್ಥಳ (4)
3.ರಂಪ ನಡುವಿರುವ ಸಂಪ್ರದಾಯ! (4)
5.ಅದೇ ತಾನೆ ಮದುವೆಯಾದ ಗಂಡ ಹೆಂಡಿರು (5)
7.ಮಣ್ಣುಬೆರೆತ ನೀರು (3)
9.ಕತ್ತು ಕೊನೆಗಿಟ್ಟು ತೋರಿದ ಬಲ (3)
11.ಶ್ವಾಸವನ್ನು ಹೀಗೂ ಹೇಳಬಹುದು (3)
13.ಕಳೆಯುವ ಲೆಕ್ಕವಿದು (5)
15.ಈತ ಮನೆಯಲ್ಲದವನು (4)
16.ಮಧ್ಯ ವಯಸ್ಸಿದು (4)

ಮೇಲಿಂದ ಕೆಳಕ್ಕೆ

1.ವನಿತೆ ಎಳೆದಿರುವ ತೆರೆ (4)
2.ಒಂದೇ ವಿಷಯದಲ್ಲಿ ಮಗ್ನನಾಗಿರುವವನು (3)
4.ಪತಿಯೊಡನಿರುವ ಕಾಲಾಳು (3)
6.ಹೀಗೆ ಸೈನ್ಯ ಸಮೇತ ಯುದ್ಧಕ್ಕೆ ಹೋಗು (3)
8.ಮಲಗುವ ಮನೆಯಲ್ಲಿರುವ ಧಾನ್ಯ (2)
9.ಉಚ್ಚ ದನಿಯನ್ನು ಹೀಗೂ ಹೇಳುವರು (3)
10.ಉದಾಸೀನಳಾಗಿರುವ ಸೇವಕಿ (2)
12.ಆಸ್ಪತ್ರೆಯನ್ನು ಹೀಗೂ ಹೇಳುವರು (4)
13.ಈತ ಕೆಟ್ಟ ಚಟವುಳ್ಳವನು (3)
14.ಇದು ತುಂಬಾ ಹೊಸದು (3)



6323ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಮಹಾಪೂರ 3.ಅನುಭವಿ
5.ಕರ್ತಾರ 6.ಜರಾಯು
8.ಪ್ರಸಂಗ 10.ಆಸಕ್ತಿ
11.ವಾಯಸ 13.ಅಳುಕು
15.ಯಥಾಸ್ಥಿತಿ 16.ರಣಭೇರಿ

ಮೇಲಿಂದ ಕೆಳಕ್ಕೆ:

1.ಮಹಾರಾಜ 2.ರಥಿಕ
3.ಅಸುರ 4.ವಿನಿಯೋಗ
7.ರಾಜಸ 9.ಸಂದಾಯ
10.ಆಯವ್ಯಯ 12.ಸದಾಚಾರಿ
13.ಅದಿತಿ 14.ಕುಬೇರ

ಸುಡೊಕು 6708

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5			8		1	9		2
3		1	2		9		5	6
	1	7			8	3		
				2				4
8		3	9				6	
1			7		2	4		3
		8		4				
	3		1		5		7	

6707 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

23 ಫೆಬ್ರುವರಿ, 2026 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಷಷ್ಠಿ ಗಂ. 9-10 ನಕ್ಷತ್ರ: ಭರಣಿ ಗಂ. 16-34 ಯೋಗ: ಬ್ರಹ್ಮ ಗಂ. 10-19 ಕರಣ: ತೈತಿಲ ಗಂ 9-10 ಕುಂಭ ಮಾಸದ 11 ನೇ ದಿನ. ಮಳೆ ನಕ್ಷತ್ರ : ಶತಭಿಷ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 , ಸೂರ್ಯೋದಯ : 06-53 ಸೂರ್ಯಾಸ್ತ : 06-35, ಮುಸ್ಲಿಂ ದಿನಾಂಕ : 5 ರಂಜಾನ್ , ಅದೃಷ್ಟ ಸಂಖ್ಯೆ : 11, 3

ಮೇಷ: ಬಹುದಿನಗಳ ಕನಸು ಸಾಕಾರಗೊಳ್ಳಲಿದೆ. ಪ್ರಾಮಾಣಿಕತೆ, ಬುದ್ಧಿವಂತಿಕೆ, ಕೆಲಸದಲ್ಲಿನ ಶಿಸ್ತು ಉತ್ತಮ ಹುದ್ದೆಯನ್ನು ಅಲಂಕರಿಸಲು ಸಹಾಯ ಮಾಡಲಿದೆ. ಏಕಾಗ್ರತೆಗೆ ಭಂಗವಾಗಬಹುದು.

ವೃಷಭ: ವಿವಾಹ ಅಪೇಕ್ಷಿಗಳಿಗೆ ಅನಿರೀಕ್ಷಿತವಾಗಿ ಸಹೋದರನ ಮುಖಾಂತರ ವೈವಾಹಿಕ ಸಂಬಂಧವೊಂದು ಕೂಡಿ ಬರಲಿದೆ. ಸೋಲನ್ನು ಬಯಸುವವರ ಸಂಖ್ಯೆಯು ಇಳಿಮುಖವನ್ನು ಹೊಂದುವುದು.

ಮಿಥುನ: ಅದೃಷ್ಟ ನಿಮ್ಮೆಡೆಗಿದ್ದರೂ ಎಲ್ಲಾ ಕಾರ್ಯಗಳನ್ನು ಎಚ್ಚರಿಕೆಯಿಂದ ನಿರ್ವಹಿಸಿ. ನಿರ್ಲಿಪ್ತತೆಯಿಂದ ಸದ್ಯದ ಸಮಸ್ಯೆಗಳು ಪರಿಹಾರ ಕಾಣಲಿವೆ. ಕೈಯಲ್ಲಿ ಹಣ ಇರುವುದರಿಂದ ಬಾಕಿ ಇರಿಸಿದ ಕೆಲಸಗಳ ಬಗ್ಗೆ ಗಮನಹರಿಸಿ.

ಕರ್ಕಾಟಕ: ಅನಾಯಾಸದಿಂದ ಧನಾದಾಯವಿದ್ದರೂ ನಾನಾ ರೀತಿಯ ಅನವಶ್ಯಕ ಖರ್ಚು-ವೆಚ್ಚಗಳು ಆರ್ಥಿಕ ಬಿಕ್ಕಟ್ಟಿನ ಕಡೆಗೆ ಕಂಡೊಯ್ಯಲಿವೆ. ಯಾವುದೇ ಕಠಿಣ ಪರಿಸ್ಥಿತಿಯಲ್ಲಿ ವಿಚಲಿತಗೊಳ್ಳದೆ ಕೆಲಸವನ್ನು ನೆರವೇರಿಸಿ.

ಸಿಂಹ: ಕಾರ್ಯಕ್ಷೇತ್ರದಲ್ಲಿ ಸ್ವಯಂ ಪರೀಕ್ಷೆಯ ಆರಂಭವಾಗುವುದು. ಹಾಗಾಗಿ ಎರಡೆರಡು ಬಾರಿ ಪರಿಶೀಲನೆ ಮಾಡುವುದು ಅಗತ್ಯ. ರಿಯಾಯಿತಿ ಮಾರಾಟಗಳಿಂದ ಮೋಸ ಹೋಗುವ ಸಾಧ್ಯತೆಗಳು ಇವೆ.

ಕನ್ಯಾ: ಧೀಮಂತರ ಹಾಗೂ ಪ್ರಭಾವಿ ವ್ಯಕ್ತಿಯ ಸಹಕಾರದಿಂದ ಆಧ್ಯಾತ್ಮಿಕ ಕಾರ್ಯಕ್ರಮ ಉತ್ತಮವಾಗಿ ನೆರವೇರಿಸಿಕೊಳ್ಳುವಿರಿ. ಬಟ್ಟೆ ವ್ಯಾಪಾರಿಗಳಿಗೆ ಉತ್ತಮ ಮಾರಾಟ ಹಾಗೂ ಲಾಭವಾಗುವುದು.

ತುಲಾ: ಬಾಲ್ಯ ಸ್ನೇಹಿತನಿಗಾಗಿ ಮನೆಯಲ್ಲಿ ವಿಶೇಷ ಭೋಜನದ ವ್ಯವಸ್ಥೆ ಸಂತೋಷ ಪೂರ್ವಕವಾಗಿ ನಡೆಯುವುದು. ಸಂಸಾರದಲ್ಲಿ ಕೆಲವು ಬದಲಾವಣೆಗಳನ್ನು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆ ಬರುವುದು.

ವೃಶ್ಚಿಕ: ಹತ್ತಾರು ವಿಷಯದಲ್ಲಿ ಗಮನ ಹರಿಸುವುದಕ್ಕಿಂತ ನಿರ್ದಿಷ್ಟವಾದ ಒಂದು ಗುರಿ ತಲುಪವಂಥ ಪ್ರಯತ್ನ ಮಾಡಿ. ಆದಾಯ ಮತ್ತು ತೆರಿಗೆ ಅಧಿಕಾರಿಗಳಿಗೆ ದಿಢೀರ್ ವರ್ಗಾವಣೆಯಾಗುವ ಸಂಭವವಿದೆ.

ಧನು: ಮಗನ ಬೇಡಿಕೆಗಳನ್ನು ಪೂರೈಸುವ ಪ್ರಯತ್ನಕ್ಕೆ ಹಲವು ಅಡ್ಡಿ ಆತಂಕಗಳು ಎದುರಾಗಲಿವೆ. ಆಹಾರದಲ್ಲಿ ಆಗುವ ಬದಲಾವಣೆಯಿಂದಾಗಿ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ.

ಮಕರ: ದುಡ್ಡಿನ ವಿಷಯವಾಗಿ ದಂಪತಿಗಳಲ್ಲಿ ಭವಿಷ್ಯದ ಕುರಿತು ಗಂಭೀರವಾದ ಚರ್ಚೆ ನಡೆಯಲಿದೆ. ಪ್ರೀತಿ ಪಾತ್ರರಿಂದ ನೆಮ್ಮದಿ ತರುವಂಥ ಸನ್ನಿವೇಶಗಳು ನಡೆಯಲಿವೆ. ಆದಾಯಕ್ಕೆ ತಕ್ಕ ಜೀವನ ರೂಪಿಸಿಕೊಳ್ಳಿ.

ಕುಂಭ: ಜಾಮೀನು ವಿಷಯಕ್ಕೆ ಸಂಬಂಧಿಸಿದಂತೆ ನೆರೆಯವರಲ್ಲಿ ಮಾತುಕತೆ ನಡೆಯಲಿವೆ. . ಟ್ರಾವೆಲ್ ಏಜೆನ್ಸಿಯನ್ನು ನಡೆಸುವವರಿಗೆ ಉತ್ತಮ ಆದಾಯ ಇರಲಿದೆ. ಮನೆಯ ಅಲಂಕಾರಗಳಿಗೆ ಹೇರಳ ಹಣ ವ್ಯಯಿಸುವಿರಿ.

ಮೀನ: ಹೊಸ ಮನೆಯ ನಿರ್ಮಾಣದ ಕೆಲಸಗಳನ್ನು ಪೂರೈಸಿಕೊಳ್ಳುವ ಬಗ್ಗೆ ಗಮನವಿರಲಿ. ಹಣಕಾಸು ನಿರ್ವಹಣೆಯಲ್ಲಿರುವ ಕುಶಲಮತಿಗಳು ಸಮಯಕ್ಕೆ ಸರಿಯಾಗಿ ಸಹಾಯಕ್ಕೆ ಬರಲಿದ್ದಾರೆ.

ದ್ವಿಚಕ್ರ ವಾಹನ ಉದ್ಯಮ ಶೇ 9ರಷ್ಟು ಬೆಳವಣಿಗೆ ನಿರೀಕ್ಷೆ

ನವದೆಹಲಿ (ಪಿಟಿಐ): 'ದೀರ್ಘಾವಧಿಯಲ್ಲಿ ದ್ವಿಚಕ್ರ ವಾಹನ ಉದ್ಯಮದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಶೇ 8ರಿಂದ ಶೇ 9ರಷ್ಟು ಆಗುವ ನಿರೀಕ್ಷೆ ಇದೆ' ಎಂದು ಟಿವಿಎಸ್ ಮೋಟರ್ ಕಂಪನಿಯ ಸಿಇಒ ಕೆ.ಎನ್. ರಾಧಾಕೃಷ್ಣನ್ ತಿಳಿಸಿದ್ದಾರೆ.

ಜಿಎಸ್‌ಟಿ ದರ ಪರಿಷ್ಕರಣೆ, ಮೂಲಸೌಕರ್ಯ ವಲಯದ ಮೇಲೆ ಸರ್ಕಾರದ ಬಂಡವಾಳ ವೆಚ್ಚ ಮತ್ತು ಜಿಡಿಪಿ ಬೆಳವಣಿಗೆಯು ವಾಹನಗಳ ಮಾರಾಟದ ಹೆಚ್ಚಳಕ್ಕೆ ಕಾರಣವಾಗಲಿದೆ ಎಂದು ಹೇಳಿದ್ದಾರೆ.

ಮುಂದಿನ ಆರ್ಥಿಕ ವರ್ಷದ ಮೊದಲಾರ್ಧದಲ್ಲಿಯೂ (ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ) ಜಿಎಸ್‌ಟಿ ಇಳಿಕೆಯ ಕಾರಣದಿಂದಾಗಿ ದ್ವಿಚಕ್ರ ವಾಹನಗಳ ಮಾರಾಟವು ಹೆಚ್ಚಾಗುವ ನಿರೀಕ್ಷೆ ಇದೆ. ಇದರಿಂದ ಉದ್ಯಮಕ್ಕೆ ಪ್ರಯೋಜನವಾಗಲಿದೆ ಎಂದು ತಿಳಿಸಿದ್ದಾರೆ.

ನಾಲ್ಕನೇ ತ್ರೈಮಾಸಿಕದಲ್ಲಿ ದ್ವಿಚಕ್ರ ವಾಹನ ಉದ್ಯಮದ ಬೆಳವಣಿಗೆ ಶೇ 15ಕ್ಕಿಂತ ಹೆಚ್ಚಾಗಬಹುದು ಎಂಬ ವಿಶ್ವಾಸವಿದೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಉದ್ಯಮದ ಬೆಳವಣಿಗೆ ಶೇ 2ರಷ್ಟು ಮಾತ್ರವಿತ್ತು. ಇಡೀ ವರ್ಷದ ಕೆಲವೆಡೆ ಸುಮಾರು ಶೇ 9ರಷ್ಟು ಬೆಳವಣಿಗೆ ಕಾಣಬಹುದು ಎಂದು ತಿಳಿಸಿದ್ದಾರೆ.

ಟೋಲ್ ಪ್ಲಾಜಾಗಳಲ್ಲಿ ನಗದು ರಹಿತ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿ ಬಗ್ಗೆ ನಿಮ್ಮ ಅಭಿಮತವೇನು?

- ಹೌದು, ಸಮಯ ಉಳಿತಾಯವಾಗಲಿದೆ
- ಇಲ್ಲ, ತಾಂತ್ರಿಕ ಸಮಸ್ಯೆ ಸರಿಪಡಿಸಬೇಕು.

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನಲ್ಲಿ ₹590 ಕೋಟಿ ವಂಚನೆ

ಮುಂಬೈ (ಪಿಟಿಐ): ಹರಿಯಾಣ ಸರ್ಕಾರದ ಖಾತೆಗಳಲ್ಲಿ ಒಟ್ಟು ₹590 ಕೋಟಿ ಮೊತ್ತದ ವಂಚನೆ ನಡೆದಿದೆ, ವಂಚನೆಯನ್ನು ತನ್ನ ನೌಕರರು ಎಸಗಿದ್ದಾರೆ ಎಂದು ಖಾಸಗಿ ವಲಯದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಭಾನುವಾರ ಹೇಳಿದೆ.

ಈ ವಿಚಾರವಾಗಿ ಪೊಲೀಸರಿಗೆ ದೂರು ನೀಡಲಾಗಿದೆ, ಆರ್‌ಬಿಐಗೆ ಮಾಹಿತಿ ಕೊಡಲಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಹೇಳಿದೆ.

'ಚಂಡೀಗಢದ ನಿರ್ದಿಷ್ಟ ಶಾಖೆ ಒಂದರಲ್ಲಿ ನೌಕರರು ವಂಚನೆಯ ಚಟುವಟಿಕೆಗಳನ್ನು ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹರಿಯಾಣ ಸರ್ಕಾರಕ್ಕೆ ಸೇರಿದ ಖಾತೆಗಳಲ್ಲಿ ಈ ಚಟುವಟಿಕೆಗಳು ನಡೆದಿವೆ. ಇದರಲ್ಲಿ ಇತರರೂ ಭಾಗಿಯಾಗಿರುವ ಸಾಧ್ಯತೆ ಇದೆ' ಎಂದು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಷೇರುಪೇಟೆಗೆ ನೀಡಿರುವ ವಿವರದಲ್ಲಿ ಉಲ್ಲೇಖಿಸಿದೆ.

ಇನ್ನಷ್ಟು ಮಾಹಿತಿ ದೊರೆತ ನಂತರದಲ್ಲಿ ವಂಚನೆಯ ಮೊತ್ತ ಎಷ್ಟು ಎಂಬುದು ನಿಖರವಾಗುತ್ತದೆ ಎಂದು ಅದು ಹೇಳಿದೆ.

ಹರಿಯಾಣ ಸರ್ಕಾರವು ತನ್ನ ಜೊತೆ ಬ್ಯಾಂಕಿಂಗ್ ವಹಿವಾಟು ನಡೆಸುತ್ತಿದೆ. ಖಾತೆಯೊಂದನ್ನು ಮುಚ್ಚಿ, ಉಳಿದಿರುವ ಮೊತ್ತವನ್ನು ಇನ್ನೊಂದು ಬ್ಯಾಂಕ್‌ಗೆ ವರ್ಗಾವಣೆ ಮಾಡಬೇಕು ಎಂಬ ಕೋರಿಕೆ ಬಂತು. ಖಾತೆ ಮುಚ್ಚಿ, ಮೊತ್ತ ವರ್ಗಾಯಿಸುವ ಪ್ರಕ್ರಿಯೆಯಲ್ಲಿ, ಉಲ್ಲೇಖಿತ ಮೊತ್ತ ಹಾಗೂ ಖಾತೆಯಲ್ಲಿ ಇದ್ದ ಮೊತ್ತದ ವಿಚಾರವಾಗಿ ಕೆಲವು ಲೋಪಗಳು ಕಂಡುಬಂದಿವೆ ಎಂದು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ತಿಳಿಸಿದೆ.

ಬ್ಯಾಂಕ್‌ನ ನಾಲ್ವರು ಅಧಿಕಾರಿಗಳನ್ನು ಅಮಾನತಿನಲ್ಲಿ ಇರಿಸಲಾಗಿದೆ.

ಒಡಿಶಾದಲ್ಲಿ ಆರ್‌ಬಿಐ ದತ್ತಾಂಶ ಕೇಂದ್ರ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ದತ್ತಾಂಶ ಕೇಂದ್ರವನ್ನು ಒಡಿಶಾದಲ್ಲಿ ನಿರ್ಮಾಣ ಮಾಡಿದೆ. ಇದು ಭೂಕಂಪನಕ್ಕೆ ಹೆಚ್ಚು ತುತ್ತಾಗಬಹುದಾದ ವಲಯಗಳಿಂದ ಹಾಗೂ ಗಡಿಯಾಚೆಯಿಂದ ಅಪಾಯ ಎದುರಾಗಬಹುದಾದ ಪ್ರದೇಶಗಳಿಂದ ದೂರದಲ್ಲಿ ಇದೆ.

ಮಹತ್ವದ ಹಣಕಾಸು ಮೂಲಸೌಕರ್ಯವನ್ನು ಅಪಾಯಗಳಿಂದ ರಕ್ಷಿಸುವ ಉದ್ದೇಶದಿಂದ ಆರ್‌ಬಿಐ ದತ್ತಾಂಶ ಕೇಂದ್ರವನ್ನು ಇಲ್ಲಿ ನಿರ್ಮಿಸಿದೆ.

ಭುವನೇಶ್ವರದಲ್ಲಿ ಇರುವ ಇದು ಆರ್‌ಬಿಐನ ಕರೆನ್ಸಿ ನಿರ್ವಹಣೆಗೆ, ಪಾವತಿ ಪ್ರಕ್ರಿಯೆಗಳನ್ನು ಬೆಂಬಲಿಸುವ ವ್ಯವಸ್ಥೆಗಳನ್ನು ತನ್ನಲ್ಲಿ ಇರಿಸಿಕೊಳ್ಳಲಿದೆ ಎಂದು ತಜ್ಞರು ಹೇಳಿದ್ದಾರೆ.

ಒಡಿಶಾದಲ್ಲಿನ ಈ ಕೇಂದ್ರವು ಭಾರತದ ಪಶ್ಚಿಮ ಹಾಗೂ ಉತ್ತರದ ಗಡಿ ಪ್ರದೇಶಗಳಿಂದ ಬಹುದೂರದಲ್ಲಿ ಇದೆ. ಇದರಿಂದಾಗಿ ಗಡಿಯಾಚೆಯಿಂದ ಎದುರಾಗಬಹುದಾದ ಕ್ಷಿಪಣಿ ಅಥವಾ ಡ್ರೋನ್ ದಾಳಿಯ ಸಾಧ್ಯತೆ ಕಡಿಮೆ ಎಂದು ತಜ್ಞರೊಬ್ಬರು ತಿಳಿಸಿದರು.

ಆರ್‌ಬಿಐನ ಪ್ರಮುಖ ದತ್ತಾಂಶ ಕೇಂದ್ರವು ನವಿ ಮುಂಬೈನ ಖಾರ್ಗರ್‌ನಲ್ಲಿದೆ. ಒಡಿಶಾದಲ್ಲಿ ಇರುವುದು ಎರಡನೆಯ ದತ್ತಾಂಶ ಕೇಂದ್ರ.

ಒಡಿಶಾದಲ್ಲಿ ಹೆಚ್ಚಿನ ಪ್ರಮಾಣದ ಡಿಜಿಟಲ್ ದಟ್ಟಣೆ ಇಲ್ಲ. ಹೀಗಾಗಿ ಇಲ್ಲಿ ದತ್ತಾಂಶ ಕೇಂದ್ರವನ್ನು ನಿರ್ಮಿಸುವ ಮೂಲಕ ಆರ್‌ಬಿಐ ಸೈಬರ್ ಸಮಸ್ಯೆಗಳು ಎದುರಾಗುವ ಅಪಾಯವನ್ನು ತಗ್ಗಿಸಲು ಯತ್ನಿಸುತ್ತಿರಬಹುದು ಎಂದು ಇನ್ನೊಬ್ಬರು ತಜ್ಞರು ಹೇಳಿದ್ದಾರೆ.

ತುರ್ತು ಹಣಕ್ಕೆ ಎಫ್.ಡಿ ಲ್ಯಾಡರಿಂಗ್

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ನಾವೆಲ್ಲ ಕಷ್ಟಪಟ್ಟು ಸಂಪಾದಿಸಿದ ಹಣ ಸುರಕ್ಷಿತವಾಗಿರಲಿ ಎಂದು ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ (ಫಿಕ್ಸೆಡ್ ಡೆಪಾಸಿಟ್–ಎಫ್.ಡಿ) ರೂಪದಲ್ಲಿ ಅದನ್ನು ಇರಿಸುತ್ತೇವೆ. ಆದರೆ, ಹೆಚ್ಚಿನವರು ಮಾಡುವ ಒಂದು ತಪ್ಪು ಎಂದರೆ, ತಮ್ಮಲ್ಲಿರುವ ಅಷ್ಟೂ ಹಣವನ್ನು ದೀರ್ಘಾವಧಿಗೆ (ಉದಾಹರಣೆಗೆ 5 ಅಥವಾ 10 ವರ್ಷ) ಒಂದೇ ಎಫ್.ಡಿಯಲ್ಲಿ ಇರಿಸುವುದು. ಹೀಗೆ ಮಾಡುವುದರಿಂದ ನಿಮ್ಮ ಹಣದ ಮೇಲೆ ನಿಮಗೆ ನಿಯಂತ್ರಣ ಇರುವುದಿಲ್ಲ. ಹಣದ ತುರ್ತು ಅವಶ್ಯಕತೆ ಎದುರಾದರೆ ಅಥವಾ ಮಾರುಕಟ್ಟೆಯಲ್ಲಿ ಬಡ್ಡಿ ದರ ಹೆಚ್ಚಾದರೆ, ನೀವು ಹಳೆಯ ಕಡಿಮೆ ಬಡ್ಡಿ ದರಕ್ಕೇ ಅಂಟಿಕೊಳ್ಳಬೇಕಾಗುತ್ತದೆ. ಇಲ್ಲವೇ ಎಫ್.ಡಿ.ಯನ್ನು ಅವಧಿಗೆ ಮೊದಲೇ ಹಿಂಪಡೆದು ಅದಕ್ಕೆ ದಂಡ ಕಟ್ಟಬೇಕಾಗುತ್ತದೆ. ಈ ಎಲ್ಲ ಸಮಸ್ಯೆಗಳಿಗೆ ಅತ್ಯಂತ ಜಾಣತನದ ಪರಿಹಾರ ಎಫ್.ಡಿ ಲ್ಯಾಡರಿಂಗ್ ಅಥವಾ ಏಣಿ ಪದ್ಧತಿ.

ಸರಳವಾಗಿ ಹೇಳುವುದಾದರೆ, ಹೂಡಿಕೆಯ ಮೊತ್ತವನ್ನು ಒಂದೇ ಎಫ್.ಡಿ.ಯಲ್ಲಿ ಇರಿಸುವ ಬದಲು, ಅದನ್ನು ಸಣ್ಣ ಭಾಗಗಳನ್ನಾಗಿ ವಿಂಗಡಿಸಿ, ಬೇರೆ ಬೇರೆ ಅವಧಿಗಳಿಗೆ ಹೂಡಿಕೆ ಮಾಡುವುದೇ ಈ ಏಣಿ ಪದ್ಧತಿ. ಉದಾಹರಣೆಗೆ, ನಿಮ್ಮ ಬಳಿ ₹15 ಲಕ್ಷ ಇದೆ ಎಂದಿಟ್ಟುಕೊಳ್ಳಿ. ಇದನ್ನು ಸಂಪೂರ್ಣವಾಗಿ 5 ವರ್ಷಕ್ಕೆ ಒಂದೇ ಕಡೆ ಇರಿಸುವ ಬದಲು, ₹5 ಲಕ್ಷದ ಮೂರು ಭಾಗಗಳನ್ನಾಗಿ ಮಾಡಿ. ಮೊದಲ ₹5 ಲಕ್ಷವನ್ನು ಒಂದು ವರ್ಷಕ್ಕೆ, ಎರಡನೇ ₹5 ಲಕ್ಷವನ್ನು ಎರಡು ವರ್ಷಗಳಿಗೆ ಮತ್ತು ಮೂರನೇ ₹5 ಲಕ್ಷವನ್ನು ಮೂರು ವರ್ಷಗಳಿಗೆ ಹೂಡಿಕೆ ಮಾಡಿ. ಇಲ್ಲಿ ಒಂದೊಂದು ಹೂಡಿಕೆಯೂ ಏಣಿಯ ಒಂದೊಂದು ಮೆಟ್ಟಿಲಿನಂತೆ ಕೆಲಸ ಮಾಡುತ್ತದೆ. ಪ್ರತಿ ವರ್ಷವೂ ಒಂದು ಎಫ್.ಡಿ.ಯ ಅವಧಿ ಪೂರ್ಣಗೊಂಡು ನಿಮ್ಮ ಕೈಗೆ ಹಣ ಸಿಗುತ್ತಲೇ ಇರುತ್ತದೆ.

₹15 ಲಕ್ಷ ಇದ್ದರೆ ಎಫ್.ಡಿ ಲ್ಯಾಡರಿಂಗ್ ಹೇಗೆ?

ಹೂಡಿಕೆ ಮೊತ್ತ	ಅವಧಿ
₹5 ಲಕ್ಷ	1 ವರ್ಷ
₹5 ಲಕ್ಷ	2 ವರ್ಷ
₹5 ಲಕ್ಷ	3 ವರ್ಷ

ಸೂಚನೆ: ಇದು ಉದಾಹರಣೆ ಅಷ್ಟೇ, ಹೂಡಿಕೆ ಶಿಫಾರಸು ಅಲ್ಲ

ಎಫ್.ಡಿ ಲ್ಯಾಡರಿಂಗ್‌ನಿಂದ ಆಗುವ ಅನುಕೂಲಗಳೇನು?

- **ಬಡ್ಡಿ ದರ ಏರಿಳಿತದ ಲಾಭ:** ಆರ್‌ಬಿಐ ಕಾಲಕಾಲಕ್ಕೆ ರೆಪೊ ದರ ಬದಲಾಯಿಸುತ್ತಿರುತ್ತದೆ. ನೀವು ಒಂದೇ ಬಾರಿ ದೀರ್ಘಾವಧಿಗೆ ನಿಶ್ಚಿತ ಠೇವಣಿ ಮಾಡಿದಾಗ, ಮುಂದಿನ ದಿನಗಳಲ್ಲಿ ಬಡ್ಡಿ ದರ ಹೆಚ್ಚಾದರೂ ಅದರ ಲಾಭ ಸಿಗುವುದಿಲ್ಲ. ಆದರೆ ಲ್ಯಾಡರಿಂಗ್ ಪದ್ಧತಿಯಲ್ಲಿ, ಪ್ರತಿ ವರ್ಷ ನಿಮ್ಮ ಒಂದು ಎಫ್.ಡಿ ಅವಧಿ ಪೂರ್ಣಗೊಳ್ಳುವುದರಿಂದ, ಆ ಹಣವನ್ನು ಅಂದಿನ ಬಡ್ಡಿ ದರಕ್ಕೆ ಮತ್ತೆ ಹೂಡಿಕೆ ಮಾಡುವ ಅವಕಾಶ ಇರುತ್ತದೆ. ಅಂದರೆ, ನೀವು ಮಾರುಕಟ್ಟೆಯ ಏರಿಳಿತದ ಜೊತೆಗೆ ನಿಮ್ಮ ಆದಾಯವನ್ನೂ ಹೆಚ್ಚಿಸುತ್ತ ಹೋಗಬಹುದು. ಇದು ನಿಮ್ಮ ಹಣದ ಮೌಲ್ಯವನ್ನು ಹಣದುಬ್ಬರಕ್ಕೆ (ಬೆಲೆ ಏರಿಕೆ) ತಕ್ಕಂತೆ ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.
- **ತುರ್ತು ಸಂದರ್ಭಗಳಲ್ಲಿ ದಂಡ ರಹಿತ ನಗದು ಲಭ್ಯತೆ:** ಹಣಕಾಸಿನ ಯೋಜನೆಗಳಲ್ಲಿ ನಗದು ಲಭ್ಯತೆ ಬಹಳ ಮುಖ್ಯ. ಜೀವನದಲ್ಲಿ ಯಾವಾಗ ಬೇಕಾದರೂ ವೈದ್ಯಕೀಯ ತುರ್ತು ಪರಿಸ್ಥಿತಿ ಅಥವಾ ಅನಿವಾರ್ಯ ಖರ್ಚುಗಳು ಬರಬಹುದು. ಅಂತಹ ಸಮಯದಲ್ಲಿ ದೀರ್ಘಾವಧಿಯ ಎಫ್.ಡಿ.ಯನ್ನು ಮುರಿದರೆ ಬ್ಯಾಂಕ್‌ಗಳು ಶೇ 0.5ರಿಂದ ಶೇ 1ರವರೆಗೆ ದಂಡ ವಿಧಿಸುತ್ತವೆ. ಆದರೆ ಲ್ಯಾಡರಿಂಗ್ ಪದ್ಧತಿಯಲ್ಲಿ, ನೀವು ಹೂಡಿಕೆಯನ್ನು ಹಂಚಿರುವುದರಿಂದ, ಪ್ರತಿ ವರ್ಷ ಸಿಗುವ ಹಣವನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಬಹುದು. ಉಳಿದ ಎಫ್.ಡಿ.ಗಳು ಹಾಗೆಯೇ ಮುಂದುವರಿಯುವುದರಿಂದ ನಿಮ್ಮ ಒಟ್ಟಾರೆ ಹೂಡಿಕೆಗೆ ಧಕ್ಕೆ ಆಗುವುದಿಲ್ಲ.
- **ದುಪ್ಪಟ್ಟು ಸುರಕ್ಷತೆ:** ಭಾರತದಲ್ಲಿ ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ (ಡಿಐಸಿಜಿಸಿ) ನಿಯಮದಂತೆ, ಒಂದು ಬ್ಯಾಂಕ್‌ನಲ್ಲಿ ಒಬ್ಬ ವ್ಯಕ್ತಿಯ ₹5 ಲಕ್ಷದವರೆಗಿನ ಠೇವಣಿಗೆ ಮಾತ್ರ ವಿಮೆ ಇರುತ್ತದೆ. ನೀವು ಲ್ಯಾಡರಿಂಗ್ ಮಾಡುವಾಗ, ನಿಮ್ಮ ₹15 ಲಕ್ಷವನ್ನು ಒಂದೇ ಬ್ಯಾಂಕ್‌ನಲ್ಲಿ ಇಡುವ ಬದಲು ಮೂರು ಭಿನ್ನ ಬ್ಯಾಂಕ್‌ಗಳಲ್ಲಿ (ಉದಾಹರಣೆಗೆ ಒಂದು ಎಸ್‌ಬಿಐ, ಒಂದು ಎಚ್‌ಡಿಎಫ್‌ಸಿ ಮತ್ತು ಒಂದು ಐಸಿಐಸಿಐ) ಹಂಚಿ ಹೂಡಿಕೆ ಮಾಡಿದರೆ, ನಿಮ್ಮ ಇಡೀ ₹15 ಲಕ್ಷ ಮೊತ್ತವು ವಿಮಾ ವ್ಯಾಪ್ತಿಗೆ ಬರುತ್ತದೆ. ಇದು ಅಸಲು ಹಣಕ್ಕೂ ಗರಿಷ್ಠ ಭದ್ರತೆ ಒದಗಿಸುತ್ತದೆ.

ಈ ವಿಷಯ ಮರೆಯದಿರಿ:

ಈ ಪದ್ಧತಿಯನ್ನು ಅನುಸರಿಸುವಾಗ ನೀವು ಕೆಲವು ವಿಷಯಗಳನ್ನು ಗಮನದಲ್ಲಿಡಬೇಕು.

- **ಈ ಬಗೆಯ ಎಫ್.ಡಿ ಬೇಡ:** ಎಫ್.ಡಿ ಮಾಡುವಾಗ ಸ್ವಯಂಚಾಲಿತ ನವೀಕರಣ (ಆಟೊ ರಿನೀವಲ್) ಆಯ್ಕೆ ಆರಿಸಬೇಡಿ. ಪ್ರತಿ ಬಾರಿ ಎಫ್.ಡಿ ಅವಧಿ ಪೂರ್ಣಗೊಂಡಾಗ ಮಾರುಕಟ್ಟೆಯನ್ನು ಗಮನಿಸಿ, ಯಾವ ಬ್ಯಾಂಕ್ ಅಥವಾ ಯಾವ ಯೋಜನೆ ಹೆಚ್ಚು ಬಡ್ಡಿ ನೀಡುತ್ತದೆಯೋ ಅಲ್ಲಿಗೆ ಹಣ ವರ್ಗಾಯಿಸಿ. ಎರಡನೆಯದಾಗಿ, 80ಸಿ ಅಡಿಯಲ್ಲಿ ತೆರಿಗೆ ಉಳಿಸಲು ಇರುವ ಎಫ್.ಡಿಗಳು 5 ವರ್ಷ ಲಾಕ್ ಆಗಿರುತ್ತವೆ. ಅವುಗಳನ್ನು ಈ ಪದ್ಧತಿಗೆ ಬಳಸಬೇಡಿ. ಬದಲಾಗಿ ಸಾಮಾನ್ಯ ಎಫ್.ಡಿಗಳನ್ನೇ ಬಳಸಿ. ಡಿಜಿಟಲ್ ಬ್ಯಾಂಕಿಂಗ್ ಮೂಲಕ ಮನೆಯಲ್ಲೇ ಕುಳಿತು ನಿಮಿಷಗಳಲ್ಲಿ ಇಂತಹ ಹೂಡಿಕೆಗಳನ್ನು ನಿರ್ವಹಿಸಬಹುದು.
- **ಹಿರಿಯ ನಾಗರಿಕರಿಗೆ ಹೆಚ್ಚಿನ ಬಡ್ಡಿ:** ಸಾಮಾನ್ಯವಾಗಿ ಬ್ಯಾಂಕ್‌ಗಳು ಹಿರಿಯ ನಾಗರಿಕರಿಗೆ (60 ವರ್ಷ ಮೇಲ್ಪಟ್ಟವರಿಗೆ) ಸಾಮಾನ್ಯ ದರಕ್ಕಿಂತ ಶೇ 0.50ರಷ್ಟು ಹೆಚ್ಚಿನ ಬಡ್ಡಿ ನೀಡುತ್ತವೆ. ಹಿರಿಯರ ನಾಗರಿಕರು ಕೂಡ ಲ್ಯಾಡರಿಂಗ್ ಪದ್ಧತಿಯನ್ನು ಅನುಸರಿಸಬಹುದು. ಕೆಲವು ಬ್ಯಾಂಕ್‌ಗಳು ಅತಿ ಹಿರಿಯ ನಾಗರಿಕರಿಗೆ (80 ವರ್ಷ ಮೇಲ್ಪಟ್ಟವರು) ಇನ್ನೂ ಹೆಚ್ಚಿನ ಬಡ್ಡಿ ನೀಡುತ್ತವೆ, ಇದನ್ನು ಗಮನಿಸುವುದು ಉತ್ತಮ.
- **ತೆರಿಗೆ ಮತ್ತು ಟಿಡಿಎಸ್:** ಎಫ್.ಡಿ ಮೇಲಿನ ಬಡ್ಡಿಯು ನಿಮ್ಮ ಒಟ್ಟು ಆದಾಯಕ್ಕೆ ಸೇರುತ್ತದೆ ಮತ್ತು ನಿಮ್ಮ ತೆರಿಗೆ ಹಂತಕ್ಕೆ ಅನುಗುಣವಾಗಿ ತೆರಿಗೆ ವಿಧಿಸಲಾಗುತ್ತದೆ. ಒಂದು ಹಣಕಾಸು ವರ್ಷದಲ್ಲಿ ಎಫ್.ಡಿ ಬಡ್ಡಿಯು ₹40 ಸಾವಿರ (ಹಿರಿಯ ನಾಗರಿಕರಿಗೆ ₹50 ಸಾವಿರ) ಮೀರಿದರೆ ಬ್ಯಾಂಕ್‌ಗಳು ಟಿಡಿಎಸ್ (ಮೂಲದಲ್ಲೇ ತೆರಿಗೆ ಕಡಿತ) ಮಾಡುತ್ತವೆ. ನಿಮ್ಮ ಆದಾಯವು ತೆರಿಗೆ ಮಿತಿಗಿಂತ ಕಡಿಮೆ ಇದ್ದರೆ, ಬ್ಯಾಂಕ್‌ಗೆ ನಮೂನೆ 15ಜಿ ಅಥವಾ 15ಎಚ್ ಸಲ್ಲಿಸುವ ಮೂಲಕ ಟಿಡಿಎಸ್ ಕಡಿತವಾಗದಂತೆ ತಡೆಯಬಹುದು.
- **ಸಣ್ಣ ಹಣಕಾಸು ಬ್ಯಾಂಕ್‌ಗಳ ಬಳಕೆ:** ಹೆಚ್ಚಿನ ಸುರಕ್ಷತೆಗಾಗಿ ದೊಡ್ಡ ಬ್ಯಾಂಕ್‌ಗಳನ್ನು ಆರಿಸುವುದು ಒಳ್ಳೆಯದು. ಆದರೆ, ಆರ್‌ಬಿಐ ಅಡಿಯಲ್ಲಿ ನೋಂದಾಯಿತವಾಗಿರುವ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ಗಳು (ಕಿರು ಹಣಕಾಸು ಬ್ಯಾಂಕ್‌ಗಳು) ದೊಡ್ಡ ಬ್ಯಾಂಕ್‌ಗಳಿಗಿಂತ ಶೇ 1ರಿಂದ ಶೇ 2ರಷ್ಟು ಹೆಚ್ಚಿನ ಬಡ್ಡಿ ನೀಡುವುದಿದೆ. ಇಲ್ಲೂ ಕೂಡ ₹5 ಲಕ್ಷದವರೆಗಿನ ನಿಮ್ಮ ಠೇವಣಿಗೆ ಡಿಐಸಿಜಿಸಿ ವಿಮೆ ಇರುವುದರಿಂದ, ನಿಮ್ಮ ಹೂಡಿಕೆಯ ಒಂದು ಭಾಗವನ್ನು ಇಂತಹ ಬ್ಯಾಂಕ್‌ಗಳಲ್ಲಿರಿಸಿ ಲಾಭ ಹೆಚ್ಚಿಸಿಕೊಳ್ಳಬಹುದು.

ಸೌದಿ ಅರೇಬಿಯಾದಿಂದ ತೈಲ ಆಮದು ಹೆಚ್ಚಳ

ಪ್ರತಿ ದಿನ 11 ಲಕ್ಷ ಬ್ಯಾರಲ್ ಕಚ್ಚಾ ತೈಲ ಆಮದು • ಮಾರ್ಚ್‌ಗೆ 14 ಲಕ್ಷ ತಲುಪುವ ಅಂದಾಜು

ನವದೆಹಲಿ (ಪಿಟಿಐ): ಫೆಬ್ರುವರಿ ತಿಂಗಳಿನಲ್ಲಿ ರಷ್ಯಾದಿಂದ ಭಾರತಕ್ಕೆ ಕಚ್ಚಾ ತೈಲ ಆಮದು ಇಳಿಕೆಯಾಗಿದೆ. ಆದರೆ, ಇದೇ ಅವಧಿಯಲ್ಲಿ ಸೌದಿ ಅರೇಬಿಯಾದಿಂದ ಆಮದು ಹೆಚ್ಚಳವಾಗಿದೆ.

ಪ್ರಸಕ್ತ ವರ್ಷದ ಫೆಬ್ರುವರಿ 1ರಿಂದ 18ರವರೆಗೆ ದೇಶಕ್ಕೆ ಪ್ರತಿ ದಿನ ಸರಾಸರಿ 48.5 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲ ಆಮದಾಗಿದೆ.

ಜನವರಿಯಲ್ಲಿ ಕಚ್ಚಾ ತೈಲ ಆಮದು ಪ್ರತಿದಿನ 52.5 ಲಕ್ಷ ಬ್ಯಾರಲ್‌ನಷ್ಟಿತ್ತು. ಇದಕ್ಕೆ ಹೋಲಿಸಿದರೆ ಫೆಬ್ರುವರಿಯಲ್ಲಿ ಕಚ್ಚಾ ತೈಲದ ಆಮದು ಶೇ 8ರಷ್ಟು ಇಳಿಕೆ ಆಗಿದೆ.

ಕಚ್ಚಾ ತೈಲ ಉತ್ಪನ್ನ ಮಾಡುವ ರಷ್ಯಾದ ಪ್ರಮುಖ ತೈಲ ಕಂಪನಿಗಳ ಮೇಲೆ ಅಮೆರಿಕ ನಿರ್ಬಂಧ ವಿಧಿಸಿದೆ. ಇದರಿಂದಾಗಿ ರಷ್ಯಾದಿಂದ ಭಾರತಕ್ಕೆ ಕಚ್ಚಾ ತೈಲ ಆಮದು ಪ್ರಮಾಣವು ಕಡಿಮೆ ಆಗಿದೆ. ಆದರೆ, ಇದೇ ಅವಧಿಯಲ್ಲಿ ಸೌದಿ ಅರೇಬಿಯಾದಿಂದ ಆಮದು ಹೆಚ್ಚಳವಾಗಿದೆ.

ಮುಖ್ಯಾಂಶಗಳು
- ಫೆಬ್ರುವರಿ 1ರಿಂದ 18ರವರೆಗೆ ನಿತ್ಯ 48.5 ಲಕ್ಷ ಬ್ಯಾರಲ್ ತೈಲ ಆಮದು
- ಅಮೆರಿಕದ ನಿರ್ಬಂಧದಿಂದ ರಷ್ಯಾದ ತೈಲ ಆಮದು ಇಳಿಕೆ
- ರಷ್ಯಾದ ಆಮದನ್ನು ಹಿಂದಿಕ್ಕಿದ ಸೌದಿ ಆಮದು



2025ರ ಡಿಸೆಂಬರ್‌ನಲ್ಲಿ ರಷ್ಯಾದಿಂದ ಭಾರತಕ್ಕೆ ಪ್ರತಿದಿನ 12.8 ಲಕ್ಷ ಬ್ಯಾರಲ್ ಕಚ್ಚಾ ತೈಲ ಆಮದಾಗಿತ್ತು. ಇದು ಜನವರಿಯಲ್ಲಿ 12.2 ಲಕ್ಷ ಮತ್ತು ಫೆಬ್ರುವರಿ ಆರಂಭದಲ್ಲಿ ಅಂದಾಜು 10.9 ಲಕ್ಷ ಬ್ಯಾರಲ್‌ಗೆ ಇಳಿದಿದ್ದು, ಶೇ 10ರಷ್ಟು ಕಡಿಮೆ ಆಗಿದೆ ಎಂದು ಜಾಗತಿಕ ವ್ಯಾಪಾರ ವಿಶ್ಲೇಷಕ ಸಂಸ್ಥೆ ಕೆಪ್ಲೆರ್ ತಿಳಿಸಿದೆ.

'ಫೆಬ್ರುವರಿಯಲ್ಲಿ ಭಾರತವು ರಷ್ಯಾದಿಂದ ಆಮದು ಮಾಡಿಕೊಂಡಿರುವ ಕಚ್ಚಾ ತೈಲ ದಿನವೊಂದಕ್ಕೆ ಅಂದಾಜು 10 ಲಕ್ಷದಿಂದ 12 ಲಕ್ಷ ಬ್ಯಾರಲ್‌ನಷ್ಟು ಇರಬಹುದು. ಇದು ಮಾರ್ಚ್ ವೇಳೆಗೆ 8 ಲಕ್ಷದಿಂದ 10 ಲಕ್ಷ ಬ್ಯಾರಲ್‌ಗೆ ಇಳಿಕೆ ಆಗಬಹುದು' ಎಂದು ಕೆಪ್ಲೆರ್‌ನ ಸಂಶೋಧನಾ ವಿಶ್ಲೇಷಕ (ಸಂಸ್ಕರಣೆ ಮತ್ತು ಮಾಡೆಲಿಂಗ್) ಸುಮಿತ್ ರಿಟೋಲಿಯಾ ಹೇಳಿದ್ದಾರೆ.

ರಷ್ಯಾದಿಂದ ಕಚ್ಚಾ ತೈಲ ಆಮದು ಪ್ರಮಾಣ ಇಳಿಕೆ ಆಗಿದ್ದರೆ, ಸೌದಿ ಅರೇಬಿಯಾದಿಂದ ಕಚ್ಚಾ ತೈಲ ಆಮದು ಫೆಬ್ರುವರಿಯಲ್ಲಿ ಪ್ರತಿದಿನ 10 ಲಕ್ಷದಿಂದ 11 ಲಕ್ಷ ಬ್ಯಾರಲ್‌ಗೆ ಹೆಚ್ಚಳವಾಗಿದೆ. ಮಾರ್ಚ್‌ನಲ್ಲಿ ಆಮದು 14 ಲಕ್ಷ ಬ್ಯಾರಲ್‌ಗೆ ತಲುಪಲಿದೆ ಎಂದು ತಿಳಿಸಿದ್ದಾರೆ.

ಈ ಅಂಕಿ ಅಂಶಗಳನ್ನು ಗಮನಿಸಿದಾಗ ಸೌದಿ ಅರೇಬಿಯಾ ಫೆಬ್ರುವರಿ ತಿಂಗಳಲ್ಲಿ ಇದುವರೆಗೆ ದೇಶದ ಅತಿದೊಡ್ಡ ಕಚ್ಚಾ ತೈಲ ಪೂರೈಕೆದಾರನಾಗಿ ಹೊರಹೊಮ್ಮಿದೆ. ನಂತರದ ಸ್ಥಾನದಲ್ಲಿ ರಷ್ಯಾ ಮತ್ತು ಇರಾಕ್ ಇವೆ ಎಂದು ಹೇಳಿದ್ದಾರೆ.

ಭಾರತವು ರಷ್ಯಾದ ಕಚ್ಚಾ ತೈಲ ಆಮದನ್ನು ಕಡಿಮೆ ಮಾಡುವುದರಿಂದ, ಒಟ್ಟಾರೆ ಕಚ್ಚಾ ತೈಲದ ಮೇಲಿನ ವೆಚ್ಚವು ಬ್ಯಾರಲ್‌ಗೆ 2-3 ಡಾಲರ್‌ಗಳಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಆದರೆ, ವೆನೆಜುವೆಲಾದ ಅಗ್ಗದ ಕಚ್ಚಾ ತೈಲ ಖರೀದಿಯು ಇದನ್ನು ಭಾಗಶಃ ಸರಿದೂಗಿಸಬಹುದು ಎಂದು ಹೇಳಿದ್ದಾರೆ.

ಬಂಡುಕೋರರ ಮೇಲೆ ಪ್ರತೀಕಾರ: 70 ಉಗ್ರರ ಹತ್ಯೆ

ಇಸ್ಲಾಮಾಬಾದ್ (ಪಿಟಿಐ): ದೇಶದಲ್ಲಿ ಇತ್ತೀಚೆಗೆ ನಡೆದ ಬಂಡುಕೋರರ ದಾಳಿಗೆ ಪ್ರತೀಕಾರವಾಗಿ ಅಫ್ಗಾನಿಸ್ತಾನದ ಕನಿಷ್ಠ ಏಳು ಭಯೋತ್ಪಾದಕ ಅಡಗುತಾಣಗಳ ಮೇಲೆ ವಾಯುದಾಳಿ ನಡೆಸಿದ್ದು, 70 ಭಯೋತ್ಪಾದಕರು ಮೃತಪಟ್ಟಿದ್ದಾರೆ ಎಂದು ಪಾಕಿಸ್ತಾನ ಭಾನುವಾರ ಹೇಳಿದೆ.

ನಾಗರಿಕ ಮತ್ತು ಧಾರ್ಮಿಕ ಕೇಂದ್ರವನ್ನು ಗುರಿಯಾಗಿಸಿ ನಡೆಸಲಾದ ಈ ದಾಳಿಗೆ ತಕ್ಕ ಪ್ರತ್ಯುತ್ತರ ನೀಡುವುದಾಗಿ ಅಫ್ಗನ್ ಸರ್ಕಾರ ಎಚ್ಚರಿಸಿದೆ. ದಾಳಿಯಲ್ಲಿ ಮಕ್ಕಳು, ಮಹಿಳೆಯರು ಸೇರಿದಂತೆ ಹಲವರು ಮೃತಪಟ್ಟಿದ್ದಾರೆ ಎಂದಿದೆ.

ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಬನ್ನು ಪ್ರದೇಶದಲ್ಲಿ ಶನಿವಾರ ನಡೆದ ಆತ್ಮಾಹುತಿ ದಾಳಿಯಲ್ಲಿ ಲೆಫ್ಟಿನೆಂಟ್ ಕರ್ನಲ್ ಮತ್ತು ಒಬ್ಬ ಸೈನಿಕ ಮೃತಪಟ್ಟಿದ್ದರು. ಈ ದಾಳಿಯನ್ನು ಅಫ್ಗಾನಿಸ್ತಾನ ಮೂಲದ ಭಯೋತ್ಪಾದಕ ನಾಯಕರ ನಿರ್ದೇಶನದಂತೆ ನಡೆಸಲಾಗಿದೆ ಎಂದು ಪಾಕಿಸ್ತಾನ ಹೇಳಿದೆ.



ಪಾಕಿಸ್ತಾನದ ವಾಯು ದಾಳಿಯಿಂದ ಹಾನಿಗೀಡಾದ ಕಾರನ್ನು ಅಫ್ಗಾನಿಗಳು ವೀಕ್ಷಿಸಿದರು ಎಎಫ್‌ಪಿ ಚಿತ್ರ

'ಭಯೋತ್ಪಾದಕ ಚಟುವಟಿಕೆಗಳಿಗೆ ಅಫ್ಗನ್ ನೆಲವನ್ನು ಬಳಸುವುದನ್ನು ತಡೆಯುವಂತೆ ಪದೇ ಪದೇ ಕೇಳಿಕೊಂಡರೂ, ತಾಲಿಬಾನ್ ಸರ್ಕಾರ ಅದನ್ನು ನಿಗ್ರಹಿಸುವಲ್ಲಿ ವಿಫಲವಾಗಿದೆ. ಹಾಗಾಗಿ, ಪಾಕ್–ಅಫ್ಗನ್ ಗಡಿ ಪ್ರದೇಶದಲ್ಲಿರುವ ತೆಹ್ರಿಕ್ ಇ ತಾಲಿಬಾನ್ ಪಾಕಿಸ್ತಾನ್ ಮತ್ತು ಅದರ ಅಂಗ ಸಂಸ್ಥೆಗಳು ಹಾಗೂ ಇಸ್ಲಾಮಿಕ್ ಸ್ಟೇಟ್ ಆಫ್ ಖೊರಸಾನ್ ಪ್ರಾವಿನ್ಸ್‌ನ ಭಯೋತ್ಪಾದಕ ಶಿಬಿರಗಳು ಮತ್ತು ಅಡಗುತಾಣಗಳ ಮೇಲೆ ಗುಪ್ತಚರ ಆಧಾರಿತ ನಿಖರ ವಾಯುದಾಳಿಗಳನ್ನು ನಡೆಸಲಾಗಿದೆ' ಎಂದು ಪಾಕಿಸ್ತಾನ ತಿಳಿಸಿದೆ.

ಭಾರತ ಜಾಗತಿಕ ಶಕ್ತಿ: ನೆತನ್ಯಾಹು

ಜೆರುಸಲೇಂ (ಪಿಟಿಐ): ಭಾರತವು 'ಜಾಗತಿಕ ಶಕ್ತಿ' ಎಂದು ಬಣ್ಣಿಸಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಭಾರತ, ಅರಬ್, ಆಫ್ರಿಕ ದೇಶಗಳು, ಗ್ರೀಸ್, ಸೈಪ್ರಸ್ ಒಳಗೊಂಡ 'ಷಟ್ಕೋನ ಮಾದರಿ'ಯ ಮೈತ್ರಿ ವ್ಯವಸ್ಥೆ ರಚಿಸುವ ಆಶಯವನ್ನು ವ್ಯಕ್ತಪಡಿಸಿದ್ದಾರೆ.



ಬೆಂಜಮಿನ್ ನೆತನ್ಯಾಹು

ಇಸ್ರೇಲ್ ಸಂಸತ್ತಿನಲ್ಲಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರು ನನ್ನ ಆಪ್ತ ಸ್ನೇಹಿತ. ನಾವಿಬ್ಬರೂ ಆಗಾಗ್ಗೆ ಮೊಬೈಲ್‌ನಲ್ಲಿ ಸಂಭಾಷಣೆ ನಡೆಸುತ್ತೇವೆ. ಮೋದಿ ಅವರು ಇದೇ 25, 26ರಂದು ಇಸ್ರೇಲ್‌ಗೆ ಭೇಟಿ ನೀಡಲಿದ್ದಾರೆ' ಎಂದರು.

ಎರಡೂ ದೇಶಗಳ ನಡುವಿನ ಸಂಬಂಧವನ್ನು ಬಲಗೊಳಿಸಲು ಹಾಗೂ ರಾಜತಾಂತ್ರಿಕ, ಆರ್ಥಿಕ ಮತ್ತು ಭದ್ರತೆ ಕುರಿತು ಹಲವು ನಿರ್ಧಾರಗಳನ್ನು ಕೈಗೊಳ್ಳಲು ಮೋದಿ ಈ ಭೇಟಿ ಕೈಗೊಂಡಿದ್ದಾರೆ ಎಂದು ಹೇಳಿದರು.

ಮೈತ್ರಿ ವ್ಯವಸ್ಥೆ ಹೇಗಿರುತ್ತದೆ ಎನ್ನುವುದರ ಕುರಿತು ನೆತನ್ಯಾಹು ಹೆಚ್ಚೇನು ಮಾಹಿತಿ ಹಂಚಿಕೊಳ್ಳಲಿಲ್ಲ.

ಆದರೆ, ಪಶ್ಚಿಮ ಏಷ್ಯಾ ವಲಯದಲ್ಲಿ ಇಸ್ರೇಲ್ ತನ್ನ ರಾಜಕೀಯ, ಭೌಗೋಳಿಕ ಸ್ಥಾನವನ್ನು ಬಲಪಡಿಸಿಕೊಳ್ಳಲು ಈ ಮೈತ್ರಿ ವ್ಯವಸ್ಥೆ ರಚನೆಗೆ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರವಾಸಿಗರ ಮೋಜು

ಪಿಟಿಐ ಚಿತ್ರ



ಹಿಮಾಚಲ ಪ್ರದೇಶದ ಸೋಲಂಗ್ ಕಣಿವೆಯಲ್ಲಿ ಪ್ರವಾಸಿಗರು ಮೋಜಿನ ಸ್ಕೀಯಿಂಗ್, ಪ್ಯಾರಾಗ್ಲೈಡಿಂಗ್ ಚಟುವಟಿಕೆಗಳಲ್ಲಿ ನಿರತರಾಗಿದ್ದರು

ಕೀವ್ ಮೇಲೆ ರಷ್ಯಾ ದಾಳಿ: ವ್ಯಕ್ತಿ ಸಾವು

ಕೀವ್ (ಎಪಿ): ಉಕ್ರೇನ್‌ನ ಕೀವ್ ಮೇಲೆ ರಷ್ಯಾವು ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದ್ದು, ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ ಎಂದು ಉಕ್ರೇನ್‌ನ ತುರ್ತು ಸೇವೆ ಭಾನುವಾರ ತಿಳಿಸಿದೆ.

ರಷ್ಯಾದ ದಾಳಿಯು ಕೀವ್ ನಗರದ ಅಂಚಿನಲ್ಲಿರುವ ಐದು ಜಿಲ್ಲೆಗಳ ಮೇಲೆ ಪರಿಣಾಮ ಬೀರಿದೆ. ನಾಶವಾದ ಕಟ್ಟಡಗಳ ಅವಶೇಷದಡಿ ಸಿಲುಕಿದ್ದ ಒಂದು ಮಗು ಸೇರಿದಂತೆ ಎಂಟು ಜನರನ್ನು ರಕ್ಷಿಸಲಾಗಿದೆ ಎಂದು ಅದು ತಿಳಿಸಿದೆ. ಅಲ್ಲದೇ, ಉಕ್ರೇನ್‌ನ ಇಂಧನ ಮೂಲಸೌಕರ್ಯದ ಮೇಲೆ ದಾಳಿ ನಡೆಸಿದ್ದು, ಪರಿಣಾಮ ವ್ಯಾಪಕ ಬೆಂಕಿ ಆವರಿಸಿತು. ಬಳಿಕ ಅದನ್ನು ನಂದಿಸಲಾಯಿತು ಎಂದು ತುರ್ತು ಸೇವೆ ತಿಳಿಸಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹459-790
ದ್ವಿತಳಿ (ಬಿ.ವಿ)	₹630-936

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹550	100 ಕ್ಕೆ	₹550
12 ಕ್ಕೆ	₹80		

ಮಾಸ್ಕೋದ ನಾಲ್ಕು ವಿಮಾನ ನಿಲ್ದಾಣಗಳ ಕಾರ್ಯಾಚರಣೆ ಸ್ಥಗಿತ

ಮಾಸ್ಕೊ (ಪಿಟಿಐ): ಉಕ್ರೇನ್ ಹಾರಿಸಿದ 11 ಡ್ರೋನ್‌ಗಳನ್ನು ರಕ್ಷಣಾ ಪಡೆಗಳು ಹೊಡೆದುರುಳಿಸಿದ ನಂತರ ರಷ್ಯಾ ರಾಜಧಾನಿ ಮಾಸ್ಕೊದ ನಾಲ್ಕೂ ವಿಮಾನ ನಿಲ್ದಾಣಗಳ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ.

ದೊಮೊಜೆದೊವ, ವ್ನುಕೊವೊ, ಝುಕೊವ್‌ಸ್ಕಿ ಹಾಗೂ ಶೆರೆಮೆತ್ಯೆವೊ ವಿಮಾನ ನಿಲ್ದಾಣಗಳಲ್ಲಿ ವಿಮಾನ ಸಂಚಾರ ಸ್ಥಗಿತಗೊಳಿಸಲಾಗಿದೆ ಎಂದು ರಷ್ಯಾದ ನಾಗರಿಕ ವಿಮಾನ ಸಂಸ್ಥೆ ರೊಸಾವಿಟಾಟ್ಸಿಯಾ ಭಾನುವಾರ ತಿಳಿಸಿತು.

ಕೇವಲ ಒಂದು ತಾಸಿನ ಅವಧಿಯಲ್ಲಿ ಒಟ್ಟು 11 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ವಿಮಾನ ಸಂಚಾರ ರದ್ದುಪಡಿಸಲಾಗಿದೆ ಎಂದು ಮೇಯರ್ ಸರ್ಜಿ ಸೋಬ್ಯಾನಿನ್ ಹೇಳಿದರು.

ಹೊಗೆಸೊಪ್ಪು ಮಾರುಕಟ್ಟೆಯಲ್ಲಿ ₹320 ರಿಂದ ₹270ಕ್ಕೆ ಕುಸಿದ ಬೆಲೆ

ದರ ಇಳಿಕೆ: ರೈತರಿಗೆ ನಷ್ಟದ ಆತಂಕ

• ಗಂಗೇಶ್ ಬಿ.ಪಿ.

ಕೊಣನೂರು (ಹಾಸನ ಜಿಲ್ಲೆ): ಹೊಗೆಸೊಪ್ಪು ಬೆಲೆಯಲ್ಲಿನ ದಿಢೀರ್ ಕುಸಿತದಿಂದ ಬೆಳೆಗಾರರು ಆತಂಕಗೊಂಡಿದ್ದಾರೆ. ಮೊದಲೇ ಮಾರಿದ್ದರೆ ನಷ್ಟದ ಪ್ರಮಾಣ ಕಡಿಮೆ ಆಗುತ್ತಿತ್ತು ಎಂದು ಅವರು ಅಂದುಕೊಳ್ಳುತ್ತಿದ್ದಾರೆ.

ಅರಕಲಗೂಡು ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆ ತಂಬಾಕಿನ ದರವು ಏಕಾಏಕಿ ಇಳಿಕೆ ಆಗಿರುವುದು ಬೆಳೆಗಾರರಿಗೆ ನುಂಗಲಾರದ ತುತ್ತಾಗಿದೆ. ರಾಮನಾಥಪುರದ ತಂಬಾಕು ಮಾರುಕಟ್ಟೆಯಲ್ಲಿ ಹರಾಜು ಪ್ರಕ್ರಿಯೆ ಪ್ರಾರಂಭದ ದಿನಗಳಲ್ಲಿ ಉತ್ತಮ ಗುಣಮಟ್ಟದ ಒಂದು ಕೆ.ಜಿ. ತಂಬಾಕಿಗೆ ಗರಿಷ್ಠ ₹320 ಬೆಲೆ ದೊರಕುತ್ತಿತ್ತು. ಕೆಲ ದಿನಗಳ ನಂತರ ₹320ರಿಂದ ₹322ಕ್ಕೆ ಏರಿತ್ತು. ಮತ್ತಷ್ಟು ಉತ್ತಮ ದರದ ಆಶಾಭಾವದಲ್ಲಿ ರೈತರಿದ್ದರು.

ಇದೀಗ ಗುಣಮಟ್ಟದ ಒಂದು ಕೆ.ಜಿ. ತಂಬಾಕಿನ ಬೆಲೆ ₹270ಕ್ಕೆ ಇಳಿದಿದೆ. ಗುಣಮಟ್ಟದ ಬೇಲ್‌ಗಳನ್ನು ₹250ಕ್ಕೆ ಕೊಳ್ಳಲಾಗುತ್ತಿದೆ. ಕೆಳ ದರ್ಜೆಯ ತಂಬಾಕಿಗೆ ಕೆ.ಜಿ.ಗೆ ₹200 ನೀಡಲಾಗುತ್ತಿದೆ. ಆರಂಭದಲ್ಲಿ ರೈತರಿಂದ ಉತ್ತಮ ದರ್ಜೆಯ ಹೊಗೆಸೊಪ್ಪು ಮಾತ್ರ ಖರೀದಿಸುತ್ತಿದ್ದ ವರ್ತಕರು, ಬೇಡಿಕೆ ಇಲ್ಲದ ನೆಪವೊಡ್ಡಿ ಕಳೆ ದರ್ಜೆಯ ಹೊಗೆಸೊಪ್ಪು ಕೊಳ್ಳದೇ ತಿರಸ್ಕರಿದ್ದರು. ಕೆಲ ದಿನಗಳ ನಂತರ ಕೆಳ ದರ್ಜೆಯ ಹೊಗೆಸೊಪ್ಪು ಕೊಳ್ಳಲು ಮುಂದಾದರೂ, ಬೆಲೆ ಮಾತ್ರ ಸುಧಾರಣೆ ಕಂಡಿಲ್ಲ. ಕಳಪೆ ಹೊಗೆಸೊಪ್ಪಿನ ಜೊತೆಗೆ ಉತ್ತಮ ದರ್ಜೆ ತಂಬಾಕಿನ ದರವೂ ಇಳಿಮುಖವಾಗಿದೆ.



ರಾಮನಾಥಪುರದ ತಂಬಾಕು ಮಾರುಕಟ್ಟೆಯಲ್ಲಿ ಬೇಲ್‌ಗಳನ್ನು ಇಡಲಾಗಿದೆ

ಕಳೆದ ಸಲ ಆಂಧ್ರಪ್ರದೇಶದಲ್ಲಿ ಕೆ.ಜಿ.ಗೆ ಗರಿಷ್ಠ ದರ ₹412 ದಾಟಿತ್ತು. ಹೀಗಾಗಿ, ಉತ್ಕೃಷ್ಟ ದರ್ಜೆಯ ತಂಬಾಕು ಉತ್ಪಾದನೆಗೆ ಹೆಸರಾದ ಕರ್ನಾಟಕದ ಮಾರುಕಟ್ಟೆಯಲ್ಲೂ ಅದೇ ದರ ಸಿಗುವ ಆಶಾಭಾವ ರೈತರಲ್ಲಿತ್ತು. ಈಗ ಗರಿಷ್ಠ ದರವೂ ಇಳಿಕೆ ಕಂಡಿದೆ.

ಅತಿವೃಷ್ಟಿ ಪರಿಣಾಮ ತಂಬಾಕು ಇಳುವರಿ ಕುಂಠಿತಗೊಂಡಿದೆ. ತಂಬಾಕು ಉತ್ಪಾದನೆ ಅಂದಾಜು 80 ಸಾವಿರ ಟನ್ ಆಗಿದೆ. ತಂಬಾಕಿಗೆ ಗರಿಷ್ಠ ದರ ಅಂದಾಜಿಸಿದ್ದ ರೈತರ ನಿರೀಕ್ಷೆ ತಲೆಕೆಳಗಾಗಿದೆ. ಒಂದೆಡೆ ಅತಿವೃಷ್ಟಿ ಸಮಸ್ಯೆಯಾದರೆ, ಮತ್ತೊಂದೆಡೆ ಹರಾಜಿನಲ್ಲಿ ಗರಿಷ್ಠ ದರದ ಲಾಭ ಸಿಗುತ್ತಿಲ್ಲ.

ಕೇಂದ್ರ ಸರ್ಕಾರ ತಂಬಾಕಿನ ಉತ್ಪನ್ನಗಳ ಮೇಲೆ ಹೆಚ್ಚಿನ ತೆರಿಗೆ ಹಾಕುತ್ತಿದೆ ಎಂದು ವರ್ತಕರು ಹರಾಜು ಪ್ರಕ್ರಿಯೆಯನ್ನು ದಿಢೀರನೆ ನಿಲ್ಲಿಸಿದ್ದರು. ತಂಬಾಕು ಮಂಡಳಿ ಕೂಡ ರೈತರಿಗೆ ಆಗುತ್ತಿರುವ ನಷ್ಟವನ್ನು ಸರಿಪಡಿಸಲು ಮುಂದಾಗಿಲ್ಲ. ಇದುವರೆಗೂ ಹೆಚ್ಚಿನ ಪ್ರಮಾಣದ ತಂಬಾಕನ್ನು ಮಾರದೇ ತಮ್ಮ ಬಳಿ ಇಟ್ಟುಕೊಂಡಿರುವ ರೈತರು, ಸಿಗುವ ಆದಾಯವನ್ನು ಕಳೆದುಕೊಂಡಂತಾಯಿತಲ್ಲ ಎಂದು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

'ಮಾರುಕಟ್ಟೆಯಲ್ಲಿ ತಂಬಾಕಿಗೆ ಬೇಡಿಕೆ ತಗ್ಗಿದೆ ಎಂದು ವರ್ತಕರು ಬೆಲೆ ಹೆಚ್ಚಿಸಲು ಮನಸ್ಸು ಮಾಡುತ್ತಿಲ್ಲ. ಕೆಲ ಬೆಳೆಗಾರರು ಮಾರಾಟ ಮಾಡಲು ಮುಂದಾಗಿದ್ದರೆ, ಕೆಲವರು ಬೇಲ್‌ಗಳನ್ನು ಮಾರುಕಟ್ಟೆ ತರಲು ಆಸಕ್ತಿ ವಹಿಸುತ್ತಿಲ್ಲ' ಎಂದು ಮಾರುಕಟ್ಟೆ ಹರಾಜು ಅಧೀಕ್ಷಕಿ ಸವಿತಾ ತಿಳಿಸಿದರು.

> **ಪ್ರಾರಂಭದಲ್ಲಿ ಸರಾಸರಿ ಬೆಲೆ ₹290 ಸಿಗುತ್ತಿತ್ತು. ತೆರಿಗೆ ನೆಪ ಹೇಳಿ ಮಾರಾಟ ಸ್ಥಗಿತಗೊಳಿಸಿದ್ದು, ಈಗ ಎಲ್ಲ ಕಂಪನಿ ವರ್ತಕರು ಬಂದಿದ್ದರೂ ತಂಬಾಕಿನ ಬೆಲೆ ಇಳಿಮುಖವಾಗುತ್ತಿದೆ**
> **ಈರೇಗೌಡ ನಿಲುವಾಗಿಲು,** ತಂಬಾಕು ಬೆಳೆಗಾರರ ಸಂಘದ ಅಧ್ಯಕ್ಷ

> **ತಂಬಾಕು ಬೆಳೆಗಾರರ ಬೇಡಿಕೆಗೆ ಕೊಳ್ಳುವ ಕಂಪನಿಗಳು ಸ್ಪಂದಿಸುತ್ತಿಲ್ಲ. ತೆರಿಗೆ ಸಬೂಬು ಹೇಳಿಕೊಂಡು ಏಕಾಏಕಿ ಬೆಲೆ ಇಳಿಕೆ ಮಾಡಿದ್ದಾರೆ. ಪ್ರತಿ ಬೆಳೆಗಾರರಿಗೂ ಸಾವಿರಾರು ರೂಪಾಯಿ ನಷ್ಟವಾಗುತ್ತಿದೆ**
> **ನೇತ್ರಪಾಲ್ ಗುಡ್ಡೇನಹಳ್ಳಿ,** ಅಖಿಲ ಭಾರತೀಯ ರೈತ ಸಂಘಟನೆಯ ಸದಸ್ಯ

ಬೇಡಿಕೆ ಪರಿಗಣಿಸದ ವರ್ತಕರು

ಹೊಗೆಸೊಪ್ಪನ್ನು ದರವನ್ನು ₹320ರಿಂದ ₹270, ₹250ಕ್ಕೆ ಇಳಿಕೆ ಮಾಡಿರುವುದು ರೈತರನ್ನು ಕೆರಳಿಸಿದ್ದು, ವರ್ತಕರು ಮತ್ತು ಅಧಿಕಾರಿಗಳ ನಡುವೆ ರೈತರು ಕೆಲ ಮಾತಿನ ಚಕಮಕಿ ನಡೆದಿತ್ತು.

ಬೆಲೆ ಏರಿಕೆ ಮಾಡುವಂತೆ ಆಗ್ರಹಿಸಿ, ಗುರುವಾರ ಮಾರಾಟ ಪ್ರಕ್ರಿಯೆ ನಿಲ್ಲಿಸುವಂತೆ ರೈತರು ಒತ್ತಾಯಿಸಿದ್ದರು. ಆದರೆ, ರೈತರ ಬೇಡಿಕೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ವರ್ತಕರು, ಶುಕ್ರವಾರದಿಂದ ಮತ್ತೆ ಹರಾಜು ಪ್ರಕ್ರಿಯೆ ಆರಂಭಿಸಿದ್ದು, ರೈತರಿಂದ ತಂಬಾಕು ಕೊಳ್ಳುತ್ತಿದ್ದಾರೆ. 'ಎಲ್ಲರಿಗೂ ಆದಂತೆ ನಮಗೂ ಆಗುತ್ತದೆ' ಎನ್ನುತ್ತಲೇ ಬೇಸರದಿಂದ ಬೆಳೆಗಾರರು ತಂಬಾಕು ಮಾರಾಟ ಮಾಡುತ್ತಿದ್ದಾರೆ.

ರಾಮನಾಥಪುರ ಮಾರುಕಟ್ಟೆಯಲ್ಲಿ ಶುಕ್ರವಾರ ಕೆ.ಜಿ.ಗೆ ಗರಿಷ್ಠ ₹278, ಕನಿಷ್ಠ ₹252 ದೊರೆತಿದ್ದು, ಸರಾಸರಿ ಬೆಲೆ ₹252 ದೊರೆತಿದೆ. ಕೆಲ ದಿನಗಳ ಹಿಂದೆ ಗರಿಷ್ಠ ಬೆಲೆ ₹321, ಕನಿಷ್ಠ ₹220 ಹಾಗೂ ಸರಾಸರಿ ಬೆಲೆ ₹279ರಿಂದ ₹292ರವರೆಗೆ ಸಿಗುತ್ತಿತ್ತು. ಈಗ ಸಿಗುತ್ತಿರುವ ದರದಲ್ಲಿ ಮಾರುಕಟ್ಟೆಗೆ ಸಾಗಿಸಿದಲ್ಲಿ ಸಿಂಗಲ್ ಬ್ಯಾರಲ್ ಪರವಾನಗಿ ಹೊಂದಿರುವ ಬೆಳೆಗಾರರಿಗೆ ಸುಮಾರು ₹1 ಲಕ್ಷ ಮತ್ತು ಡಬಲ್ ಬ್ಯಾರಲ್ ಪರವಾನಗಿ ರೈತರಿಗೆ ₹1.5 ಲಕ್ಷಕ್ಕೂ ಹೆಚ್ಚು ನಷ್ಟವಾಗುತ್ತದೆ ಎಂದು ಬೆಳೆಗಾರರು ಹೇಳುತ್ತಿದ್ದಾರೆ.

ಸೋಮವಾರ ● ಫೆಬ್ರುವರಿ 23, 2026
ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಮತ್ತೆ ಒಂದಾದ ರಜನಿಕಾಂತ್, ಕಮಲ್ ಹಾಸನ್


ಕಮಲ್ ಹಾಸನ್, ರಜನಿಕಾಂತ್

ಭಾರತೀಯ ಚಿತ್ರರಂಗದ ಸೂಪರ್ ಸ್ಟಾರ್‌ಗಳಾದ ರಜನಿಕಾಂತ್ ಮತ್ತು ಕಮಲ್ ಹಾಸನ್ ಚಿತ್ರವೊಂದರಲ್ಲಿ ಮತ್ತೆ ಒಂದಾಗುತ್ತಿದ್ದಾರೆ. 47 ವರ್ಷಗಳ ಬಳಿಕ ಈ ಜೋಡಿ ಮತ್ತೆ ತೆರೆಯ ಮೇಲೆ ಒಟ್ಟಾಗಿ ಕಾಣಿಸಿಕೊಳ್ಳುತ್ತಿದ್ದು, ಇನ್ನೂ ಹೆಸರಿಡದ ಚಿತ್ರಕ್ಕೆ ನೆಲ್ಸನ್ ದಿಲೀಪ್ ಕುಮಾರ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

1970ರ ದಶಕದಲ್ಲಿ ಈ ಜೋಡಿ ಕೆಲ ಸೂಪರ್‌ಹಿಟ್ ಸಿನಿಮಾಗಳನ್ನು ನೀಡಿತ್ತು. 1979ರಲ್ಲಿ ತೆರೆಕಂಡ 'ಅಲಾವುದ್ದೀನುಂ ಅದ್ಭುತ ವಿಳಕ್ಕುಂ' ಈ ಇಬ್ಬರು ಸೂಪರ್‌ಸ್ಟಾರ್‌ಗಳು ಒಟ್ಟಾಗಿ ನಟಿಸಿದ ಕೊನೆಯ ಚಿತ್ರ.

ರೆಡ್ ಜೈಂಟ್ ಮೂವೀಸ್ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದೆ. 'ರಜನಿಕಾಂತ್ ಮತ್ತು ಕಮಲ್ ಹಾಸನ್ ಅವರನ್ನು ಈ ಚಿತ್ರಕ್ಕಾಗಿ ಒಂದೆಡೆ ಸೇರಿಸಿರುವುದು ನಮ್ಮೆಲ್ಲರ ಪಾಲಿಗೆ ಕನಸು ನನಸಾದ ಕ್ಷಣ. ಇದು ಭಾರತೀಯ ಚಿತ್ರರಂಗಕ್ಕೆ ಒಂದು ಐತಿಹಾಸಿಕ ಮತ್ತು ಭಾವುಕ ಕ್ಷಣವಾಗಿದ್ದು, ನಾವು ಈ ಪ್ರಯಾಣವನ್ನು ಜವಾಬ್ದಾರಿಯಿಂದ ಪ್ರಾರಂಭಿಸುತ್ತಿದ್ದೇವೆ. ಅನಿರುದ್ಧ್ ರವಿಚಂದರ್ ಚಿತ್ರಕ್ಕೆ ಸಂಗೀತ ನೀಡಲಿದ್ದು, ಉಳಿದ ವಿವರಗಳನ್ನು ಮುಂದಿನ ದಿನಗಳಲ್ಲಿ ನೀಡುತ್ತೇವೆ' ಎಂದಿದೆ ನಿರ್ಮಾಣ ಸಂಸ್ಥೆ.

ನೆಲ್ಸನ್ ದಿಲೀಪ್ ಕುಮಾರ್ ಈ ಹಿಂದೆ 'ಜೈಲರ್' ಸೇರಿದಂತೆ ಕೆಲ ಸಿನಿಮಾಗಳನ್ನು ನಿರ್ದೇಶಿಸಿದ್ದರು.

ಸೆಟ್ಟೇರಿದ 'ಜೈ ಹನುಮಾನ್'


ಚಿತ್ರತಂಡದೊಂದಿಗೆ ರಿಷಬ್ ಶೆಟ್ಟಿ

ರಿಷಬ್ ಶೆಟ್ಟಿ ನಾಯಕನಾಗಿ ನಟಿಸುತ್ತಿರುವ 'ಜೈ ಹನುಮಾನ್' ಚಿತ್ರ ಭಾನುವಾರ ಗಂಗಾವತಿಯ ಅಂಜನಾದ್ರಿ ಬೆಟ್ಟದಲ್ಲಿ ಸೆಟ್ಟೇರಿದೆ. ಪ್ರಶಾಂತ್ ವರ್ಮಾ ನಿರ್ದೇಶನದ ಚಿತ್ರದ ತೆಲುಗಿನಲ್ಲಿ ಸಿದ್ಧಗೊಳ್ಳುತ್ತಿದ್ದು, ರಿಷಬ್ ಅವರ ಮೊದಲ ತೆಲುಗು ಸಿನಿಮಾ ಇದಾಗಿದೆ.

'ಕಾಂತಾರ ಅಧ್ಯಾಯ–1' ಬಿಡುಗಡೆಗೂ ಮುನ್ನ ರಿಷಬ್ ಒಪ್ಪಿಕೊಂಡಿದ್ದ ಚಿತ್ರವಿದು. ಶೀಘ್ರದಲ್ಲಿಯೇ ಚಿತ್ರೀಕರಣ ಪ್ರಾರಂಭವಾಗಲಿದ್ದು, ಮುಂದಿನ ವರ್ಷ ಚಿತ್ರ ತೆರೆಗೆ ಬರುವ ನಿರೀಕ್ಷೆಯಿದೆ ಎಂದಿದೆ ಚಿತ್ರತಂಡ.

ಪ್ರಶಾಂತ್ ವರ್ಮಾ ನಿರ್ದೇಶನದ, ಸೂಪರ್ ಹೀರೊ ಪರಿಕಲ್ಪನೆಯ 'ಹನುಮಾನ್' ಚಿತ್ರ ಸೂಪರ್ ಹಿಟ್ ಆಗಿತ್ತು. 'ಅದೇ ರೀತಿಯ ಕಥೆಯನ್ನು ಈ ಚಿತ್ರ ಹೊಂದಿರಲಿದೆ. ರಾಣಾ ದಗ್ಗುಬಾಟಿ ಕೂಡ ಚಿತ್ರದಲ್ಲಿ ನಟಿಸುವ ಸಾಧ್ಯತೆಯಿದೆ' ಎಂದಿವೆ ಮೂಲಗಳು.

'ಕಾಂತಾರ' ಯಶಸ್ಸಿನ ಬಳಿಕ ರಿಷಬ್ ಐತಿಹಾಸಿಕ, ಪೌರಾಣಿಕ ಪಾತ್ರಗಳನ್ನೇ ಆಯ್ದುಕೊಳ್ಳುತ್ತಿದ್ದಾರೆ. ಬಾಲಿವುಡ್‌ನ 'ಛತ್ರಪತಿ ಶಿವಾಜಿ' ಚಿತ್ರದಲ್ಲಿಯೂ ರಿಷಬ್ ಕಾಣಿಸಿಕೊಳ್ಳುತ್ತಿದ್ದಾರೆ. ಇದಾದ ಬಳಿಕ ಯುವ ನಿರ್ದೇಶಕ ಅಶ್ವಿನ್ ಗಂಗರಾಜು ರಿಷಬ್ ಅವರ ಎರಡನೇ ತೆಲುಗು ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ.

ಚಿತ್ರವಾಗಲಿದೆ ಭೀಮಾತೀರದ ಹಂತಕರು



ಪತ್ರಕರ್ತ ರವಿ ಬೆಳಗೆರೆ ಅವರ 'ಭೀಮಾ ತೀರದ ಹಂತಕರು' ಕಾದಂಬರಿ ಚಿತ್ರವಾಗುತ್ತಿದೆ. 'ಕಬಡ್ಡಿ' ಖ್ಯಾತಿಯ ನರೇಂದ್ರ ಬಾಬು ನಿರ್ದೇಶನದ ಈ ಚಿತ್ರದ ಶೀರ್ಷಿಕೆ ಬಿಡುಗಡೆ ಸಮಾರಂಭ ಇತ್ತೀಚೆಗಷ್ಟೇ ನಡೆಯಿತು.

'ಕ್ರಿಸ್ತಪೂರ್ವದಿಂದ ಈವರೆಗೂ ಭೀಮಾ ತಟದಲ್ಲಿ ಯುದ್ಧ ನಡೆಯುತ್ತಲೇ ಇದೆ. ಒಂದು ಸಣ್ಣ ಬದುಕಿಗೋಸ್ಕರ ಚಂದಪ್ಪ ಹರಿಜನ ಹಾಗೂ ಕೇಶಪ್ಪ ತಾವರಖೇಡ ಕುಟುಂಬಗಳ ನಡುವೆ ಶುರುವಾಗುವ ಗಲಾಟೆ, ದೊಡ್ಡದಾಗಿ ಕೊಲೆಗಳೇ ನಡೆಯುತ್ತವೆ. ರವಿ ಬೆಳಗೆರೆ ಅವರು ಘಟನೆ ನಡೆದ ಸ್ಥಳಕ್ಕೇ ಹೋಗಿ ವಸ್ತುಸ್ಥಿತಿ ಅಧ್ಯಯನ ಮಾಡಿ ಬರೆದ ಕೃತಿಯನ್ನು ಯಥಾವತ್ತಾಗಿ ತೆರೆ ಮೇಲೆ ತರುತ್ತಿದ್ದೇವೆ. ಸಾಕಷ್ಟು ವಿಚಾರಗಳು ಇರುವುದರಿಂದ ಎರಡು ಭಾಗಗಳಲ್ಲಿ ಚಿತ್ರ ಮೂಡಿಬರಲಿದೆ. ಮೊದಲ ಭಾಗದ ಕಥೆ ಸಿದ್ಧವಿದೆ. ಸಿದ್ಧಪ್ಪ ಅವರ ಹತ್ಯೆಯಾಗುವವರೆಗೂ ನಡೆಯುವ ಘಟನೆಗಳನ್ನು ಈ ಭಾಗದಲ್ಲಿ ದಾಖಲಿಸಿದ್ದೇನೆ. ಸದ್ಯದಲ್ಲೇ ಚಿತ್ರೀಕರಣ ಪ್ರಾರಂಭವಾಗಲಿದೆ. ಕಲಬುರಗಿಯಲ್ಲಿ ಬಹುತೇಕ ಚಿತ್ರೀಕರಣ ನಡೆಯುತ್ತದೆ. ರವಿ ಬೆಳಗೆರೆ ಪಾತ್ರದಲ್ಲಿ ಅವರ ಮಗಳು ಭಾವನಾ ಬೆಳಗೆರೆ ಕಾಣಿಸಿಕೊಳ್ಳುತ್ತಿದ್ದಾರೆ' ಎಂದರು ಬಾಬು.

ನರೇಂದ್ರ ಬಾಬು ಈ ಹಿಂದೆ 'ಸಂತೆಯಲ್ಲಿ ನಿಂತ ಕಬೀರ', 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಮುಂತಾದ ಚಿತ್ರಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದರು.

ಶ್ರೀ ಗವಿ ರಂಗನಾಥಸ್ವಾಮಿ ಪಿಕ್ಚರ್ಸ್ ಹಾಗೂ ಆಂಜನೇಯ ಪ್ರೊಡಕ್ಷನ್ಸ್ ಬಂಡವಾಳ ಹೂಡುತ್ತಿದೆ. ಯುವನಟ ಲಿಖಿತ್ ಚಂದಪ್ಪ ಹರಿಜನ ಪಾತ್ರ ಮಾಡುತ್ತಿದ್ದಾರೆ. ಜಯವರ್ಧನ, ಸಯ್ಯಾಜಿ ಶಿಂಧೆ, ಶರತ್ ಲೋಹಿತಾಶ್ವ, ಸೋನು ಸೂದ್ ಪ್ರಮುಖ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಚಿತ್ರಕ್ಕೆ ಲೋಕಿ ತಾವಸ್ಯ ಸಂಗೀತ, ಕೆ.ಎಸ್.ಚಂದ್ರಶೇಖರ್ ಛಾಯಾಚಿತ್ರಗ್ರಹಣ, ಹರೀಶ್ ಕೊಮ್ಮೆ ಸಂಕಲನ ಇರಲಿದೆ.

ನಕ್ಸಲ್ ಮುಖಂಡ ದೇವ್‌ಜಿ ಶರಣು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕಳೆದ ಆರು ದಶಕಗಳಿಂದ ದೇಶದ ಪ್ರಭಾವಿ ನಕ್ಸಲ್ ಮುಖಂಡರಾಗಿದ್ದ ತಿಪ್ಪಿರಿ ತಿರುಪತಿ ಅಲಿಯಾಸ್ ದೇವ್‌ಜಿ (ದೇವ್ ಜಿ) ತೆಲಂಗಾಣ ಪೊಲೀಸರಿಗೆ ಶರಣಾಗಿದ್ದಾರೆ.

ದೇವ್‌ಜಿ ಶರಣಾಗತಿಯನ್ನು ದೇಶದಲ್ಲಿ ನಕ್ಸಲ್ ಚಟುವಟಿಕೆ ಅಂತ್ಯಗೊಳ್ಳುವ ನಿರ್ಣಾಯಕ ಹಂತ ಎಂದೇ ವಿಶ್ಲೇಷಿಸಲಾಗಿದೆ.

ನಕ್ಸಲ್ ಮುಖಂಡರಾದ ಮಲ್ಲ ರಾಜಿ ರೆಡ್ಡಿ ಅಲಿಯಾಸ್ ಸಂಗ್ರಾಮ್, ನರಸಿಂಹ ರೆಡ್ಡಿ ಅಲಿಯಾಸ್ ಗಂಗಣ್ಣ ಮತ್ತು ಇತರೆ 16 ಮಂದಿ ನಕ್ಸಲರೊಂದಿಗೆ ದೇವ್‌ಜಿ ಶರಣಾಗಿರುವುದನ್ನು ತೆಲಂಗಾಣ ಪೊಲೀಸರ ವಿಶೇಷ ಗುಪ್ತಚರ ಘಟಕವು 'ಪ್ರಜಾವಾಣಿ'ಗೆ ಖಚಿತಪಡಿಸಿದೆ.

'ದೇವ್‌ಜಿ ಮತ್ತು ತಂಡ ಎರಡು ದಿನಗಳ ಹಿಂದೆ ಆಸಿಫಾಬಾದ್ ಕಾಡಿನಿಂದ ಹೊರಬಂದು ಪೊಲೀಸರ ಮುಂದೆ ಶರಣಾಗಿದ್ದಾರೆ. ಶೀಘ್ರದಲ್ಲೇ ಶರಣಾಗತಿಯನ್ನು ಅಧಿಕೃತಗೊಳಿಸಿ, ಸಾರ್ವಜನಿಕವಾಗಿ ಪ್ರಕಟಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಆಪರೇಷನ್ ಬ್ಲ್ಯಾಕ್ ಫಾರೆಸ್ಟ್–2 ಕಾರ್ಯಾಚರಣೆಗಾಗಿ ತೆಲಂಗಾಣ–ಛತ್ತೀಸಗಢ ಗಡಿಯಲ್ಲಿ ಅಪಾರ ಸಂಖ್ಯೆಯ ಭದ್ರತಾ ಸಿಬ್ಬಂದಿ ನಿಯೋಜನೆಗೊಂಡ ಬೆನ್ನಲ್ಲೇ ದೇವ್‌ಜಿ ಶರಣಾಗತಿ ನಡೆದಿದೆ.

2010ರಲ್ಲಿ ತಾಡ್‌ಮೆಟ್ಲಾದಲ್ಲಿ (ದಂತೆವಾಡ) 76 ಮಂದಿ ಸಿಆರ್‌ಪಿಎಫ್ ಸಿಬ್ಬಂದಿ ಹತ್ಯೆಗೆ ಕಾರಣವಾದ ಗೆರಿಲ್ಲಾ ದಾಳಿಯ ಹಿಂದಿನ ಸೂತ್ರಧಾರ ದೇವ್‌ಜಿ ಎನ್ನಲಾಗುತ್ತದೆ.

ದೇಶವನ್ನು ನಕ್ಸಲ್ ಮುಕ್ತ ಎಂದು ಘೋಷಿಸಲು ಕೇಂದ್ರ ಸರ್ಕಾರ ಮಾರ್ಚ್ 31ರ ಗಡುವು ನಿಗದಿಪಡಿಸಿದೆ.

ತಿಪ್ಪಿರಿ ತಿರುಪತಿ ಯಾರು?

ತೆಲಂಗಾಣದ ಜಗಿತ್ಯಾಲ ಜಿಲ್ಲೆಯ (ಹಿಂದಿನ ಕರೀಂನಗರ) ಕೊರುಟ್ಲಾ ಪಟ್ಟಣದ ಅಂಬೇಡ್ಕರ್ ನಗರ ಕಾಲೋನಿಯಲ್ಲಿ ಪರಿಶಿಷ್ಟ (ಮಾದಿಗ) ಕುಟುಂಬದಲ್ಲಿ ಜನಿಸಿದ ದೇವ್‌ಜಿ ದೇಶದ ಪ್ರಭಾವಿ ನಕ್ಸಲ್ ಮುಖಂಡರಾಗಿ ಬೆಳೆದಿದ್ದು ಗಮನಾರ್ಹ. ಕೊರುಟ್ಲಾದಲ್ಲಿ ಪ್ರಾಥಮಿಕ ಶಿಕ್ಷಣ ನಂತರ ಪದವಿ ಪೂರ್ಣಗೊಳಿಸಿದ ಅವರು 1980ರ ದಶಕದಲ್ಲಿ ತೀವ್ರಗಾಮಿ ರಾಜಕೀಯಕ್ಕೆ ಧುಮುಕಿದರು. ತೀವ್ರಗಾಮಿ ವಿದ್ಯಾರ್ಥಿ ಒಕ್ಕೂಟದ (ಆರ್‌ಎಸ್‌ಯು) ಮುಖಂಡರಾಗಿ ಗುರುತಿಸಿಕೊಂಡು ನಾಲ್ಕು ದಶಕಗಳಲ್ಲಿ ಸಿಪಿಐ (ಮಾವೋವಾದಿ) ಪ್ರಧಾನ ಕಾರ್ಯದರ್ಶಿ ಹಂತದವರೆಗೆ ಬೆಳೆದರು. ನಕ್ಸಲ್ ಚಳವಳಿಯಲ್ಲಿ 'ಮಿಲಿಟರಿ ಮೊದಲು' (ಶಸಸ್ತ್ರ ಹೋರಾಟ) ತಂತ್ರವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದ್ದು ದೇವ್‌ಜಿ. ಸಾಂಪ್ರದಾಯಿಕ ನಕ್ಸಲ್ ಸಿದ್ಧಾಂತದ ಬದಲು ಗೆರಿಲ್ಲಾ ತಂತ್ರಗಳಿಗೆ ಆದ್ಯತೆ ನೀಡಿದ್ದರು. ಆಧುನಿಕ ಗೆರಿಲ್ಲಾ ತರಬೇತಿಗಾಗಿ 2009ರಲ್ಲಿ ಕಮ್ಯುನಿಸ್ಟ್ ತರಬೇತಿ ಶಾಲೆಯನ್ನು ಸ್ಥಾಪಿಸಿದ್ದರು. ದೇವ್‌ಜಿ ಅವರ ಪ್ರಭಾವದಿಂದ ಬಸ್ತಾರ್ (ಛತ್ತೀಸಗಢ), ಗಡ್ಚಿರೋಲಿ (ಮಹಾರಾಷ್ಟ್ರ) ಮತ್ತು ಒಡಿಶಾದಲ್ಲಿ 'ಕಂಪು ಹಾದಿ'ಯು ವಿಸ್ತರಿಸಿತ್ತು.

2025ರಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ನಂಬಲ ಕೇಶವರಾವ್ ಅಲಿಯಾಸ್ ಬಸವರಾಜು ಮೃತಪಟ್ಟ ನಂತರ, ದೇವ್‌ಜಿ ಮಾವೋವಾದಿ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ಆ ಹುದ್ದೆಯನ್ನು ಅಲಂಕರಿಸಿದ ಮೊದಲ ಪರಿಶಿಷ್ಟ ವ್ಯಕ್ತಿ ಅವರು.

'ವ್ಯಾಪಾರ ಒಪ್ಪಂದದ ವಿರುದ್ಧ ಗ್ರಾಮಸಭೆ ನಡೆಸಿ'

ನವದೆಹಲಿ (ಪಿಟಿಐ): ಭಾರತ–ಅಮೆರಿಕ ನಡುವಿನ ಮಧ್ಯಂತರ ಒಪ್ಪಂದದ ವಿರುದ್ಧ ಗ್ರಾಮಗಳಲ್ಲಿ ಸಾರ್ವಜನಿಕ ಸಭೆ ನಡೆಸುವಂತೆ ಸಂಯುಕ್ತ ಕಿಸಾನ್ ಮೋರ್ಚಾವು (ಎಸ್‌ಕೆಎಂ) ದೇಶದ ರೈತರಿಗೆ ಭಾನುವಾರ ಮನವಿ ಮಾಡಿದೆ.

ಸಂಸತ್‌ನ ಬಜೆಟ್ ಅಧಿವೇಶನ ಪುನರಾರಂಭಗೊಳ್ಳುವ ಮೊದಲು ಮಾರ್ಚ್ 9ರೊಳಗೆ ಹಳ್ಳಿಗಳಲ್ಲಿ ಸಭೆ ನಡೆಸಿ, ನಿರ್ಣಯವನ್ನು ಅಂಗೀಕರಿಸಿ ರಾಷ್ಟ್ರಪತಿಗೆ ಪತ್ರ ಬರೆಯುವಂತೆ 2020–21ರಲ್ಲಿ ರೈತರ ಪ್ರತಿಭಟನೆಯ ನೇತೃತ್ವ ವಹಿಸಿದ್ದ ರೈತ ಸಂಘಟನೆಗಳ ಒಕ್ಕೂಟವಾದ ಎಸ್‌ಕೆಎಂ ತಿಳಿಸಿದೆ. ರೈತರು ತಮ್ಮೂರುಗಳಲ್ಲಿ ಸಭೆ ನಡೆಸಿದ ಬಳಿಕ ಮೆರವಣಿಗೆ ಮೂಲಕ ಅಂಚೆ ಕಚೇರಿಗೆ ತೆರಳಿ ತಾವು ಬರೆದ ಬಹಿರಂಗ ಪತ್ರವನ್ನು ರಾಷ್ಟ್ರಪತಿ ಭವನಕ್ಕೆ ಕಳುಹಿಸ ಬೇಕು ಎಂದಿದೆ.

ಪ್ರಧಾನಿಗೆ ನಿರ್ದೇಶನ ನೀಡಿ: ಅಮೆರಿಕ ಜೊತೆಗಿನ ವಾಣಿಜ್ಯ ಒಪ್ಪಂದ ಮುಂದುವರಿಸದಂತೆ ಪ್ರಧಾನಿ ನರೇಂದ್ರ ಮೋದಿಗೆ ನಿರ್ದೇಶನ ನೀಡುವಂತೆ ಎಸ್‌ಕೆಎಂ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದೆ.

ದೇವದತ್ತ ಬ್ಯಾಟಿಂಗ್ ಅಭ್ಯಾಸ

ಜಮ್ಮು ಮತ್ತು ಕಾಶ್ಮೀರ ವಿರುದ್ಧ ರಣಜಿ ಟ್ರೋಫಿ ಫೈನಲ್ ಪಂದ್ಯ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕರ್ನಾಟಕ ತಂಡದ ನಾಯಕ ದೇವದತ್ತ ಪಡಿಕ್ಕಲ್ ಭಾನುವಾರ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವ ಮೂಲಕ ಫೈನಲ್ ಹಣಾಹಣಿಗೆ ತಾವು ಸಿದ್ಧರಾಗಿರುವುದಾಗಿ ಸಂದೇಶ ನೀಡಿದರು.

ಈಚೆಗೆ ಉತ್ತರಾಖಂಡದ ಎದುರಿನ ಸೆಮಿಫೈನಲ್ ನಲ್ಲಿ ಫೀಲ್ಡಿಂಗ್ ಮಾಡುವ ಸಂದರ್ಭದಲ್ಲಿ ದೇವದತ್ತ ಕೈಬೆರಳಿಗೆ ಪೆಟ್ಟಾಗಿತ್ತು. ಆದ್ದರಿಂದ ಅವರು ಮಂಗಳವಾರ ಇಲ್ಲಿ ಆರಂಭವಾಗುವ ರಣಜಿ ಟ್ರೋಫಿ ಫೈನಲ್ ನಲ್ಲಿ ಕಣಕ್ಕಿಳಿಯುವ ಕುರಿತು ಅನುಮಾನ ಮೂಡಿತ್ತು. ಆದರೆ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ಅವರು ಅಭ್ಯಾಸ ಮಾಡಿರುವುದು ತಂಡದಲ್ಲಿ ಸಮಾಧಾನ ಮೂಡಿಸಿದೆ.

ಮಧ್ಯಾಹ್ನ ಕ್ರೀಡಾಂಗಣಕ್ಕೆ ಬಂದ ಆಟಗಾರರು ಕೆಲಹೊತ್ತು ವಾರ್ಮ್‌ಅಪ್ ಮಾಡಿದರು. ನಂತರ ಫುಟ್‌ಬಾಲ್ ಆಡಿದರು.

ಮಯಂಕ್ ಅಗರವಾಲ್, ಸ್ಮರಣ್ ಆರ್., ಕರುಣ್ ನಾಯರ್ ಅವರು ಬ್ಯಾಟಿಂಗ್ ಅಭ್ಯಾಸ ನಡೆಸಿದರು. ಅವರು ಸ್ಥಳೀಯ ಕ್ಲಬ್ ಬೌಲರ್‌ಗಳ ವೇಗದ ಎಸೆತಗಳನ್ನು ಹೆಚ್ಚು ಎದುರಿಸಿದರು. ಆರಂಭ ಆಟಗಾರ ಕೆ.ಎಲ್.ರಾಹುಲ್, ವೇಗಿ ಪ್ರಸಿದ್ಧ ಕೃಷ್ಣ ಅವರು ಅಭ್ಯಾಸಕ್ಕೆ ಬರಲಿಲ್ಲ.

ಜಮ್ಮು ಮತ್ತು ಕಾಶ್ಮೀರ ತಂಡದ ಆಟಗಾರರು ಮೂರು ಗಂಟೆಗೂ ಹೆಚ್ಚು ಕಾಲ ನೆಟ್ಸ್‌ನಲ್ಲಿ ಬೆವರು ಹರಿಸಿದರು.


ಕರ್ನಾಟಕ ತಂಡದ ನಾಯಕ ದೇವದತ್ತ ಪಡಿಕ್ಕಲ್ ಭಾನುವಾರ ಅಭ್ಯಾಸ ನಡೆಸಿದರು ಚಿತ್ರ: ಗೋವಿಂದರಾಜ ಜವಳಿ

ಕರ್ನಾಟಕಕ್ಕೆ 9ನೇ ರಣಜಿ ಕಿರೀಟ: ವಿನಯ್ ವಿಶ್ವಾಸ



ಹುಬ್ಬಳ್ಳಿ (ಪಿಟಿಐ): ಸತತ ಎರಡು ಬಾರಿ ರಣಜಿ ಟ್ರೋಫಿ ಜಯಿಸಿದ ನಾಯಕನೆಂಬ ದಾಖಲೆ ಹೊಂದಿರುವ ಕರ್ನಾಟಕ ಕ್ರಿಕೆಟ್ ತಂಡದ ಏಕೈಕ ನಾಯಕನೆಂಬ ಹೆಗ್ಗಳಿಕೆ ಇರುವುದು 'ದಾವಣಗೆರೆ ಎಕ್ಸ್‌ಪ್ರೆಸ್' ಆರ್.ವಿನಯಕುಮಾರ್ ಅವರಿಗೆ ಮಾತ್ರ. 2013–14 ಮತ್ತು 2014–15ರಲ್ಲಿ ಕರ್ನಾಟಕವು ರಣಜಿ ಟ್ರೋಫಿ ಜಯಿಸಿತ್ತು. ಅದರ ನಂತರ ಈ ವರ್ಷ ಫೈನಲ್ ಪ್ರವೇಶಿಸಿದೆ. ಒಟ್ಟಾರೆ ಒಂಬತ್ತನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದೆ. ವಿನಯ್ ಅವರಿಗೂ ಕರ್ನಾಟಕ ವಿಜಯ ಸಾಧಿಸಲಿದೆ ಎಂಬ ವಿಶ್ವಾಸವಿದೆ.

'ದೇವದತ್ತ ಪಡಿಕ್ಕಲ್ ನಾಯಕತ್ವದ ತಂಡವು ಸಮತೋಲನದಿಂದ ಕೂಡಿದೆ. ಕೆ.ಎಲ್. ರಾಹುಲ್, ಮಯಂಕ್ (ಅಗರವಾಲ್), ಕರುಣ್ ನಾಯರ್, ದೇವದತ್ತ ಅವರು ಅನುಭವಿಗಳಾಗಿದ್ದಾರೆ. ಟೆಸ್ಟ್ ಆಟಗಾರರಾಗಿರುವ ಅವರಿಗೆ ದೀರ್ಘ ಮಾದರಿಯ ಕ್ರಿಕೆಟ್‌ನಲ್ಲಿ ಆಡುವ ಸಾಮರ್ಥ್ಯ ಚೆನ್ನಾಗಿದೆ' ಎಂದು ವಿನಯ್ ಪಿಟಿಐ ಸುದ್ದಿಸಂಸ್ಥೆಗೆ ಹೇಳಿದ್ದಾರೆ.

'ತಂತ್ರಗಾರಿಕೆಯ ವಿಷಯ ಬಂದಾಗ ದೇವದತ್ತ ಬಹಳ ಚಾಣಾಕ್ಷರಾಗಿದ್ದಾರೆ. ಅಲ್ಲದೇ ಬ್ಯಾಟಿಂಗ್‌ನಲ್ಲಿಯೂ ತಂಡಕ್ಕೆ ಗೆಲುವಿನ ಹಾದಿ ತೋರಿಸಬಲ್ಲರು. ಈ ಟೂರ್ನಿಯಲ್ಲಿ ಪಂಜಾಬ್ ಎದುರಿನ ಪಂದ್ಯ ಅದಕ್ಕೆ ಸಾಕ್ಷಿ. 30 ಓವರ್‌ಗಳಲ್ಲಿ 250 ರನ್‌ಗಳನ್ನು ಬೆನ್ನಟ್ಟುವ ಸವಾಲನ್ನು ನಿಭಾಯಿಸಿದ ರೀತಿ ಅಮೋಘವಾದುದು' ಎಂದರು.

'ಬೌಲಿಂಗ್ ವಿಭಾಗವು ಸಮರ್ಥವಾಗಿದೆ. ಪ್ರಸಿದ್ಧ (ಕೃಷ್ಣ), ವಿದ್ವತ್ (ಕಾವೇರಪ್ಪ), ವೈಶಾಖ (ವಿಜಯಕುಮಾರ್) ಮತ್ತು ವಿದ್ಯಾಧರ್ ಪಾಟೀಲ ಅವರು ತುಂಬಾ ಒಳ್ಳೆಯ ಫಾರ್ಮ್‌ನಲ್ಲಿದ್ದಾರೆ. ಅಲ್ಲದೇ ಶ್ರೇಯಸ್ ಗೋಪಾಲ್ ಅವರು ಈಚೆಗಷ್ಟೇ 300ನೇ ವಿಕೆಟ್ ಪಡೆದಿದ್ದಾರೆ' ಎಂದು ವಿನಯ್ ಹೇಳಿದರು. ಎಂಟು ಬಾರಿಯ ಚಾಂಪಿಯನ್ ಕರ್ನಾಟಕ ತಂಡವು ಮಂಗಳವಾರದಿಂದ ಹುಬ್ಬಳ್ಳಿಯಲ್ಲಿ ನಡೆಯಲಿರುವ ರಣಜಿ ಟ್ರೋಫಿ ಫೈನಲ್‌ನಲ್ಲಿ ಜಮ್ಮು–ಕಾಶ್ಮೀರ ತಂಡವನ್ನು ಎದುರಿಸಲಿದೆ.

'ಶೇ 40ರಷ್ಟು ಶಾಸಕರು ಕಮಿಷನ್ ದಂಧೆಕೋರರು'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ರಾಜ್ಯದಲ್ಲಿ ಪಕ್ಷಾತೀತವಾಗಿ ಶೇ 30ರಿಂದ 40ರಷ್ಟು ಶಾಸಕರು ಕಮಿಷನ್ ದಂಧೆಕೋರರಾಗಿದ್ದಾರೆ. ಕೆಲವರು ನೇರವಾಗಿ ಶಾಮೀಲಾಗಿದ್ದಾರೆ. ಅದರ ಭಾಗವಾಗಿಯೇ ಶಿರಹಟ್ಟಿ ಶಾಸಕರು ಸಿಕ್ಕಿಬಿದ್ದಿದ್ದಾರೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಆರೋಪಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಮಗಾರಿ ಮುಗಿದ ನಂತರ ಬಿಲ್ ಪಾವತಿ ವೇಳೆ ಕಮಿಷನ್ ಪಡೆಯುವ ಕಾಲ ಹೋಗಿದೆ. ಕಾಮಗಾರಿ ಪೂಜೆಯ ಹಂತದಲ್ಲೇ ಶಾಸಕರಿಗೆ ಕಮಿಷನ್ ನೀಡಬೇಕು. ಅಧಿಕಾರಿಗಳು ಸಹ ಇದರಲ್ಲಿ ಮಧ್ಯವರ್ತಿಗಳಾಗಿದ್ದಾರೆ' ಎಂದು ದೂರಿದರು.

'ಹಿಂದಿನ ಸರ್ಕಾರದಲ್ಲಿ ಶೇ 40ರಷ್ಟು ಕಮಿಷನ್ ಇತ್ತು, ಈ ಸರ್ಕಾರದಲ್ಲಿ ಶೇ 60ರಷ್ಟು ಕಮಿಷನ್ ದಂಧೆ ಇದೆ ಎಂದು ನಾನು ಹೇಳಿಲ್ಲ. ನನ್ನ ಮಾತು ತಿರುಚಲಾಗಿದೆ. ಆದರೆ, ಹಿಂದಿನ ಅಧ್ಯಕ್ಷರ ಹೇಳಿಕೆಯನ್ನು ಕಾಂಗ್ರೆಸ್ ಪಕ್ಷ ಬಳಸಿಕೊಂಡಿದ್ದು ನಿಜ' ಎಂದರು.


ಆರ್. ಮಂಜುನಾಥ್

'ಗುತ್ತಿಗೆದಾರರ ಬಾಕಿ ಇರುವ ಬಿಲ್ ಮೊತ್ತ ₹37 ಸಾವಿರ ಕೋಟಿಯನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂಬುದಷ್ಟೇ ನಮ್ಮ ಬೇಡಿಕೆಯಾಗಿದೆ' ಎಂದು ಹೇಳಿದರು.

ಮಾರ್ಚ್ 6ಕ್ಕೆ ಮುಷ್ಕರ: 'ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಾ.6ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮುಷ್ಕರ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಜಿಲ್ಲೆಗಳಿಂದ ಗುತ್ತಿಗೆದಾರರು ಭಾಗವಹಿಸಲಿದ್ದಾರೆ. ಬೇಡಿಕೆಗೆ ಸರ್ಕಾರ ಸ್ಪಂದಿಸದಿದ್ದರೆ ಏಪ್ರಿಲ್‌ನಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು' ಎಂದು ತಿಳಿಸಿದರು.

ಅಜಿತ್ ಪವಾರ್ ನಿಧನ ಶೀಘ್ರ ತನಿಖಾ ವರದಿ

ಪುಣೆ (ಪಿಟಿಐ): ಎನ್‌ಸಿಪಿ ನಾಯಕ ಅಜಿತ್ ಪವಾರ್ ವಿಮಾನ ಅಪಘಾತದಲ್ಲಿ ಮೃತಪಟ್ಟ ವಿಷಯಕ್ಕೆ ಸಂಬಂಧಿಸಿದ ಪ್ರಾಥಮಿಕ ತನಿಖಾ ವರದಿಯನ್ನು ಇದೇ 28 ಅಥವಾ ಅದಕ್ಕೂ ಮೊದಲು ಬಿಡುಗಡೆಯಾಗುವ ಸಾಧ್ಯತೆ ಇದೆ' ಎಂದು ಕೇಂದ್ರ ನಾಗರಿಕ ವಿಮಾನಯಾನ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಮೊಹೋಲ್, 'ನಾಗರಿಕ ವಿಮಾನಯಾನ ನಿರ್ದೇಶನಾಲಯವು ಪತ್ರಿಕಾ ಪ್ರಕಟಣೆ ನೀಡಿ, ಈ ಪ್ರಕರಣದ ಬಗ್ಗೆ ನಡೆಯುತ್ತಿರುವ ವಿಚಾರಣೆ ಕುರಿತು ಈಗಾಗಲೇ ಸ್ಪಷ್ಟನೆ ನೀಡಿದೆ. ವರದಿ ಬಿಡುಗಡೆಯಾದ ನಂತರ, ತನಿಖೆಯ ಕುರಿತು ಎಲ್ಲ ವಿವರಗಳನ್ನು ಸಾರ್ವಜನಿಕಗೊಳಿಸಲಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ಯಾರ ಹೇಳಿಕೆಗಳ ಬಗ್ಗೆಯೂ ಪ್ರತಿಕ್ರಿಯಿಸಲು ಬಯಸುವುದಿಲ್ಲ' ಎಂದು ಮೊಹೋಲ್ ಹೇಳಿದರು.

ಭೀಮಯ್ಯ ಕಪ್: ಕೂರ್ಗ್ ಹಾಕ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೂರ್ಗ್ ಹಾಕ್ಸ್ ತಂಡವು ಭಾನುವಾರ ಮುಕ್ತಾಯಗೊಂಡ ಏಳನೇ ಆವೃತ್ತಿಯ ಚೈರೋಸ್ ಭೀಮಯ್ಯ ಹಾಕಿ ಕಪ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡಿತು.

ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಕಿ ಅರೇನಾದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಹಾಕ್ಸ್ ತಂಡವು 7–5ರಿಂದ ಪಳೆ ತಾಲೂಕ್ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು.

ಸದರ್ನ್ ಕಮಾಂಡ್ ಹಾಗೂ ಡಿವೈಇಎಸ್ ಕರ್ನಾಟಕ ತಂಡಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆದವು. ಸಾಯ್ ಎಸ್‌ಟಿಸಿ ತಂಡವು 'ಶೂಟೌಟ್ ಕಾಂಪಿಟಿಷನ್ ಟ್ರೋಫಿ'ಯನ್ನು ಗೆದ್ದುಕೊಂಡಿತು.

ಭಾರತ ಹಾಕಿ ತಂಡದ ಮಾಜಿ ಗೋಲ್‌ಕೀಪರ್ ಹಾಗೂ ಹಾಕಿ ಕರ್ನಾಟಕ ಅಧ್ಯಕ್ಷ ಎ.ಬಿ.ಸುಬ್ಬಯ್ಯ ಅವರು ವಿಜೇತರಿಗೆ ಟ್ರೋಫಿ ಹಸ್ತಾಂತರಿಸಿದರು. ಭಾರತ ಹಾಕಿ ತಂಡದ ಮಾಜಿ ನಾಯಕ ಅನಿಲ್ ಎಲ್ಡ್ರಿನ್, ಭಾರತ ಹಾಕಿ ತಂಡದ ಮಾಜಿ ಆಟಗಾರ ವಿ.ಎಸ್.ವಿನಯ, ಭಾರತ ಹಾಕಿ ತಂಡದ ಆಟಗಾರರಾದ ಆಭರಣ್ ಸುದೇವ್, ಮೊಹಮ್ಮದ್ ರಾಹೀಲ್ ಮೌಸೀನ್ ಹಾಗೂ ಕಲಿಯಂಡ ಭರತ್ ಇದ್ದರು.

ಕೂರ್ಗ್ ಚಾಲೆಂಜರ್ಸ್ ಚಿಕ್ಕಪೇಟ್ ಅಸೋಸಿಯೇಷನ್ ಆಶ್ರಯದಲ್ಲಿ ಹಾಕಿ ಕರ್ನಾಟಕ ಮತ್ತು ಹಾಕಿ ಇಂಡಿಯಾ ಸಹಯೋಗದಲ್ಲಿ ಟೂರ್ನಿಯನ್ನು ಆಯೋಜಿಸಲಾಗಿತ್ತು.



ಭಾರತ ಹಾಕಿ ತಂಡದ ಮಾಜಿ ಗೋಲ್‌ಕೀಪರ್ ಹಾಗೂ ಹಾಕಿ ಕರ್ನಾಟಕ ಅಧ್ಯಕ್ಷ ಎ.ಬಿ.ಸುಬ್ಬಯ್ಯ ಅವರು ಕೂರ್ಗ್ ಹಾಕ್ಸ್ ತಂಡಕ್ಕೆ ಟ್ರೋಫಿ ಹಸ್ತಾಂತರಿಸಿದರು

ಲಂಚ ಪ್ರಕರಣ: ಶಾಸಕ, ಇಬ್ಬರು ಆಪ್ತರು ಜೈಲಿಗೆ

ಒಂದನೇ ಪುಟದಿಂದ...

'ಶಾಸಕ ಡಾ.ಚಂದ್ರು ಲಮಾಣಿ ಅವರ ವಿರುದ್ಧ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿರುವ ಗುತ್ತಿಗೆದಾರ ವಿಜಯ್ ಪೂಜಾರ ಅವರು ಗದಗ ತಾಲ್ಲೂಕು ಮುಳಗುಂದ ಪಟ್ಟಣದ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿಯ ಎಸ್‌ಸಿ ಘಟಕದ ಕಾರ್ಯದರ್ಶಿ. ಶಾಸಕರ ಮೇಲೆ ನಡೆದಿರುವ ಲೋಕಾಯುಕ್ತ ದಾಳಿ ಹಿಂದೆ ರಾಜಕೀಯ ಷಡ್ಯಂತ್ರ ನಡೆದಿದೆ' ಎಂದು ಬಿಜೆಪಿ ಕಾರ್ಯಕರ್ತರು ಆರೋಪಿಸಿ, ಕಾಂಗ್ರೆಸ್ ಮುಖಂಡರ ವಿರುದ್ಧ ಘೋಷಣೆ ಕೂಗಿದರು.

ಶಾಸಕ ಡಾ.ಚಂದ್ರು ಲಮಾಣಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದ ಬೆನ್ನಲ್ಲೇ, ಜಿಲ್ಲೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ವಾಗ್ವಾದ ಭುಗಿಲೆದ್ದಿದೆ. 'ಶಾಸಕರ ವಿರುದ್ಧ ಕಾಂಗ್ರೆಸ್ ನಾಯಕರು ಷಡ್ಯಂತ್ರ ನಡೆಸಿದ್ದಾರೆ' ಎಂದು ಬಿಜೆಪಿ ಕಾರ್ಯಕರ್ತರು ಆರೋಪ ಮಾಡಿದ್ದಾರೆ.

ಲಕ್ಷ್ಮೇಶ್ವರ ತಾಲ್ಲೂಕಿನ ಸಂಕದಾಳದಲ್ಲಿ ತಡೆಗೋಡೆ ನಿರ್ಮಿಸುವ ಎರಡು ಕಾಮಗಾರಿಗಳಿಗೆ ಸಂಬಂಧಿಸಿ ಗುತ್ತಿಗೆದಾರನ ಬಳಿ ಶೇ 12ರಷ್ಟು ಕಮಿಷನ್‌ಗೆ ಬೇಡಿಕೆ ಇಟ್ಟಿದ್ದು, ಮುಂಗಡವಾಗಿ ₹5 ಲಕ್ಷ ಲಂಚ ಪಡೆಯುವ ವೇಳೆ ಶಾಸಕ ಮತ್ತು ಅವರ ಇಬ್ಬರು ಆಪ್ತ ಸಹಾಯಕರು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದರು.


ಶಾಸಕ ಡಾ. ಚಂದ್ರು ಲಮಾಣಿ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಶನಿವಾರ ತಡರಾತ್ರಿ ಲಕ್ಷ್ಮೇಶ್ವರ ಪಟ್ಟಣದಲ್ಲಿರುವ ಬಾಲಾಜಿ ಆಸ್ಪತ್ರೆಯಿಂದ ಗದಗ ಜಿಲ್ಲಾ ಆಸ್ಪತ್ರೆ ಕರೆದೊಯ್ದರು


ವಿಜಯ್ ಪೂಜಾರ


ಕುಮಾರ ಮಹಾರಾಜ ಸ್ವಾಮೀಜಿ

'ನಾಟಕ ಮಾಡ್ತೀಯಾ, ನಡಾನೇ ಮುರಿಸ್ತಿನಿ...'

ಶಾಸಕ ಡಾ.ಚಂದ್ರು ಲಮಾಣಿ ಅವರು ಗುತ್ತಿಗೆದಾರ ವಿಜಯ್ ಪೂಜಾರಗೆ ಬೆದರಿಕೆ ಒಡ್ಡಿದ್ದಾರೆ ಎನ್ನಲಾದ ಆಡಿಯೊ 'ಪ್ರೀತಿ, ವಿಶ್ವಾಸದಿಂದ ಹೇಳಿದರೆ ನಾಟಕ ಮಾಡ್ತೀಯಾ' ಎಂಬ ಮಾತುಗಳಿಂದ ಆರಂಭವಾಗಲಿದೆ.

'ಯಲ್ಲಮ್ಮಂಗೆ ಹೋಗಿನಿ, ಮಲ್ಲಮ್ಮಂಗೆ ಹೋಗಿನಿ, ಬೆಳ್ಳಮ್ಮಂಗೆ ಹೋಗಿನಿ... ನೀನು ನಿಮ್ಮ ತಾಲ್ಲೂಕಿನಲ್ಲಿ ಮಾಡಿದಂತೆ ನಮ್ಮ ತಾಲ್ಲೂಕಿನಲ್ಲಿ ಮಾಡಿದರೆ ನಡ ಮುರಿದು ಕಳಿಸ್ತೀವಿ' ಎಂಬ ಎಚ್ಚರಿಕೆಯ ಮಾತುಗಳಿವೆ.

ಮುಂದುವರಿದು, 'ನೀನೇನಾದರೂ ನನಗೆ ಸರಳವಾಗಿ ಅನ್ಕೊಂಡ್ರೆ ನಡಾನೇ ಮುರಿಸ್ತೀನಿ. ಏನ್ ನಮ್ನೇನು ನಿನ್ ತರ್ ಲೂಸ್ ಅಂತ ಅನ್ಕೋಂಡಿಯಾ, ಏಯ್ ಬಿಡೋ' ಎಂದು ಬೆದರಿಕೆಯ ಮಾತುಗಳು ಆಡಿಯೊದಲ್ಲಿವೆ.

ಲಮಾಣಿ ಧೈರ್ಯ ಎಂತದ್ದು, ಟಿಕೆಟ್ ತಪ್ಪಿಸಬೇಕು...'

ಲಂಬಾಣಿ ಸಮಾಜದ ಆದರಳ್ಳಿ ಮಠದ ಕುಮಾರ ಮಹಾರಾಜ ಸ್ವಾಮೀಜಿ ಅನಾಮಿಕನ ಜೊತೆ ಚರ್ಚಿಸಿದ್ದಾರೆ ಎನ್ನಲಾದ ಆಡಿಯೊದಲ್ಲಿ, 'ಶಾಸಕ ಚಂದ್ರು ಲಮಾಣಿ ಧೈರ್ಯ ಎಂತದ್ದು ಇರಬಹುದು. ಮುಂದೆ ಅವನಿಗೆ ಟಿಕೆಟ್ ತಪ್ಪಿಸಲೇಬೇಕು' ಎಂಬ ಮಾತುಗಳಿವೆ.

'ಟಿಕೆಟ್ ತಪ್ಪಿಸದ ಹೊರತು ಸಮಾಧಾನ ಇಲ್ಲ. ಇಂಥವರಿಗೆ ಸೂತ್ರದ ಗಾಳ ಹಾಕಿ ಸಿಕ್ಕಿಸಲು ಬೆಂಗಳೂರಿನಲ್ಲಿ ಒಂದು ಟೀಮ್ ಇದೆ. ನೋಟಿಗೆ ಪೌಡರ್ ಹಚ್ಚಿ ಐಟಿಗೆ ಒಗಿಸಿಬಿಟ್ರೆ ಆಯ್ತು. ಅಲ್ಲಿಗೆ ಸುಮ್ಮನೆ ಕೂರುತ್ತಾನೆ' ಎಂಬ ಸಂಭಾಷಣೆ ಆಡಿಯೊದಲ್ಲಿದೆ.

'ಧ್ವನಿ ನನ್ನದೇ, ದಾಳಿ ಹಿಂದೆ ಕೈವಾಡವಿಲ್ಲ –ಸ್ವಾಮೀಜಿ

ಆಡಿಯೊ ಕುರಿತು ಪ್ರತಿಕ್ರಿಯಿಸಿದ ಕುಮಾರ ಮಹಾರಾಜರು, 'ಇದು ನನ್ನದೇ ಧ್ವನಿ. ವರ್ಷದ ಹಿಂದಿನದ್ದು. ಲಕ್ಷ್ಮೇಶ್ವರ ತಾಲ್ಲೂಕಿನಲ್ಲಿನ ಅಕ್ರಮ ಗಣಿಗಾರಿಕೆ ವಿರುದ್ಧ ಪ್ರತಿಭಟನೆ ಕೈಗೊಂಡಿದ್ದಾಗ ನನ್ನನ್ನು ಮಠ ಬಿಡಿಸಲು ಪ್ರಯತ್ನಿಸಿದ್ದರು. ಆಗ ಸಿಟ್ಟಿನಲ್ಲಿ ಮಾತನಾಡಿದ್ದೆ. ಇಂತಹ ಇನ್ನೂ ಎರಡು ಮೂರು ಆಡಿಯೊಗಳನ್ನೂ ಹರಿಬಿಟ್ಟಿದ್ದಾರೆ' ಎಂದರು.

'ಶಾಸಕರ ವಿರುದ್ಧ ದೂರು ಕೊಟ್ಟಿರುವ ಗುತ್ತಿಗೆದಾರನಿಗೂ ನನಗೂ ಪರಿಚಯವೇ ಇಲ್ಲ. ಅಲ್ಲದೆ, 'ಲೋಕಾ' ಅಧಿಕಾರಿಗಳ ದಾಳಿಗೂ ನನಗೂ ಸಂಬಂಧ ಇಲ್ಲ' ಎಂದು ಹೇಳಿದರು. 'ಸದ್ಯ ಮೈಸೂರಿನ ಕಾರ್ಯಕ್ರಮದಲ್ಲಿದ್ದು, ಅಲ್ಲಿಗೆ ಬಂದ ನಂತರ ಸುದ್ದಿಗೋಷ್ಠಿ ನಡೆಸಿ ಎಲ್ಲವನ್ನೂ ವಿವರವಾಗಿ ತಿಳಿಸುವೆ. ಇದರಲ್ಲಿ ನನ್ನ ಕೈವಾಡ ಇದೆ ಎಂಬ ಶಂಕೆ ಇದ್ದರೆ ಪೊಲೀಸರಿಗೆ ನನ್ನ ಎರಡೂ ಮೊಬೈಲ್‌ಗಳನ್ನು ಕೊಡುವೆ. ಅವರು ಪರಿಶೀಲಿಸಲಿ' ಎಂದರು.

ಬಿಎಫ್‌ಸಿ–ನಾರ್ತ್‌ಈಸ್ಟ್ ಪಂದ್ಯ ಡ್ರಾ


ಬೆಂಗಳೂರು: ಆತಿಥೇಯ ಬೆಂಗಳೂರು ಎಫ್‌ಸಿ ತಂಡವು ಭಾನುವಾರ ನಡೆದ ಇಂಡಿಯನ್ ಸೂಪರ್ ಲೀಗ್‌ನ ರೋಚಕ ಪಂದ್ಯದಲ್ಲಿ 1–1 ಗೋಲುಗಳಿಂದ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ಜೊತೆ ಡ್ರಾ ಸಾಧಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಿಎಫ್‌ಸಿ ತಂಡವು 19ನೇ ನಿಮಿಷದಲ್ಲಿ ಬ್ರಿಯಾನ್ ಸ್ಯಾಂಚೆಜ್ ಗಳಿಸಿದ ಗೋಲಿನಿಂದಾಗಿ ಮುನ್ನಡೆ ಸಾಧಿಸಿತ್ತು. ಆದರೆ, ದ್ವಿತೀಯಾರ್ಧದಲ್ಲಿ ಬದಲಿ ಆಟಗಾರನಾಗಿ ಕಣಕ್ಕಿಳಿದ ಲಾಲ್‌ರಿಂಜುವಾಲಾ ಲಾಲ್‌ಬಿಯಾಕ್ನಿಯಾ (68ನೇ ನಿಮಿಷ) ಗೋಲು ದಾಖಲಿಸುವ ಮೂಲಕ ನಾರ್ತ್‌ಈಸ್ಟ್ ತಂಡ ಸಮಬಲ ಮಾಡಿಕೊಂಡಿತು.

ಬಿಎಫ್‌ಸಿ ತಂಡವು ಹೋದ ವಾರ ಸ್ಪೋರ್ಟಿಂಗ್ ಡೆಲ್ಲಿ ತಂಡವನ್ನು 2–0ಯಿಂದ ಮಣಿಸಿ ಅಭಿಯಾನ ಆರಂಭಿಸಿತ್ತು. ಆಡಿರುವ ಎರಡು ಪಂದ್ಯಗಳಲ್ಲಿ 4 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಹೈಲ್ಯಾಂಡರ್ಸ್ ತಂಡವು ಎರಡು ಪಂದ್ಯಗಳಲ್ಲಿ ಒಂದು ಅಂಕ ಗಳಿಸಿದ್ದು, ಎಂಟನೇ ಸ್ಥಾನದಲ್ಲಿದೆ.

ಅನುಭವಿ ರಾಹುಲ್ ಭೆಕೆ ಅವರು ಆಡುವ ಬಳಗದಲ್ಲಿ ಅಲಭ್ಯರಾಗಿದ್ದರಿಂದ ತಂಡದ ನಾಯಕತ್ವ ಗುರುಪ್ರೀತ್ ಸಿಂಗ್ ಸಂಧು ಹೆಗಲ ಮೇಲೆ ಬಿದ್ದಿತು. ಪಂದ್ಯದ ಆರಂಭಿಕ ನಿಮಿಷಗಳಲ್ಲೇ ನಿರ್ಣಾಯಕ 'ಸೇವ್' ಮಾಡುವ ಮೂಲಕ ಹಿರಿಯ ಗೋಲ್‌ಕೀಪರ್ ಸಂಧು ಅವರು ನಾರ್ತ್‌ಈಸ್ಟ್ ತಂಡದ ಗೋಲು ಪ್ರಯತ್ನವನ್ನು ತಡೆದರು.

19ನೇ ನಿಮಿಷದಲ್ಲಿ ಬ್ರಿಯಾನ್ ತಮ್ಮ ತಂಡಕ್ಕೆ ಮುನ್ನಡೆ ಒದಗಿಸಿದರು. ಮೈದಾನದ ಮಧ್ಯಭಾಗದಿಂದ ಅದ್ಭುತವಾಗಿ ಚೆಂಡನ್ನು ಮುನ್ನಡೆಸಿಕೊಂಡು ಹೋದ ಅವರು, ಗೋಲ್‌ಕೀಪರ್‌ನ ಎಡಭಾಗದಿಂದ ಚೆಂಡನ್ನು ಗೋಲು ಪೆಟ್ಟಿಗೆಗೆ ತಲುಪಿಸಿದರು.


ಬಿಎಫ್‌ಸಿ (ನೀಲಿ ಜರ್ಸಿ) ಮತ್ತು ನಾರ್ತ್‌ಈಸ್ಟ್ ಯುನೈಟೆಡ್ ತಂಡದ ಆಟಗಾರರ ಸೆಣಸಾಟ ಚಿತ್ರ: ಪುಷ್ಕರ್ ವಿ.

ದ್ವಿತೀಯಾರ್ಧದಲ್ಲಿ ನಾರ್ತ್‌ಈಸ್ಟ್ ತಂಡದ ಲಾಲ್‌ರಿಂಜುವಾಲಾ (68ನೇ ನಿಮಿಷ) ಗೋಲು ಗಳಿಸುವ ಮೂಲಕ ಸ್ಕೋರ್ ಸಮಬಲಗೊಂಡಿತು.

ಬೆಂಗಳೂರು ಎಫ್‌ಸಿ ತಂಡವು ಇದೇ 27ರಂದು ಕಂಠೀರವ ಕ್ರೀಡಾಂಗಣದಲ್ಲಿ ಪಂಜಾಬ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಆಯುಷ್ ಶತಕ: ಮುಂಬೈ ಬಿಗಿಹಿಡಿತ

ಬೆಂಗಳೂರು: ಆರಂಭಿಕ ಆಟಗಾರ ಆಯುಷ್ ಜೇಥ್ವಾ (ಔಟಾಗದೇ 139;316ಎ) ಅವರ ಅಜೇಯ ಶತಕದ ಬಲದಿಂದ ಆತಿಥೇಯ ಮುಂಬೈ ತಂಡವು ಭಾನುವಾರ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕದ ವಿರುದ್ಧ ಬಿಗಿಹಿಡಿತ ಸಾಧಿಸಿದೆ.

ಮುಂಬೈನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 240 ರನ್ ಗಳಿಸಿತ್ತು. ಇದಕ್ಕೆ ಉತ್ತರವಾಗಿ ಮುಂಬೈ ತಂಡವು ಎರಡನೇ ದಿನದಾಟದ ಮುಕ್ತಾಯಕ್ಕೆ 97 ಓವರ್‌ಗಳಲ್ಲಿ 1 ವಿಕೆಟ್‌ಗೆ 310 ರನ್ ಗಳಿಸಿದ್ದು, 70 ರನ್ ಮುನ್ನಡೆ ಸಾಧಿಸಿದೆ.

ವಿಕೆಟ್ ನಷ್ಟವಿಲ್ಲದೆ 12 ರನ್‌ಗಳೊಂದಿಗೆ ದಿನದಾಟವನ್ನು ಆರಂಭಿಸಿದ ಮುಂಬೈ ತಂಡದ ಅಂಗ್‌ಕ್ರಿಶ್ ರಘುವಂಶಿ (92;117ಎ) ಮತ್ತು ಆಯುಷ್ ಮೊದಲ ವಿಕೆಟ್‌ಗೆ 200 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 78.5 ಓವರ್‌ಗಳಲ್ಲಿ 240. ಮುಂಬೈ: 97 ಓವರ್‌ಗಳಲ್ಲಿ 1 ವಿಕೆಟ್‌ಗೆ 310 (ಅಂಗ್‌ಕ್ರಿಶ್ ರಘುವಂಶಿ 92, ಆಯುಷ್ ಜೇಥ್ವಾ ಔಟಾಗದೇ 139, ಮನನ್ ಭಟ್ ಔಟಾಗದೇ 64; ಕೆ.ಪಿ. ಕಾರ್ತಿಕೇಯ 42ಕ್ಕೆ1).

ಹರಿಣಗಳ ದಾಳಿಗೆ ಭಾರತ ನಿರುತ್ತರ

‘ಸೂಪರ್ 8’ ಹಂತ: ವೇಗಿ ಮಾರ್ಕೊ ಯಾನ್ಸೆನ್‌ಗೆ 4 ವಿಕೆಟ್
ದಕ್ಷಿಣ ಆಫ್ರಿಕಾ ತಂಡಕ್ಕೆ 76 ರನ್‌ಗಳ ಭಾರಿ ಜಯ

ಅಹಮದಾಬಾದ್ (ಪಿಟಿಐ): ಡೇವಿಡ್ ಮಿಲ್ಲರ್ ಸೂಕ್ತ ಸಮಯದಲ್ಲಿ ಆಕರ್ಷಕ ಅರ್ಧಶತಕ ಹೊಡೆದರು. ನಂತರ ದಕ್ಷಿಣ ಆಫ್ರಿಕಾದ ಬೌಲರ್‌ಗಳ ಶಿಸ್ತುಬದ್ಧ ದಾಳಿಯೆದುರು ಭಾರತ ತಂಡದ ಆಟ ನಡೆಯಲಿಲ್ಲ. ಹರಿಣಗಳ ಪಡೆ ಭಾನುವಾರ ನಡೆದ ಟಿ20 ವಿಶ್ವಕಪ್ ಸೂಪರ್ ಎಂಟರ ಹಂತದ ಪಂದ್ಯದಲ್ಲಿ ಆತಿಥೇಯ ತಂಡವನ್ನು 76 ರನ್‌ಗಳ ದೊಡ್ಡ ಅಂತರದಿಂದ ಸೋಲಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಬ್ಯಾಟ್ ಮಾಡಲು ನಿರ್ಧರಿಸಿದ ದಕ್ಷಿಣ ಆಫ್ರಿಕಾ ತಂಡ ಮಿಲ್ಲರ್ (63, 35 ಎಸೆತ) ಮತ್ತು ಯುವ ತಾರೆ ಡೆವಾಲ್ಡ್ ಬ್ರೆವಿಸ್ (45, 29 ಎಸೆತ) ಅವರ ನಡುವಣ 97 ರನ್‌ಗಳ (51 ಎಸೆತ) ನಾಲ್ಕನೇ ವಿಕೆಟ್ ಜೊತೆಯಾಟದಿಂದ 7 ವಿಕೆಟ್‌ಗೆ 187 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಕಲೆಹಾಕಿತು. ಭಾರತದ ಅಗ್ರ ಬೌಲರ್ ಜಸ್‌ಪ್ರೀತ್ ಬೂಮ್ರಾ (4–0–15–3) ಮಾತ್ರ ಪರಿಣಾಮಕಾರಿ ಎನಿಸಿದರು.

ಇದು ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾರತಕ್ಕೆ ಎದುರಾದ ಎರಡನೇ ಅತಿ ದೊಡ್ಡ (ರನ್ ಅಂತರದಲ್ಲಿ) ಸೋಲು. 2019ರಲ್ಲಿ ನ್ಯೂಜಿಲೆಂಡ್ ವಿರುದ್ಧ ವೆಲಿಂಗ್ಟನ್‌ನಲ್ಲಿ 80 ರನ್‌ಗಳಿಂದ ಸೋತಿದ್ದು ಅತಿ ದೊಡ್ಡ ಅಂತರದ ಸೋಲಾಗಿದೆ.

33 ವಿಕೆಟ್
ಟಿ20 ವಿಶ್ವಕಪ್‌ನಲ್ಲಿ ಭಾರತದ ಪರ ಅತಿ ಹೆಚ್ಚು ವಿಕೆಟ್ ಗಳಿಸಿದ ಬೌಲರ್ ಎಂಬ ಗೌರವಕ್ಕೆ ಜಸ್‌ಪ್ರೀತ್ ಬೂಮ್ರಾ ಪಾತ್ರರಾದರು. ಅರ್ಷದೀಪ್ ಸಿಂಗ್ ಹಾಗೂ ಆರ್. ಅಶ್ವಿನ್ ಅವರು ತಲಾ 32 ವಿಕೆಟ್ ಗಳಿಸಿದ್ದಾರೆ

ಭಾರತ ತಂಡ ಒಳ್ಳೆಯ ಆರಂಭವನ್ನೇ ಪಡೆಯಲಿಲ್ಲ. ಮರ್ಕರಂ ನೇತೃತ್ವದ ತಂಡ ಆತಿಥೇಯರನ್ನು 18.5 ಓವರುಗಳಲ್ಲಿ 111 ರನ್‌ಗಳಿಗೆ ಆಲೌಟ್ ಮಾಡಿತು. ವೇಗದ ಬೌಲರ್ ಮಾರ್ಕೊ ಯಾನ್ಸೆನ್ (22ಕ್ಕೆ4) ಹೆಚ್ಚಿನ ಹಾನಿ ಎಸಗಿದರು. ಭಾರತದ ಯಾವುದೇ ಆಟಗಾರ ಎದುರಾಳಿಗಳ ದಾಳಿಯನ್ನು ವಿಶ್ವಾಸದಿಂದ ಎದುರಿಸಲಿಲ್ಲ. ಸ್ಪಿನ್ನರ್‌ಗಳಾದ ಕೇಶವ ಮಹಾರಾಜ್ (24ಕ್ಕೆ3) ಮತ್ತು ಕಾರ್ಬಿನ್ ಬಾಷ್ (12ಕ್ಕೆ2) ಅವರೂ ನಿರ್ಣಾಯಕ ಘಟ್ಟದಲ್ಲಿ ವಿಕೆಟ್‌ಗಳನ್ನು ಪಡೆದರು. ಲುಂಗಿ ಎನ್‌ಗಿಡಿ ವಿಕೆಟ್ ಪಡೆಯದಿದ್ದರೂ 4 ಓವರುಗಳಲ್ಲಿ ಒಂದೂ ಬೌಂಡರಿ ನೀಡದೇ 15 ರನ್ ಅಷ್ಟೇ ಕೊಟ್ಟರು. ಶಿವಂ ದುಬೆ ಭಾರತದ ಪರ ಅತಿ ಹೆಚ್ಚು ರನ್ (42, 37ಎಸೆತ) ರನ್ ಗಳಿಸಿದರು.

ದಿಟ್ಟ ನಡೆಯಲ್ಲಿ, ಸಾಂದರ್ಭಿಕ ಆಫ್ ಸ್ಪಿನ್ನರ್ ಏಡನ್ ಮರ್ಕರಂ (5ಕ್ಕೆ1) ದಾಳಿ ಆರಂಭಿಸಿ, ಲಯದಲ್ಲಿರುವ ಆರಂಭ ಆಟಗಾರ ಇಶಾನ್ ಕಿಶನ್ ಅವರ ವಿಕೆಟ್ ಪಡೆದರು. ಇಶಾನ್ ಖಾತೆಯನ್ನೇ ತೆರೆಯಲಿಲ್ಲ. ‘ಸ್ಟಾರ್ ಆಟಗಾರ’ ಅಭಿಷೇಕ್ ಶರ್ಮಾ (15, 12 ಎಸೆತ) ಅವರ ಸೊನ್ನೆಯ ಸರಮಾಲೆ ಕೊನೆಗೊಂಡರೂ ಅದರಿಂದ ಹೆಚ್ಚಿನ ಲಾಭವಾಗಲಿಲ್ಲ. ಅಭಿಷೇಕ್ ಮತ್ತು ತಿಲಕ್ ವರ್ಮಾ ಅವರ ವಿಕೆಟ್‌ಗಳನ್ನು ಪಡೆದ ಯಾನ್ಸೆನ್ ಪವರ್‌ಪ್ಲೇ (26ಕ್ಕೆ3) ಅವಧಿಯಲ್ಲೇ ಪೆಟ್ಟು ನೀಡಿದರು. ಭಾರತ ಇದರಿಂದ ಚೇತರಿಸಲೇ ಇಲ್ಲ.

ಟಿ20 ವಿಶ್ವಕಪ್: ಭಾರತಕ್ಕೆ ಅತಿಹೆಚ್ಚು ರನ್ ಅಂತರದ ಸೋಲು

ರನ್	ಎದುರಾಳಿ	ತಾಣ	ವರ್ಷ
76	ದಕ್ಷಿಣ ಆಫ್ರಿಕಾ	ಅಹಮದಾಬಾದ್	2026
49	ಆಸ್ಟ್ರೇಲಿಯಾ	ಬ್ರಿಡ್ಜ್‌ಟೌನ್	2010
47	ನ್ಯೂಜಿಲೆಂಡ್	ನಾಗ್ಪುರ	2016



ಡಿವಾಲ್ಡ್ ಬ್ರೆವಿಸ್ (ಎಡ) ಹಾಗೂ ಡೇವಿಡ್ ಮಿಲ್ಲರ್ ಪಿಟಿಐ ಚಿತ್ರ

ಇದಕ್ಕೆ ಮೊದಲು, ದಕ್ಷಿಣ ಆಫ್ರಿಕಾ ತಂಡಕ್ಕೆ ಬೂಮ್ರಾ (15ಕ್ಕೆ3) ಆರಂಭದಲ್ಲಿ ಆಘಾತ ನೀಡಿದರು. ಇದರಿಂದಾಗಿ ತಂಡ 20 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಬ್ರೆವಿಸ್ ಮತ್ತು ಮಿಲ್ಲರ್ ನಾಲ್ಕನೇ ವಿಕೆಟ್ ಜತೆಯಾಟದ ಮೂಲಕ ಇನಿಂಗ್ಸ್ ಕಟ್ಟಿದರು. ಕೊನೆಯಲ್ಲಿ ಟ್ರಿಸ್ಟನ್ ಸ್ಟಬ್ಸ್ ಅವರು ಅಜೇಯ 44 ರನ್ (24 ಎ) ಗಳಿಸಿ ತಂಡ ಸವಾಲಿನ ಮೊತ್ತ ಪೇರಿಸಲು ನೆರವಾದರು.

ಐಸಿಸಿ ಮುಖ್ಯಸ್ಥ ಜಯ್ ಶಾ ಹಾಗೂ ಗೂಗಲ್ ಸಿಇಒ ಸುಂದರ್ ಪಿಚೈ ಅವರು ಕ್ರೀಡಾಂಗಣದಲ್ಲಿ ಪಂದ್ಯ ವೀಕ್ಷಣೆ ಮಾಡಿದರು.

ಒಂದನೇ ಗುಂಪಿನಲ್ಲಿರುವ ಭಾರತ ಈ ಹಿನ್ನಡೆಯಿಂದ ಮುಂದಿನ ಪಂದ್ಯಗಳಲ್ಲಿ ಜಿಂಬಾಬ್ವೆ (ಫೆ.26) ಮತ್ತು ವೆಸ್ಟ್ ಇಂಡೀಸ್ (ಮಾರ್ಚ್ 1) ವಿರುದ್ಧ ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಿದೆ.

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ: 7 ವಿಕೆಟ್‌ಗೆ 187 (20 ಓವರುಗಳಲ್ಲಿ)

ಮರ್ಕರಂ ಸಿ ಪಾಂಡ್ಯ ಬಿ ಅರ್ಷದೀಪ್ 4 (7ಎ)
ಡಿಕಾಕ್ ಬಿ ಬೂಮ್ರಾ 6 (7ಎ, 4x1)
ರಿಕೆಲ್ಟನ್ ಸಿ ದುಬೆ ಬಿ ಬೂಮ್ರಾ 7 (7ಎ, 6x1)
ಬ್ರೆವಿಸ್ ಸಿ ಅಭಿಷೇಕ್ ಬಿ ದುಬೆ 45 (29ಎ, 4x3, 6x3)
ಮಿಲ್ಲರ್ ಸಿ ತಿಲಕ್ ಬಿ ವರುಣ್ 63 (35ಎ, 4x7, 6x3)
ಸ್ಟಬ್ಸ್ ಔಟಾಗದೇ 44 (24ಎ, 4x1, 6x3)
ಯಾನ್ಸೆನ್ ಸಿ ರಿಂಕು ಸಿಂಗ್ ಬಿ ಅರ್ಷದೀಪ್ 2 (6ಎ)
ಬಾಷ್ ಸಿ ಮತ್ತು ಬಿ ಬೂಮ್ರಾ 5 (6ಎ, 4x1)
ರಬಾಡ ಔಟಾಗದೇ 0 (1ಎ)

ಇತರೆ: 11 (ಬೈ 1, ಲೆಗ್‌ಬೈ 2, ನೋಬಾಲ್ 2, ವೈಡ್ 6)

ವಿಕೆಟ್ ಪತನ: 1–10 (ಕ್ವಿಂಟನ್ ಡಿಕಾಕ್, 1.5), 2–12 (ಏಡನ್ ಮರ್ಕರಂ, 2.4), 3–20 (ರಯಾನ್ ರಿಕೆಲ್ಟನ್, 3.6), 4–117 (ಡೆವಾಲ್ಡ್ ಬ್ರೆವಿಸ್, 12.2), 5–152 (ಡೇವಿಡ್ ಮಿಲ್ಲರ್, 15.4), 6–158 (ಮಾರ್ಕೊ ಯಾನ್ಸೆನ್, 17.2), 7–167 (ಕಾರ್ಬಿನ್ ಬಾಷ್, 18.5).

ಬೌಲಿಂಗ್: ಅರ್ಷದೀಪ್ ಸಿಂಗ್ 4–0–28–2; ಜಸ್‌ಪ್ರೀತ್ ಬೂಮ್ರಾ 4–0–15–3; ವರುಣ್ ಚಕ್ರವರ್ತಿ 4–0–47–1; ವಾಷಿಂಗ್ಟನ್ ಸುಂದರ್ 2–0–17–0; ಹಾರ್ದಿಕ್ ಪಾಂಡ್ಯ 4–0–45–0; ಶಿವಂ ದುಬೆ 2–0–32–1.

ಭಾರತ: 18.5 ಓವರ್‌ಗಳಲ್ಲಿ 111

ಕಿಶನ್ ಸಿ ರಿಕೆಲ್ಟನ್ ಬಿ ಮರ್ಕರಂ 0 (4ಎ)
ಅಭಿಷೇಕ್ ಸಿ ಬಾಷ್ ಬಿ ಯಾನ್ಸೆನ್ 15 (12ಎ, 4x2, 6x1)
ತಿಲಕ್ ಸಿ ಡಿಕಾಕ್ ಬಿ ಯಾನ್ಸೆನ್ 1 (2ಎ)
ಸೂರ್ಯಕುಮಾರ್ ಸಿ ಬ್ರೆವಿಸ್ ಬಿ ಬಾಷ್ 18 (22ಎ, 4x2)
ವಾಷಿಂಗ್ಟನ್ ಸಿ ಡಿಕಾಕ್ ಬಿ ಬಾಷ್ 11 (11ಎ, 6x1)
ದುಬೆ ಸಿ ಎನ್‌ಗಿಡಿ ಬಿ ಯಾನ್ಸೆನ್ 42 (37ಎ, 4x1, 6x3)
ಪಾಂಡ್ಯ ಸಿ ಸ್ಟಬ್ಸ್ ಬಿ ಮಹಾರಾಜ್ 18 (17ಎ, 6x1)
ರಿಂಕು ಸಿ ಸ್ಟಬ್ಸ್ ಬಿ ಮಹಾರಾಜ್ 0 (2ಎ)
ಅರ್ಷದೀಪ್ ಸಿ ಸ್ಟಬ್ಸ್ ಬಿ ಮಹಾರಾಜ್ 1 (2ಎ)
ವರುಣ್ ಚಕ್ರವರ್ತಿ ಔಟಾಗದೇ 0 (3ಎ)
ಬೂಮ್ರಾ ಸಿ ಮರ್ಕರಂ ಬಿ ಯಾನ್ಸೆನ್ 0 (1ಎ)

ಇತರೆ: 5 (ಲೆಗ್‌ಬೈ 1, ವೈಡ್ 4)

ವಿಕೆಟ್ ಪತನ: 1-0 (ಇಶಾನ್ ಕಿಶನ್, 0.4), 2-5 (ತಿಲಕ್ ವರ್ಮಾ, 1.1), 3-26 (ಅಭಿಷೇಕ್ ಶರ್ಮಾ, 4.3), 4-43 (ವಾಷಿಂಗ್ಟನ್ ಸುಂದರ್, 7.2), 5-51 (ಸೂರ್ಯಕುಮಾರ್ ಯಾದವ್, 9.1), 6-86 (ಹಾರ್ದಿಕ್ ಪಾಂಡ್ಯ, 14.1), 7-86 (ರಿಂಕು ಸಿಂಗ್, 14.3), 8-88 (ಅರ್ಷದೀಪ್ ಸಿಂಗ್, 14.6), 9-111 (ಶಿವಂ ದುಬೆ, 18.4), 10-111 (ಜಸ್‌ಪ್ರೀತ್ ಬೂಮ್ರಾ, 18.5)

ಬೌಲಿಂಗ್: ಏಡನ್ ಮರ್ಕರಂ 1–0–5–1; ಮಾರ್ಕೊ ಯಾನ್ಸೆನ್ 3.5–0–22–4; ಕಗಿಸೊ ರಬಾಡ 4–0–32–0; ಲುಂಗಿ ಗಿಡಿ 4–0–15–0; ಕೇಶವ ಮಹಾರಾಜ್ 3–0–24–3, ಕಾರ್ಬಿನ್ ಬಾಷ್ 3–0–12–2

ಪಂದ್ಯದ ಆಟಗಾರ: ಡೇವಿಡ್ ಮಿಲ್ಲರ್

ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 76 ರನ್‌ಗಳ ಜಯ

ಸೂಪರ್ ಎಂಟರ ಹಂತದ ಪಂದ್ಯದಲ್ಲಿ 51 ರನ್ ಜಯ
ಇಂಗ್ಲೆಂಡ್‌ಗೆ ಮಣಿದ ಶ್ರೀಲಂಕಾ

ಕ್ಯಾಂಡಿ (ಎಎಫ್‌ಪಿ): ಶ್ರೀಲಂಕಾ ತಂಡವನ್ನು ಕೇವಲ 95 ರನ್‌ಗಳಿಗೆ ಉರುಳಿಸಿದ ಇಂಗ್ಲೆಂಡ್ ತಂಡದವರು, ನಾಯಕ ಹ್ಯಾರಿ ಬ್ರೂಕ್ ಅವರ ಹುಟ್ಟುಹಬ್ಬಕ್ಕೆ ಗೆಲುವಿನ ಉಡುಗೊರೆ ನೀಡಿದರು. ಭಾನುವಾರ ನಡೆದ ಟಿ20 ವಿಶ್ವಕಪ್‌ನ ಸೂಪರ್ ಎಂಟು ಹಂತದ ಪಂದ್ಯದಲ್ಲಿ ಇಂಗ್ಲೆಂಡ್ 51 ರನ್‌ಗಳಿಂದ ಆತಿಥೇಯ ತಂಡದ ಮೇಲೆ ಜಯಗಳಿಸಿತು.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಇಂಗ್ಲೆಂಡ್ ತಂಡವನ್ನು ಶ್ರೀಲಂಕಾ ತಂಡದ ಬೌಲರ್‌ಗಳು 9 ವಿಕೆಟ್‌ಗೆ 146 ರನ್‌ಗಳ ಅಲ್ಪಮೊತ್ತಕ್ಕೆ ನಿಯಂತ್ರಿಸಿದರು. ಎಡಗೈ ಸ್ಪಿನ್ನರ್ ದುನಿತ್ ವೆಲ್ಲಾಳಗೆ 26 ರನ್ನಿಗೆ 3 ವಿಕೆಟ್ ಪಡೆದರು. ಆದರೆ ವೇಗದ ಬೌಲರ್ ಜೋಫ್ರಾ ಆರ್ಚರ್ (20ಕ್ಕೆ2) ಮತ್ತು ಸ್ಪಿನ್ನರ್ ವಿಲ್ ಜಾಕ್ಸ್ (22ಕ್ಕೆ3) ಅವರು ತಿರುಗೇಟು ನೀಡಿ ಶ್ರೀಲಂಕಾದ ಅಗ್ರಸರದಿಯನ್ನು ಪವರ್‌ಪ್ಲೇ (34ಕ್ಕೆ5) ಅವಧಿಯೊಳಗೆ ಧ್ವಂಸ ಮಾಡಿದರು. ತಂಡ ಅಂತಿಮವಾಗಿ 95 ರನ್ ಗಳಿಸಿ ಹೋರಾಟ ಮುಗಿಸಿತು.

‘ಇದು ಹುಟ್ಟುಹಬ್ಬಕ್ಕೆ ಸುಂದರ ಉಡುಗೊರೆ’ ಎಂದು ಭಾನುವಾರ 27ನೇ ವರ್ಷಕ್ಕೆ ಕಾಲಿಟ್ಟ ಬ್ರೂಕ್ ಪ್ರತಿಕ್ರಿಯಿಸಿದರು.

ಅಮೋಘ ಲಯದಲ್ಲಿರುವ ಪಥುಮ್ ನಿಸಾಂಕ ಸೇರಿದಂತೆ ಶ್ರೀಲಂಕಾದ ಆರಂಭ ಆಟಗಾರರ ವಿಕೆಟ್‌ಗಳನ್ನು ಆರ್ಚರ್ ಬೇಗನೇ ಪಡೆದರು. ನಿಸ್ಸಾಂಕ (9) ಅವರು ಡೀಪ್ ಮಿಡ್ ವಿಕೆಟ್‌ಮೇಲೆ ಚೆಂಡನ್ನು ಬಾರಿಸಿದರು; ಆದರೆ ಜೇಮಿ ಓವರ್ಟನ್



ವಿಲ್ ಜ್ಯಾಕ್ಸ್ ಎಎಫ್‌ಪಿ ಚಿತ್ರ

ಅವರನ್ನು ವಂಚಿಸಲು ಸಾಧ್ಯವಾಗಲಿಲ್ಲ.

ಕುಸಲ್ ಮೆಂಡಿಸ್ (4) ಮತ್ತು ಪವನ್ ರತ್ನಾಯಕೆ ಅವರ ವಿಕೆಟ್‌ಗಳನ್ನು ಆಫ್ ಸ್ಪಿನ್ನರ್ ಜಾಕ್ಸ್ ಸತತ ಎಸೆತಗಳಲ್ಲಿ ಪಡೆದರು. ದುನಿತ್ ವೆಲ್ಲಾಳಗೆ (10) ಹ್ಯಾಟ್ರಿಕ್ ತಪ್ಪಿಸಿದರಷ್ಟೇ.

ದಸುನ್ ಶನಕ ಏಕಾಂಗಿಯಾಗಿ ಹೋರಾಟ ನಡೆಸಿ 24 ಎಸೆತಗಳಲ್ಲಿ 30 ರನ್ ಗಳಿಸಿದರು. ಆದರೆ ಕೊನೆಯಲ್ಲಿ ಅದಿಲ್ ರಶೀದ್ ಅವರಿಗೆ ಬಲಿಯಾದರು. ಲಂಕಾ ನಾಯಕ, ಲಾಂಗ್‌ಆನ್‌ಗೆ ಚೆಂಡನ್ನು ಎತ್ತಿದರು. ಆದರೆ ಕ್ಯಾಚ್ ಹಿಡಿದ ಜಾಕ್ಸ್ ಬೌಂಡರಿ ಗೆರೆ ದಾಟುವ ಮೊದಲೇ ಚೆಂಡನ್ನು ಒಳಗೆ ಚಿಮ್ಮಿಸಿದರು. ಟಾಮ್ ಬ್ಯಾಂಟನ್ ಕ್ಯಾಚ್ ಪೂರೈಸಿದರು.

ಇದಕ್ಕೆ ಮೊದಲು ಶ್ರೀಲಂಕಾ, ಇಂಗ್ಲೆಂಡ್ ತಂಡವನ್ನು ಸಾಧಾರಣ ಮೊತ್ತಕ್ಕೆ ಸೀಮಿತಗೊಳಿಸಿತ್ತು. ವೆಲ್ಲಾಳಗೆ ಇದಕ್ಕೆ ಮುಖ್ಯ ಕಾರಣರಾದರು. ಆರಂಭ ಆಟಗಾರ ಫಿಲ್ ಸಾಲ್ಟ್ 40 ಎಸೆತಗಳಲ್ಲಿ 6 ಬೌಂಡರಿ, ಎರಡು ಸಿಕ್ಸರ್‌ಗಳಿದ್ದ 62 ರನ್ ಗಳಿಸಿದರು. ಆದರೆ ಉಳಿದ ಬ್ಯಾಟರ್‌ಗಳನ್ನು ಆತಿಥೇಯ ಬೌಲರ್‌ಗಳು ನಿಯಂತ್ರಿಸಿದರು.

ಆರಂಭದಲ್ಲೇ ದಾಳಿಗಿಳಿದ ವೆಲ್ಲಾಳಗೆ ಅವರು ಜೋಸ್ ಬಟ್ಲರ್ (7) ಮತ್ತು ಹ್ಯಾರಿ ಬ್ರೂಕ್ (14) ಅವರ ವಿಕೆಟ್‌ಗಳನ್ನು ಎಲ್‌ಬಿಡಬ್ಲ್ಯು ಆಗಿ ಪಡೆದರು. 10 ಓವರುಗಳು ಕಳೆದಾಗ ಇಂಗ್ಲೆಂಡ್ ಮೊತ್ತ 4 ವಿಕೆಟ್‌ಗೆ 68. ಸಾಲ್ಟ್, ವೆಲ್ಲಾಳಗೆ ಬೌಲಿಂಗ್‌ನಲ್ಲಿ ಲಾಂಗ್‌ಆಫ್‌ನಲ್ಲಿ ಕ್ಯಾಚಿತ್ತರು. ಸಾಲ್ಟ್ ಬಿಟ್ಟರೆ ಜಾಕ್ಸ್ (21) ಅವರು 20ರ ಗಡಿ ದಾಟಿದ ಇಂಗ್ಲೆಂಡ್‌ನ ಏಕೈಕ ಆಟಗಾರ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 9ಕ್ಕೆ 146 (ಫಿಲ್ ಸಾಲ್ಟ್ 62, ವಿಲ್ ಜಾಕ್ಸ್ 21; ದುನಿತ್ ವೆಲ್ಲಾಳಗೆ 26ಕ್ಕೆ3, ಮಹೀಷ ತೀಕ್ಷಣ 21ಕ್ಕೆ2); ಶ್ರೀಲಂಕಾ: 16.4 ಓವರುಗಳಲ್ಲಿ 95 (ದಸುನ್ ಶನಕ 30; ಜೋಫ್ರಾ ಆರ್ಚರ್ 20ಕ್ಕೆ2, ವಿಲ್ ಜಾಕ್ಸ್ 22ಕ್ಕೆ3, ಲಿಯಾಮ್ ಡಾಸನ್ 27ಕ್ಕೆ2, ಅದಿಲ್ ರಶೀದ್ 13ಕ್ಕೆ2)

ಪಂದ್ಯದ ಆಟಗಾರ: ವಿಲ್ ಜಾಕ್ಸ್.

ಇಂದಿನ ಪಂದ್ಯ

ಜಿಂಬಾಬ್ವೆ V/s ವೆಸ್ಟ್ ಇಂಡೀಸ್
ತಾಣ, ವಾಂಖೆಡೆ : ರಾತ್ರಿ 7 ರಿಂದ
ಲೈವ್ ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್

ಐಟಿಎಫ್ ಟೆನಿಸ್: ವೆಂಡೆವಿಂಕೆಲ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಲ್ಡ್‌ಕಾರ್ಡ್ ಮೂಲಕ ಪ್ರವೇಶ ಪಡೆದು ಶ್ರೇಯಾಂಕ ಆಟಗಾರ್ತಿಯರಿಗೆ ಆಘಾತ ನೀಡಿದ್ದ ವೈಷ್ಣವಿ ಅಡ್ಕರ್ ಅವರ ಯಶಸ್ಸಿನ ಓಟ ಫೈನಲ್‌ನಲ್ಲಿ ಕೊನೆಗೊಂಡಿತು. ಎರಡನೇ ಶ್ರೇಯಾಂಕದ ಹ್ಯಾನೆ ವೆಂಡೆವಿಂಕೆಲ್ ಅವರು ಭಾನುವಾರ ಏಕಪಕ್ಷೀಯವಾಗಿದ್ದ ಫೈನಲ್‌ನಲ್ಲಿ ವೈಷ್ಣವಿ ಅವರನ್ನು ಸೋಲಿಸಿ ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಡಬ್ಲ್ಯು100 ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಬೆಲ್ಜಿಯಮ್‌ನ ಆಟಗಾರ್ತಿ 6–0, 6–1 ರಿಂದ ಜಯಗಳಿಸಿದರು. ವಿಶ್ವ ಕ್ರಮಾಂಕದಲ್ಲಿ 124ನೇ ಸ್ಥಾನದಲ್ಲಿರುವ ವೆಂಡೆವಿಂಕೆಲ್ ಫೈನಲ್‌ನಲ್ಲೂ ಪ್ರಾಬಲ್ಯ ಮೆರೆದು 57 ನಿಮಿಷಗಳಲ್ಲಿ ಜಯಗಳಿಸಿದರು.

ಬೆಲ್ಜಿಯಮ್‌ನ ಆಟಗಾರ್ತಿ 100 ಡಬ್ಲ್ಯುಟಿಎ ಅಂಕಗಳ ಜೊತೆಗೆ ಸುಮಾರು ₹14 ಲಕ್ಷ ನಗದು ಬಹುಮಾನ ತಮ್ಮದಾಗಿಸಿಕೊಂಡರು. ಪುಣೆಯ 21 ವರ್ಷ ವಯಸ್ಸಿನ ಆಟಗಾರ್ತಿ ವೈಷ್ಣವಿ ಅವರು ಇಲ್ಲಿನ ಯಶಸ್ಸಿಗಾಗಿ 53 ಡಬ್ಲ್ಯುಟಿಎ ಪಾಯಿಂಟ್ಸ್ ಮತ್ತು ₹7.50 ಲಕ್ಷ ನಗದು ಬಹುಮಾನ ಗಳಿಸಿದರು. ವೈಷ್ಣವಿ ವಿಶ್ವ ಕ್ರಮಾಂಕದಲ್ಲಿ 690ನೇ ಸ್ಥಾನದಲ್ಲಿದ್ದಾರೆ.

ವೆಂಡೆವಿಂಕೆಲ್ ಮೊದಲ ಸೆಟ್‌ನ ಆರಂಭದಲ್ಲೇ ಅಡ್ಕರ್ ಅವರ ಸರ್ವ್ ಮುರಿದು ಬಲುಬೇಗ 3–0 ಮುನ್ನಡೆ ಸಾಧಿಸಿದರು. ಫೋರ್‌ಹ್ಯಾಂಡ್ ಹೊಡೆತಗಳಲ್ಲಿ ಯಶಸ್ಸು ಸಾಧಿಸಿದ ಅವರು ಎದುರಾಳಿ ಎಸಗಿದ ತಪ್ಪುಗಳ ಲಾಭ ಪಡೆದರು.



ರನ್ನರ್ ಅಪ್ ವೈಷ್ಣವಿ ಅಡ್ಕರ್ ಹಾಗೂ ಚಾಂಪಿಯನ್ ಹ್ಯಾನೆ ವೆಂಡೆವಿಂಕೆಲ್ ಚಿತ್ರ: ಕೃಷ್ಣಕುಮಾರ್ ಪಿ.ಎಸ್

ಪ್ರಶಸ್ತಿ ಉಳಿಸಿಕೊಂಡ ಭಾರತ ಮಹಿಳಾ ಎ ತಂಡ

ಬ್ಯಾಂಕಾಕ್ (ಪಿಟಿಐ): ತೇಜಲ್ ಹಸಬ್ನಿಸ್ ಅವರು ಅಜೇಯ ಅರ್ಧಶತಕ ದಾಖಲಿಸಿದರೆ ಮತ್ತು ಲೆಗ್ ಸ್ಪಿನ್ನರ್ ಪ್ರೇಮಾ ರಾವತ್ ಮೂರು ವಿಕೆಟ್ ಗಳಿಸಿದರು. ಇವರಿಬ್ಬರ ಉತ್ತಮ ಆಟದ ನೆರವಿನಿಂದ ಭಾರತ ಎ ತಂಡವು ಭಾನುವಾರ ಮಹಿಳಾ ರೈಸಿಂಗ್ ಸ್ಟಾರ್ಸ್ ಟಿ20 ಏಷ್ಯಾ ಕಪ್ ಫೈನಲ್‌ನಲ್ಲಿ 46 ರನ್‌ಗಳಿಂದ ಬಾಂಗ್ಲಾದೇಶ ಎ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ಉಳಿಸಿಕೊಂಡಿತು.

2023ರಲ್ಲಿ ನಡೆದಿದ್ದ ಚೊಚ್ಚಲ ಆವೃತ್ತಿಯ ಫೈನಲ್‌ನಲ್ಲೂ ಭಾರತ ಎ ತಂಡವು ಬಾಂಗ್ಲಾ ತಂಡವನ್ನು 31 ರನ್‌ಗಳಿಂದ ಮಣಿಸಿ ಕಿರೀಟ ಗೆದ್ದಿತ್ತು. ಎಂಟು ತಂಡಗಳಿದ್ದ ಟೂರ್ನಿಯಲ್ಲಿ ಭಾರತ ಎ ತಂಡವು ಸತತ ಎರಡನೇ ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆಕೊಂಡ ಭಾರತ ಎ ತಂಡವು ತೇಜಲ್ (ಔಟಾಗದೇ 51;34ಎ, 4X3, 6X2) ಮತ್ತು ನಾಯಕಿ ರಾಧಾ ಯಾದವ್ (36;30ಎ, 4X3, 6X1) ಅವರ ಆಟದ ನೆರವಿನಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 134 ರನ್ ಗಳಿಸಿತು. ಸವಾಲಿನ ಗುರಿಯನ್ನು ಬೆನ್ನಟ್ಟಿದ ಬಾಂಗ್ಲಾ ಎ ತಂಡವು 19.1 ಓವರ್‌ಗಳಲ್ಲಿ 88 ರನ್ ಗಳಿಸಿ ಹೋರಾಟವನ್ನು ಮುಗಿಸಿತು.

ಪ್ರೇಮಾ (13ಕ್ಕೆ 3), ಸೋನಿಯಾ ಮೆಂಧಿಯಾ (21ಕ್ಕೆ 2) ಮತ್ತು ತನುಜಾ ಕನ್ವರ್ (11ಕ್ಕೆ 2) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ಮುಂದೆ ಬಾಂಗ್ಲಾ ಬ್ಯಾಟರ್‌ಗಳು ತಡಬಡಾಯಿಸಿದರು. 20 ರನ್ ಗಳಿಸಿದ ಆರಂಭಿಕ ಆಟಗಾರ್ತಿ ಶಮೀಮಾ ಸುಲ್ತಾನ ಅವರು ತಂಡದ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡರು.

ಇದಕ್ಕೂ ಮೊದಲು ಭಾರತ ಎ ತಂಡದ ಆರಂಭವೂ ಉತ್ತಮವಾಗಿರಲಿಲ್ಲ. 44 ರನ್‌ಗಳಿಗೆ ಪ್ರಮುಖ ನಾಲ್ಕು ಬ್ಯಾಟರ್‌ಗಳು ಪೆವಿಲಿಯನ್ ಸೇರಿದ್ದರು. ಈ ಹಂತದಲ್ಲಿ ತೇಜಲ್ ಮತ್ತು ರಾಧಾ ಅವರು ಐದನೇ ವಿಕೆಟ್‌ಗೆ 69 ರನ್ ಸೇರಿಸಿದ್ದರಿಂದ ಸವಾಲಿನ ಮೊತ್ತ ಗಳಿಸಲು ಸಾಧ್ಯವಾಯಿತು.

ಬಾಂಗ್ಲಾದೇಶ ತಂಡದ ಸ್ಪಿನ್ನರ್ ಫಾಹಿಮಾ ಖಾತುನ್ ನಾಲ್ಕು ವಿಕೆಟ್ ಪಡೆದು ಮಿಂಚಿದರು.



ಭಾರತ ಎ ತಂಡದ ಆಟಗಾರ್ತಿಯರ ಸಂಭ್ರಮ ಚಿತ್ರ: ಬಿಸಿಸಿಐ

ಸಂಕ್ಷಿಪ್ತ ಸ್ಕೋರು: ಭಾರತ ಎ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 134 (ತೇಜಲ್ ಹಸಬ್ನಿಸ್ ಔಟಾಗದೇ 51, ರಾಧಾ ಯಾದವ್ 36; ಫಾಹಿಮಾ ಖಾತುನ್ 25ಕ್ಕೆ 4); ಬಾಂಗ್ಲಾದೇಶ ಎ: 19.1 ಓವರ್‌ಗಳಲ್ಲಿ 88 (ಶಮೀಮಾ ಸುಲ್ತಾನ 20; ಸೋನಿಯಾ ಮೆಂಧಿಯಾ 21ಕ್ಕೆ 2, ತನುಜಾ ಕನ್ವರ್ 11ಕ್ಕೆ 2, ಪ್ರೇಮಾ ರಾವತ್ 13ಕ್ಕೆ3).

ಪಂದ್ಯದ ಆಟಗಾರ್ತಿ: ತೇಜಲ್ ಹಸಬ್ನಿಸ್.

ಶೂಟೌಟ್‌ನಲ್ಲಿ ಭಾರತಕ್ಕೆ ನಿರಾಸೆ

ಹೋಬರ್ಟ್ (ಪಿಟಿಐ): ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನಲ್ಲಿ ನಿರಾಶಾದಾಯಕ ಪ್ರದರ್ಶನದ ಬಳಿಕ ಭಾರತ ಪುರುಷರ ತಂಡವು ಭಾನುವಾರದ ಪಂದ್ಯದಲ್ಲಿ ಬಲಿಷ್ಠ ಆಸ್ಟ್ರೇಲಿಯಾ ವಿರುದ್ಧ ವೀರೋಚಿತ ಹೋರಾಟ ನಡೆಸಿತು. ಆದರೆ, ರೋಚಕ ಪೆನಾಲ್ಟಿ ಶೂಟೌಟ್‌ನಲ್ಲಿ ಆತಿಥೇಯ ತಂಡ ಜಯ ಗಳಿಸಿತು.

ಪೂರ್ಣಾವಧಿಯ ಪಂದ್ಯದಲ್ಲಿ ಭಾರತದ ಪರ ಅಮಿತ್ ರೋಹಿದಾಸ್ (15ನೇ ನಿಮಿಷ) ಮತ್ತು ಜುಗರಾಜ್ ಸಿಂಗ್ (43ನೇ ನಿ) ಗೋಲು ದಾಖಲಿಸಿದರು. ಆಸ್ಟ್ರೇಲಿಯಾ ತಂಡದ ಜೋಯಲ್ ರಿಂಟಾಲಾ (47ನೇ ಮತ್ತು 56ನೇ) ಅವರು ಎರಡು ಗೋಲು ಗಳಿಸಿದರು.

ನಿಗದಿತ ಅವಧಿಯ ಪಂದ್ಯವು 2–2 ಗೋಲುಗಳಿಂದ ಸಮಬಲಗೊಂಡಿತ್ತು. ಪೆನಾಲ್ಟಿ ಶೂಟೌಟ್‌ನಲ್ಲಿ ಆಸ್ಟ್ರೇಲಿಯಾ ತಂಡವು 5–4ರಿಂದ ಗೆಲುವು ಸಾಧಿಸಿತು. ಅಂತಿಮ ಪ್ರಯತ್ನದಲ್ಲಿ ಭಾರತದ ಆದಿತ್ಯ ಅರ್ಜುನ್ ಲಾಲೇಜ್ ಚೆಂಡನ್ನು ಗುರಿ ಸೇರಿಸುವಲ್ಲಿ ಎಡವಿದರು.

ಭಾರತ ತಂಡಕ್ಕೆ ಇದು ಲೀಗ್‌ನಲ್ಲಿ ಸತತ ಆರನೇ ಸೋಲಾಗಿದೆ.

‘ಐಪಿಎಲ್‌ಗೆ ಧೋನಿ ಲಭ್ಯ’

ಅಹಮದಾಬಾದ್ (ಪಿಟಿಐ): ‘ಮಹೇಂದ್ರ ಸಿಂಗ್ ಧೋನಿ ಅವರು ಈ ಬಾರಿಯ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡದ ಪರ ಆಡಲು ಲಭ್ಯವಿರುವುದಾಗಿ ತಿಳಿಸಿದ್ದಾರೆ. ಆದರೆ, ಅವರು ಎಲ್ಲ ಪಂದ್ಯಗಳಲ್ಲಿ ಕಣಕ್ಕಿಳಿಯುವರೇ ಎಂಬುದನ್ನು ಈಗಲೇ ಹೇಳಲಾಗದು’ ಎಂದು ಸಿಎಸ್‌ಕೆ ತಂಡದ ಮೂಲವೊಂದು ತಿಳಿಸಿದೆ.



ಈಚೆಗಷ್ಟೇ ತಂಡಕ್ಕೆ ಸೇರ್ಪಡೆಯಾಗಿರುವ ಸಂಜು ಸ್ಯಾಮ್ಸನ್ ಅವರು ತಂಡವನ್ನು ಮುನ್ನಡೆಸುವುದು ಬಹುತೇಕ ಖಚಿತವಾಗಿದೆ. ಹೀಗಾಗಿ, ಧೋನಿ ಅವರು ಈ ಬಾರಿ ನಾಯಕತ್ವ ವಹಿಸಿಕೊಳ್ಳುವುದು ಅನುಮಾನ ಎನ್ನಲಾಗಿದೆ.